ಅಧ್ಯಾತ್ಮಪ್ರಕಾಶಕಾರ್ಯಾಲಯ
ಸ್ಥಾಪನಾಶತಮಾನೋತ್ಸವ
1920–2020

ಸ್ಮರಣಸಂಚಿಕೆ

ಸಂಪಾದಕರು:

ಲಕ್ಷ್ಮೀಶ ಭಟ್ಟ

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ – 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂರವಾಣಿ: 08175–273820

www.adhyatmaprakasha.in

e-mail: coordinator_apk@yahoo.com

ಬೆಂಗಳೂರು ಶಾಖೆ:

ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು – 560 028. ದೂ: 080–26765548

e-mail: shankara.bhaskara@gmail.com

2021

Adhyatma Prakasha Karyalaya Sthapana Shathamanoshathava - 1920-2020
Holenarasipura-573211, Hassan District, Karnataka State, INDIA.
Phone: 08175-273820

website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

ಪ್ರಥಮ ಮುದ್ರಣ: 2021

ಮುದ್ರಣ ಕಾಗದ : 70 GSM Maplitho

ಪುಟಗಳು : 18+8+152+4=182

ಬೆಲೆ : ರೂ. 100/-

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಪ್ರತಿಗಳು ದೊರೆಯುವ ಸ್ಥಳ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ದೂರವಾಣಿ: 08175-273820
e-mail: secretary@adhyatmaprakasha.org
coordinator_apk@yahoo.com

ಬೆಂಗಳೂರು ಶಾಖೆ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ನಂ. 68, (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548
e-mail: shankara.bhaskara@gmail.com

ಮುದ್ರಣ :
ಶ್ರೀರಾಮ ಪ್ರಿಂಟರ್ಸ್
ನಂ.47, ಬಿಕೆಎಂ ಕಾಂಪ್ಲೆಕ್ಸ್, ಸುಪ್ರಜಾನಗರ, ಚುಂಚಗಟ್ಟ ಮುಖ್ಯರಸ್ತೆ,
ಬೆಂಗಳೂರು - 560 062. ಮೊಬೈಲ್: 98453 46197

+

ಸಂಪಾದಕೀಯ

ಅಧ್ಯಾತ್ಮಪ್ರಕಾಶಕಾರ್ಯಾಲಯವು ಸ್ಥಾಪಿತವಾಗಿ ಈಗ್ಗೆ ಒಂದು ಶತಮಾನವು ಸಂದಿತು. ಇದು ಸಾಧ್ಯವಾದದ್ದು ಬ್ರಹ್ಮೀಭೂತ **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ನಿಸ್ವಾರ್ಥಸೇವೆ, ತ್ಯಾಗ ಹಾಗೂ ವಿದ್ವತ್ತು ಧೀಶಕ್ತಿಗಳಿಂದಲೇ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆ ಮಹಾತ್ಮರು** ಶಾಂಕರವೇದಾಂತಕ್ಕೆ ಮಾಡಿದ ಅಮೋಘ ಕಾರ್ಯಗಳನ್ನು, ಕಾರ್ಯಾಲಯದ ಮೂಲಕ ನಡೆಯುತ್ತಿರುವ ಸಾರಸ್ವತ ಕಾರ್ಯಗಳನ್ನು ನಾಡಿನಾದ್ಯಂತ ಮತ್ತೊಮ್ಮೆ ಜ್ವಾಲಿಪಿಸಿ ವೇದಾಂತಪ್ರಚಾರವನ್ನು ಮಾಡುವ ಮೂಲಕ **"ಅಧ್ಯಾತ್ಮಪ್ರಕಾಶಕಾರ್ಯಾಲಯ ಸ್ಥಾಪನಾ ಶತಮನೋತ್ಸವ"**ವನ್ನು ನೆರವೇರಿಸಬೇಕೆಂದು ಸಂಕಲ್ಪಿಸಿ 2019ರಲ್ಲಿಯೇ ಕಾರ್ಯಪ್ರವೃತ್ತರಾದೆವು. ಆದರೆ ಯಶಸ್ವಿಯಾಗಿ ನೆರವೆರಿಸಲು ಸಾಧ್ಯವಾಗಲಿಲ್ಲ. ಕಾರಣ ಲೋಕದಲ್ಲಿ ಹಬ್ಬಿರುವ ಕೊರೊನಾ ಎಂಬ ಖಾಯಿಲೆ. ಕಾರ್ಯಾಲಯವು ಮೊದಲಿನಿಂದಲೂ ಸದ್ದುಗದ್ದಲವಿಲ್ಲದೆ ನಿರಾಡಂಬರವಾಗಿ ಮೌನದಿಂದ ಸೇವೆಸಲ್ಲಿಸುವದನ್ನೇ ಅನುಸರಿಸುತ್ತಾ ಬಂದಿದೆ. ಇದರ ಸಂಸ್ಥಾಪಕರಾದ ಶ್ರೀಶ್ರೀಗಳವರೂ ನಿಜವಾದ ತತ್ತ್ವ ಹಾಗೂ ಅದನ್ನು ಪಡೆಯುವ ನಿಶ್ಚಿತ ಸಾಧನೆ ಇವೆರಡನ್ನೇ ಮೆಚ್ಚಿದವರೇ ಹೊರತು ಎಂದಿಗೂ ಖ್ಯಾತಿ, ಲಾಭ, ಪೂಜೆ, ಆಡಂಬರ, ಆರ್ಭಟಗಳನ್ನು ಕನಸಿನಲ್ಲೂ ಕಂಡವರಲ್ಲ. ಆದ್ದರಿಂದ ಅವರ ಕೂಸೇ ಆದ ಕಾರ್ಯಾಲಯವೂ ಹಾಗೆಯೇ ಮುಂದುವರಿಯುತ್ತಿರುವದು ನ್ಯಾಯವೇ ಆಗಿದೆ. ನಾವು ಎಣಿಸಿದಂತೆ ಕಾರ್ಯಕ್ರಮಗಳನ್ನು ನೆರವೇರಿಸಲು ಆಗದಿದ್ದರೂ ಈ ಸಂದರ್ಭದಲ್ಲಿ ಎಂದಿಗಿಂತ ಮಿಗಿಲಾಗಿ ಜಿಜ್ಞಾಸುಗಳಿಗೆ ವೇದಾಂತ ಗ್ರಂಥಗಳನ್ನು ತಲುಪಿಸಿದ್ದೇವೆ ಎಂಬುದು ಸಂತೋಷದ ಸಂಗತಿಯೇ ಆಗಿದೆ.

ಯೋಚಿಸಿದ ಕಾರ್ಯಕ್ರಮಗಳನ್ನು ನಡೆಸಲಾಗದಿದ್ದರೂ ಶತಮನೋತ್ಸವದ ನೆನಪಿಗಾಗಿ ಒಂದು **ಸ್ಮರಣಸಂಚಿಕೆ**ಯನ್ನು ಪ್ರಕಟಿಸಬೇಕು ಎಂದು ಪ್ರಸಿದ್ಧರಾದ ಪಂಡಿತೋತ್ತಮರೂ ಅನುಭವಿಗಳೂ ಆದ ಅನೇಕ ವಿದ್ವಜ್ಜನರಲ್ಲಿ ಲೇಖನಗಳನ್ನು ಬರೆದುಕೊಡಿರೆಂದು ಪ್ರಾರ್ಥಿಸಲಾಗಿ ದೇಶ–ವಿದೇಶದ ವಿದ್ವಾಂಸರುಗಳು ಪಾಂಡಿತ್ಯಪೂರ್ಣವಾದ ಲೇಖನಗಳನ್ನು ಬರೆದುಕೊಟ್ಟು ತುಂಬಾ ಉಪಕಾರಮಾಡಿರುತ್ತಾರೆ. ಈ ಕಾರ್ಯದಲ್ಲಿ ಮನಃಪೂರ್ವಕವಾದ ನಿಷ್ಕಾಮ ಸೇವೆಯನ್ನು ಸಲ್ಲಿಸುವ ಧ್ಯೇಯವುಳ್ಳ ಮಹನೀಯರ ಸಹಾಯವು ದೊರಕಿರುವದು ಶಾಂಕರವೇದಾಂತ ಮತ್ತು ಶ್ರೀಶ್ರೀಗಳವರ ಕಾರ್ಯದಲ್ಲಿರುವ ಹೆಚ್ಚುಗಾರಿಕೆಗೆ ಇದು ನಿದರ್ಶನ.

ಈ ಸ್ಮರಣಸಂಚಿಕೆಯು ಶ್ರೀಶ್ರೀಗಳವರ ಆರಾಧನಾಮಹೋತ್ಸವದಂದು ಲೋಕಾರ್ಪಣೆ ಗೊಳ್ಳುತ್ತಿರುವದು ಅತ್ಯಂತ ಸಂತೋಷದಾಯಕವಾಗಿದೆ. ಸ್ಮರಣಸಂಚಿಕೆಗೆ ಲೇಖನವನ್ನು

+

ದಯಪಾಲಿಸಿದ ವಿದ್ವಾಂಸರುಗಳಿಗೂ, ಮುದ್ರಣದೋಷತಿದ್ದುವದರಲ್ಲಿ ಸಹಾಯ ಮಾಡಿದವರಿಗೂ, ಚಿತ್ರಗಳ ಪುಟವಿನ್ಯಾಸ, ಅಂದವಾದ ಮುದ್ರಣ – ಹೀಗೆ ಈ ಎಲ್ಲ ಕಾರ್ಯಗಳಲ್ಲಿ ನೆರವಾದ ಸಕಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಭಾರತದ ಭವ್ಯಸಂಸ್ಕೃತಿ ಹಾಗೂ ಮಾನವಜನಾಂಗಕ್ಕೇ ಕಲ್ಯಾಣಕಾರಕವಾದ ಸಾರ್ವತ್ರಿಕಾನುಭವದ ಆಧಾರದಿಂದ ಉಪನಿಷತ್ತ್ರತಿಪಾದ್ಯವಾಗಿ ನಿರೂಪಿತವಾದ ಶಂಕರತತ್ತ್ವವು ಜಗತ್ತನ್ನೆಲ್ಲ ಹರಡಿ ಎಲ್ಲೆಲ್ಲಿಯೂ ಮಂಗಳವನ್ನು ಉಂಟುಮಾಡಲೆಂದು ಲೋಕಶಂಕರರನ್ನೂ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರನ್ನೂ ಪ್ರಾರ್ಥಿಸುತ್ತೇವೆ.

ಪ್ಲವನಾಮಸಂವತ್ಸರದ
ಜೇಷ್ಠ ಪೌರ್ಣಿಮೆ
24–6–2021

ಇತಿ ಸಂಪಾದಕ ಮಂಡಲಿ ಪರವಾಗಿ
ಲಕ್ಷ್ಮೀಶ ಭಟ್ಟ

ಪ್ರಕಾಶಕರ ಬಿನ್ನಹ

"ವೇದಾಂತವಿಜ್ಞಾನದ ಸುನಿಶ್ಚಿತವಾದ ತತ್ತ್ವವನ್ನು ತಮ್ಮ ಜೀವನದಲ್ಲಿ ಕಂಡುಕೊಂಡ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು" ತಮ್ಮ ಪೂರ್ವಾಶ್ರಮದಲ್ಲಿ (ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮಾ –ವೈ. ಸುಬ್ಬರಾಯರು) 1920ರಲ್ಲಿ **"ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನು ಉಂಟುಮಾಡುವುದೇ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮುಖ್ಯ ಉದ್ದೇಶ" –ಎಂಬ ಧ್ಯೇಯದೊಂದಿಗೆ "ಅಧ್ಯಾತ್ಮಪ್ರಕಾಶ ಕಾರ್ಯಾಲಯ"**ವನ್ನು ಸ್ಥಾಪಿಸಿದರು.

ಶ್ರೀಗಳವರು ಹಾಕಿಕೊಟ್ಟಿರುವ ಮಾರ್ಗದರ್ಶನದಂತೆಯೇ **ಸದಾನಿರತವಾಗಿ ಆಬಾಲವೃದ್ಧರಿಗೂ ಅಧ್ಯಾತ್ಮವಿಷಯದಲ್ಲಿ ಆದರವನ್ನು ಉಂಟುಮಾಡುತ್ತಾ** ಸಂಸ್ಥೆಯು ಮುಂದುವರಿಯುತ್ತಿದೆ. ಅಧ್ಯಾತ್ಮಪ್ರಸಾರವೇ ಮುಖ್ಯ ಗುರಿಯಾಗಿ ಹೊಂದಿರುವ ಕಾರ್ಯಾಲಯವು ಗುರಿಯನ್ನು ಸಾಧಿಸಲು ಕೈಗೊಂಡ ಚಟುವಟಿಕೆಗಳಲ್ಲಿ ಪ್ರಧಾನವಾಗಿ **1. ಗ್ರಂಥಪ್ರಕಟಣೆ, 2. ಪತ್ರಿಕಾಪ್ರಕಟಣೆ, 3. ಪ್ರವಚನ, 4. ಅಧ್ಯಾತ್ಮವಿದ್ಯಾನಿಲಯ, 5. ಅನುಷ್ಠಾನಾದಿಗಳು –ಈ** ಅಂಶಗಳನ್ನು ಹೊಂದಿದೆ. ಇಷ್ಟೂ ಕಾರ್ಯಗಳೂ ಮಹಾಜನರಿಂದ ಬಂದ ಸಹಕಾರದಿಂದಲೇ ನೇರವೇರಿರುವದು. ಅವರು ನೀಡುವ ನೆರವನ್ನೇ ಮಿತವಾಗಿ ಉಪಯೋಗಿಸಿಕೊಂಡು ತನ್ನ ಧ್ಯೇಯವನ್ನು ಸಾಧಿಸುತ್ತಿದೆ. ಈ ಎಲ್ಲ ಕಾರ್ಯಗಳನ್ನೂ ಯಶಸ್ವಿಯಾಗಿ ಸಾಧಿಸುತ್ತಾ ಕಾರ್ಯಾಲಯವು ಸ್ಥಾಪನೆಯಾಗಿ 2020ಕ್ಕೆ ನೂರು ವರ್ಷಗಳನ್ನು ಪೂರೈಸಿತೆಂಬುದು ಅತ್ಯಂತ ಸಂತೋಷದ ವಿಷಯ.

ಕಾರ್ಯಾಲಯ ಸ್ಥಾಪನಾ ಶತಮಾನೋತ್ಸವಪ್ರಯುಕ್ತ 2020ರಲ್ಲಿ – **1.** ರಾಜ್ಯದ ಬೇರೆಬೇರೆ ಸ್ಥಳಗಳಲ್ಲಿ ವೇದಾಂತಸಪ್ತಾಹ – ಉಪನ್ಯಾಸಗಳನ್ನು ಆಯೋಜಿಸಿ ಸಪ್ತಾಹದಲ್ಲಿ **ಶುದ್ಧಶಾಂಕರಪ್ರಕ್ರಿಯೆಯ ಪ್ರಸಾರ, ಆ ಮೂಲಕ ಶ್ರೀಶ್ರೀಗಳವರ ಚಿಂತನಾಕ್ರಮ ಮತ್ತು ಕಾರ್ಯಾಲಯದ ಮಹತ್ಕಾರ್ಯಗಳ ಪ್ರಚಾರವನ್ನು ಮಾಡುವವುದು. 2. ವೇದಾಂತ ಸಂವಾದಗೋಷ್ಠಿ, 3. ಸ್ಮರಣಸಂಚಿಕೆ, 4. ಸಾಕ್ಷ್ಯಚಿತ್ರ – ಈ ಕಾರ್ಯಕ್ರಮಗಳನ್ನು ನಡೆಸಬೇಕು** ಎಂಬ ಇಚ್ಛೆಯಿಂದ 22–12–2019ರಂದು ಅಧ್ಯಾತ್ಮ ಪ್ರಕಾಶಕಾರ್ಯಾಲಯ, ಬೆಂಗಳೂರು ಶಾಖೆಯಲ್ಲಿ ಉದ್ಘಾಟನಾಸಮಾರಂಭವನ್ನೂ ನಡೆಸಲಾಯಿತು.

ಶ್ರೀ ಶ್ರೀ ಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳು ಉದ್ಘಾಟನೆ ಮಾಡಿದರು. ವೇ.ಬ್ರ. ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ॥ ಮಾಲಕರೆಡ್ಡಿಯವರು ಅತಿಥಿಗಳಾಗಿ ಭಾಗವಹಿಸಿದ್ದರು. ಡಾ॥ ಎಸ್. ರಂಗನಾಥ್, ಪ್ರೊ. ಬಿ.ಆರ್. ಕೃಷ್ಣ, ಶ್ರೀ ಕೆ. ಚಂದ್ರಮೌಳಿ, ಡಾ॥ ಎಸ್. ಹೇಮಲತಾ, ಶ್ರೀ ಎಸ್.ಆರ್. ರಾಮಸ್ವಾಮಿ – ಮುಂತಾದ ಗಣ್ಯರು ಭಾಗವಹಿಸಿದ್ದರು.

ಹೀಗೆ ಎಲ್ಲಾ ಸಿದ್ಧತೆಗಳೂ ಆಗಿದ್ದವು. ಅನೇಕರು ನಮ್ಮಲ್ಲಿ ಬಂದು ಸಪ್ತಾಹಗಳನ್ನು ನಡೆಸಬೇಕೆಂಬ ಆಹ್ವಾನವನ್ನೂ ಕೊಟ್ಟಿದ್ದರು. ಶ್ರೀ ವೆಂಕಟೇಶ ಶರ್ಮಾ (ಹರಿ) ರವರು ಬಳ್ಳಾರಿಯಲ್ಲಿ ಒಂದು ಸಪ್ತಾಹವನ್ನೂ ನಡೆಸಿದರು. ಆನಂತರದ ದಿನಗಳಲ್ಲಿ ಕೋವಿಡ್–19 ಎಂಬ ಲೋಕಕಂಟಕ

ಖಾಯಿಲೆಯು ಪ್ರಪಂಚವನ್ನು ಆವರಿಸಿದ್ದರಿಂದ ಯಾವ ಕಾರ್ಯಕ್ರಮವನ್ನೂ ನಡೆಸಲು ಅವಕಾಶವಾಗಲಿಲ್ಲ. ಕಾರ್ಯಾಲಯದಲ್ಲಿ ಪ್ರತಿನಿತ್ಯನಡೆಯುತ್ತಿದ್ದ ಉಪನ್ಯಾಸಗಳನ್ನು ನಡೆಸಲೂ ಅವಕಾಶವಾಗಲಿಲ್ಲ.

ಯೋಜಿಸಿದ ಯಾವ ಕಾರ್ಯಕ್ರಮವನ್ನೂ ನಡೆಸಲು ಅವಕಾಶವಾಗದಿರಲು **ಸ್ಮರಣಸಂಚಿಕೆಯ** ಪ್ರಕಟಣೆಯನ್ನೊಂದನ್ನು ಮಾಡಬಹುದು ಎಂದು ಚಿಂತಿಸಿ ಸ್ಮರಣಸಂಚಿಕೆಯನ್ನು ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆವು. ಕಾರ್ಯಾಲಯದ ಪರಿಚಿತ ಅನೇಕ ವಿದ್ವಾಂಸರಿಗೆ ಲೇಖನವನ್ನು ಕೊಡಿರೆಂದು ಬಿನ್ನವಿಸಲಾಗಿ ಕಾರ್ಯಾಯದ ಮೇಲಿನ ಅಭಿಮಾನದಿಂದ ಕೆಲವರು ಲೇಖನವನ್ನು ಬರೆದು ಕಳುಹಿಸಿರುತ್ತಾರೆ. ಅವನ್ನೆಲ್ಲ ಪ್ರಕಟಿಸಲಾಗಿದೆ. ಈ ಎಲ್ಲ ವಿದ್ವಾಂಸರುಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಈ ಶತಮಾನೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಬೇಕಾಗುವ ಧನಸಹಾಯವನ್ನು ಕಾರ್ಯಾಲಯದ ಭಕ್ತಮಹಾಶಯರನೇಕರು ನೀಡಿರುತ್ತಾರೆ. ದಾನಿಗಳ ಪಟ್ಟಿಯನ್ನು ಮುಂದೆಕೊಡಲಾಗಿದೆ. ಶತಮಾನೋತ್ಸವಕ್ಕೆ ಸಂದಾಯವಾದ ಧನವನ್ನು **"ಉಪನ್ಯಾಸಮೂಲನಿಧಿ"**ಯಲ್ಲಿ ಸೇರಿಸಿ ನಿರಂತರ ವೇದಾಂತಪ್ರಚಾರಕ್ಕೇ ವಿನಿಯೋಗಿಸಬೇಕೆಂದು ತೀರ್ಮಾನಿಸಿದೆ. ಧನಸಹಾಯವನ್ನು ನೀಡಿದ ಎಲ್ಲ ಭಕ್ತಮಹಾಶಯರಿಗೂ, ಜಾಹೀರಾತನ್ನು ನೀಡಿದವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಕಾರ್ಯಾಲಯದ ಎಲ್ಲ ಚಟುವಟಿಕೆಗಳೂ ಸಕಾಲಕ್ಕೆ ನಡೆದು ಅಧ್ಯಾತ್ಮಪ್ರಕಾಶಕಾರ್ಯಾಲಯವು ನೂರು ಸಂವತ್ಸರಗಳನ್ನು ಪೂರೈಸಿ ಮುಂದುವರಿಯುವಲ್ಲಿ ಸಹಾಯಕರಾದ, ಕಾರಣೀಕರ್ತರಾದ ಎಲ್ಲ ಹಿಂದಿನ ಇಂದಿನ ವಿಶ್ವಸ್ತ ಸಮಿತಿಯವರಿಗೂ, ಹೊಳೆನರಸೀಪುರ ಮತ್ತು ಬೆಂಗಳೂರು ಕಾರ್ಯಾಲಯಗಳ ಕಾರ್ಯಾಕಾರಿ ಸಮಿತಿಯವರಿಗೂ, ವಿದ್ವಾಂಸರುಗಳಿಗೂ, ಕಛೇರಿಯ ಸಹಾಯಕವರ್ಗದವರಿಗೂ ಪ್ರತ್ಯಕ್ಷ–ಪರೋಕ್ಷವಾಗಿ ಸಹಾಯವನ್ನು ನೀಡುತ್ತಿರುವ ಎಲ್ಲರಿಗೂ ಸದ್ಗುರುಗಳು ಸಮಸ್ತ ಸನ್ಮಂಗಲವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

ಭಕ್ತಮಹಾಶಯರು, ಜಿಜ್ಞಾಸುಗಳು ಎಂದಿನಂತೆ ಕಾರ್ಯಾಲಯವು ನಡೆಸುತ್ತಿರುವ ಶುದ್ಧಶಾಂಕರ ವೇದಾಂತಪ್ರಕ್ರಿಯೆಯ ಪ್ರಚಾರದಲ್ಲಿ ತನು, ಮನ, ಧನಗಳಿಂದ ಸಹಾಯವನ್ನು ನೀಡುತ್ತಾ ಆಚಂದ್ರಾರ್ಕವಾಗಿ ಕಾರ್ಯಾಲಯದ ಸೆವೆಯು ನಡೆಯುತ್ತಿರುವಲ್ಲಿ ಕೈಜೋಡಿಸಬೇಕೆಂಡು ಪ್ರಾರ್ಥಿಸುತ್ತೇವೆ.

ಪ್ಲವನಾಮ ಸಂವತ್ಸರದ ವೈಶಾಖಶುದ್ಧ **ಪ್ರಕಾಶಕರು**
ಪಂಚಮಿ, ಶಂಕರಜಯಂತೀ
17–05–2021

ಅಧ್ಯಾತ್ಮಪ್ರಕಾಶಕಾರ್ಯಾಲಯ

ಆಡಳಿತ ಮತ್ತು ಸಹಾಯಕರು, ಸಾಧಕರುಗಳು

ವಿಶ್ವಸ್ತ ಸಮಿತಿ

1.	ಶ್ರೀ ಕೆ. ಶ್ರೀನಿವಾಸ್, ಹೊಳೆನರಸೀಪುರ	ಅಧ್ಯಕ್ಷರು
2.	ಶ್ರೀ ಎ. ಟಿ. ಶ್ರೀಧರ್, ಹೊಳೆನರಸೀಪುರ	ಸದಸ್ಯರು
3.	ಶ್ರೀ ರವಿ, ಬೆಂಗಳೂರು	ಸದಸ್ಯರು
4.	ಶ್ರೀ ಎಲ್. ವಿಜಯರಾಘವ, ಬೆಂಗಳೂರು	ಸದಸ್ಯರು
5.	ಶ್ರೀ ಬಿ.ವಿ. ವಿನಯ್, ಬೆಂಗಳೂರು	ಸದಸ್ಯರು
6.	ಶ್ರೀ ಎಸ್. ಶ್ರೀನಾಥ್, ಬೆಂಗಳೂರು	ಸದಸ್ಯರು
7.	ಶ್ರೀ ಟಿ.ಎಸ್. ರವಿಚಂದರ್, ಬೆಂಗಳೂರು	ಸದಸ್ಯರು
8.	ಶ್ರೀ ವೈ. ಅನಂತನಾರಾಯಣ, ಮೈಸುರು	ಸದಸ್ಯರು
9.	ಶ್ರೀ ಮ.ರಾ. ಕೇಶವ ಅವಧಾನಿ, ಮತ್ತೂರು	ಸದಸ್ಯರು

ಕಾರ್ಯಕಾರಿ ಸಮಿತಿ, ಹೊಳೆನರಸೀಪುರ

1.	ಶ್ರೀ ಎ. ಟಿ. ಶ್ರೀಧರ್, ಹೊಳೆನರಸೀಪುರ	ಅಧ್ಯಕ್ಷರು
2.	ಶ್ರೀ ಬಾ.ರಾ. ಸುಬ್ಬರಾಯ, ಹೊಳೆನರಸೀಪುರ	ಸದಸ್ಯರು
3.	ಶ್ರೀ ನರಸಿಂಹ ಶೇಟ್ಟರು, ಹೊಳೆನರಸೀಪುರ	ಸದಸ್ಯರು
4.	ಶ್ರೀ ವಿದ್ಯಾಶಂಕರ, ಹೊಳೆನರಸೀಪುರ	ಸದಸ್ಯರು
5.	ಶ್ರೀ ಭರತ್, ಹೊಳೆನರಸೀಪುರ	ಸದಸ್ಯರು
6.	ಶ್ರೀ ಮಂಜುನಾಥ್, ಹೊಳೆನರಸೀಪುರ	ಸದಸ್ಯರು
7.	ಶ್ರೀ ನಾಗೇಂದ್ರ ಭಟ್ಟರು, ಹೊಳೆನರಸೀಪುರ	ಸದಸ್ಯರು

ಸಾಧಕರು – ಸಹಾಯಕರು, ಹೊಳೆನರಸೀಪುರ

1.	ಶ್ರೀ ಪ್ರಕಾಶಾನಂದೇಂದ್ರಸರಸ್ವತೀಸ್ವಾಮಿಗಳು	
2.	ಶ್ರೀ ಜಿ.ಎಸ್. ವೇಂಕಟೇಶ ಶರ್ಮಾ (ಹರಿ)	ಪಂಡಿತರು
3.	ಡಾ॥ ಎಸ್. ಹೇಮಲತಾ, ಬೆಂಗಳೂರು	ಅಧ್ಯಾತ್ಮಪ್ರಕಾಶ – ಸಂಪಾದಕರು
3.	ಶ್ರೀ ರಾಮಪ್ರಕಾಶ ಕಾರಂತ	ವ್ಯವಸ್ಥಾಪಕರು
4.	ಶ್ರೀ ವಿ.ಎಸ್. ಹರಿಹರನ್	ಸಹಾಯಕರು

ಕಾರ್ಯಕಾರಿ ಸಮಿತಿ, ಬೆಂಗಳೂರು

1.	ಶ್ರೀ ಬಿ.ಆರ್. ಕೃಷ್ಣ, ಬೆಂಗಳೂರು	ಅಧ್ಯಕ್ಷರು ಮತ್ತು ಸಂಪಾದಕರು – ಶಂಕರಭಾಸ್ಕರ
2.	ಶ್ರೀ ಎಸ್. ಶ್ರೀನಾಥ್, ಬೆಂಗಳೂರು	ಖಜಾಂಚಿ
3.	ಶ್ರೀ ಟಿ. ಎಸ್. ರವಿಚಂದರ್, ಬೆಂಗಳೂರು	ಕಾರ್ಯದರ್ಶಿ
4.	ಶ್ರೀ ಕೆ. ಚಂದ್ರಮೌಳಿ, ಬೆಂಗಳೂರು	ಸದಸ್ಯರು
5.	ಶ್ರೀ ರವಿ, ಬೆಂಗಳೂರು	ಸದಸ್ಯರು
6.	ಶ್ರೀ ಗೋಪಾಲರಾವ್, ಬೆಂಗಳೂರು	ಸದಸ್ಯರು
7.	ಶ್ರೀ ಜೆ. ಅನಂತಕುಮಾರ್, ಬೆಂಗಳೂರು	ವ್ಯವಸ್ಥಾಪಕರು

ಸಹಾಯಕರು, ಬೆಂಗಳೂರು

8.	ಶ್ರೀ ಲಕ್ಷ್ಮೀಶ ಭಟ್ಟ , ಬೆಂಗಳೂರು	ಉಪ ಸಂಪಾದಕರು, ಅಧ್ಯಾತ್ಮಪ್ರಕಾಶ ಮತ್ತು ಶಂಕರಭಾಸ್ಕರ
9.	ಶ್ರೀ ಸುದರ್ಶನ ಶರ್ಮಾ, ಬೆಂಗಳೂರು	ಪಂಡಿತರು
10.	ಶ್ರೀ ಹೆಚ್.ಜೆ. ರವಿ, ಬೆಂಗಳೂರು	ಸಹಾಯಕರು
11.	ಶ್ರೀ ಆರ್. ಸುಬ್ರಮಣಿಯನ್	ಸಹಾಯಕರು
12.	ಶ್ರೀ ರವೀಂದ್ರ	ಸಹಾಯಕರು

ಶತಮಾನೋತ್ಸವ ಕಾರ್ಯಕ್ರಮದ ದಾನಿಗಳು
(ಹೊಳೆನರಸೀಪುರ)

1.	ಶ್ರೀ ಶ್ಯಾಂ ಮಾಯಸಂದ್ರ, ಯು.ಎಸ್.ಎ.	50,000
2.	ಶ್ರೀ ಅನಂತನಾರಾಯಣ ಶ್ರೀವತ್ಸ, ಮೈಸೂರು.	20,000
3.	ಶ್ರೀ ಡಾ. ರಮೇಶ್ ರಾವ್, ತುಮಕೂರು.	20,000
4.	ಶ್ರೀ ಡಾ. ವೈ ನಾರಾಯಣ ರಾವ್, ಮೈಸೂರು.	20,000
5.	ಶ್ರೀ ಪ್ರಭಾಕರ್ ಸಿ., ಬೆಂಗಳೂರು.	20,000
6.	ಶ್ರೀ ಎಸ್.ವಿ. ಗಿರೀಶ್, ಬೆಂಗಳೂರು.	10,001
7.	ಶ್ರೀಮತಿ ಗೌರಮ್ಮ, ಬೆಂಗಳೂರು.	10,000
8.	ಶ್ರೀ ಸಿ. ಎಸ್. ಅನಂತರಾಮನ್, ಮೈಸೂರು.	10,000
9.	ಶ್ರೀ ಚಂದ್ರಶೇಖರ್ ಎ.ಕೆ.ಎಂ, ಥಾಣೆ	5,100
10.	ಶ್ರೀ ವೆಂಕಟೇಶ್ವರನ್ ವಿ.ವಿ., ಬೆಂಗಳೂರು.	5,000
11.	ಶ್ರೀಮತಿ ಸಿ.ಕೆ. ಶಾಂತಾ, ಬೆಂಗಳೂರು.	5,000
12.	ಶ್ರೀ ಹೆಚ್.ಎನ್. ನಂದಕುಮಾರ್, ಧಾರವಾಡ.	5,000
13.	ಶ್ರೀ ಅನಿಲ್ ಕುಮಾರ್.	5,000
14.	ಶ್ರೀ ವಿದ್ಯಾಸಾಗರ್ ದೀಕ್ಷಿತ್, ಯು.ಎಸ್.ಎ.	4,000
15.	ಶ್ರೀ ವಿ. ರಾಮಮೂರ್ತಿ, ಬೆಂಗಳೂರು.	3,000
16.	ಶ್ರೀ. ಸಮಯಪುರಮ್ ಆಶ್ರಮ, ಶ್ರೀರಂಗಪಟ್ಟಣ.	3,000
17.	ಶ್ರೀ ಕೆ.ಆರ್. ಶಂಕರ್ ಪ್ರಸಾದ್.	3,000
18.	ಶ್ರೀ ನಾಗರಾಜ ರಾವ್ ಹೆಚ್.ವಿ., ಮೈಸೂರು.	2,500
19.	ಶ್ರೀ ಗಿರೀಶ್, ಬೆಂಗಳೂರು.	2,000
20.	ಶ್ರೀ ಕೃಷ್ಣಪಾದಾಚಾರ್ಯ ಸ್ವಾಮೀಜಿ, ಕುರುಡಿ.	2,000
21.	ಶ್ರೀ ಕೆ.ವಿ.ವಿ. ಸತ್ಯನಾರಾಯಣಮೂರ್ತಿ, ಕೊವ್ವೂರು.	2,000
22.	ಶ್ರೀ ದತ್ತಾತ್ರೇಯಗೌಡ ಬಿ.ಆರ್., ಆಧೋನಿ.	2,000
23.	ಶ್ರೀ ಜಿ. ಆರ್. ಶೇಷಾದ್ರಿ.	1,500
24.	ಶ್ರೀ ಟಿ. ಬಿ. ಮಾರುತೀಶ, ಬೆಂಗಳೂರು.	1,100
25.	ಶ್ರೀ ಗುರುಪ್ರಸಾದ್.	1,001
26.	ಶ್ರೀ ಲೀಲಾವತಿ ಶಂಕರಾನಂದ, ಬೆಂಗಳೂರು.	1,000
27.	ಶ್ರೀ ಕೆ. ಎನ್. ರಾಮಸ್ವಾಮಿ, ಚಿಕ್ಕಮಗಳೂರು.	1,000
28.	ಶ್ರೀ ಮಾಲತಿ ಎಸ್. ಆರ್. ಬೆಂಗಳೂರು.	1,000
29.	ಶ್ರೀ ಸಚ್ಚಿದಾನಂದಮೂರ್ತಿ, ಬೆಂಗಳೂರು.	1,000
30.	ಶ್ರೀಮತಿ ಡಾ. ಅರುಣಗೀತಾ, ಸಕಲೇಶಪುರ.	1,000

31.	ಶ್ರೀವೆಂಕಟೇಶ್, ಮೈಸೂರು.	1,000
32.	ಶ್ರೀಮತಿ ರಮಾ ಹಾಗು ಸ್ನೇಹಿತೆಯರು, ಮೈಸೂರು.	1,000
33.	ಶ್ರೀ ಮಾತಾ ನಿಶಾಂತಿನಿ, ಸೂಡಿ.	1,000
34.	ಶ್ರೀ ಹೆಚ್. ಆರ್. ಪ್ರತಾಪ್‌ಕುಮಾರ್, ಹರಿಹರಪುರ.	1,000
35.	ಶ್ರೀ ಬಿ. ಆಶುತೋಷ್ ಹೊಳ್ಳ, ಉಡುಪಿ.	500
36.	ಶ್ರೀ ರಾಮ್‌ಮೋಹನ್ ಬಾಬು, ಹೊಳೆನರಸೀಪುರ.	10,102
37.	ಶ್ರೀ ಕೆ. ನಾರಾಯಣ ಭಟ್. ಕುರ್ನಾಡ್.	5,000

ಶತಮಾನೋತ್ಸವ ಕಾರ್ಯಕ್ರಮದ ದಾನಿಗಳು
(ಬೆಂಗಳೂರು)

1.	ಶ್ರೀ ಹೆಚ್. ಎಲ್ ರಾಮಪ್ರಸಾದ್, ಬೆಂಗಳೂರು.	10,000
2.	ಶ್ರೀ ಕೇಶವಮೂರ್ತಿ, ಬೆಂಗಳೂರು.	10,001
3.	ಶ್ರೀ ಗಣೇಶಕಾರಂತ, ಬೆಂಗಳೂರು.	1,000
4.	ಶ್ರೀಮತಿ ಲೀಲಾವತಿಶಂಕರಾನಂದ, ಬೆಂಗಳೂರು.	1,000
5.	ಶ್ರೀ ರಾಮಚಂದ್ರ, ಕೆ., ಬೆಂಗಳೂರು.	10,000
6.	ಶ್ರೀ ಲಕ್ಷ್ಮೀನರಸಿಂಹ ಶಾಸ್ತ್ರಿ, ಬೆಂಗಳೂರು.	2,001
7.	ಶ್ರೀಮತಿ ಪದ್ಮಾಮಧುರಾನಾಥ್, ಬೆಂಗಳೂರು.	10,000
8.	ಶ್ರೀಮತಿ ಸ್ವಯಂಪ್ರಭಾ, ಬೆಂಗಳೂರು.	10,000
9.	ಶ್ರೀಮತಿ ಟಿ.ಎಸ್. ಮೀನಾಕ್ಷಿ, ಬೆಂಗಳೂರು.	10,000
10.	ಶ್ರೀ ಟಿ.ಆರ್. ಚಂದ್ರಶೇಖರ್, ಬೆಂಗಳೂರು.	10,000
11.	ಶ್ರೀ ರಾಮ ರಾವ್ ಕೆ., ಬೆಂಗಳೂರು.	5,000
12.	ಡಾ॥ ಪ್ರೇಮಲತಾ, ಬೆಂಗಳೂರು.	2,001
13.	ಶ್ರೀ ಲಕ್ಷೀನಾರಾಯಣಪ್ಪ, ಬೆಂಗಳೂರು.	1,001
14.	ಶ್ರೀಮತಿ ನಾಗಲತಾ ಸುಬ್ರಹ್ಮಣ್ಯ, ಬೆಂಗಳೂರು.	10,000
15.	ಶ್ರೀ ಶ್ರೀನಿವಾಸ, ಬೆಂಗಳೂರು.	500
16.	ಶ್ರೀಮತಿ ಜೆ. ಲೀಲಾವತಿ, ಬೆಂಗಳೂರು.	5,000
17.	ಶ್ರೀ ಶ್ರೀನಿವಾಸಮೂರ್ತಿ, ಬೆಂಗಳೂರು.	1,000
18.	ಶ್ರೀ ವಿಶ್ವನಾಥ ದೀಕ್ಷಿತ್, ಬೆಂಗಳೂರು.	500
19.	ಶ್ರೀ ಎಮ್.ಎನ್. ಶಿವಕುಮಾರ್, ಬೆಂಗಳೂರು.	2,000
20.	ಶ್ರೀ ಪದ್ಮಾ ತಾರಕೇಶ್ವರ, ಬೆಂಗಳೂರು.	10,000
21.	ಡಾ॥ ಮಂಜುಳ, ಬೆಂಗಳೂರು.	500
22.	ಶ್ರೀ ನಂಜುಂಡಸ್ವಾಮಿ, ಬೆಂಗಳೂರು.	500
23.	ಶ್ರೀಮತಿ ಇಂದಿರಾ ಕೃಷ್ಣ, ಬೆಂಗಳೂರು.	500

24.	ಶ್ರೀಮತಿ ಪಾರ್ವತಿ ಶಂಕರ್, ಬೆಂಗಳೂರು.	1,000
25.	ಶ್ರೀ ಸತ್ಯನಾರಾಯಣ, ಬೆಂಗಳೂರು.	1,000
26.	ಅಂತರಂಗಭಕ್ತರು.	5,000
27.	ಶ್ರೀ ವರದರಾಜು ಹೆಚ್.ಡಿ., ಬೆಂಗಳೂರು.	1,000
28.	ಮಾತಾ ಅಮೃತಮಯೀ, ಬೆಂಗಳೂರು.	1,000
29.	ಶ್ರೀ ನಾರಾಯಣಮೂರ್ತಿ, ಬೆಂಗಳೂರು.	1,000
30.	ಶ್ರೀ ತಾರಾನಾಥ್ ದೀಕ್ಷಿತ್, ಬಳ್ಳಾರಿ.	1,000
31.	ಶ್ರೀ ವಲ್ಲಭ ದೇವರಾವ್ ಕುಲಕರ್ಣಿ, ಬೆಂಗಳೂರು.	1,000
32.	ಶ್ರೀಮತಿ ಸುಧಾ ವಿ. ಜೋಶಿ, ಬೆಂಗಳೂರು.	1,000
33.	ಶ್ರೀ ವೇಂಕಟಸುಬ್ಬಾಜೋಯ್ಸ್, ಬೆಂಗಳೂರು.	10,000
34.	ಶ್ರೀಮತಿ ವನಮಾಲ ಜೋಶಿ, ಬೆಂಗಳೂರು.	10,000
35.	ಶ್ರೀ ರಮೇಶ್ ಆರ್., ಬೆಂಗಳೂರು.	5,000
36.	ಶ್ರೀ ಮಲ್ಲಿಕಾರ್ಜುನ ಕೆ., ಬೆಂಗಳೂರು.	25,000
37.	ಶ್ರೀ ಬಿ. ಆರ್. ಸಚ್ಚಿದಾನಂದ, ಬೆಂಗಳೂರು.	1,000
38.	ಅಂತರಂಗಭಕ್ತರು.	10,000
39.	ಶ್ರೀ ಅಶ್ವಥ್ ಎಸ್. ಎಮ್., ಬೆಂಗಳೂರು.	1,000
40.	ಶ್ರೀ ಸಂಪಲ್ಲಿ ಆನಂದ ಎ., ಬೆಂಗಳೂರು.	1,000
41.	ಶ್ರೀ ರಮೇಶ್ ಕೃಷ್ಣಮೂರ್ತಿ, ಯು.ಎಸ್.ಎ.	50,000
42.	ಶ್ರೀ ಆನಂದ್ ಡಿ.ಎನ್., ಬೆಂಗಳೂರು.	2,000
43.	ಶ್ರೀಮತಿ ಸಾವಿತ್ರಿ ಜೆ., ಬೆಂಗಳೂರು.	2,000
44.	ದ ನ್ಯಾಶನಲ್ ಕೋ–ಆಪರೇಟಿವ್ ಬ್ಯಾಂಕ್. ಲಿ. ಬೆಂಗಳೂರು.	5,000

* * * * *

ಸ್ಥಾಪನೆ : 1920

ಹೊ.ನ.ಪುರ -08175-273820

ಬೆಂಗಳೂರು- 080 -26765548

॥ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸದ್ಗುರುಭ್ಯೋ ನಮಃ ॥



ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

ಶಾಖೆ – ಬೆಂಗಳೂರು

ವಾಚಕರಲ್ಲಿ ವಿಜ್ಞಾಪನೆ,

ಅಧ್ಯಾತ್ಮಪ್ರಕಾಶಕಾರ್ಯಾಲಯ, **ಹೊಳೆನರಸೀಪುರ ಹಾಗೂ ಬೆಂಗಳೂರು ಶಾಖೆ** – ಇಲ್ಲಿನ ಎಲ್ಲಾ ಕೆಲಸಕಾರ್ಯಗಳೂ ಉದಾರಾಶಯರಾದ ದಾನಿಗಳ ಮತ್ತು ಸಮಸ್ತ ಭಕ್ತಮಹಾಜನರ ನೆರವಿನಿಂದಲೇ ನಡೆಯುತ್ತಿದೆ. ಭಕ್ತರು ಸಪ್ತಾಹ, ಅನುಷ್ಠಾನ, ಮುಂತಾದ ಮೂಲನಿಧಿಗಳಿಗೆ ನೀಡುವ ದನವನ್ನು ಠೇವಣಿ ಖಾತೆಯಲ್ಲಿ ಇರಿಸಿ ಅದರಿಂದ ಬರುವ ಬಡ್ಡಿಯಿಂದ ಈ ಎಲ್ಲಾ ಕಾರ್ಯಗಳನ್ನೂ ನೆರವೇರಿಸಲಾಗುತ್ತಿದೆ. ದಾನಿಗಳು ಯಾರ ಹೆಸರಿನಲ್ಲಿ ಯಾವ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಇಚ್ಛಿಸುತ್ತಾರೊ ಅಂದು ಕಾರ್ಯಕ್ರಮಗಳನ್ನು ನಡೆಸಿ ಪ್ರಸಾದವನ್ನು ಕಳುಹಿಸಲಾಗುವದು. ದಾನಿಗಳು ನೀಡುವ ದೇಣಿಗೆಗಳಿಗೆ 80ಜಿ ವರ್ಗದ ವರಮಾನ ತೆರಿಗೆ ವಿನಾಯಿತಿ **(Income Tax exmption under 80G)** ಅರ್ಹತೆ ಇರುತ್ತದೆ. ಈ ವೇದಾಂತಪ್ರಸಾರಕಾರ್ಯದಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ

ದೇಣಿಗೆ ವಿವರ

ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ

ಚಂದಾ ವಿವರಗಳು

ಮಹಾಶ್ರಯದಾತರು	ರೂ. 5000–00
ಆಶ್ರಯದಾತರು	ರೂ. 2500–00
ದಾನಿಗಳು (10 ವರ್ಷ)	ರೂ. 1200–00
ದ್ವಿ ವಾರ್ಷಿಕ ಚಂದಾ	ರೂ. 250–00
ವಿದೇಶಿ ಚಂದಾದಾರರಿಗೆ	50 ಡಾಲರ್ಸ್

ಚಂದಾಹಣವನ್ನು ಚೆಕ್/ಎಂ.ಓ. **NEFT** ಮೂಲಕ ಕಳುಹಿಸಬಹುದು.

1. ಗ್ರಂಥಪ್ರಕಟಣೆ	1,000 ರೂ. ಮೇಲ್ಪಟು
2. ಕಟ್ಟಡನಿಧಿ	1,000 ರೂ. ಮೇಲ್ಪಟು
3. ವಿದ್ಯಾರ್ಥಿನಿಲಯ–ಮೂಲನಿಧಿ	5,000 ರೂ.
4. ವಿದ್ಯಾರ್ಥಿನಿಲಯ–ಖಚ್ಚಿಗೆ	1,000 ರೂ. ಮೇಲ್ಪಟು
5. ಹಸ್ತೋದಕ ಸೇವೆ	5,000 ರೂ.

6. ಅತಿಥಿ ಸತ್ಕಾರ	ಯಥಾಶಕ್ತಿ
7. ಸಂನ್ಯಾಸಿ ಸತ್ಕಾರ	ಯಥಾಶಕ್ತಿ
8. ದತ್ತಿ ಉಪನ್ಯಾಸ ಮೂಲನಿಧಿ	
1) ಸದ್ಗುರು ಆರಾಧನಾ ಸಪ್ತಾಹ	5,000 ರೂ.
2) ಸದ್ಗುರು ಜಯಂತಿ ಸಪ್ತಾಹ	5,000 ರೂ.
3) ರಾಮೋತ್ಸವ	5,000 ರೂ.
4) ಶರನ್ನವರಾತ್ರಿ	5,000 ರೂ.
9. ಅನುಷ್ಠಾನ ಮೂಲನಿಧಿ	1,000 ರೂ.
ಪೂಜಾ ಮಂದಿರ, ಗುರುಮಂದಿರ	1,000 ರೂ.

ಚೆಕ್ಕನ್ನು **"ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ"** ಹೆಸರಿನಲ್ಲಿಯೇ ಕಳುಹಿಸಿ ಕೊಡಿ.

NAME : ADHYATMA PRAKASHA KARYALAY, Holenarasipur

(a) Karnataka Bank Ltd., Holenarasipura - 573 211
IFSC KARB 0000309 SB A/c. No. 3092500100000201

(b) State Bank of India, Holenarasipur - 573 211
IFSC SBIN 0008040 SB A/c. No. 10693661944

ಹಣವನ್ನು ಚೆಕ್/ಎಂ.ಓ. **NEFT** - ಮೂಲಕ ಕಳುಹಿಸಿದ ಕೂಡಲೇ ದೂರವಾಣಿಯ ಮೂಲಕ ವಿವರವನ್ನು ತಿಳಿಸಿರಿ.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು
ದೇಣಿಗೆ ವಿವರ

ಶಂಕರಭಾಸ್ಕರ
ಆಧ್ಯಾತ್ಮಿಕ ತ್ರೈಮಾಸಿಕ ಪತ್ರಿಕಾ

ಚಂದಾ ವಿವರಗಳು

ಎ. ಪರಿಪಾಲಕರಿಗೆ	ರೂ.	5,001/–
ಬಿ. ಆಶ್ರುದಾತರಿಗೆ	ರೂ.	1,001/–
ಸಿ. ದಾನಿಗಳು (10 ವರ್ಷ)	ರೂ.	600/–
ದ್ವಿ ವಾರ್ಷಿಕ ಚಂದಾ	ರೂ.	150/–
ವಿದೇಶಗಳಿಗೆ	ರೂ.	3,000/–

ಚಂದಾಹಣವನ್ನು ಚೆಕ್/ಎಂ.ಓ. **NEFT** ಮೂಲಕ ಕಳುಹಿಸಬಹುದು.

I. ದತ್ತಿಉಪನ್ಯಾಸ ಮೂಲನಿಧಿ –

1. ಶ್ರೀ ರಾಮನವಮಿ (ನವಾಹ)	5,000 ರೂ.
2. ಶ್ರೀ ಶಂಕರಜಯಂತೀ ಸಪ್ತಾಹ	5,000 ರೂ.
3. ಶ್ರೀ ಸದ್ಗುರು ಆರಾಧರಾಧನಾ ಸಪ್ತಾಹ	5,000 ರೂ.
4. ಶ್ರೀ ಶರನ್ನವರಾತ್ರೀ (ನವಾಹ)	5,000 ರೂ.
5. ಶ್ರೀ ಗೀತಾಜಯಂತಿ ಸಪ್ತಾಹ	5,000 ರೂ.
6. ಶ್ರೀ ಸದ್ಗುರು ಜಯಂತೀ ಸಪ್ತಾಹ	5,000 ರೂ.
II. ನಿತ್ಯ ಉಪನ್ಯಾಸಮಾಲೆ –	5,000 ರೂ.
III. ಸದ್ಗುರುವಂದನಾ ಹಸ್ತೋದಕಸೇವೆ	5,000 ರೂ.
IV. ಅನುಷ್ಠಾನಮೂಲನಿಧಿ	3,000 ರೂ.
V. ಕಟ್ಟಡದುರಸ್ತಿ ಮತ್ತು ನಿರ್ವಹಣೆ	1,000 ರೂ. ಮೇಲ್ಪಟ್ಟು
VI. ವಿದ್ಯಾನಿಲಯದ ಮೂಲನಿಧಿ	5,000 ರೂ.

ಚೆಕ್ಕನ್ನು **"ಅಧ್ಯಾತ್ಮಪ್ರಕಾಶಕಾರ್ಯಾಲಯ, ಬೆಂಗಳೂರು"** ಹೆಸರಿನಲ್ಲಿಯೇ ಕಳುಹಿಸಿ ಕೊಡಿ.
NEFT - ಮೂಲಕ ಹಣ ಸಂದಾಯ ಮಾಡುವವರಿಗೆ

NAME : ADHYATMA PRAKASHA KARYALAY PUBLICE CHARITABLE TRUST
BANK : STATE BANK OF INDIA
BRANCH : TATA SILK FARM (Bangalore)
IFSC : SBIN0040199
SB A/c No.: 54010112859

ಈ ಮೂಲಕ ಕಳುಹಿಸಿದವರು ಆ ನಂತರ ದೂರವಾಣಿಯ ಮೂಲಕ ವಿವರವನ್ನು ತಿಳಿಸಬೇಕು.

ಕಾರ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ನೇರವಾಗಿ ವೀಕ್ಷಿಸಿ

Website :	http://www.adhyatmaprakasha.in
Whatsapp Broadcast :	Send a message to +91-8073081405
Telegram broadcast :	https://t.me/adhyatmaprakasha
Facebook :	https://www.facebook.com/groups/AdhyatmaPrakasha/
Youtube :	https://www.youtube.com/c/apkbooks

ಸ್ಮರಣಸಂಚಿಕೆಯ ಅಂತರಂಗ

1. **ಅಧ್ಯಾತ್ಮಪ್ರಕಾಶಕಕಾರ್ಯಾಲಯವು ಬೆಳೆದುಬಂದ ಬಗೆ** (ಶ್ರೀಶ್ರೀಗಳವರು ಚಿತ್ರಿಸಿರುವಂತೆ) 1

2. **ಶತಮಾನದ ಹೆಜ್ಜೆಗಳು – 1920–2020** 8

3. **ಶ್ರೀ ಶ್ರೀ ಪರಮಪೂಜ್ಯ ಸಚ್ಚಿದಾನಂದೇಂದ್ರಸರಸ್ವತೀ ಸದ್ಗುರುಗಳು** 22
– ಶ್ರೀ ಶ್ರೀ ಅಕ್ಷರಾನಂದೇಂದ್ರಸರಸ್ವತೀ ಸ್ವಾಮಿಗಳು

4. **ಶ್ರೀ ಶ್ರೀಗಳ ಪ್ರಜ್ಞಾಪಾರಮಿತೆ** – ಶ್ರೀ ಶ್ರೀ ಅದ್ವಯಾನಂದೇಂದ್ರಸರಸ್ವತೀ ಸ್ವಾಮಿಗಳು 22

5. **ಶುದ್ಧಶಾಂಕರವೇದಾಂತ** – ಶ್ರೀ ಶ್ರೀಕೈವಲ್ಯಾನಂದ ಸರಸ್ವತೀ 24

6. **ಒಂದು ಅನುಪಮ ಆಧ್ಯಾತ್ಮಿಕ ಅಭಿಯಾನ ಅಧ್ಯಾತ್ಮಪ್ರಕಾಶ ಕಾರ್ಯಾಲಯ**
– ಶ್ರೀ ಎಸ್.ಆರ್. ರಾಮಸ್ವಾಮಿ 26

7. **ಪರಿಶುದ್ಧ ಶಾಂಕರಾದ್ವೈತವೇದಾಂತ ಸಿದ್ಧಾಂತವೂ ಇದಕ್ಕೆ ಶ್ರೀಶ್ರೀಗಳವರ ಅಸಾಧಾರಣ ಕೊಡುಗೆಯೂ** – ಡಾ॥ ಶ್ರೀ ಕೆ. ಜಿ. ಸುಬ್ರಾಯಶರ್ಮಾ 42

8. **ಕಾರ್ಯಾಲಯದ ಕೊಡುಗೆ** – ಶತಾವಧಾನಿ ಡಾ॥ ಆರ್. ಗಣೇಶ್ 50

9. **ಬ್ರಹ್ಮಜ್ಞಕ್ಕಂಡ ಸರ್ವಜ್ಞ** – ಡಾ॥ ಕೆ. ಅನಂತರಾಮು 53

10. **ಭಗವದ್ಗೀತೆಯಲ್ಲಿ ಭಕ್ತಿಯೋಗ ಮತ್ತು ಜ್ಞಾನನಿಷ್ಠಾಸಾಧನಗಳು** 60
– ಡಾ॥ ಕೆ. ಎಸ್. ರಾಮನಾಥಶರ್ಮಾ

11. **ಮಹಾವಾಕ್ಯಗಳ ಮಹತ್ವ** – ಡಾ॥ ಎಸ್. ಹೇಮಲತಾ 74

12. **ಶಾಂಕರಪ್ರಸ್ಥಾನಕ್ಕೆ ಶ್ರೀಶ್ರೀಗಳವರ ವಿಶೇಷಕೊಡುಗೆ**
– ವೇ॥ಬ್ರ॥ಶ್ರೀ ಮ.ರಾ. ಕೇಶವಅವಧಾನಿ ಮತ್ತೂರು 79

13. **ಪ್ರಮಾಣಾತೀತಬ್ರಹ್ಮನನ್ನು ಶಾಸ್ತ್ರಪ್ರಮಾಣದಿಂದ ತಿಳಿಯುವುದು ಹೇಗೆ?** 84
– ಡಾ॥ ಎಮ್.ಎಲ್. ನರಸಿಂಹಮೂರ್ತಿ, ತಿರುಪತಿ

14. **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಅನುವಾದಿಸಿರುವ ಸ್ತೋತ್ರಗಳು** 90
– ಶ್ರೀ ಟಿ.ಬಿ. ಲಕ್ಷ್ಮಣರಾವ್

15. **ಸುಮೇರುಸದೃಶ ಸದ್ಗುರುಗಳು** – ಪ್ರೊ॥ ಜಿ. ಶಿವರಾಮ ಅಗ್ನಿಹೋತ್ರಿ 96

16. **ಕಾರ್ಯಾಲಯದಿಂದ ಸಾಮಾಜಿಕ ಪ್ರಯೋಜನ** 98
– ಶ್ರೀ ಜಿ. ಎಸ್. ವೇಂಕಟೇಶ ಶರ್ಮಾ (ಹರಿ)

17. ಶತಮಾನದ ಅದ್ಭುತ! ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು –ಶ್ರೀ ದಿಲೀಪ್ ಗುರೂಜಿ 101

18. ವೇದಾಂತಸಾಹಿತ್ಯಕ್ಕೆ ಸ್ವಾಮಿಗಳವರ ಕೊಡುಗೆ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ 105
– ವೇ॥ ಬ್ರ ॥ ಶ್ರೀ ಮ.ಅ. ಅರುಣಾವಧಾನಿ ಮತ್ತೂರು

19. ವೇದಾಂತದ ಅಮೃತಪಾನ – ವಿದ್ವಾನ್ ಬಿ. ಗಣೇಶಭಟ್, ಬಾಗೇಪಲ್ಲಿ 107

1. Swamiji's Contribution To Vedanta 110
- Sri prakashanandendra saraswati Swamiji

2. Sri Swamiji's legacy for modern times - Shri Subhanu Saxena 115

3. Pāṛakrpāprakāsa - Raghunandan, Tumakuru 121

4. Shree Shree Swami – the people's philosopher 133
- Dr. Nagesh Subbanna

5. Of great men and their opponents - Alberto Ramon Martin 136

6. Swami Satchidanandendra Sarasvati - Renaud Fabbri 144

* * * * *

ಸಂಸ್ಥಾಪಕರ ಸ್ಮರಣೆ

ವೈದಿಕಧರ್ಮ ಮತ್ತು ವೇದಾಂತಗಳಿಗೆ ಸರಿಯಾದ ಅರ್ಥವನ್ನು ವಿವರಿಸಿ ಭರತಖಂಡದ ಜನಮಾನಸವನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿರುವವರಲ್ಲಿ **ಶ್ರೀಶಂಕರಭಗವತ್ಪಾದ**ರು ಅಗ್ರಗಣ್ಯರು. ಅವರ ಭಾಷ್ಯವಾಕ್ಯಗಳಿಂದ ವಿಚಾರಶೈಲಿಯಿಂದ ಆಕರ್ಷಿತರಾಗಿ **ಯಲ್ಲಂಬಳಸೆ ಸುಬ್ರಮಣ್ಯಶರ್ಮ– ವೈ. ಸುಬ್ಬರಾಯರು** ಶಂಕರರ ಅನುಯಾಯಿಗಳಾಗಿ ಸರ್ವಸಂಗಪರಿತ್ಯಾಗಿಗಳಾದರು. **ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**– ಎಂಬ ಅಭಿಧಾನದಿಂದ ಪ್ರಸಿದ್ಧರಾದರು. "ಎದ್ದಾಗಿನಿಂದ ಮಲಗುವವರೆಗೂ, ಹುಟ್ಟಿನಿಂದ ಸಾಯುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು" ಎಂಬ ಬಲ್ಲವರ ಮಾತಿಗೆ ಪ್ರತ್ಯಕ್ಷ ಉದಾಹರಣೆಯಾಗಿದ್ದವರು ಶ್ರೀಶ್ರೀಗಳವರು.

ಆಚಾರ್ಯ ಭಗವತ್ಪಾದರ ಭಾಷ್ಯಗಳನ್ನು ಆಳವಾಗಿ ಅಭ್ಯಸಿಸಿ, ಚಿಂತನ–ಮಂಥನಗಳಿಂದ, ತಮ್ಮ ವಿಶಿಷ್ಟವಾದ ಸಂಶೋಧನಾಪ್ರವೃತ್ತಿಯಿಂದ ಶುದ್ಧಶಾಂಕರ ಪ್ರಕ್ರಿಯೆಯ ವೈಶಿಷ್ಟ್ಯವನ್ನು ಸಾಮಾನ್ಯರಿಗೂ ಸುಲಭವಾಗಿ ಮುಟ್ಟುವಂತೆ ತಿಳಿಯಾದ ಭಾಷಾಶೈಲಿಯಲ್ಲಿ ವಿಶದಪಡಿಸಿದರು. ಅಶಾಂಕರ ಪ್ರಕ್ರಿಯೆಯಲ್ಲಿಯ ದೋಷಗಳನ್ನೂ ಹಾಗೂ ಶಾಂಕರ ಪ್ರಕ್ರಿಯೆಯನ್ನು ವಿವರಿಸಲೆಂದೇ ಈ ಹಿಂದೆ ಬಂದಿರುವ ವ್ಯಾಖ್ಯಾನ ಪ್ರಸ್ಥಾನಗಳಲ್ಲಿರುವ ಪ್ರಕ್ರಿಯೆಯ ದೋಷಗಳನ್ನೂ ಹೊರಗೆಡಹಿದರು. ಅದ್ವೈತವಷ್ಟೇ ಅಲ್ಲ, ದ್ವೈತ, ವಿಶಿಷ್ಟಾದ್ವೈತ ಮತ್ತಿತರ ಭಾರತೀಯ ಹಾಗೂ ಪಾಶ್ಚಾತ್ಯತತ್ತ್ವಗಳದಾರ್ಶನಿಕರ ಗ್ರಂಥಪಠಣವೂ, ವಿಮರ್ಶೆಯೂ ಅವರ ವಿಚಾರಸರಣಿಯನ್ನು ನಿಷ್ಕೃಷ್ಟವಾಗಿಸಿದವು. 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಗಳ ಅಧ್ಯಯನ, ಪಾಠ, ಚಿಂತನೆ, ಪ್ರವಚನ, ಗ್ರಂಥರಚನೆಗಳಲ್ಲಿ ತತ್ಪರರಾಗಿದ್ದು **"ಪುರುಷಸರಸ್ವತೀ"** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಶಾಂಕರ–ಅನುಶಾಂಕರ–ಅಶಾಂಕರ ಗ್ರಂಥಗಳನ್ನು ಕುರಿತು ಇನ್ನೂರಕ್ಕೂ ಮೀರಿ ಕೃತಿಗಳನ್ನು ರಚಿಸಿ ವೇದಾಂತಪ್ರಪಂಚದಲ್ಲಿ ಅಮರರಾದರು. ಶುದ್ಧ ತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರ ನಿಯಮಪಾಲನೆಗೆ ಶ್ರೀಶ್ರೀಗಳವರು ಹೆಸರಾದವರು. ಅವರ ಕೃತಿಗಳು ಪಾಮರ ಜಿಜ್ಞಾಸುಗಳಿಗೆ ಒಂದು ವರಪ್ರದವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆಸಲ್ಲಿಸುವಾಗಲೇ ಸ್ವಾಮಿ ವಿವೇಕಾನಂದರ ಭಾಷಣ ಶ್ರವಣ, ಅದರಿಂದ ವೇದಾಂತದ ಒಲವು, ಹೊಸಕೆರೆಚಿದಂಬರಯ್ಯನವರ ಸಾಂಗತ್ಯದಲ್ಲಿ ವೇದಾಂತ ಚಿಂತನೆ, ಶ್ರೀಕುರ್ತಕೋಟಿ ಮಹಾಭಾಗವತರ ಸಂಪರ್ಕ, ಆತ್ಮೀಯತೆ, ಶ್ರೀ ಗೋಂದಾವಲೇಕರ್ ಬ್ರಹ್ಮಚೈತನ್ಯ ಮಹಾರಾಜರ ದರ್ಶನ–ಅವರಿಂದ ಶ್ರೀರಾಮತಾರಕ ಮಂತ್ರೋಪದೇಶ, ಶ್ರೀಶೃಂಗೇರಿ ಜಗದ್ಗುರು ಶ್ರೀ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿ ಭಾಷ್ಯಶಾಂತಿಪಾಠ, ಶ್ರೀ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳಲ್ಲಿ ಗುರುಮುಖದಿಂದ ಭಾಷ್ಯಪಾಠ, ಶ್ರೀ ಕೆ.ಎ. ಕೃಷ್ಣಸ್ವಾಮಿಅಯ್ಯರ್ ಜೊತೆ ವೇದಾಂತದ ಪ್ರೌಢಚಿಂತನೆ– ಇವುಗಳು ಅವರ ಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

5–1–1880ರಲ್ಲಿ **ಜನನ,** 1920ರಲ್ಲಿ **ಅಧ್ಯಾತ್ಮಪ್ರಕಾಶಕಾರ್ಯಾಲಯ**ದ ಸ್ಥಾಪನೆ, ಗ್ರಂಥಪ್ರಕಟಣೆ, ವೇದಾಂತಪ್ರಚಾರ; 1923ರಲ್ಲಿ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯ ಉಗಮ, 1948ರಲ್ಲಿ **ಸಂನ್ಯಾಸಸ್ವೀಕಾರ,** 5–8–1975ರಲ್ಲಿ **ಮಹಾನಿರ್ಯಾಣ**ವನ್ನು ಹೊಂದಿದರು. ಹೀಗೆ ಪರಿಶುದ್ಧವೇದಾಂತಸಂಪ್ರದಾಯವನ್ನು ತಮ್ಮದಾಗಿಸಿಕೊಂಡು ಕೊನೆಯುಸಿರಿನವರೆಗೂ ವೇದಾಂತದಲ್ಲಿಯೇ ನಿರತರಾಗಿದ್ದರು. **ಅವರು ರಚಿಸಿರುವ ಗ್ರಂಥಗಳು ದೇಶ–ವಿದೇಶಗಳ ತತ್ತ್ವಜಿಜ್ಞಾಸುಗಳಿಗೆ ಜ್ಞಾನಭಂಡಾರವಾಗಿವೆ.** ಹೊಳೆನರಸೀಪುರದಲ್ಲಿ ಅವರ ಮಹಾಸಮಾಧಿಮಂದಿರ, ಅಮೃತಶಿಲಾವಿಗ್ರಹ, ಪಾದುಕೆಗಳು ಇವತ್ತಿಗೂ ಆ ಚೈತನ್ಯದ ಪ್ರತೀಕವಾಗಿವೆ. ಅವರು ಸ್ಥಾಪಿಸಿರುವ ಅಧ್ಯಾತ್ಮಪ್ರಕಾಶಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರಾಷ್ಟ್ರೀಯ ಕೇಂದ್ರವಾಗಿದೆ ಮತ್ತು ಅವರು ಉಪದೇಶಿಸಿದ ಕರ್ಮ–ಭಕ್ತಿ–ಉಪಾಸನಾ–ವೈರಾಗ್ಯ–ವಿವೇಕವಿಜ್ಞಾನದ ಪರಿಮಳ ವನ್ನು ಎಲ್ಲೆಲ್ಲಿಯೂ ಪ್ರಸರಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

ಅಧ್ಯಾತ್ಮಪ್ರಕಾಶಕಾರ್ಯಾಲಯವು ಬೆಳೆದುಬಂದ ಬಗೆ

(ಶ್ರೀಶ್ರೀಗಳವರು ಚಿತ್ರಿಸಿರುವಂತೆ)

ಸ್ಥಾಪನೆ –

ಯಾವುದೋ ಸಂದರ್ಭದಲ್ಲಿ ಶ್ರೀಶ್ರೀಗಳವರು ಓದಿದ್ದ ವೇದಾಂತಗ್ರಂಥದಲ್ಲಿದ್ದ **ಅಧ್ಯಾತ್ಮಪ್ರಕಾಶ**ವೆಂಬ ಹೆಸರು ಅವರ ಮನಸ್ಸನ್ನು ಸೆಳೆದಿತ್ತು. ಅದೇ ಹೆಸರಿನಿಂದ ವೇದಾಂತದ ಪತ್ರಿಕೆಯೊಂದನ್ನು ಆರಂಭಿಸಬೇಕೆಂದು ಯೋಚಿಸಿದ್ದರು. ಆ ಪತ್ರಿಕೆಯು ಕೂಡಲೆ ಹೊರಡಲಿಲ್ಲ. ಆಗ ಪ್ರಕಟವಾಗಿದ್ದ ಮಾಂಡೂಕ್ಯೋಪನಿಷತ್ತಿನ ರಟ್ಟಿನಕೊನೆಯ ಪುಟದಲ್ಲಿ **ಅಧ್ಯಾತ್ಮಪ್ರಕಾಶ ಎಂಬ ಹೆಸರಿನಿಂದ ಶ್ರೀಶಂಕರಾಚಾರ್ಯರ ಪ್ರಸಿದ್ಧಗ್ರಂಥಗಳನ್ನಾದರೂ ಪ್ರಕಟಿಸಬೇಕೆಂದು ಸಂಕಲ್ಪಿಸಿದೆ** ಎಂದು ಅಚ್ಚು ಹಾಕಿಸಲಾಗಿತ್ತು. **ಅನಂತರ ಯಾವ ಗದ್ದಲವೂ ಇಲ್ಲದೆ ಸಮಾರಂಭಮಹೋತ್ಸವವಿಲ್ಲದೆ ಅವರಿಗೂ ಅರಿವಿಲ್ಲದ ರೀತಿಯಲ್ಲಿ 1920ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದ ಅವರ ಮನೆಯಲ್ಲಿಯೇ ಅಧ್ಯಾತ್ಮಪ್ರಕಾಶಕಾರ್ಯಾಲಯವು ಜನಿಸಿತು.**

ಶ್ರೀಶ್ರೀಗಳವರೇ ವಿವರಿಸಿರುವಂತೆ ಅಧ್ಯಾತ್ಮಪ್ರಕಾಶಕಾರ್ಯಾಲಯ ಎಂದರೆ: ಕೆಲವರು ಯಾವದೋ ಒಂದು 'ಕಾರ್ಯ' (ಉದ್ಯೋಗವನ್ನು) ಸಾಗಿಸುವ ಕಂಪನಿಯೆಂದು ಭಾವಿಸಿರುವಂತಿದೆ. ನಿಜವು ಹಾಗಿಲ್ಲ. ಅಧ್ಯಾತ್ಮವಿಚಾರದಲ್ಲಿ ಮನಸ್ಸಿಟ್ಟುಕೊಂಡಿರುವದು; ಅಂಥವರಲ್ಲಿ ಒಬ್ಬರಿಗೊಬ್ಬರ ಪರಿಚಯವನ್ನು ಮಾಡಿಕೊಡುವದು; ಅಧ್ಯಾತ್ಮಗ್ರಂಥಾವಲೋಕನ, ಪುರಾಣಶ್ರವಣ, ಅರ್ಚನ, ಜಪ – ಮುಂತಾದ ಅನುಷ್ಠಾನಗಳನ್ನು ಮಾಡುವದು, ಮಾಡುವವರಿಗೆ ಅವಕಾಶವನ್ನು ಕಲ್ಪಿಸುವದು, ತಮಗೆ ತಿಳಿದಿರುವ ವಿಷಯಗಳನ್ನು ಅನುಭವಕ್ಕೆ ಗೋಚರವಾದ ವಿಷಯಗಳನ್ನು ಮತ್ತೊಬ್ಬರಿಗೆ ತಿಳಿಯಪಡಿಸುವದು, ಮತ್ತೊಬ್ಬರ ಅನುಭವದ ವಿಷಯವಾಗಿ ಕೇಳಿ ಲಾಭವನ್ನು ಪಡೆಯುವದು – ಇಂಥ ಕಾರ್ಯಗಳಲ್ಲಿ ನಿರತವಾಗಿರುದರಿಂದ ಇದು 'ಅಧ್ಯಾತ್ಮಪ್ರಕಾಶಕಾರ್ಯಾಲಯ'ವೆನಿಸಿದೆ.

[**ಅಧ್ಯಾತ್ಮಪ್ರಕಾಶಕಾರ್ಯಾಲಯಃ** – ಆತ್ಮನಿ ಅಧಿ –ಅಧ್ಯಾತ್ಮಮ್; ಅಧ್ಯಾತ್ಮನಃ ಪ್ರಕಾಶಃ ಅಧ್ಯಾತ್ಮಪ್ರಕಾಶಃ; ಕಾರ್ಯಸ್ಯ ಆಲಯಃ – ಕಾರ್ಯಾಲಯಃ; ಅಧ್ಯಾತ್ಮಪ್ರಕಾಶಸ್ಯ ಕಾರ್ಯಾಲಯಃ – ಅಧ್ಯಾತ್ಮಪ್ರಕಾಶ ಕಾರ್ಯಾಲಯಃ । ಆತ್ಮನನ್ನು ಕುರಿತದ್ದು ಅಧ್ಯಾತ್ಮ; ಒಳಗಿನ ಆತ್ಮಸ್ವರೂಪದ ಪ್ರಕಾಶವೇ ಅಧ್ಯಾತ್ಮಪ್ರಕಾಶ; ಕಾರ್ಯದ ಆಲಯ(ಮನೆ), ಕಾರ್ಯಾಲಯ; ಒಳಗಿನ ಆತ್ಮಸ್ವರೂಪವನ್ನು ಪ್ರಕಾಶಗೊಳಿಸುವ ಕಾರ್ಯದ ಆಲಯ – ಅಧ್ಯಾತ್ಮಪ್ರಕಾಶಕಾರ್ಯಾಲಯ].

ಉದ್ದೇಶ –

"ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನು ಉಂಟುಮಾಡುವದೇ ಮುಖ್ಯೋದ್ದೇಶ". ಈ ಧ್ಯೇಯಸಾಧನೆಗೆ ಅಂಗವಾಗಿ ಸ್ವೀಕರಿಸಲಾದ ಕೆಲವು ಉದ್ದೇಶಗಳು

1. ಅಧ್ಯಾತ್ಮವಿಚಾರದಲ್ಲಿ ಜನಸಾಮಾನ್ಯರವರೆಗೂ ಎಲ್ಲರಿಗೂ ಸವಿಯುಂಟಾಗುವಂತೆ ಪ್ರಯತ್ನಿಸುವದು.

2. ಮೂಢವಿಶ್ವಾಸಗಳನ್ನು ಕಿತ್ತುಹಾಕಿ ಆತ್ಮವಿಚಾರಕ್ಕೆ ಅನುಕೂಲವಾಗಿ ಒದಗುವಂಥ ಸಾಧನಗಳನ್ನು ಮಾಡಬೇಕೆನ್ನುವವರಿಗೆ ಸಹಾಯಮಾಡುವದು.

3. ಅಧ್ಯಾತ್ಮವಿಚಾರದಲ್ಲಿ ತೊಡಗಿರುವವರಿಗೆ ಒಬ್ಬರಿಗೊಬ್ಬರ ಪರಿಚಯಕ್ಕೆ ಅವಕಾಶವನ್ನು ಕಲ್ಪಿಸುವದು.

4. ಅಧ್ಯಾತ್ಮವಿಚಾರ ಸಂಘಗಳನ್ನು ಸ್ಥಾಪಿಸುವದು – ಇವು ಮುಖ್ಯವಾದವು.

ಹೀಗೆ ಧ್ಯೇಯೋದ್ದೇಶಗಳಿಗನುಗುಣವಾಗಿ ಗ್ರಂಥಪ್ರಕಟಣೆ, ವೇದಾಂತಪ್ರಚಾರ ಮುಂತಾದ ಕಾರ್ಯಗಳನ್ನು ನಡೆಸುತ್ತಾ ಕಾರ್ಯಾಲಯವು ಮುಂದುವರಿಯುತ್ತಾ ಸಾಗುತ್ತಿತ್ತು. ಆಗ ಮಹಾಜನರ ಸಹಕಾರ, ಶ್ರೀಶ್ರೀಗಳವರ ಸಂಕಲ್ಪ, ಭಗವಂತನ ಅನುಗ್ರಹದಿಂದ 1938ರಲ್ಲಿ ಸಾಂಕೇತಿಕವಾಗಿ ಪ್ರಾರಂಭವಾದ ವಿದ್ಯಾಲಯದಲ್ಲಿ ಮೊದಲ ವಿದ್ಯಾರ್ಥಿಗಳಾಗಿ ಮತ್ತೂರು ಸುಬ್ರಾಯಾವಧಾನಿಗಳು ಬಂದುಸೇರಿ ಅಧ್ಯಯನವನ್ನು ಆರಂಭಿಸಿದ್ದರು. ಅನಂತರ ಕಣಕಟ್ಟೆ ಸೀತಾರಾಮದೀಕ್ಷಿತರು, ಅಗ್ರಹಾರದ ಶ್ರೀನಿವಾಸ ಭಟ್ಟರು ಸಹ ಬಂದು ಸೇರಿದರು. ಇವರಲ್ಲದೆ ಇನ್ನೂ ಅನೇಕ ಜಿಜ್ಞಾಸುಗಳು ಬಂದು ಶ್ರೀಶ್ರೀಗಳವರಲ್ಲಿ ಸಂಪೂರ್ಣವಾಗಿ ವೇದಾಂತಾಧ್ಯಯನವನ್ನು ಮಾಡಿದರು. ಆದರೂ ಒಂದು ಮಹಾವಿದ್ಯಾಲಯವನ್ನು ಆರಂಭಿಸುವ ಬಗ್ಗೆ **ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ (15–6–1944)** ಒಂದು ಲೇಖನವನ್ನು ಶ್ರೀಶ್ರೀಗಳವರು ಹೀಗೆ ಬರೆಯುತ್ತಾರೆ–

ಅರುವತ್ತೈದನೆಯ ವರ್ಷ –

ನನಗೆ ಈ ಸ್ವಭಾನು ಸಂವತ್ಸರದ ಮಾರ್ಗಶೀರ್ಷ ಬಹುಳ ಅಷ್ಟಮಿ ದಿನಕ್ಕೆ ಅರುವತ್ತುನಾಲ್ಕು ವರ್ಷಗಳಾದವು. ಈ ಶರೀರವನ್ನು ಈವರೆಗೆ ನಿಲ್ಲಿಸಿ ತನ್ನ ನೆನಪನ್ನು ಚಿತ್ತದಲ್ಲಿಟ್ಟಿರುವ ಭಗವಂತನಿಗೆ ಶ್ರದ್ಧಾಭಕ್ತಿಪೂರ್ವಕವಾದ ನನ್ನ ಅನಂತರ ವಂದನೆಗಳು.

ಭರತಖಂಡದಲ್ಲೆಲ್ಲ ಕಾಲುನಡಗೆಯಿಂದ ಸಂಚರಿಸಿ ವೇದಾಂತತತ್ತ್ವಗಳನ್ನು ಉಪದೇಶಿಸಿ ಮುಂದಿನ ತಲೆಮಾರಿನವರಿಗೂ ಅನುಕೂಲಿಸುವಂತೆ ತಮ್ಮ ಅಮೋಘವಾದ ಭಾಷ್ಯಗಳನ್ನು ಬರೆದಿಟ್ಟು, ಅವುಗಳಲ್ಲಿ ಕೆಲವನ್ನು ಓದಿ ದೊಡ್ಡವರ ಅನುಗ್ರಹದಿಂದ ಅರ್ಥಮಾಡಿಕೊಳ್ಳುವ ಯೋಗ್ಯತೆಯನ್ನು ಕರುಣಿಸಿರುವ ಶ್ರೀಶಂಕರಾಚಾರ್ಯರೇ ಮುಂತಾದ ಆಚಾರ್ಯರುಗಳನ್ನು ಅತ್ಯಂತಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಸ್ಥಾಪಿತವಾಗಿ ಇಪ್ಪತ್ತುನಾಲ್ಕು ವರ್ಷಗಳಾದವು. ಅಲ್ಲಿ ಹಲವು ಸಂಸ್ಕೃತಗ್ರಂಥಗಳು ಕನ್ನಡದ ಉಡುಪನ್ನು ತೊಟ್ಟಿವೆ; ಕೆಲವು ಇಂಗ್ಲಿಷು, ಕನ್ನಡ, ಸಂಸ್ಕೃತದ ಹೊಸ ಗ್ರಂಥಗಳ ಹೊರಕ್ಕೆ ಬಂದಿವೆ. ವರ್ಷದಲ್ಲಿ ಬೇರೆಬೇರೆಯ ಕಡೆಗಳಲ್ಲಿ ಭಾಷ್ಯಪ್ರವಚನವೂ ಉಪನ್ಯಾಸಗಳೂ ಚರ್ಚೆಗಳೂ ಉತ್ಸವಗಳೂ ಆಗಿವೆ. ಈ ಭಾಗದಲ್ಲಿ ಹಲವು ಬಗೆಯಿಂದ ಸಹಾಯಮಾಡಿರುವ ಧನಿಕರನ್ನೂ ವಿದ್ವಾಂಸರನ್ನೂ ಮಿತ್ರರನ್ನೂ ಕೃತಜ್ಞತಾಪೂರ್ವಕವಾಗಿ ಅಭಿನಂದಿಸುತ್ತೇನೆ. ಕಾರ್ಯಾಲಯದಲ್ಲಿ ಭಾಗವಹಿಸಲು ಅವಕಾಶಕೊಟ್ಟಿರುವ ಭಗವಂತನಿಗೆ ಅನಂತಾನಂತ ನಮಸ್ಕಾರಗಳು.

ಕಾರ್ಯಾಲಯದಲ್ಲಿ ಏರ್ಪಡಿಸಬೇಕೆಂದಿರುವ ವಿದ್ಯಾನಿಲಯದ ಕೆಲಸವು ಮುಂದೆ ಸಾಗುವದನ್ನು ಕಣ್ಣಾರೆ ಕಾಣಬೇಕೆಂಬ ಆಸೆಯೊಂದು ಮೊಳಕೆಯಾಗಿದೆ. ಸುಶಿಕ್ಷಿತರಾದ ಉಪದೇಶಕರು ಅಲ್ಲಿ ಸಜ್ಜಾಗಬೇಕೆಂಬ ಉದ್ದೇಶವಿದೆ. ನನಗೆ ತಿಳಿದಿರುವ ಕೆಲವು ವಿಷಯಗಳನ್ನು ಉತ್ಸಾಹಶಾಲಿಗಳಾದ ತರುಣರಿಗೆ ಕೊಟ್ಟು, ಅವರ ಮೂಲಕ ಈ ಕಾರ್ಯವು ಮುಂದುವರಿಯಬೇಕೆಂಬ ಆಸೆಯಿದೆ. ಇದು ಯುಕ್ತವಾಗಿದ್ದರೆ, ಕಾಲೋಚಿತವಾಗಿದ್ದರೆ, ಭಗವಂತನು "ಹಾಗೆಯೇ ಆಗಲಿ" ಎಂದು ಹರಸಲಿ!

ಕಾರ್ಯಲಯಕ್ಕೆ ಬೇಕಾಗಿರುವ ಕಟ್ಟಡಕ್ಕೆ ಸುಮಾರು 13,000 ರೂ.ಗಳು ಬೇಕಾಗುವದೆಂದು ಹೋದ ವರ್ಷ ಏಪ್ರಿಲ್ ತಿಂಗಳಿನಲ್ಲಿ ತಿಳಿಸಿದ್ದೆವು. ಆ ವರ್ಷದ ಅಕ್ಟೋಬರಿನಲ್ಲಿ ನಮಗೆ ಮೊದಲನೆಯ ಸಹಾಯವು ಬಂದಿತು. ಇಂದಿನವರೆಗೆ 2749 ರೂ.ಗಳು ಶೇಖರವಾಗಿವೆ. ಸಹಾಯಮಾಡಿರುವವರ ಸಂಖ್ಯೆ 42 ಮಾತ್ರ. ಇಷ್ಟು ಅಲ್ಪಸಂಖ್ಯೆಯ ಜನರು ಇಷ್ಟು ಹಣವನ್ನು ಕೊಟ್ಟಿರುವದು ಸ್ತುತ್ಯವೇ ಸರಿ. ನಾನು ಆ ಮಹಾಶಯರಿಗೆಲ್ಲ ಅತ್ಯಂತಕೃತಜ್ಞನು.

ವಾಚಕರಲ್ಲಿ ನನ್ನ ಬಿನ್ನಹವಿದು: ಭರತಖಂಡದ ಭಾಗ್ಯವೆಂದರೆ ಅಧ್ಯಾತ್ಮವಿದ್ಯೆಯೇ; ಈ ವಿದ್ಯೆಯ ಪ್ರಸಾರಕ್ಕೆ ಕಂಕಣಕಟ್ಟಿಕೊಂಡು ನಿಂತಿರುವ ಸಂಸ್ಥೆಯು ಕನ್ನಡನಾಡಿನಲ್ಲಿ ಅಧ್ಯಾತ್ಮಪ್ರಕಾಶಕಾರ್ಯಾಲಯವೊಂದೇ. ತಮ್ಮಗಳ ನೆರವಿನಿಂದ ಅದು ಇದುವರೆಗೆ ಮಾಡಿರುವ ಅತ್ಯಲ್ಪಸೇವೆಯಿಂದ ಕನ್ನಡನಾಡಿನವರನೇಕರಿಗೆ ಅಧ್ಯಾತ್ಮವಿದ್ಯೆಯಲ್ಲಿ ಆದರವು ಹೆಚ್ಚಿರುವದು ಅನುಭವಕ್ಕೆ ಬಂದಿರುತ್ತದೆ. ಈ ಕಾರ್ಯಾಲಯವನ್ನು ತಮ್ಮದಾಗಿ ಮಾಡಿಕೊಳ್ಳಿರಿ. ಇಲ್ಲಿಯ ವಿದ್ಯಾಲಯವು ಯಶಸ್ವಿಯಾಗಿ ನಡೆಯುವಂತೆ ಮಾಡಿರಿ. ಈ ಬಿನ್ನಹವನ್ನು ಓದುವವರು ಯಾರೇ ಆಗಲಿ ಈ ನಿಶ್ಚಯವನ್ನು ಮಾಡಿಕೊಳ್ಳಿರಿ; "ಕಾರ್ಯಾಲಯವು ನಮ್ಮದು, ನನಗೂ ಬೇಕಾದದ್ದು. ಇದು ವ್ಯಾಪಾರಸಂಸ್ಥೆಯಲ್ಲ, ನಮ್ಮೆಲ್ಲರಿಗೂ ಬೇಕಾದದ್ದು. ಅಲ್ಲಿಂದ ಉಪದೇಶಕರು ಹೊರಟು ಸರ್ವಸಮ್ಮತವಾದ ಉಪದೇಶಗಳನ್ನು ಮಾಡುತ್ತಾ ಎಲ್ಲೆಲ್ಲಿಯೂ, ನಮ್ಮೂರಿನಲ್ಲಿಯೂ, ಸಂಚರಿಸಲಿ! ಇದಕ್ಕೆ ನನ್ನ ಕೈಯಲ್ಲಾದ ಸಹಾಯವನ್ನು ಮಾಡುವೆನು. ದುಂದುವೆಚ್ಚವನ್ನು ಕಡಿಮೆಮಾಡಿ, ಅವಶ್ಯವಿದ್ದರೆ ನನಗೆ ಬೇಕಾದದ್ದರಲ್ಲಿ ಕೂಡ ಸ್ವಲ್ಪ ಕೊರೆಮಾಡಿಕೊಂಡು, ಈ ಸಂಸ್ಥೆಗೆ ಸಹಾಯ ಮಾಡುವೆನು, ನನ್ನ ಮಿತ್ರರಿಂದಲೂ ಸಹಾಯಮಾಡಿಸುವೆನು!"

ಆನಂತರ 1945ರ ಹೊತ್ತಿಗೆ ವಿದ್ಯಾಲಯವು ವ್ಯವಸ್ಥಿತವಾಗಿ ಮುನ್ನಡೆಯಲು ಆರಂಭವಾಯಿತು. ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು, ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು, ರಾಮಸ್ವಾಮಿ ಅವಧಾನಿಗಳು, ಕೆ.ಜಿ. ಸುಬ್ರಾಯಶರ್ಮರು, ಅಶ್ವತ್ಥನಾರಾಯಣ ಅವಧಾನಿಗಳು, ಮಂಜಯ್ಯ, ಭಗವತ್ಪಾದರು ದೇವರಾಯಕುಲಕರ್ಣಿಗಳು – ಇವರೆಲ್ಲ ಶ್ರೀಶ್ರೀಗಳ ಶಿಷ್ಯಪರಂಪರೆಯಲ್ಲಿ ಬಂದು ಶುದ್ಧಶಾಂಕರವೇದಾಂತ ಪರಂಪರೆಯನ್ನು ಮುಂದುವರಿಸಿದವರು. ಆದರೂ ಶ್ರೀಶ್ರೀಗಳವರಿಗೆ ಇನ್ನೂ ಹೆಚ್ಚಿನ ಪ್ರಗತಿಯು ವಿದ್ಯಾಲಯದಲ್ಲಿ ಆಗಬೇಕಾಗಿತ್ತು ಎಂಬ ಹಂಬಲಿಕೆಯನ್ನು ಇನ್ನೊಂದು ಲೇಖನದಲ್ಲಿ **(32–7–1963)** ತಿಳಿಸುತ್ತಾರೆ–

ನನ್ನ ಹಂಬಲಿಕೆ –

ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ವೇದಾಂತತತ್ತ್ವಗಳನ್ನು ಪ್ರಚಾರ ಮಾಡುವ ಸದುದ್ದೇಶದಿಂದ

ಅಭ್ಯಾಸ ಮಾಡಲೆಳಸುವ ಪ್ರೌಢವಿದ್ಯಾರ್ಥಿಗಳಿಗೆಂದು ಒಂದು ವಿದ್ಯಾನಿಲಯವನ್ನು ಸ್ಥಾಪಿಸಿದೆ. ಅದರ ನಿಯಮಗಳನ್ನೂ ಅಭ್ಯಾಸಕ್ರಮವನ್ನೂ ವಿವರಣಪತ್ರಿಕೆಯಲ್ಲಿ ಪ್ರಕಟಿಸಿದೆ. ಇಂಗ್ಲಿಷನ್ನು ಪ್ರಿಯೂನಿವರ್ಸಿಟಿ ಅಂತಸ್ತಿನವರೆಗೆ ಕಲಿತಿರುವ – ಅಥವಾ ಅದಕ್ಕಿಂತಲೂ ಪಾಠಶಾಲೆಗಳಲ್ಲಿ ಚಂಪೂಕಾವ್ಯಗಳನ್ನು ಓದಿರುವ ಅಂತಸ್ತಿನ ವಿದ್ಯಾರ್ಥಿಗಳಿಗೆ ಮಾತ್ರವೇ ಆ ಕ್ರಮವು ಮೀಸಲಾಗಿದೆ. ಇಂಗ್ಲಿಷು ಬಂದಿರುವವರು ಸಂಸ್ಕೃತವನ್ನೂ ಸಂಸ್ಕೃತವನ್ನು ಬಲ್ಲವರು ಇಂಗ್ಲಿಷನ್ನೂ ಅವಶ್ಯವಾಗಿ ಕಲಿತುಕೊಂಡೇ ಅಲ್ಲಿ ಓದಬೇಕೆಂಬ ನಿರ್ಬಂಧವಿದೆ.

ಈವರೆಗೆ ಕೆಲವರು ವಿದ್ಯಾರ್ಥಿಗಳಿಗೆ ಈ ಕ್ರಮದಿಂದ ಪಾಠವನ್ನು ಹೇಳಿದೆಯಾದರೂ ಪ್ರಚಾರಕ್ಕೆಂದೇ ಓದುವದಕ್ಕೆ ಮುಂದೆ ಬಂದಿರುವ ವಿದ್ಯಾರ್ಥಿಗಳು ಈವರೆಗೆ ಸಿಕ್ಕಿರುವದಿಲ್ಲ. ವಿದ್ಯಾನಿಲಯದಿಂದ ಕೆಲವು ವಿದ್ಯಾರ್ಥಿಗಳಿಗೇನೊ ಪ್ರಯೋಜನವಾಗಿದೆ.

ವೇದಾಂತವನ್ನು ತಕ್ಕಮಟ್ಟಿಗೆ ಕಲಿತು ವೈರಾಗ್ಯದಿಂದ ಜ್ಞಾನಸಾಧನೆಯನ್ನೇ ಮಾಡಿಕೊಳ್ಳಬೇಕು. ವೇದಾಂತತತ್ತ್ವದ ಸಾಕ್ಷಾತ್ಕಾರವನ್ನೇ ಮಾಡಿಕೊಳ್ಳಬೇಕು, ಅದಕ್ಕಾಗಿ ಬೇಕಾಗುವ ಸಾಧನಗಳ ಮರ್ಮವನ್ನು ಅಳವಡಿಸಿಕೊಳ್ಳಬೇಕು – ಎಂಬ ಉತ್ತಮ ವರ್ಗದ ವಿದ್ಯಾರ್ಥಿಗಳು ಸಿಕ್ಕಿದ್ದರೆ ನನ್ನ ಮನಸ್ಸಿನಲ್ಲಿರುವ ಪರಮೋದ್ದೇಶವು ನೆರವೇರುತ್ತಿತ್ತು. ಆದರೆ ಅದು ಈಶ್ವರೇಚ್ಛೆಗೆ ಈವರೆಗೆ ಬಂದಿರುವದಿಲ್ಲ.

ನನಗೆ ಈಗ ವಯಸ್ಸು ಹೆಚ್ಚುತ್ತಾಬಂದು ಶರೀರವು ಗಳಿತವಾಗುತ್ತಿದೆ. ನಾನು ಗ್ರಂಥಗಳ ಮೂಲಕ ಬರೆದು ಪ್ರಚಾರಮಾಡಿರುವ ವಿಷಯಗಳಲ್ಲದೆ ಇನ್ನೂ ಹೊರಕ್ಕೆ ತರಬೇಕಾದ ಅನೇಕ ವಿಷಯಗಳು ನನ್ನ ಹೃದಯದಲ್ಲಿದ್ದು ಅವು ಹಾಗೆಯೇ ಜೀರ್ಣವಾಗುವ ಸಂಭವವು ಹೆಚ್ಚಾಗುತ್ತಿದೆ.

ಬ್ರಹ್ಮಚಿಂತನ, ವೇದಾಂತ ಪ್ರವಚನ – ಇವುಗಳಲ್ಲಿಯೇ ಕಾಲವನ್ನು ಕಳೆಯುತ್ತಿರಬೇಕೆಂಬ ಹಂಬಲವುಳ್ಳ ವಿದ್ವಾಂಸರಾದ ಬ್ರಹ್ಮಚಾರಿಗಳು ಅಥವಾ ಸಂನ್ಯಾಸಿಗಳು ಯಾರಾದರೂ ವಾಚಕರ ಪ್ರಾಂತದಲ್ಲಿದ್ದರೆ ಅವಶ್ಯವಾಗಿ ನನಗೆ ತಿಳಿಯಿಸಬೇಕು. ಅಂಥವರಿಗೆ ಬೇಕಾದ ಸೌಕರ್ಯಗಳನ್ನೆಲ್ಲ ಕಾರ್ಯಾಲಯದಲ್ಲಿ ಒದಗಿಸಿಕೊಟ್ಟು ಸಾಧನಸಿದ್ಧಾಂತಗಳಲ್ಲಿ ನನಗಿರುವಷ್ಟು ತಿಳಿವಳಿಕೆಯನ್ನು ಅವರಿಗೂ ಅನುಭವಕ್ಕೆ ಬರುವಂತೆ ಮಾಡಿ ಅವರನ್ನು ಕಾರ್ಯಾಲಯದಲ್ಲಿ ಅಧ್ಯಾತ್ಮವಿದ್ಯಾಪ್ರಚಾರಕ್ಕೆ ಮೀಸಲಾಗಿ ನನ್ನ ಸ್ಥಾನದಲ್ಲಿ ನಿಲ್ಲಿಸುವ ಸುಯೋಗವನ್ನು ಕಾಣಬೇಕೆಂಬ ಹಂಬಲಿಕೆಯು ಹೆಚ್ಚಾಗುತ್ತಿದೆ.

ಸಾಧನಗಳ ಅನುಷ್ಠಾನ, ಸಿದ್ಧಾಂತದ ಮನನ ಮತ್ತು ಪ್ರವಚನ – ಇವುಗಳನ್ನು ಗುರಿಯಾಗಿಟ್ಟು ಕೊಂಡಿರುವ ಪುಣ್ಯಾತ್ಮರು ವಾಚಕರ ಪ್ರಾಂತದಲ್ಲಿ ಯಾರಾದರೂ ದೊರಕಿದರೆ ಕಾರ್ಯಾಲಯಕ್ಕೆ ಅವರ ವಿಷಯವಾಗಿ ಬರೆದು ತಿಳಿಯಿಸಬೇಕೆಂದು ಈ ಮೂಲಕ ಕೇಳಿಕೊಂಡಿರುತ್ತೇನೆ.

ಇಂತಹ ಉದ್ದೇಶಗಳು ಹೇಗೆ ನೆರವೇರಿದವು ಎಂಬುದನ್ನು ಶ್ರೀಶ್ರೀಗಳವರು ಮತ್ತೊಂದು ಲೇಖನದಲ್ಲಿ (42 12–1973) ತಿಳಿಸುತ್ತಾರೆ –

ಪೌರುಷಪ್ರಯತ್ನಕ್ಕೆ ಪ್ರೋತ್ಸಾಹವಿದೆ, ಅಡ್ಡಿಗಳೂ ಬರುತ್ತವೆ –

ನನ್ನ ಜೀವಮಾನದಲ್ಲಿ ನಾನು ಕಲಿತ ಒಂದು ಪ್ರಕೃತಿನಿಯಮವೇನೆಂದರೆ: ಪೌರುಷಪ್ರಯತ್ನಕ್ಕೆ ಅವಶ್ಯವಾಗಿ ಫಲವು ದೊರಕುತ್ತದೆ; ಕೆಲವು ವೇಳೆ ಅಡ್ಡಿಗಳೂ ಬರುತ್ತವೆ. ಆದರೆ ಅವುಗಳಿಂದ ನಾವು

ಮುಂದೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅಥವಾ ಅವುಗಳು ಕೊಟ್ಟ ಎಚ್ಚರಿಕೆಯ ಅರ್ಥವೇನೆಂಬುದನ್ನು ಗೊತ್ತುಪಡಿಸಿಕೊಳ್ಳಬೇಕು, ಅಷ್ಟೆ.

1. **ಪತ್ರಿಕೆ :–** ನನ್ನಲ್ಲಿಗೆ 'ಯಾವದಾದರೂ ಸತ್ಕಾರ್ಯವನ್ನು ಮಾಡುವದಕ್ಕೆ ಸೂಚನೆಕೊಡಿರಿ' ಎಂದು ಒಬ್ಬ ಮಹಾಶಯರು ಬಂದರು. ಅವರಿಗಾಗಿ **'ಅಧ್ಯಾತ್ಮಪ್ರಕಾಶ'** ಎಂಬ ಹೆಸರಿನ ಪತ್ರಿಕೆಯನ್ನು ಹೊರಡಿಸಿ, ನೀವು ಇದನ್ನು ನಡೆಸಿಕೊಂಡು ಹೋಗಿರಿ – ಎಂದು ಸೂಚಿಸಿದೆನು. ಆದರೆ ವಿಧಿವಿಲಾಸವು ಬೇರೆಯಾತಯಿತು. ಅವರು ಕಾಶಿಗೆ ಹೋಗಿಬರುತ್ತೇನೆಂದು ಹೊರಟು ಅಲ್ಲಿಯೇ ನಿಧನವನ್ನೈದಿದರು. ನಾನೇ ಸಂಪಾದಕನಾದೆ. ಹಲವರು ಗ್ರಾಹಕರಾದರು. ಆದರೆ ಸ್ವಲ್ಪ ಕಾಲದ ಅವಧಿಯಲ್ಲಿಯೇ ಪತ್ರಿಕೆಯು ನಿಂತಿತು. ಮತ್ತೆ ಪ್ರಯತ್ನಿಸಿದೆ. ಅದು ಈಗ ಕಾರ್ಯಾಲದ ಆಶ್ರಯದಲ್ಲಿ ನಲವತ್ತೆರಡನೆಯ ಸಂಪುಟವನ್ನು ಪರಿಪೂರ್ಣಮಾಡಿಕೊಂಡಿದೆ!

2. **ಸಂನ್ಯಾಸ :–** ಗಾರ್ಹಸ್ಥ್ಯವನ್ನು ಬಿಟ್ಟು ಬ್ರಹ್ಮಚಿಂತನೆಯಲ್ಲಿ ಕಾಲವನ್ನು ಕಳೆಯಬೇಕೆಂಬ ಯೋಚನೆಯು ಬಹಳ ಹಿಂದೆಯೇ ಮನಸ್ಸಿನಲ್ಲಿ ಅಂಕುರಿಸಿತು. ಮತ್ತೆಮತ್ತೆ ಅದು ಚಿಗುರಿದಂತೆಲ್ಲ ಹಲವರು ಪ್ರೋತ್ಸಾಹಿಸಿದರು. ಒಮ್ಮೆ ಒಂದು ಮಠದ ಪೀಠದಲ್ಲಿ ಕುಳ್ಳಿರಿಸಿಬಿಡಬೇಕೆಂದುಕೂಡ ನನ್ನ ಮಿತ್ರರು ಸಾಹಸಪಟ್ಟರು; ಕೊನೆಗೆ ಇಪ್ಪತ್ತೈದು ವರ್ಷದ ಕೆಳಗೆ ಅದು ರೂಪುಗೊಂಡಿತು! ಆಗ ಕೆಲವರಿಗೆ ಅತೃಪ್ತಿ, ಮತ್ತೆ ಕೆಲವರಿಗೆ ಸಂತೋಷ!

3. **ಭಜನೆ :–** ಮನೆಯಲ್ಲಿ ಹೆಣ್ಣುಮಕ್ಕಳಸಲುವಾಗಿ ಪ್ರತಿ ಶುಕ್ರವಾರವೂ ಭಜನೆಯನ್ನು ಮಾಡುವ ಪದ್ಧತಿಯನ್ನು ಏರ್ಪಡಿಸಿಕೊಂಡೆನು. ಅದು ಅಧ್ಯಾತ್ಮಪ್ರಕಾಶಕಾರ್ಯಾಲಯವು ಏರ್ಪಾಡಾಗುತ್ತಲೂ ಗುರುವಾರ ಶನಿವಾರಗಳ ಭಜನೆಯಾಗಿ ಮಾರ್ಪಟ್ಟಿತು. ಅದಕ್ಕೆ ಕೆಲವು ಅಡ್ಡಿಗಳು ಬಂದೊದಗಲು, ನಾನೇ ಪ್ರತಿದಿನವೂ ಸಾಯಂಕಾಲ ಭಜನೆಯನ್ನು ಜನರಿಂದ ಮಾಡಿಸುತ್ತಾ ಬಂದಿದೇನೆ. ಈ ಭಜನೆಗೆ ಒಬ್ಬ ಮಹಾತ್ಮರಿಂದ ಪ್ರೋತ್ಸಾಹವು ಬಂದು ವೀರ್ಯವತ್ತಾಯಿತು. ಈಗ ಕಾರ್ಯಾಲಯವು ಇದಕ್ಕೆ ನಿಮಿತ್ತಮಾತ್ರವಾಗಿದೆ. ಶರೀರದಲ್ಲಿ ಸ್ವಾಸ್ಥ್ಯವಿಲ್ಲದಾಗಲೂ ನನ್ನಲ್ಲಿಯೇ ನಾಮ ಭಜನೆ ಮಾಡಿದಂತೆ ಭಾವನೆ ಮಾಡುತ್ತಿದ್ದೇನೆ.

4. **ಗ್ರಂಥರಚನೆ :–** ಮನೆಯಲ್ಲಿ ಕೆಲವರ ಸಹಾಯಕ್ಕೆಂದು **"**ಪುರುಷಾರ್ಥ ಗ್ರಂಥಾವಳಿ**"**ಯನ್ನು ಪ್ರಕಟಿಸುವದಕ್ಕೆ ಆರಂಭಿಸಿದೆನು. ಬರೆಯುವದು ನನ್ನ ಪ್ರಕೃತಿಗೆ ಒಗ್ಗಿದ್ದಲ್ಲವೆಂದೂ ನಾನು ಉಪನ್ಯಾಸಕ ನಾಗುವೆನೆಂದೂ ಒಂದು ಕಾಲದಲ್ಲಿ ನನ್ನಲ್ಲಿ ಭಾವನೆ ಮೂಡಿಕೊಂಡಿತ್ತು; ಆದರೆ ಮಿತ್ರರೊಬ್ಬರ ಅನುಕರಣದಿಂದ ಅದು ತಪ್ಪಿ ಬರೆಯುವದೇ ನನ್ನ ಪ್ರಕೃತಿಯೇನೋ!.... ಎಂಬಂತಾಯಿತು. ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕಾಗಿ **"**ಅಧ್ಯಾತ್ಮಗ್ರಂಥಾವಳಿ**"** ಯನ್ನಾರಂಭಿಸಿದ ಮೇಲೆ ಅದು ಆಗಾಗ್ಗೆ ಅಡ್ಡಿಗಳಿಂದ ನಿಲ್ಲುತ್ತಿತ್ತು. ಕೊನೆಗೆ ಮಹಾರಾಜರ ಪೋಷಣೆಗೆ ಸಿಕ್ಕಿದಮೇಲೆ ಅದು ತಳವೂರಿ ನಿಂತಿತು. ಇತ್ತೀಚೆಗೆ ಕನ್ನಡದಲ್ಲಿಯೇ ಅಲ್ಲದೆ, ಸಂಸ್ಕೃತ, ಇಂಗ್ಲಿಷು ಭಾಷೆಗಳಲ್ಲಿಯೂ ಬರೆಯುವ ಸಾಹಸವನ್ನು ಮಾಡಿದೆ! ಇದೀಗ ಕಣ್ಣುಪರೆಯು ಕಾಣಿಸಿಕೊಳ್ಳುತ್ತಾಬಂದಂತೆ ಯತ್ನವಿಲ್ಲದೆ ಅದನ್ನು

ಕೈಬಿಡಬೇಕಾಗಿಬಂದಿದೆ. **'ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ'** ಸ್ವಭಾವವು ನಿನ್ನನ್ನು ತೊಡಗಿಸುವದು – ಎಂಬ ಭಗವಂತನ ನುಡಿಯು ಎಷ್ಟು ಅರ್ಥವತ್ತಾಗಿದೆ! .... ಎಂಬುದು ಮನನೀಯ.

5. **ಶಂಕರಸಪ್ತಾಹ** :– ಈ ಅನುಷ್ಠಾನವು ನನ್ನ ಪರಿಚಿತರಿಬ್ಬರ ಪ್ರೋತ್ಸಾಹದಿಂದ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಕಾರ್ಯಾಲಯದಲ್ಲಿ ಅದು ಬೆಳೆದು ಹೆಮ್ಮರವಾಗಿ ನಲವತ್ತುಮೂರನೆಯ ಅನುಷ್ಠಾನವು ಬೆಂಗಳೂರಿನಲ್ಲಿಯೇ ಸಮಾಪ್ತಿಯಾಯಿತು. ಬೇರೆಬೇರೆಯ ಸ್ಥಲಗಳಲ್ಲಿ ಇದಕ್ಕೆ ಜನರು ಪ್ರೋತ್ಸಾಹವನ್ನು ಕೊಟ್ಟಿರುತ್ತಾರೆ. ಈಗಿನ ದುಷ್ಕಾಲದಲ್ಲಿ ಹಿಂಡುಹಿಂಡಾಗಿ ಬರುವ ಪರಸ್ಥಲದ ಶ್ರೋತೃಗಳಿಗೂ ಸ್ಥಲದವರಿಗೂ ಭೋಜನಾದಿಗಳಿಗೆ ಸೌಕರ್ಯವನ್ನು ಏರ್ಪಡಿಸುವ ಹೊರೆಯನ್ನು ಮಹಾಜನರಮೇಲೆ ಹೇರುವುದು ಉಚಿತವಲ್ಲವೆಂದು ಈಗ ತೋರುತ್ತದೆ. 'ಸ್ಪಷ್ಟಮಗ್ರೇ ಭವಿಷ್ಯತಿ!'

6. **ಅನಷ್ಠಾನಗಳು, ದೇವಾಲಯ** :– ಶಂಕರಸಪ್ತಾಹದಂತೆಯೇ ಗೀತಾ ಜಯಂತಿ, ರಾಮನವರಾತ್ರೆ, ಬ್ರಹ್ಮಚೈತನ್ಯರ ಆರಾಧನೆ, ಶರನ್ನವರಾತ್ರಿ– ಇಂಥ ಅನುಷ್ಠಾನಗಳು ಮಹಾಜನರ ಪ್ರೋತ್ಸಾಹದಿಂದ ನಡೆದಿವೆ. ಶ್ರೀ ದಿಗ್ವಿಜಯರಾಮರ ದೇವಸ್ಥಾನವೂ ಏರ್ಪಾಡಾಗಿ ಮಹಾಜನರಿಂದ ದಿನದಿನದ ಪೂಜೆಗೂ ಸಹಾಯವು ದೊರಕಿದೆ. ಕಾರ್ಯಾಲಯದವರು ಮುಂದೆ ಇವುಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

7. **ವೇದಾಂತಪ್ರಚಾರ** :– ಕಾರ್ಯಾಲಯದ ಹೆಸರಿನಲ್ಲಿ ವೇದಾಂತದ ಪರಮಸಿದ್ಧಾಂತಗಳನ್ನು ಪ್ರಚಾರಮಾಡುವ ಉತ್ಸಾಹವು ಮೈಗೂಡಿದಮೇಲೆ ಮುಖ್ಯವಾಗಿ ಕನ್ನಡನಾಡಿನ ಬೇರೆಬೇರೆಯ ಭಾಗಗಳಲ್ಲಿಯೂ ಭರತ ಖಂಡದಲ್ಲಿ ಹಲವು ಮುಖ್ಯಪ್ರಾಂತಗಳಲ್ಲಿಯೂ ಸಂಚರಿಸಿ ವೇದಾಂತವಿಷಯದ ಭಿನ್ನಾಭಿಪ್ರಾಯಗಳನ್ನು ಕುರಿತು ಬಲ್ಲವರೊಡನೆ ಚರ್ಚೆಸಿದ್ದಾಯಿತು. ಶರೀರದಲ್ಲಿ ಸ್ವಾಸ್ಥ್ಯವು ಕಡಿಮೆಯಾದ ಮೇಲೂ ಪ್ರಚಾರಕರನ್ನು ಸಜ್ಜುಗೊಳೀಸಬೇಕೆಂಬ ಪ್ರಯತ್ನವನ್ನು ನಡೆಯಿಸಿದೆನು. ಆದರೆ ವೇದಾಂತಕ್ಕೇ ಜೀವನವನ್ನು ಮೀಸಲಾಗಿಡುವ ಪ್ರಚಾರಕರು ಈವರೆಗೆ ದೊರೆತಿಲ್ಲದ್ದರಿಂದ ಅದು ಮನಸ್ಸಿನ ಮಂಡಿಗೆಯಾಗಿ ಉಳಿದುಕೊಂಡಿದೆ.

ಹೀಗಿದ್ದರೂ ಕಾರ್ಯಾಲಯವು ಮಾಡುತ್ತಿರುವ ಸತ್ಕಾರ್ಯವು ಹೇಗೋ ನಮ್ಮ ದೇಶದಲ್ಲಿಯೇ ಅಲ್ಲದೆ, ಯೂರೋಪ್, ಅಮೆರಿಕ, – ಮುಂತಾದ ಪರದೇಶಗಳಿಗೂ ಗೊತ್ತಾಗಿ ಅಲ್ಲಿಂದಲೂ ಕೆಲವರು ಈ ಕಾರ್ಯದ ಮಹತ್ತ್ವವನ್ನು ಅರಿತುಕೊಂಡು ಪತ್ರವ್ಯವಹಾರದಿಂದಲೇ ಅಲ್ಲದೆ ಕೆಲವರು ಸಾಕ್ಷಾತ್ಸಂಭಾಷಣೆ ಯಿಂದಲೂ ಇದರ ಲಾಭವನ್ನು ಪಡೆಯುವ ಹಂಬಲಿಕೆಯನ್ನು ತೋರಿಸಿರುತ್ತಾರೆ.

ಭಗವಂತನು ಭಕ್ತಿಜ್ಞಾನವೈರಾಗ್ಯಗಳಿಂದ ಪ್ರಸನ್ನನಾಗಿ ಈ ಜನ್ಮದಲ್ಲಿಯೇ ನಮ್ಮಂಥ ಅಲ್ಪಪ್ರಾಣಿಗಳಿಗೂ ಮನಃಸ್ಫೂರ್ತಿಯನ್ನೂ ತೃಪ್ತಿಯನ್ನೂ ಶಾಂತಿಯನ್ನೂ ಅನುಗ್ರಹಿಸುವನೆಂಬ ನಂಬಿಕೆಯು ನನ್ನನಲ್ಲಿ ದೃಢವಾಗಿ ನಿಂತಿರುತ್ತದೆ. ನನ್ನ ಪ್ರಯತ್ನಗಳು ಅಲ್ಲಲ್ಲಿಯೇ ವಿಫಲವಾಗಿದ್ದರೆ, ಮಾನುಷಪ್ರಕೃತಿಯಿಂದಾದ ನನ್ನ ಲೋಪಗಳೇ ಕಾರಣವೆಂದು ನನಗೆ ನಿಶ್ಚಯವಾಗಿಬಿಟ್ಟಿದೆ. ನಮ್ಮ ನಮ್ಮ ಕರ್ಮಗಳಿಗೆ – ಶುಭಕರ್ಮಗಳಿಗೂ ಅಶುಭ ಕರ್ಮಗಳಿಗೂ – ಅನುಗುಣವಾಗಿ ಈಶ್ವರಸೃಷ್ಟಿಯಲ್ಲಿ ಫಲವು ಬಂದೊದಗುವುದು ಖಂಡಿತವಾಗಿಯೂ ಸತ್ಯ.

ಇವೆಲ್ಲಾ ಕಾರ್ಯಗಳೂ ಪುರುಷಪ್ರಯತ್ನ ಮತ್ತು ಭಗವಂತನ ಅಪಾರಕರುಣೆಯಿಂದಲೇ ನೆರೆವೇರಿರುವದೆಂದು ಪ್ರಕಟಪಡಿಸುತ್ತಾ ಅಧ್ಯಾತ್ಮಪ್ರಕಾಶಕಾರ್ಯಾಲಯವು ಸ್ಥಾಪನೆಯಾಗಿ ಸುವರ್ಣಮಹೋತ್ಸವದ (1973) ಸಂದರ್ಭದಲ್ಲಿ ಮತ್ತೆ ಈ ಎಲ್ಲ ಕಾರ್ಯಗಳೂ ನಡೆದ ಬಗೆಯನ್ನು ಕುರಿತು ಹೀಗೆ ಹೇಳುತ್ತಾರೆ –

ಸಿಂಹಾವಲೋಕನ –

ಅಧ್ಯಾತ್ಮಪ್ರಕಾಶಕಾರ್ಯಾಲಯವು ಯಥಾಶಕ್ತಿಯಾಗಿ ತನ್ನ ಹೆಗ್ಗುರಿಯನ್ನು ಮುಟ್ಟುವ ಪ್ರಯತ್ನವನ್ನು ಮಾಡುತ್ತಿದ್ದು ಅರ್ಧಶತಮಾನದ ಮೇಲಾಯಿತು. ಕಾರ್ಯಾಲಯದ ಸ್ಥಾಪನೆಗೂ ಉದ್ದೇಶಸಾಧನೆಗೆ ಮಾಡಬೇಕಾದ ಪ್ರಯತ್ನಕ್ಕೂ ನಿಮಿತ್ತಮಾತ್ರನಾದ ನನಗೆ ವಾರ್ಧಕದ ನಿಮಿತ್ತದಿಂದ ಶಕ್ತಿಯೂ ನೇತ್ರಪಾಟವವೂ ಬಹಳ ಕಡಿಮೆಯಾಗಿದ್ದರೂ ಕಾರ್ಯಾಲಯದ ಅಭಿಮಾನವೇನೂ ಕಡಿಮೆಯಾಗಲಿಲ್ಲ. ಇನ್ನುಮುಂದೆಯೂ ಇಲ್ಲಿಯ ಕಾರ್ಯದಲ್ಲಿ ಭಾಗಿಯಾಗುವ ಲಾಭವು ಶ್ರೀಮನ್ನಾರಾಯಣನ ಅನುಗ್ರಹದಿಂದ ದೊರಕಬೇಕಾಗಿದೆ.

ನನಗೆ ಲಭಿಸಿರುವ (ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷು) ಭಾಷೆಗಳ ಅಲ್ಪಸ್ವಲ್ಪ ಪರಿಚಯವನ್ನು ಮುಖ್ಯವಾಗಿ ನಾನು ಶ್ರೀ ಶಂಕರಭಗವತ್ಪಾದರವರು ಅನುಗ್ರಹಿಸಿರುವ ಪರಿಶುದ್ಧ ಸಾಂಪ್ರದಾಯಿಕ ವೇದಾಂತಪ್ರಸ್ಥಾನವನ್ನು ಸ್ವಾರ್ಥಕ್ಕಾಗಿ ಅಭ್ಯಾಸಮಾಡುವದಕ್ಕೂ ತತ್ತ್ವಜಿಜ್ಞಾಸುಗಳಾದವರಲ್ಲಿ ಪ್ರಚಾರಮಾಡುವದಕ್ಕೂ ಈವರೆಗೆ ಉಪಯೋಗಿಸುತ್ತಾ ಬಂದಿರುತ್ತೇನೆ. ಆ ಅದ್ವೈತಾಚಾರ್ಯರ ಪರಮಸಂದೇಶವನ್ನು ಕನ್ನಡಿಗರಿಗೂ ಭಾರತದೇಶದಲ್ಲಿಯೂ ದೇಶಾಂತರದಲ್ಲಿಯೂ ಇರುವ ಉತ್ಸಾಹಶೀಲರಾದ ವೇದಾಂತಜಿಜ್ಞಾಸುಗಳಿಗೂ ಪರಿಚಯಮಾಡಿಸಿಕೊಡಬೇಕೆಂದೇ ಈ ಮೂರು ಭಾಷೆಗಳಲ್ಲಿಯೂ ಕೆಲವು ಗ್ರಂಥಗಳನ್ನು ಬರೆದಿರುತ್ತೇನೆ. ಶಾಂಕರಾದ್ವೈತದ ಕೆಚ್ಚನ್ನು ತಿಳಿಯುವದಕ್ಕೆಂದೇ ಅವರ ಪ್ರಕ್ರಿಯೆಯನ್ನು ವಿಮರ್ಶಿಸಿರುವ ಬೇರೆಯ ಭಾಷ್ಯಕಾರರುಗಳ, ವಿದ್ವಾಂಸರುಗಳ ಮತ್ತು ತತ್ತ್ವಪರಿಶೋಧಕರ ಕೆಲವು ಗ್ರಂಥಗಳನ್ನು ಅಭ್ಯಾಸಮಾಡಿ ಈ ಕಾರ್ಯವನ್ನು ಮುಂದುವರಿಸಬೇಕೆಂದೇ ಅಧ್ಯಾತ್ಮಪ್ರಕಾಶಕಾರ್ಯಾಲಯವನ್ನು ಸ್ಥಾಪಿಸುವ ಮಹಾಕಾರ್ಯದಲ್ಲಿ ತೊಡಗುವ ಸಾಹಸವನ್ನು ಮಾಡಿದೆನು.

ಶ್ರೀಶ್ರೀಗಳವರ ಸತ್ಸಂಕಲ್ಪದಿಂದ ಆರಂಭವಾದ ಈ ಸಂಸ್ಥೆಯು ಅವರು ಹಾಕಿಕೊಟ್ಟ ಮಾರ್ಗದಂತೆ ನಡೆದು ನೂರುವರ್ಷಗಳನ್ನು ಕಳೆದಿದೆ. ವೇದಾಂತದ ಕಂಪನ್ನು ಮೆಲ್ಲಮೆಲ್ಲನೆ ಹರಡುತ್ತಾ ಆಚಂದ್ರಾರ್ಕವಾಗಿ ಮುನ್ನಡೆಯುವಂತೆ ಸರ್ವನಿಯಾಮಕನಾದ ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸೋಣ.

*****

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ

ಶತಮಾನದ ಹೆಜ್ಜೆಗಳು – 1920–2020

ವೇದಾಂತವಿಜ್ಞಾನದ ಸುನಿಶ್ಚಿತವಾದ ತತ್ತ್ವವನ್ನು ತಮ್ಮ ಜೀವನದಲ್ಲಿ ಕಂಡುಕೊಂಡ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ತಮ್ಮ ಸಾರ್ಥಕ ಜೀವನವನದ ಕ್ಷಣಕ್ಷಣವನ್ನೂ ವೇದಾಂತಚಿಂತನೆಯಲ್ಲೇ ಕಳೆದವರು. ಅದಕ್ಕಾಗಿಯೇ ಅವರು (ಪೂರ್ವಾಶ್ರಮ: ವೈ. ಸುಬ್ಬರಾಯರು) **ಅಧ್ಯಾತ್ಮಪ್ರಕಾಶ** ಎಂಬ ಹೆಸರಿನಿಂದ ಶಂಕರಾಚಾರ್ಯರ ಪ್ರಸಿದ್ಧಗ್ರಂಥಗಳನ್ನಾದರೂ ಪ್ರಕಟಿಸಬೇಕೆಂದು ಸಂಕಲ್ಪಿಸಿ ಯಾವ ಗದ್ದಲವೂ ಸಮಾರಂಭ ಮಹೋತ್ಸವವಿಲ್ಲದೆ **1920ರಲ್ಲಿ (ಬೆಂಗಳೂರಿನ ಚಾಮರಾಜಪೇಟೆಲ್ಲಿ) ಅಧ್ಯಾತ್ಮಪ್ರಕಾಶಕಾರ್ಯಾಲಯವನ್ನು ಸ್ಥಾಪಿಸಿದರು.**

ಕಾರ್ಯಾಲಯದ ಪ್ರಾರಂಭವು 1920ರಲ್ಲಿ ಆದರೂ ಇದರ ಇತಿಹಾಸವನ್ನು ನಾವು ಶ್ರೀಶ್ರೀಗಳವರ ಜನನದಿಂದಲೇ ನೋಡಬೇಕು. ಏಕೆಂದರೆ **ಶ್ರೀಶ್ರೀಗಳವರು –ಅಧ್ಯಾತ್ಮಪ್ರಕಾಶಕಾರ್ಯಾಲಯ** ಇವು ಒಂದು ನಾಣ್ಯದ ಎರಡು ಮುಖಗಳು. ಜೀವಪರಮಾತ್ಮನಂತೆ, ರೂಪವೆರಡು ಸ್ವರೂಪವೊಂದು. ಆದ್ದರಿಂದ 5–1–1880ರಿಂದ (ಶ್ರೀಶ್ರೀಗಳವರ ಜನನದಿಂದ) 2020ರವರೆಗೆ ನಡೆದ ಪ್ರಮುಖ ಘಟನೆಗಳನ್ನು ಇಲ್ಲಿ ಉಲ್ಲೇಖಿಸುತ್ತೇವೆ:

1. ಶ್ರೀಮತಿ ಲಕ್ಷ್ಮೀದೇವಮ್ಮ ಮತ್ತು ಶ್ರೀ ನಂಜುಂಡಯ್ಯನವರ ಮಕ್ಕಳಲ್ಲಿ ಆರನೆಯವರಾಗಿ ಶ್ರೀ ವೈ. ಸುಬ್ಬರಾಯರು ಮಾರ್ಗಶೀರ್ಷ ಬಹುಳ ಅಷ್ಟಮಿ ಹಸ್ತಾನಕ್ಷತ್ರ ಸೋಮವಾರ 5–1–1880 ರಂದು ಜನಿಸಿದರು.
2. ಸುಮಾರು 1885 ರಿಂದ 1901 ರವರೆಗೆ ಮೂಡಿಗೆರೆ, ಚಿಕ್ಕಮಗಳೂರು, ತರೀಕೆರೆ, ಹಾಸನ, ಬೆಂಗಳೂರು – ಈ ಸ್ಥಳಗಳಲ್ಲಿ ಸೀನಿಯರ್ ಎಫ್.ಎ. ವರೆಗೆ ಲೌಕಿಕ ವಿದ್ಯಾಭ್ಯಾಸ.
3. 1904 ರಿಂದ ವಿದ್ಯಾಭ್ಯಾಸ ಇಲಾಖೆಯಲ್ಲಿ ನೌಕರಿ ಪ್ರಾರಂಭ. 1935ರಲ್ಲಿ ಸರಕಾರಿ ನೌಕರಿಯಿಂದ ನಿವೃತ್ತಿ.
4. ವಿದ್ಯಾಭ್ಯಾಸದ ಸಮಯದಲ್ಲಿಯೇ ವೇದಾಂತಪ್ರವೇಶ. ಶ್ರೀ ಕೆ. ಎ. ಕೃಷ್ಣಸ್ವಾಮಿ ಐಯ್ಯರ್ ಮಾರ್ಗದರ್ಶನ. ನೌಕರಿಯಲ್ಲಿರುವಾಗ ಹೊಸಕೆರೆಚಿದಂಬರಯ್ಯನರ ಒಡನಾಟ, ವೇದಾಂತಚಿಂತನೆ.
5. 1909 ರಲ್ಲಿ ಕಾಲಟಿಯಲ್ಲಿ ಕುಂಬಾಭಿಷೇಕದ ಸಮಯದಲ್ಲಿ ಶ್ರೀ ಶೃಂಗೇರಿ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರಿಂದ ಭಾಷ್ಯಶಾಂತಿ ಮತ್ತು ಶಿವಪಂಚಾಕ್ಷರೀ ಉಪದೇಶ.
6. 1909 ದಾರವಾಡದಲ್ಲಿ ವೇ. ಬ್ರ. ಶ್ರೀ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳಲ್ಲಿ ಸೂತ್ರಭಾಷ್ಯ ಅಭ್ಯಾಸ.
7. 1910ರಲ್ಲಿ ಡಾ॥ ಕುರ್ತಕೋಟೀ ಮಹಾಭಾಗವತರ ಪರಿಚಯ ವಿಚಾರವಿನಿಮಯ.
8. ಸುಮಾರು 1911 ರಲ್ಲಿ ಗೋಂದಾವಲೆ ಬ್ರಹ್ಮಚೈತನ್ಯಮಹಾರಾಜರ ದರ್ಶನ. ರಾಮಮಂತ್ರ ಉಪದೇಶಪಡೆದದ್ದು.

9. 1916ರಲ್ಲಿ ರಾಜಯೋಗ, ನಾರದಭಕ್ತಿಸೂತ್ರ ವಿವರಣೆ ಗ್ರಂಥರಚನೆ. ಕರ್ನಾಟಕ ವಾಕ್ಯರಚನೆ, ಪದತ್ರಯ ಗ್ರಂಥಗಳು ಶಾಲಾಪಠ್ಯಪುಸ್ತಕವಾಗಿದ್ದವು.

10. 1920ರವರೆಗೆ ಮಾಂಡೂಕ್ಯೋಪನಿಷತ್ತು, ಸಂಹಿತೋಪನಿಷತ್ತನ್ನು ಪ್ರಕಟಿಸಿದರು.

11. **ಯಾವ ಗದ್ದಲವೂ ಇಲ್ಲದೆ ಸಮಾರಂಭಮಹೋತ್ಸವವಿಲ್ಲದೆ ರಾಯರಿಗೂ ಅರಿವಿಲ್ಲದ ರೀತಿಯಲ್ಲಿ 1920ರಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದ ಅವರ ಮನೆಯಲ್ಲಿಯೇ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಜನಿಸಿತು.**

12. ಅನಂತರ ಉದ್ಯೋಗದ ವಿರಾಮಕಾಲದಲ್ಲಿ ವೇದಾಂತಗ್ರಂಥಗಳಿಗೆ ಅನುವಾದ, ಟಿಪ್ಪಣಿ, ಪ್ರಮಾಣಸ್ಥಾನಸೂಚಿ, ಗ್ರಂಥದ ಸಾರ ಮುಂತದ ಸೌಕರ್ಯಗಳೊಡನೆಬರೆದು ಸಿದ್ಧಪಡಿಸಿದರು. ಅಧ್ಯಾತ್ಮಗ್ರಂಥಾವಳಿಯು ಬೆಳೆಯಲಾರಂಭಿಸಿತು.

13. 1923ರಲ್ಲಿ **ಅಧ್ಯಾತ್ಮಪ್ರಕಾಶ** ಪತ್ರಿಕೆಯ ಪ್ರಕಟಣೆಯ ಸಂಕಲ್ಪ ಕೈಗೊಂಡರು. ಅದು ರುಧಿರೋದ್ಗಾರಿ ಸಂವತ್ಸರದ ಚೈತ್ರ ಶುದ್ಧ ನವಮಿ – **ರಾಮನವಮಿ**ಯಂದು ಜನ್ಮವನ್ನು ತಾಳಿತು. **ಅನಂತರ ರಿಜಿಸ್ಟರ್ ದೊರೆತ ತಿಂಗಳಿನಿಂದ ಅಂದರೆ ಸೆಪ್ಟೆಂಬರ್‌ನಿಂದ ಮೊದಲ ಸಂಚಿಕೆ ಆರಂಭವಾಯಿತು. ಅದೇ ಈಗಲೂ ಮುಂದುವರೆದಿದೆ.**

14. 1928ರಲ್ಲಿ **ಮೂಲಾವಿದ್ಯಾನಿರಾಸ** ಗ್ರಂಥಪ್ರಕಟಣೆಯ ಸಂದರ್ಭದಲ್ಲಿ **ಅಧ್ಯಾತ್ಮಪ್ರಕಾಶ ಮುದ್ರಣಾಲಯ ಸ್ಥಾಪನೆಯಾಯಿತು.**

15. **1931**ರಲ್ಲಿ **ಅಧ್ಯಾತ್ಮಪ್ರಕಾಶ** ಪತ್ರಿಕೆಯಲ್ಲಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಉದ್ದೇಶವನ್ನು **"ಅಧ್ಯಾತ್ಮ ವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನುಂಟುಮಾಡುವದೇ ಮುಖ್ಯೋದ್ದೇಶ"**ವೆಂದು ಉಲ್ಲೇಖಿಸಿದರು.

16. 1932ರಲ್ಲಿ **ಶಂಕರಸಪ್ತಾಹ**ವೆಂಬ ಹೆಸರಿನಿಂದ ವೈಶಾಖಶುದ್ಧ ಪಂಚಮಿಯಿಂದ ವೈಶಾಖಶುದ್ಧ ದ್ವಾದಶಿಯವರೆಗೆ **ಶಂಕರಜಯಂತಿ ಉತ್ಸವ**ವನ್ನು ಆರಂಭಿಸಿದರು. ಅನಂತರ 1975ರ ವರೆಗೆ ರಾಜ್ಯದ ಬೇರೆಬೇರೆ ಪ್ರದೇಶಗಳಲ್ಲಿ ಉತ್ಸವವನ್ನು ಏರ್ಪಡಿಸಿ ಶಂಕರವಿಚಾರಧಾರೆಯನ್ನು ಸಾಮಾನ್ಯರಿಗೂ ತಿಳಿಯುವಂತೆ ಉಪನ್ಯಾಸಗಳನ್ನು ನಡೆಸಲಾಯಿತು. ಅನಂತರವೂ ಇಂದಿನವರೆಗೂ ಶಂಕರ ಸಪ್ತಾಹವು ಕಾರ್ಯಾಲಯದಲ್ಲಿ ಮುಂದುವರಿದಿದೆ.

17. 1935ರಲ್ಲಿ ಉದ್ಯೋಗದಿಂದ ನಿವೃತ್ತರಾದಮೇಲೆ ಯಾವುದಾದರೂ ಶಾಂತವಾದ ಸ್ಥಳದಲ್ಲಿ ಇರಬೇಕೆಂದು ಇಚ್ಛೆಪಟ್ಟು ಹೊಳೆನರಸೀಪುರದ ಪಿ. ಎನ್. ನರಸಿಂಹಯ್ಯನವರ ಸಹಾಯದಿಂದ ಅಲ್ಲಿ ಗದ್ದೆ, ಮನೆಯನ್ನು ಕೊಂಡರು. 1938ನೆಯ ಏಪ್ರಿಲ್‌ನಲ್ಲಿ ಕಾರ್ಯಾಲಯವು ಸಂಪೂರ್ಣವಾಗಿ ಹೊಳೆನರಸೀಪುರಕ್ಕೆ ಬಂದಿತು. ಸ್ವತಂತ್ರ ಕಾರ್ಯಾಲಯವು ಅಂದಿನಿಂದ ಆರಂಭವಾಯಿತು.

18. 1937 ನವೆಂಬರಿನಲ್ಲಿ ಪುಸ್ತಕಭಂಡರವು ಆರಂಭವಾಯಿತು.

19. ಪತ್ರಿಕೆ, ಗ್ರಂಥಕಾಲಕ್ಷೇಪ, ಉತ್ಸವ, ಉಪನ್ಯಾಸ ಇವುಗಳ ಜೊತೆ 1938ನೆಯ ಫೆಬ್ರವರಿಯಲ್ಲಿ **ಅಧ್ಯಾತ್ಮವಿದ್ಯಾನಿಲಯ**ವು ಆರಂಭವಾಯಿತು.

20. **ಬ್ರಹ್ಮಚೈತನ್ಯರ ಆರಾಧನೆ, ಗೀತಾಜಯಂತಿ, ಮಾಹಾತ್ಮರುಗಳ ಜಯಂತಿ** ಮುಂತಾದವುಗಳ ಜೊತೆಗೆ 18–09–1944ರಲ್ಲಿ ಮೊದಲನೆಯ **ಶರನ್ನವರಾತ್ರಿಯ ಅನುಷ್ಠಾನವು** ಪ್ರಾರಂಭವಾಯಿತು.

21. **1945 ರಲ್ಲಿ** ಅನೇಕರ ಸಹಾಯದಿಂದ ಕಾರ್ಯಾಲಯದ ಸ್ವತಂತ್ರ ಕುಟೀರವು ನಿರ್ಮಾಣವಾಯಿತು.

22. **1945**ರಲ್ಲಿ ಮೈಸೂರುಮಹಾರಾಜರ ಆಶ್ರಯದಿಂದ **"ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ"** ಮೂಲಕ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗ್ರಂಥಗಳು, ಪ್ರಕರಣಗ್ರಂಥಗಳು ಪ್ರಕಟವಾದವು. ಶ್ರೀ ವೈ. ಸುಬ್ಬರಾಯರಿಗೆ **ಆಸ್ಥಾನವಿದ್ವಾನ್** ಎಂಬ ಬಿರುದನ್ನೂ ದಯಪಾಲಿಸಿದರು.

23. 1947 ರಲ್ಲಿ ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್‌ರವರು ಅಧ್ಯಾತ್ಮಪ್ರಕಾಶಕಾರ್ಯಾಲಯದ ಪರಿಪಾಲಕರೆಂದು ಸಂಬೋಧಿಸಲು ಒಪ್ಪಿಗೆ ದೊರೆಯಿತು.

24. **ಶ್ರೀ ಸರ್ವಧಾರಿ ಸಂವತ್ಸರದ ಜ್ಯೇಷ್ಠ ಶುಕ್ಲ ತೃತೀಯಾ ಸೋಮವಾರ 10–06–1948ರಂದು ತುರೀಯಾಶ್ರಮವನ್ನು ಶ್ರೀ ಬೋಧಾನಂದೇಂದ್ರಸರಸ್ವತೀ ಯತಿವರ್ಯರಿಂದ ಸ್ವೀಕರಿಸಿ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಎಂಬ ಅಭಿಧಾನವನ್ನು ಹೊಂದಿದರು.**

25. ವಿಕೃತಿನಾಮ ಸಂವತ್ಸರದ ಚೈತ್ರಶುದ್ಧ ದಶಮಿ ಬುಧವಾರ 29–3–1950 ಸಪರಿವಾರ ಶ್ರೀ ದಿಗ್ವಿಜಯರಾಮಚಂದ್ರನ ಪ್ರತಿಷ್ಠೆಯಾಯಿತು. ಅಂದಿನಿಂದ ರಾಮೋತ್ಸವು ನಡೆಯುತ್ತ ಬಂದಿದೆ.

26. ಸಂನ್ಯಾಸದನಂತರ ಶ್ರೀಶ್ರೀಗಳವರು ರಾಜ್ಯದ ಅನೇಕಕಡೆ ಚಾತುರ್ಮಾಸ್ಯವ್ರತ, ವಿಚಾರಗೋಷ್ಠಿಗಳನ್ನು ನಡೆಸಿರುತ್ತಾರೆ.

27. 1956, 1966ರಲ್ಲಿ ಉತ್ತರದೇಶದ ಯಾತ್ರೆಯನ್ನು ಮಾಡಿ ತಾವು ಬರೆದ ಮಾಂಡೂಕ್ಯರಹಸ್ಯವಿವೃತಿ ಮತ್ತು ಪ್ರಕ್ರಿಯಾಪ್ರತ್ಯಭಿಜ್ಞಾ ಸಂಸ್ಕೃತ ಮೇರುಗ್ರಂಥಗಳ ಬಗ್ಗೆ ಅಲ್ಲಿಯ ವಿದ್ವಾಂಸರೊಂದಿಗೆ ಚರ್ಚಿಸಿದರು. ಪ್ರಸಿದ್ಧವಿದ್ವಾಂಸ ಟಿ.ಆರ್.ವಿ. ಮೂರ್ತಿ ಮೊದಲಾದವರನ್ನು ಭೇಟಿಮಾಡಿದರು.

28. ಶ್ರೀಶ್ರೀಗಳವರ 80ನೇವರ್ಷವರ್ಧಂತಿಯು 1959ನೇ ಡಿಸೆಂಬರ್‌ನಲ್ಲಿ ವಿಶೇಷವಾಗಿ ನಡೆಯಿತು.

29. 1960ನೆಯ ವರ್ಷದ ಹೊತ್ತಿಗೆ ಶ್ರೀಶ್ರೀಗಳವರ ಅಮೋಘವಾದ ಸೂಚನೆ, ಶ್ರಮದಾನ, ತ್ಯಾಗದ ಫಲವಾಗಿ ಸಂಸ್ಥೆಯು ತನ್ನ ಕಾಲಮೇಲೆ ತಾನು ನಿಲ್ಲುವಂತಾಯಿತು.

30. 1960ನೇ ನವೆಂಬರ್ ನಲ್ಲಿ ಹರೇರಾಮಮಂತ್ರಜಪಾನುಷ್ಠಾನ ಹಾಗೂ 1962ರಲ್ಲಿ ಶ್ರೀರಾಮಮಂತ್ರ ಜಪಯಜ್ಞವನ್ನು ವಿಶೇಷವಾಗಿ ನಡೆಸಲಾಯಿತು.

31. 1961ರಲ್ಲಿ ಕಾರೈಕುಡಿಯಲ್ಲಿ ಶ್ರೀ ಕಾಂಚೀಕಾಮಕೋಟಿಪೀಠದ ಶ್ರೀಜಗದ್ಗುರು ಚಂದ್ರಶೇಖರೇಂದ್ರಸರಸ್ವತೀ ಮಹಾಸ್ವಾಮಿಗಳ ದರ್ಶನವನ್ನು ಶ್ರೀಶ್ರೀಗಳವರು ಪಡೆದರು. ಆಸಂದರ್ಭದಲ್ಲಿ ವಿಠ್ಠಲಶಾಸ್ತ್ರಿಗಳಲ್ಲಿ **"ಆಸುಪ್ತೇರಾಮೃತೇಃ ಕಾಲಂ ನಯೇದ್ವೇದಾವ್ಂತಚಿಂತಯಾ"** ಎಂಬವಾಕ್ಯಕ್ಕೆ ಜೀವಂತ ಉದಾಹರಣೆ ನಿಮ್ಮ ಸ್ವಾಮಿಗಳು – ಎಂದು ಉದ್ಗರಿಸಿದರು.

31. 3–5–62 ರಲ್ಲಿ ಶೃಂಗೇರಿಜಗದ್ಗುರು ಅಭಿನವವಿದ್ಯಾತೀರ್ಥರು ಭೇಟಿನೀಡಿ **ಶಂಕರಸಿದ್ಧಾಂತ ಪ್ರಚಾರಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟು ಈ ವಾರ್ಧಕ್ಯದಲ್ಲಿಯೂ ಉತ್ಸಾಹದಿಂದ ಕೆಲಸಮಾಡುತ್ತಿರುವ ನಿಜವಾದ ಶಂಕರಭಕ್ತರು** – ಎಂದು ಶ್ರೀಶ್ರೀಗಳವರನ್ನು ಹೊಗಳಿ; ಪ್ರತ್ಯಕ್ಷಸಮಾಗಮದಿಂದ ನಮ್ಮ ಅನೇಕ ಸಂಶಯಗಳು ಪರಿಹಾರವಾದವು ಎಂದು ಉದ್ಗರಿಸಿ, ಪ್ರಕ್ರಿಯಪ್ರತ್ಯಭಿಜ್ಞಾ ಗ್ರಂಥಪ್ರಕಟಣೆಗೆ 250ರೂ ಸಹಾಯಧನವನ್ನು ಅನುಗ್ರಹಿಸಿದರು.

32. ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು. 1948ರಲ್ಲಿ ಸಂನ್ಯಾಸಸ್ವೀಕರಿಸಿದನಂತರ ಕಾರ್ಯಕಾರಿಸಮಿತಿಯನ್ನು ರಚಿಸಿದರು. ಆದರೂ ಒಂದು ಟ್ರಸ್ಟ್ ಇರಬೇಕೆಂದು ತೀರ್ಮಾನಿಸಿ ಏಳುಜನ ಟ್ರಸ್ಟಿಗಳುಳ್ಳ ಒಂದು ಪ್ರೈವೆಟ್ ಟ್ರಸ್ಟ್‌ನ್ನು ಟ್ರಸ್ಟ್ ಡೀಡನ್ನು ಬರೆದು 17–2–65ರಲ್ಲಿ ರಿಜಿಸ್ಟರ್ ಮಾಡಲಾಯಿತು. ವೇ॥ ಎಸ್. ವಿಠಲಶಾಸ್ತ್ರಿಗಳು ಪ್ರಥಮ ಅಧ್ಯಕ್ಷರಾದರು. **1992ರಿಂದ ಸಾರ್ವಜನಿಕ ಧರ್ಮಾರ್ಥ ಸಂಸ್ಥೆ** ಎಂದು ನೋಂದಣಿಯಾಗಿ ಆಡಳಿತವನ್ನು ನಿರ್ವಹಿಸುತ್ತಿದೆ.

33. 23–10–1969 ರಂದು ಬೆಂಗಳೂರಿನಲ್ಲಿ ಶಾಖಾ ಕಾರ್ಯಾಲಯದ ಪ್ರಾರಂಭೋತ್ಸವವು ಶ್ರೀಶ್ರೀಗಳವರ ಅಮೃತಹಸ್ತದಿಂದ ನೆರವೇರಿತು.

34. ಬೆಂಗಳೂರಿನ ಶಾಖಾ ಕಾರ್ಯಾಲಯದ ಕಟ್ಟಡ ನಿರ್ಮಾಣವು 1971ರಲ್ಲಿ ಪೂರ್ಣಗೊಂಡಿತು. 5–2–71ರಂದು ಪ್ರವೇಶೋತ್ಸವವಾಯಿತು.

35. 18–12–1974ರಂದು ಬೆಂಗಳೂರುಶಾಖಾ ಕಾರ್ಯಾಲಯದ ಉಪನ್ಯಾಸಮಂದಿರವನ್ನು ಶ್ರೀಶ್ರೀಗಳವರು ಉದ್ಘಾಟಿಸಿ – **"ಈ ಭವ್ಯಭವನವು ನನ್ನ ನಿಮಿತ್ತ ನಿರ್ಮಾಣಮಾಡಲ್ಪಟ್ಟಿದೆಯಾದರೂ ಇದು ನನಗೊಬ್ಬನಿಗೇ ಮೀಸಲಿಲ್ಲ. ಇದು ಮಾನವಜನಾಂಗದ ಸರ್ವಸಮ್ಮತವಾದ ತತ್ತ್ವಗಳ ಸಮನ್ವಯದ ದೇವಾಲಯವಾಗಿದೆ. ಇಲ್ಲಿ ಸದಾಕಾಲವೂ ಅಧ್ಯಾತ್ಮವಿಚಾರ, ಚಿಂತನೆ, ಪ್ರವಚನಾದಿಗಳು ನಡೆಯುತ್ತಿರಬೇಕು. ಹೀಗೆ ಲೋಕಸೇವೆಯನ್ನು ಮಾಡುತ್ತಾ ಈ ಸಂಸ್ಥೆಯು ಚಿರಕಾಲ ಬಾಳಲಿ** – ಎಂದು ಹರಸಿದರು.

36. ಕಾರ್ಯಾಲಯದ ಅಭಿವೃದ್ಧಿಯಲ್ಲಿ ಶ್ರೀಶ್ರೀಗಳವರೊಂದಿಗೆ ಶ್ರಮಿಸಿದ ಪ್ರಮುಖ ವ್ಯಕ್ತಿಗಳು – ಶ್ರೀ ಪ್ಲೀಡರ್ ನರಸಿಂಹಯ್ಯ, ಶ್ರೀ ಅರಕಲಗೂಡು ಶ್ರೀಕಂಠಯ್ಯ, ಸಂತೆಬಾಚಳ್ಳಿ ಸುಬ್ರಾಯರು, ಶ್ರೀಮತಿ ಸಾಲಿಗ್ರಾಮದ ಕಾವೇರಮ್ಮ ಮುಂತಾದವರು. ಅಲ್ಲದೆ ಶ್ರೀಶ್ರೀಗಳವರ ಸುಪುತ್ರರಾದ ವೈ. ನರಸಪ್ಪನವರ ಪಾತ್ರವೂ ಹಾಸುಹೊಕ್ಕಾಗಿದೆ. ವಿಠಲಶಾಸ್ತ್ರಿಗಳು, ಪರಕ್ಕಜೆ ಸುಬ್ರಹ್ಮಣ್ಯಭಟ್ಟರು, ಬಾಣಾವರ ಶ್ರೀನಿವಾಸಭಟ್ಟರು, ಮತ್ತೂರು ಸುಬ್ರಾಯಾವಧಾನಿಗಳು, ದೇವರಾಯ ಕುಲಕರ್ಣಿ, ನುಲೆನೂರು ಶ್ರೀನಿವಾಸಮೂರ್ತಿಗಳು, ಶ್ರೀಮಾನ್ ಖೋಡೆ ಈಶ್ವರಸಾ ಅಂಡ್ ಸನ್ಸ್, ಇನ್ನೂ ಅನೇಕಮಹನೀಯರು.

37. ರಾಕ್ಷಸನಾಮ ಸಂವತ್ಸರದ ಆಷಾಢ ಬಹುಳ ತ್ರಯೋದಶಿ ಮಂಗಳವಾರ 5–8–1975ರಂದು ಬೆಂಗಳೂರು ಶಾಖಾಕಾರ್ಯಾಲಯದಲ್ಲಿ ಶ್ರೀಶ್ರೀಗಳವರು ಪಾರ್ಥಿವಶರೀರವನ್ನು ತ್ಯಜಿಸಿದರು. 6ನೇ ದಿನಾಂಕದಂದು ಹೊಳೆನರಸೀಪುರದಲ್ಲಿ ಮಹಾಸಮಾಧಿಯನ್ನು ಮಾಡಲಾಯಿತು. 1978ರಲ್ಲಿ

ಸಮಾಧಿಮಂದಿರನಿರ್ಮಾಣ, ರಜತಪಾದುಕಾಪ್ರತಿಷ್ಠಾಪನೆ ನಡೆಯಿತು. 1997ರಲ್ಲಿ ಶಿಲಾಪಾದುಕಾ ಪ್ರತಿಷ್ಠಾಪನೆ, 2008ರಲ್ಲಿ ಶ್ರೀಶ್ರೀಗಳವರ ಅಮೃತಶಿಲಾವಿಗ್ರಹವೂ ಪ್ರತಿಷ್ಠೆಗೊಂಡು ರಾರಾಜಿಸುತ್ತಿವೆ.

38. 24–7–1976ರಂದು ಶ್ರೀಶ್ರೀಗಳವರ ಪ್ರಥಮ ವಾರ್ಷಿಕಾರಾಧನೆಯನ್ನು ಅವರ ಸುಪುತ್ರರು ನೆರವೇರಿಸಿದರು. ಕಾರ್ಯಾಲಯದ ಆರಂಭದಿಂದಲೂ ಶ್ರೀಶ್ರೀಗಳವರ ಛಾಯಾನುವರ್ತಿಗಳಾಗಿ, ಮುದ್ರಣಾಲಯ, ಮುದ್ರಣ ಕಾರ್ಯಗಳು, ಆಡಳಿತವಿಭಾಗ ಇವುಗಳನ್ನೆಲ್ಲ ಸಮರ್ಥವಾಗಿನಿರ್ವಹಿಸುತ್ತಿದ್ದ ವೈ. ನರಸಪ್ಪನವರು ದಿವಂಗತರಾದರು.

39. ಕಾರ್ಯಾಲಯದ ಟ್ರಸ್ಟ್‌ನ ಅಧ್ಯಕ್ಷರಾಗಿ 1965 – 1980ರವರೆಗೆ ಶ್ರೀ ಎಸ್. ವಿಠ್ಠಲಶಾಸ್ತ್ರಿಗಳೂ ಅವರು ಸಂನ್ಯಾಸಸ್ವೀಕರಿಸಿ ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮಿಗಳೆಂದು ಅಭಿದಾನವನ್ನು ಹೊಂದಿದಮೇಲೆ, ಎ. ವೆಂಕಟೇಶಯ್ಯನವರೂ (1980–1985), ಆನಂತರ ಶ್ರೀ ಎಂ.ಜೆ. ಕೋದಂಡರಾಮಶೆಟ್ಟರೂ (1985–1996), ಅನಂತರ ಹೆಚ್. ವೆಂಕಟನರಸಪ್ಪನವರೂ (1996–2002), ಸೇವೆಸಲ್ಲಿಸಿರುತ್ತಾರೆ. ಈಗ ಶ್ರೀ ಕೆ. ಶ್ರೀನಿವಾಸರವರು ಕಾರ್ಯಾಲಯವನ್ನು ಮುನ್ನಡೆಸುತ್ತಿದ್ದರೆ. ಶ್ರೀ ಎ. ತಾಂಡವೇಶ್ವರರವರು 1965ರಿಂದ ಟ್ರಸ್ಟ್‌ನ ಕನ್ವೀನಿಯರಾಗಿ ಸೇವೆಸಲ್ಲಿಸಿರುತ್ತಾರೆ.

40. 1975 ರಿಂದ 2003ರವರೆಗೆ ವೇದಾಂತಪ್ರಚಾರ ಇತ್ಯಾದಿಗಳನ್ನು ಹೊಳೆನರಸೀಪುರದಲ್ಲಿ ಅಧ್ಯಾತ್ಮವಿದ್ಯಾಪ್ರವೀಣ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ನಡೆಸುತ್ತಾ ಬಂದರು. ಡಿ.ಬಿ. ಗಂಗೊಳ್ಳಿ, ಹೆಚ್.ಕೆ. ಬಲ್ಲಾಳರು, ವಿರಜಾನಂದಸ್ವಾಮಿಗಳು, ಭೀಮರಾಯರು ಮೊದಲಾಗಿ ಶಿಷ್ಯಪರಂಪರೆಯನ್ನು ಮುಂದುವರಿಸಿದರು. 1975 ರಿಂದ 2006 ರವರೆಗೆ ಬೆಂಗಳೂರಿನ ಶಾಖಾಕಾರ್ಯಾಲಯದಲ್ಲಿ ವೇದಾಂತ ಪಾಠ–ಪ್ರಚಾರ–ಪ್ರವಚನಗಳನ್ನು ಕೆ.ಜಿ. ಸುಬ್ರಾಯಶರ್ಮರು ನಡೆಸಿದರು.

41. 1980ರಲ್ಲಿ ಶ್ರೀಶ್ರೀಗಳವರ ಜನ್ಮಶತಾಬ್ದಿಯನ್ನು ವಿಜೃಂಭಣೆಯಿಂದ ನೆರೆವೇರಿಸಿ ಸ್ಮರಣಸಂಚಿಕೆಯನ್ನು ಹೊರತರಲಾಗಿದೆ.

42. 1988ರಲ್ಲಿ ಬೆಂಗಳೂರು ಶಾಖಾ ಕಾರ್ಯಾಲಯದಿಂದ ಶಂಕರಭಾಸ್ಕರ ಪತ್ರಿಕೆಯನ್ನು ಶ್ರೀಯುತ ಕೆ.ಜಿ. ಸುಬ್ರಾಯಶರ್ಮರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು. 33 ಸಂಪುಟಗಳು ಮುಗಿದು, 34ನೆ ಸಂಪುಟವು ಆರಂಭವಾಗಿದೆ.

43. 1932 ರಿಂದ ಶಂಕರಸಪ್ತಾಹವನ್ನು ಆರಂಭಿಸಿದಂದಿನಿಂದ ರಾಜ್ಯದ ಅನೇಕ ಸ್ಥಳಗಳಲ್ಲಿ 1974ರವರೆಗೆ ಶಂಕರಸಪ್ತಾಹವನ್ನು ಏರ್ಪಡಿಸಲಾಗುತ್ತಿತ್ತು. 1975ರ ನಂತರ ಈ ಕಾರ್ಯವನ್ನು ಶ್ರೀಯುತ ದೇವರಾಯ ಕುಲಕರ್ಣಿ, ಪಂಡಿತ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು, ಕೆ.ಜಿ. ಸುಬ್ರಾಯಶರ್ಮರೇ ಮೊದಲಾದ ವಿದ್ವಾಂಸರು ವೇದಾಂತಪ್ರಚಾರ ಕಾರ್ಯವನ್ನು ಮುಂದುವರಿಸಿದರು. ಮತ್ತೆ 1995 ರಿಂದ 2006ರವರೆಗೆ ರಾಜ್ಯದ ಅನೇಕಕಡೆಗಳಲ್ಲಿ ವೇದಾಂತ ಶಿಬಿರಗಳನ್ನು ನಡೆಸಲಾಯಿತು. ಈಗಲೂ ವರ್ಷಕ್ಕೆರಡು ವೇದಾಂತಶಿಬಿರ, ವೇದಾಂತಸಪ್ತಾಹಗಳು ಕಾರ್ಯಾಲಯದಲ್ಲಿ ನಡೆಯುತ್ತಿವೆ.

44. 19–2–2003 ರಿಂದ ಶ್ರೀ ಚಂದ್ರಮೌಳಿ ಅವಧಾನಿಗಳ ನೇತೃತ್ವದಲ್ಲಿ ಸಚ್ಚಿದಾನಂದ ಅಧ್ಯಾತ್ಮವಿದ್ಯಾ

ನಿಲಯವು ಆರಂಭವಾಯಿತು. 2009ರ ವರೆಗೆ ಸುಮಾರು 25 ವಿದ್ಯಾರ್ಥಿಗಳಿಗೆ ಪ್ರಸ್ಥಾನತ್ರಯಭಾಷ್ಯ ಪಾಠವನ್ನು ಮಾಡಿರುತ್ತಾರೆ.

45. 2006ರಲ್ಲಿ ದಕ್ಷಿಣಭಾರತ ವೇದಾಂತವಿದ್ವದ್ಗೋಷ್ಠಿಯನ್ನು ಏರ್ಪಡಿಸಲಾಯಿತು. ದಕ್ಷಿಣಭಾರತದ ಅನೇಕ ವಿದ್ವಾಂಸರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ "ದಕ್ಷಿಣಭಾರತ ವೇದಾಂತವಿದ್ವದ್ಗೋಷ್ಠಿ" ಎಂಬ ಗ್ರಂಥವನ್ನೂ ಹೊರತರಲಾಯಿತು.

45. ಅಧ್ಯಾತ್ಮಪ್ರಕಾಶಕಾರ್ಯಾಲಯದ ಒಂದು ವೆಬ್‌ಸೈಟನ್ನು 2008 ರಲ್ಲಿ ಆರಂಭಿಸಲಾಯಿತು. ಅಲ್ಲಿ ಅಧ್ಯಾತ್ಮಪ್ರಕಾಶದ ಎಲ್ಲ ಸಂಪುಟಗಳೂ, ಎಲ್ಲ ಗ್ರಂಥಗಳನ್ನೂ ಸಂಗ್ರಹಿಸಲಾಗಿದ್ದು ಉಚಿತವಾಗಿ ಅವುಗಳನ್ನು ಡೌನ್‌ಲೋಡ್ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಎಪಿಕೆ ಬುಕ್ಸ್ – ಎಂಬ ಯುಟ್ಯೂಬ್ ಚಾನೆಲ್‌ನ್ನು ಆರಂಭಿಸಲಾಗಿದೆ. ಫೇಸ್‌ಬುಕ್, ವಾಟ್ಸಾಪ್, ಟೆಲಿಗ್ರಾಮ್ ಮೂಲಕ ಕಾರ್ಯಾಲಯದಲ್ಲಿ ನಡೆಯುವ ಎಲ್ಲ ಪಾಠ–ಪ್ರವಚನಗಳು, ಎಲ್ಲ ಕಾರ್ಯಕ್ರಮಗಳನ್ನು ಜಿಜ್ಞಾಸುಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

46. ಬೆಂಗಳೂರು ಶಾಖಾಕಾರ್ಯಾಲಯದಲ್ಲಿ 2006ರಿಂದ ನಿತ್ಯ ಉಪನ್ಯಾಸಮಾಲಿಕೆಯನ್ನು 9–30 ರಿಂದ 10–30ರ ತನಕ ಏರ್ಪಡಿಸಲಾಗುತ್ತಿದೆ. ಅನೇಕ ವಿದ್ವಾಂಸರು ಆಗಮಿಸಿ ಉಪನ್ಯಾಸವನ್ನು ನೀಡಿ ಜಿಜ್ಞಾಸುಗಳ ಅಧ್ಯಾತ್ಮದ ಹಸಿವನ್ನು ನೀಗಿಸುತ್ತಿದ್ದಾರೆ.

47. ಹೊಳೆನರಸೀಪುರದಲ್ಲಿ ಶ್ರೀಶ್ರೀ ಪ್ರಕಾಶಾನಂದೇಂದ್ರಸರಸ್ವತಿಸ್ವಾಮಿಗಳು ವೇದಾಂತಪಾಠ, ಪುರಾಣ ಪ್ರವಚನಗಳನ್ನು ನಡೆಸುತ್ತಿದ್ದಾರೆ. ಸಚ್ಚಿದಾನಂದ ಅಧ್ಯಾತ್ಮವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು ಶ್ರೀ ವೆಂಕಟೇಶಶರ್ಮಾ(ಹರಿ)ರವರು ವೇದ–ವೇದಾಂತಪಾಠಗಳನ್ನೂ ನಡೆಸುತ್ತಿದ್ದಾರೆ.

48. ಕಾರ್ಯಾಲಯದಲ್ಲಿ ಪ್ರಕಟವಾಗಿದ್ದ ಎಲ್ಲ ವೇದಾಂತಗ್ರಂಥಗಳೂ ಮತ್ತೆ ಮತ್ತೆ ಮುದ್ರಣವಾಗುತ್ತಿವೆ. ಕೆಲವು ಹಸ್ತಪ್ರತಿಯಲ್ಲಿದ್ದ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನಗಳನ್ನು ಸಂಗ್ರಹಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಕನ್ನಡದಲ್ಲಿ ಶ್ರೀಶ್ರೀಗಳವರು ಬರೆದಿದ್ದ ಟಿಪ್ಪಣಿಗಳನ್ನು ಸಂಸ್ಕೃತಕ್ಕೆ ಗೀತೆ ಉಪನಿಷತ್ ಗ್ರಂಥಗಳನ್ನು ಅನುವಾದಿಸಿ ಪ್ರಕಟಿಸಲಾಗುತ್ತಿದೆ. ಕೆಲವು ಸಂಸ್ಕೃತಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲಾಗಿದೆ. ಕೆಲವು ಗ್ರಂಥಗಳು ಇಂಗ್ಲಿಷ್, ತೆಲುಗು, ಹಿಂದಿ ಭಾಷೆಗಳಲ್ಲಿ ಅನುವಾದವಾಗಿವೆ.

49. ರಾಮೋತ್ಸವ, ಶಂಕರಜಯಂತಿ, ಶ್ರೀಶ್ರೀಗಳವರ ಆರಾಧನಾ ಸಪ್ತಾಹ, ಶರನ್ನವರಾತ್ರಿ, ಗೀತಾಜಯಂತಿ, ಶ್ರೀಶ್ರೀಗಳವರ ಜಯಂತಿಸಪ್ತಾಹ – ಹೀಗೆ ಆರು ಸಪ್ತಾಹಗಳೂ; ಎರಡು ವೇದಾಂತಶಿಬಿರಗಳನ್ನು ನಡೆಸಲಾಗಿತ್ತಿದೆ.

ಹೀಗೆ ಶ್ರೀಶ್ರೀಗಳವರಿಂದ ಸ್ಥಾಪಿತವಾದ ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಗಳವರು ಹಾಕಿಕೊಟ್ಟ ಮಾರ್ಗದರ್ಶನದಂತೆ ಮುಂದುವರಿಯುತ್ತಾ ದೇಶ–ವಿದೇಶದ ಜಿಜ್ಞಾಸುಗಳಿಗೆ ಶುದ್ಧಶಾಂಕರವೇದಾಂತ ಪ್ರಕ್ರಿಯೆಯನ್ನು ಉಣಬಡಿಸುತ್ತಾ ಮುಂದುವರಿಯುತ್ತಿದೆ. ಈ ಸಂಸ್ಥೆಯು ಹೀಗೆಯೇ ಆಚಂದ್ರಾರ್ಕವಾಗಿ ಮುಂದುವರಿಯುವಂತೆ ಸರ್ವನಿಯಾಮಕನಾದ ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

* * * * *

ಶ್ರೀ ಶ್ರೀ ಪರಮಪೂಜ್ಯ ಸಚ್ಚಿದಾನಂದೇಂದ್ರಸರಸ್ವತಿಸದ್ಗುರುಗಳು

– ಶ್ರೀ ಶ್ರೀ ಅಕ್ಷರಾನಂದೇಂದ್ರಸರಸ್ವತೀಸ್ವಾಮಿಗಳು

ನನ್ನ ಗುರುದೇವ ಶ್ರೀಶ್ರೀಗಳನ್ನು ನಾನು ಕಂಡದ್ದು 1965ನೇ ಇಸವೀ ಗುರುಪೂರ್ಣಿಮೆಯಂದು. ಅಲ್ಲಿಂದ ಅವರಲ್ಲಿ ಶಿಷ್ಯನಾಗಿ ಪ್ರಸ್ಥಾನತ್ರಯಭಾಷ್ಯಗಳನ್ನು, ಭಾಷ್ಯಶಾಂತಿಯನ್ನು ಪಡೆದು ಅವರ ಸೇವೆಯಲ್ಲಿ ನಿರತನಾಗಿದ್ದೆನು.

ನಾಕಂಡಂತೆ ಶ್ರೀಶ್ರೀಗಳವರು, 85 ವರ್ಷದವರಾಗಿದ್ದರೂ, ನಿತ್ಯಚಟುವಟಿಕೆಯಲ್ಲಿ ಪರಿಪೂರ್ಣ ಪರಮಹಂಸಪರಿವ್ರಾಜಕರಾಗಿ ಶಾಂಕರಭಾಷ್ಯ ಚಿಂತನೆ ಪಾಠ, ಪ್ರವಚನ, ಗ್ರಂಥರಚನೆ, ಮಾಸಪತ್ರಿಕೆ, ವೇದಾಂತ ಪ್ರಚಾರಗಳಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದರು.

ಶ್ರೀ ಶ್ರೀಗಳವರ ದಿನಚರಿ:

ಬೆಳಿಗ್ಗೆ 4–30 ಗಂಟೆಗೆ ಎದ್ದು, ಗಂಗಾಸ್ತೋತ್ರ, ಮಾತಃ ಶೈಲಸುತಾಸಪತ್ನೀ ವಸುಧಾ ಮತ್ತು ಮನೋಬುಧ್ಯಹಂಕಾರ ..... ಶಿವೋಽಹಂ ಶಿವೋಽಹಂ ಹೇಳುತ್ತಾ – ಶೌಚ ಸ್ನಾನಾದಿಗಳನ್ನು ಯಥಾ ಶಾಸ್ತ್ರೀಯವಾಗಿ ಮಾಡಿ, ಧ್ಯಾನಕೋಣೆಗೆ ತೆರಳುತ್ತಿದ್ದರು. 6-30 ಗಂಟೆಯಿಂದ ಶಂಕರಭಾಷ್ಯ ಪಾರಾಯಣ (ನೋಟ್ಸ್‌ಬುಕ್‌ಜತೆಯಲ್ಲಿ) ಮಾಡುತ್ತಾ 7-30 ಗಂಟೆಗೆ ಭಾಷ್ಯಪಾಠಕ್ಕೆ ಸಿದ್ಧರಾಗಿರುತ್ತಿದ್ದರು. ಅಷ್ಟುಹೊತ್ತಿಗೆ ನಾನು, ಕೆ.ಜಿ. ಸುಬ್ರಾಯಶರ್ಮಾ, ಲಕ್ಷ್ಮಮ್ಮ, ಮೊದಲಾದ ಶಿಷ್ಯರೂ–ಗುರುಗಳ ಬಟ್ಟೆ ಕೋಣೆ ಕೆಲಸಗಳನ್ನು, ಶ್ರೀರಾಮದೇವರ ಪೂಜೆ, ನಮ್ಮ ನಿತ್ಯಾಹ್ನಿಕ(ನದೀಸ್ನಾನ–ಸಂಧ್ಯಾ–ಹೂವು ಕುಯ್ಯುವುದು)ಗಳನ್ನು ಮುಗಿಸಿ ಪಾಠಕ್ಕೆ ಸಿದ್ದರಾಗಿರುತ್ತಿದ್ದೆವು. 9 ಗಂಟೆಯವರೆಗೆ ಭಾಷ್ಯಪಾಠವು. 8 ಗಂಟೆಗೆ ಪ್ರೆಸ್ ತೆಗೆಯಬೇಕು. 8-30 ಗೆ ಕಾರ್ಯಾಲಯ ತೆರೆಯಬೇಕು. ಶ್ರೀನರಸಪ್ಪನವರು, ಪಂಡಿತ ಲಕ್ಷ್ಮೀನರಸಿಂಹಮೂರ್ತಿಗಳೂ ತಮ್ಮ ಕರ್ತವ್ಯಕ್ಕೆ ಕಾಲಕ್ಕೆ ಸರಿಯಾಗಿ ಹಾಜರಾಗಬೇಕು. ಪ್ರಿಟಿಂಗ್‌ಪ್ರೆಸ್ ಕೆಲಸಗಾರರೂ ತಮ್ಮಯ್ಯ ಕೃಷ್ಣಮೂರ್ತಿಗಳೂ, ನಿಯತಕಾಲಕ್ಕೆ ಬರಬೇಕು, ಕೆಲಸದಲ್ಲಿ ತೊಡಗಿರಬೇಕು. ಗುರುಗಳೇ ಎಲ್ಲರನ್ನೂ ತಮ್ಮತಮ್ಮ ಕರ್ತವ್ಯಗಳಲ್ಲಿ ತೊಡಗಿಸುತ್ತಿದ್ದರು. ಹೆಚ್ಚುಕಡಿಮೆ ಮಾಡಿದರೆ ತಾವೇ ಭಿಕ್ಷೆ ತೆಗೆದುಕೊಳ್ಳದೇ ಉಪವಾಸ ನಡೆಸುತ್ತಿದ್ದರು. ಅವರ ಮಾತಿನ ಆಜ್ಞೆ, ಜ್ಞಾನದ ಬಲ – ಎಲ್ಲರನ್ನು 'ಭೀಷಾಸ್ಮಾತ್ ವಾತಃ ಪವತೇ' ಎಂಬಂತೆ – ಕರ್ತವ್ಯಗಳಲ್ಲಿ ತೊಡಗಿಸುತ್ತಿತ್ತು. ಬೆಳಿಗ್ಗೆ 9 ಗಂಟೆಗೆ ಹಾಲು ಕುಡಿದು, ಬರವಣಿಗೆಗೆ ಶ್ರೀಶ್ರೀಗಳವರು ಕುಳಿತರೆ ಮಧ್ಯಾಹ್ನ 1 ಗಂಟೆಯವರೆಗೂ ಬರೆಯುತ್ತಿದ್ದರು. ಆನಂತರ ಮಾಧ್ಯಾಹ್ನಿಕ ಅನುಷ್ಠಾನಗಳನ್ನು ಮುಗಿಸಿ 1-30 ಮೇಲೆ ಭಿಕ್ಷೆ ತೆಗೆದುಕೊಳ್ಳುತ್ತಿದ್ದರು. ಬುಧವಾರ ಡಾಕ್ಟರ್ ಸದಾಶಿವರಾವ್ ಮನೆಯಿಂದ, ಶನಿವಾರ ಛತ್ರದ ರಾಮಚಂದ್ರರಾಯರ ಮನೆಯಿಂದ, ಭಾನುವಾರ ಶ್ರೀರಾಮಸ್ವಾಮಯ್ಯನವರ ಮನೆಯಿಂದ ಭಿಕ್ಷೆಯನ್ನು ತರುತ್ತಿದ್ದೆವು. ಉಳಿದ ದಿನಗಳಲ್ಲಿ ಲಕ್ಷ್ಮಮ್ಮನವರೆ ಭಿಕ್ಷೆಯನ್ನು ಸಿದ್ಧಮಾಡುತ್ತಿದ್ದರು.

ಮಧ್ಯಾಹ್ನ 2 ಗಂಟೆಯಿಂದ – ಶಿಷ್ಯರಿಗೆ – ಹಳೆಗನ್ನಡ, ಬೀಜಗಣಿತ, ಇಂಗ್ಲೀಷ್ Renin Martin Grammar ಗ್ರಂಥಗಳ ಪಾಠವನ್ನು ಹೇಳುತ್ತಿದ್ದರು. 3 ಗಂಟೆಯಿಂದ 'ಪರಮಾರ್ಥಚಿಂತಮಣಿ' ಪಾಠವನ್ನು

ಮಾಡುತ್ತಿದ್ದರು. 5-30 ಇಂದ 7-15 ವರೆಗೆ ಸಾಯಂ ಅನುಷ್ಠಾನಗಳನ್ನು ನಡೆಸುತ್ತಿದ್ದರು. 7-30 ರಿಂದ 8ರವರೆಗೆ ಪ್ರತಿನಿತ್ಯವೂ ಭಜನೆಮಾಡಿಸುತ್ತಿದ್ದರು. 8-30ಕ್ಕೆ 1 ಲೋಟ ಹಾಲು 1 ಬಾಳೆಹಣ್ಣು, 1 ಹಪ್ಪಳ ಸೇವಿಸಿ 9-30ಕ್ಕೆ ಮಲಗುತ್ತಿದ್ದರು.

ಶ್ರೀಶ್ರೀಗಳವರ – ಶಂಕರಭಕ್ತಿ

ಶ್ರೀಶ್ರೀಗಳವರು ಭಾಷ್ಯ – ವ್ಯಾಖ್ಯಾನಗಳ ವೈಲಕ್ಷಣ್ಯ ಮತ್ತು ಪರಿಶುದ್ಧ ಶಂಕರ ಸಂಪ್ರದಾಯ (ವೇದಾಂತ ಸಂಪ್ರದಾಯ)ಗಳನ್ನು ವಿವೇಕದಿಂದ ಜನರ ಮುಂದಿಡಲು ಅವತಾರ ಮಾಡಿರುವ ಶ್ರೀ ಅಭಿನವ ಶಂಕರರೇ ಆಗಿದ್ದಾರೆ.

ಶಂಕರ ಭಾಷ್ಯಗಳ ವ್ಯಾಖ್ಯಾನ ಮಾಡಲು ಶ್ರೀಶ್ರೀಗಳವರು ಅನುಸರಿಸಿರುವ ಈ ವಿಷಯಗಳು ಅತ್ಯಂತ ಮುಖ್ಯವಾದವು:

(1) ಅಧ್ಯಾರೋಪಾಪವಾದವೆಂಬ ಕ್ರಮದಿಂದಲೇ ವೇದಾಂತಗಳ ಉಪದೇಶಗಳನ್ನು ಮಾಡಬೇಕು. ಇದೇ ಪರಿಶುದ್ಧವೇದಾಂತ ಸಂಪ್ರದಾಯವು.

(2) ಸಾರ್ವತ್ರಿಕ ಅನುಭವದ ಆಧಾರದಿಂದಲೇ ಯುಕ್ತಿಗಳನ್ನು ಜೋಡಿಸಿಕೊಂಡು ವೇದಾಂತ ವಾಕ್ಯಾರ್ಥವನ್ನು ತನ್ನ ಸ್ವಾನುಭವಕ್ಕೆ ಹೊಂದಿಸಿಕೊಳ್ಳಬೇಕು.

(3) ಅಧ್ಯಾಸವನ್ನು ಬಾಧೆ ಮಾಡುವ ಮೂಲಕವಾಗಿಯೇ ವೇದಾಂತವಾಕ್ಯಗಳೂ (ಶಂಕರಭಾಷ್ಯವೂ) ಬ್ರಹ್ಮಾತ್ಮೈಕತ್ವವನ್ನು ತಿಳಿಸುವುದರಿಂದ ಪ್ರಮಾಣಗಳಾಗಿವೆ.

(4) ಅನ್ವಯವ್ಯತಿರೇಕವೆಂಬ ಅನುಭವಾನುಸಾರಿ ತರ್ಕವನ್ನೇ ಕಾರ್ಯಕಾರಣ ಮೊದಲಾದ ಪ್ರಕ್ರಿಯೆಗಳಲ್ಲಿ ಮನನವಾಗಿ ಚಿಂತಿಸಿ ವಾಕ್ಯಾರ್ಥವನ್ನು ನಿಶ್ಚಯಿಸಿಕೊಳ್ಳಬೇಕು.

(5) ವಸ್ತುತಂತ್ರಜ್ಞಾನ, ಪುರುಷತಂತ್ರಜ್ಞಾನ ಎಂಬ ವಿಭಾಗದಿಂದಲೇ ವಾಕ್ಯಾರ್ಥಗಳ ನ್ಯಾಯವನ್ನು ಏರ್ಪಡಿಸಿಕೊಂಡು, ವಾಕ್ಯಾರ್ಥತಾತ್ಪರ್ಯವನ್ನು ನಿಶ್ಚಯಿಸಬೇಕು.

(6) ಸಾಕ್ಷಿಸ್ವರೂಪವೆಂಬ ಅನುಭವರೂಪವೇ ಸಕಲ ಪ್ರಮಾಣಗಳಿಗೂ ಪ್ರಮಾಣವಾಗಿರುವುದರಿಂದ ವಾಕ್ಯಾರ್ಥವನ್ನು ಸಾಕ್ಷ್ಯನುಭವದ ಆಧಾರದಿಂದಲೇ ನಿರ್ಣಯಮಾಡಿಕೊಳ್ಳಬೇಕು.

ಈ ಮೇಲಿನ 6 ವಿಷಯಗಳನ್ನು ಚೆನ್ನಾಗಿ ಅರಿತುಕೊಂಡು ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳನ್ನು **ಸದ್ಗುರುಗಳಿಂದ ಶ್ರಣಮ ಮಾಡಿದ ಶಿಷ್ಯನಿಗೇ** ಶ್ರೀ ಶಂಕರಭಾಷ್ಯ ಮತ್ತು ಆಧುನಿಕ ವ್ಯಾಖ್ಯಾನ ಪ್ರಸ್ಥಾನಗಳ ವೈಲಕ್ಷಣ್ಯವೂ ತಿಳಿದುಬರುತ್ತದೆ. ವೇದಾಂತಗಳಲ್ಲಿರುವ ಕವಲುದಾರಿಗಳು ತಿಳಿಯುತ್ತವೆ. ಪರಿಶುದ್ಧ ಶಂಕರ ಸಂಪ್ರದಾಯವು (ವೇದಾಂತ ಸಂಪ್ರದಾಯವು) ನಮಗೆ ಗೋಚರವಾಗಿ ಶುದ್ಧಶಾಂಕರ ಸಂಪ್ರದಾಯ ಮಾರ್ಗದಲ್ಲಿ ನಡೆಯಬಹುದು.

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು 96 ವರ್ಷಗಳ ಕಾಲ ಕನ್ನಡ, ಸಂಸ್ಕೃತ, ಆಂಗ್ಲ ಭಾಷೆಗಳಲ್ಲಿ ಶ್ರೀಶಂಕರಭಾಷ್ಯಗಳನ್ನು ವಿವರಿಸಿ ಪೂರ್ಣ ಜೀವನವನ್ನು ಶಂಕರರಿಗೆ ಅರ್ಪಿಸಿರುತ್ತಾರೆ.

ಅವರ ಉಸಿರೇ ಶಂಕರರು. ಅವಸ್ಥಾತ್ರಯ ಪ್ರಕ್ರಿಯೆಯನ್ನು ಸ್ವಾನುಭವ ಯುಕ್ತಿಗಳಿಂದ ವಿಚಾರ ಮಾಡಿ ಪ್ರಪಂಚದ ಯಾವ ಮನುಷ್ಯನಾದರೂ ವಾಕ್ಯರ್ಥಗಳ ಗೊಂದಲವಿಲ್ಲದೆ ತತ್ತ್ವವನ್ನು ತಿಳಿಯಬಹುದು ಎಂದು ಪರಮಾರ್ಥಚಿಂತಾಮಣೀ ಮೊದಲಾದ ಕನ್ನಡ ಗ್ರಂಥಗಳಲ್ಲಿ ತೋರಿಸಿಕೊಟ್ಟಿದ್ದಾರೆ.

ವೇದಾಂತ ವಿಚಾರಕ್ಕೆ ಎಲ್ಲರೂ (ಲಿಂಗ, ಜಾತಿ, ದೇಶ ಬೇಧವಿಲ್ಲದೇ) ಎಲ್ಲಾಕಾಲದಲ್ಲೂ ಅವಕಾಶಪಡೆದ ಅಧಿಕಾರಿಗಳು ಎಂದು ಸಾರಿದ್ದಾರೆ. ವಿವೇಕ, ಭಕ್ತಿ, ಶಮಾದಿಗುಣಗಳಿಂದ ಯೋಗ್ಯತೆ ಪಡೆದು ಎಲ್ಲರೂ ತತ್ತ್ವದರ್ಶನ ಪಡೆಯಬಹುದೆಂದು ಹೇಳಿದ ಜಗದ್ಗುರು ಶ್ರೀಶಂಕರರೇ, ಪುನಃ ಅವತಾರ ಮಾಡಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾಗಿ ಬಂದು ಲೋಕಾನುಗ್ರಹ ಮಾಡಿದ್ದಾರೆ. ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಿಗೆ ಪರಮಾತ್ಮನಲ್ಲಿ ಪರಾಭಕ್ತಿ, ಶ್ರೀಶಂಕರರ ನಿರಂತರ ಪಾದಸ್ಮರಣೆ, ಲೋಕೋತ್ತರವಾದ ಪರಮಹಂಸ ಸಂನ್ಯಾಸ, ಧರ್ಮನಿಷ್ಠೆ, ಆಚಾರಗಳ ಪರಿಪಾಲನೆ, ಶಿಷ್ಯರ ಮೇಲಿನ ಕಾರುಣ್ಯ, ಲೋಕಾನುಗ್ರಹ ಚಿಂತನೆ, ವೇದಾಂತಗಳ, ಶ್ರೀಶಂಕರಭಾಷ್ಯಗಳ ಪ್ರಚಾರ ಇವುಗಳಿಗಾಗಿಯೇ ಮುಡಿಪಿಟ್ಟ ಪರಿಪೂರ್ಣ ಜೀವನ ಕಡೆಯ ಉಸಿರಾದ 96ನೇ ವಯಸ್ಸಿನವರೆಗೂ, "ತದ್ಬುದ್ಧಯಃ ತದಾತ್ಮನಃ ತನ್ನಿಷ್ಠಾಃ ತತ್ಪರಾಯಣಾಃ" ಎಂಬಂತೆ ಇದ್ದವರು ಶ್ರೀಶ್ರೀಗಳವರು. ಪ್ರತ್ಯಕ್ಷ ಶಂಕರರೇ ಆಗಿರುತ್ತಾರೆ. ಅತ್ಯಂತ ಸರಳವಾದ ಜೀವನದ ಶೈಲಿ ಅವರದಾಗಿತ್ತು.

ಅವರ ಮನಸ್ಸಿನಲ್ಲಿ ವೇದಾಂತ ಪಾಠಗಳಿಗೇ ಮೀಸಲಾದ ಗುರುಕುಲಗಳನ್ನು ನಡೆಸಬೇಕು. ಶ್ರೀಶಂಕರಭಾಷ್ಯದ ಅಧ್ಯಯನವೇ ಪ್ರಧಾನ ವಿಷಯವಾಗಿರಬೇಕು. ಅದಕ್ಕಾಗಿ ಸಂಸ್ಕೃತ, ಆಂಗ್ಲ, ಕನ್ನಡಗಳನ್ನು ಕಲಿತ ಪೂರ್ಣಾವಧಿ ಕಾರ್ಯಕರ್ತ್ಯಗಳಾದ ಶ್ರೀಶಂಕರರ ಸೇವೆ ನಡೆಸುವ ವಿದ್ಯಾರ್ಥಿಗಳು ತಯಾರಾಗಿ ಸಿದ್ಧರಾಗಿರಬೇಕು. ಅಖಂಡ ಭಾರತದೇಶದ ಎಲ್ಲಡೆಯು ಶ್ರೀಶಂಕರರ ಗುರುಕುಲಗಳು, ಪ್ರಪಂಚದ ಮೂಲೆಮೂಲೆಯಲ್ಲೂ ಶ್ರೀಶಂಕರ ತತ್ತ್ವದ ಪ್ರಚಾರಕ್ಕಾಗಿರುವ ಪಾಠಶಾಲೆಗಳು ತಯಾರಾಗಿ ಸಿದ್ಧವಾಗಬೇಕೆಂದು ಹೆಬ್ಬಯಕೆಯಾಗಿತ್ತು.

ತಕ್ಕಷ್ಟು ವಿದ್ಯಾರ್ಥಿಗಳು ಬರಲಿಲ್ಲ, ಬಂದವರು ಪೂರ್ಣವಧಿ ಪ್ರಚಾರಕ್ಕಾಗಿ ಸಿದ್ಧರಾಗಿ ತಯಾರಾಗಿರಲಿಲ್ಲ ಎಂಬುದೇ ಖೇದಕರ ಸಂಗತಿಯಾಗಿದೆ. ಕೇವಲ ಗ್ರಂಥ ಮುದ್ರಣ, ಭವನ ನಿರ್ಮಾಣ, ಧನಸಂಗ್ರಗಳಿಂದ ಇಂತಹಾ ಗುರುಕುಲ, ಪಾಠಶಾಲೆಗಳು ಉಂಟಾಗುವುದಿಲ್ಲ. ತ್ಯಾಗಿಗಳೂ ಮೇಧಾವಿಗಳೂ ಗುರುಭಕ್ತರೂ ಆದ ಶಿಷ್ಯರಿಂದಲೇ ಇದು ಸಿದ್ಧವಾಗಬೇಕಾಗಿದೆ.

ವಿಶುದ್ಧವೇದಾಂತ ಪರಿಭಾಷಾ, ವಿಶುದ್ಧ ವೇದಾಂತಸಾರ, ವೇದಾಂತ ಬಾಲಬೋಧಿನೀ ಎಂಬ ಸಂಸ್ಕೃತ ಗ್ರಂಥಗಳನ್ನು ಆರಂಭಿಸಿ, ಕ್ಲೇಶಾಪಹಾರಿಣೀ, ತೈತ್ತಿರೀಯ ಭಾಷ್ಯಾರ್ಥವಿಮರ್ಶಿನೀ, ಮಾಂಡೂಕ್ಯರಹಸ್ಯ ವಿವೃತಿಃ, ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾವರೆಗಿನ ಸಂಸ್ಕೃತ ಉದ್ಗ್ರಂಥಗಳನ್ನು ವಿದ್ಯಾರ್ಥಿಗಳು ಕಲಿಯಬೇಕು. ಇನ್ನು ಎಲ್ಲ ಜಾತಿಯ ಜನರಿಗೂ ಹೆಣ್ಣುಮಕ್ಕಳಿಗೂ ಕನ್ನಡ ಗ್ರಂಥಗಳಾದ ವೇದಾಂತ ಬಾಲಬೋಧೆ, ಬ್ರಹ್ಮವಿದ್ಯೆ, ಆತ್ಮವಿದ್ಯೆ, ಅನುಭವ ಪರ್ಯಂತ ಆತ್ಮವಿಚಾರ, ಪರಿಪೂರ್ಣದರ್ಶನ, ಅಧ್ಯಾತ್ಮವಿದ್ಯೆ, ಶಂಕರವೇದಾಂತಸಾರ, ಶಾಂಕರ ವೇದಾಂತ ಮೂಲ ತತ್ತ್ವಗಳು, ಅನುಭವಗಮ್ಯವೇದಾಂತ, ಜೀವಂತ ವೇದಾಂತ, ಶ್ರೀಶಂಕರರ ಸರ್ವಸಮ್ಮತೋಪದೇಶಗಳು, ಅವಸ್ಥಾತ್ರಯ ಚಂದ್ರಿಕೆ ಪರಮಾರ್ಥ ಚಿಂತಾಮಣಿ

ಇವುಗಳನ್ನು ಕ್ರಮವಾಗಿ ಪಾಠಮಾಡಿ, ತಿಳಿಸಿ ಅವರನ್ನು ತಯಾರು ಮಾಡಿ, ವೇದಾಂತ ಪ್ರಚಾರಕ್ಕೆ ಕಳಿಸಬೇಕು. ಇಂಗ್ಲೀಷ್ ಗ್ರಂಥಗಳನ್ನು ಹೀಗೆಯೇ ಕ್ರಮವಾಗಿ ಜೋಡಿಸಿ ಪಾಠಮಾಡಿ ಎಲ್ಲ ದೇಶಗಳಲ್ಲೂ ಪ್ರಚಾರ ಮಾಡಬೇಕು. ಆಗಲೇ ಶ್ರೀಶ್ರೀಗಳವರ ಸಂಕಲ್ಪ ಪೂರ್ಣವಾಗಿ ಶ್ರೀ ಸದ್ಗುರುಗಳ ಸೇವೆ ಮಾಡಿದಂತಾಗುತ್ತದೆ.

ಶ್ರೀಶ್ರೀಗಳವರ ವ್ಯಾಖ್ಯಾನದ ವೈಶಿಷ್ಯ

ಶ್ರೀಶ್ರೀಗಳವರು ಶ್ರೀಶಂಕರ ಭಗವದ್ಪಾದರವರ ಪ್ರಸ್ಥಾನತ್ರಯ ಭಾಷ್ಯಗಳ ವ್ಯಾಖ್ಯಾನವನ್ನು ಅನುವಾದ ರೂಪ, ಅಡಿಟಿಪ್ಪಣಿ, ವಿಷಯವಿಭಾಗ ಶಿರೋನಾಮ (ಹೆಡ್ಡಿಂಗ್), ಪ್ಯಾರಾಗ್ರಾಫ್‌ಗಳೆಂಬ ರೂಪದಿಂದಲೂ; ವಿವರಣೆ, ಸ್ವತಂತ್ರಗ್ರಂಥಗಳ ರೂಪಗಳಿಂದಲೂ ಅಧ್ಯಾರೋಪಾಪವಾದ ಕ್ರಮದಿಂದ ಅಧ್ಯಾಸ ಬಾಧೆಯಾಗುವಂತೆ, ಸ್ವಾನುಭವ ಯುಕ್ತಿಗಳಿಗೆ ಹೊಂದಿಸಿ ತೋರಿಸಿಕೊಟ್ಟಿರುತ್ತಾರೆ. ಪ್ರಸ್ಥಾನತ್ರಯ ಭಾಷ್ಯಗಳ ಅರ್ಥಕ್ಕೆ ವಿರುದ್ಧವಲ್ಲದ ಪ್ರಕರಣ ಗ್ರಂಥಗಳನ್ನೂ ಉಪದೇಶಸಾಹಸ್ರೀ, ಅಪರೋಕ್ಷಾನುಭೂತಿ, ದಕ್ಷಿಣಾಮೂರ್ತಿಸ್ತೋತ್ರ, ವೇದಾಂತ ಬಾಲಬೋಧೆ (ಪ್ರಾತಃ ಸ್ಮರಣಸ್ತೋತ್ರ) ಶ್ರೀ ಶಂಕರಾಚಾರ್ಯಕೃತವೆಂದು ಅಂಗೀಕರಿಸಲು ಅಡ್ಡಿಯಿಲ್ಲವೆಂದಿದ್ದಾರೆ. ಇನ್ನುಳಿದ ಪ್ರಕರಣ ಗ್ರಂಥಗಳು ಶ್ರೀಶಂಕರರ ಹೆಸರಿನಲ್ಲಿ **ಶಂಕರಾನಂದ** ಮೊದಲಾದ ಶಂಕರಭಕ್ತರು ಬರೆದಿದ್ದಾರೆಂಬುದೇ ಶ್ರೀಶ್ರೀಗಳವರ ಅಭಿಪ್ರಾಯ.

ಶ್ರೀಶ್ರೀಗಳವರ ವಿಮರ್ಶಾತ್ಮಕ ಗ್ರಂಥಗಳಲ್ಲಿ ಎರಡು ವಿಧ ಅಧ್ಯಯನಗಳಿವೆ. ಶ್ರೀಶಂಕರಭಾಷ್ಯ ಹಾಗೂ ವ್ಯಾಖ್ಯಾನ ಪ್ರಸ್ಥಾನ ಗ್ರಂಥಗಳ ತುಲಾನಾತ್ಮಕ ಅಧ್ಯಯನವನ್ನು ತಿಳಿಸಿಕೊಟ್ಟು ಎಲ್ಲಿ ಎಲ್ಲಿ ಭಾಷ್ಯಾರ್ಥಕ್ಕೆ ವಿರುದ್ಧವೂ, ವಿಭಿನ್ನವೂ ಆಗಿವೆ ಎಂಬುದನ್ನು ತೋರಿಸಿರುತ್ತಾರೆ.

ತಾವು ತಿಳಿಸಿರುವ ವಿಷಯಗಳಿಗೆ ಶಂಕರಭಾಷ್ಯ ವಾಕ್ಯಗಳನ್ನು ಪ್ರಮಾಣವಾಗಿ ಕೊಟ್ಟು (ಸಂಖ್ಯಾಸಹಿತವಾಗಿ) ಭಾಷ್ಯಾರ್ಥವನ್ನು ವಿವರಿಸಿ ವ್ಯಾಖ್ಯಾನಗಳ ವಾಕ್ಯಗಳನ್ನು ಬರೆದು ಸಂಖ್ಯಾಸಹಿತವಾಗಿ ತೋರಿಸಿ ಅವುಗಳ ಅರ್ಥವನ್ನು ಕೊಟ್ಟು ಭಾಷ್ಯ ವ್ಯಾಖ್ಯಾನಗಳ ಅರ್ಥವೈಲಕ್ಷಣ್ಯವನ್ನು ತೋರಿಸಿರುವುದು ಶ್ರೀಶ್ರೀಗಳವರ ಅಸಾಧಾರಣವಾದ ಕ್ರಮವಾಗಿದೆ. ಅದಕ್ಕಾಗಿ ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ, ಮಾಂಡೂಕ್ಯರಹಸ್ಯವಿವೃತಿಃ, ಪಂಚಪಾದಿಕಾಪ್ರಸ್ಥಾನಂ, ಸುಗಮಾ/ಸೂತ್ರಭಾಷ್ಯಾರ್ಥ ತತ್ತ್ವವಿವೇಚನೀ ಮುಂತಾದ ಸಂಸ್ಕೃತ ಗ್ರಂಥಗಳನ್ನು ಬರೆದಿರುತ್ತಾರೆ. ಎಲ್ಲಿಯೂ ಯಾವ ವ್ಯಾಖ್ಯಾನಕಾರರ ವ್ಯಕ್ತಿಗತವಾದ ವಾಕ್ಯಗಳನ್ನೂ ಬರೆದಿರುವುದಿಲ್ಲ. ಕೇವಲ ಅಭಿಪ್ರಾಯಗಳ ವಿವರಣೆಯನ್ನು ಸಪ್ರಮಾಣವಾಗಿ ಉದಾಹರಿಸಿರುತ್ತಾರೆ. ಕನ್ನಡ ಗ್ರಂಥಗಳಲ್ಲೂ ವೇದಾಂತವಿಚಾರದಇತಿಹಾಸ ಶಂಕರಸಿದ್ಧಾಂತ ಮುಂತಾದವುಗಳಲ್ಲಿ ಭಾಷ್ಯ–ವ್ಯಾಖ್ಯಾನ ಪ್ರಸ್ಥಾನಗಳ ವೈಲಕ್ಷಣ್ಯವನ್ನು ತೋರಿಸಿರುತ್ತಾರೆ.

ಪ್ರಧಾನವಾಗಿ ಶ್ರೀಶಂಕರ ಭಗವತ್ಪಾದರವರ ಪರಿಶುದ್ಧವೇದಾಂತ ಸಂಪ್ರದಾಯವನ್ನು ಎತ್ತಿ ತೋರಿಸುವುದೇ ಅವರ ಮುಖ್ಯ ಗುರಿಯಾಗಿರುತ್ತದೆ. ಶ್ರೀಶಂಕರಭಗವತ್ಪಾದರವರೂ ತಮ್ಮ ಕಾಲದಲ್ಲಿ ಹಿಂದಿನವರಾದ ಅದ್ವೈತಿಗಳ ವ್ಯಾಖ್ಯಾನವನ್ನು ಅಲ್ಲಲ್ಲಿ ಭಾಷ್ಯದಲ್ಲಿ ತೋರಿಸಿ ಆ ವ್ಯಾಖ್ಯಾನಗಳು ವೇದಾಂತಕ್ಕೂ ಅನುಭವಾನುಯುಕ್ತಿಗಳಿಗೂ ವಿರುದ್ಧವೆಂಬುದನ್ನೇ ತೋರಿಸಿಕೊಟ್ಟು ಪರಿಶುದ್ಧ ಅದ್ವೈತ ಸಂಪ್ರದಾಯವನ್ನು ಎತ್ತಿಹಿಡಿದಿರುತ್ತಾರೆ.

* * * * *

ಶ್ರೀಶ್ರೀಗಳ ಪ್ರಜ್ಞಾಪಾರಮಿತೆ

– ಶ್ರೀ ಶ್ರೀ ಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳು
ರಾಜಾಜಿನಗರ, ಬೆಂಗಳೂರು

ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ತಾನು ಶ್ರಮಪಟ್ಟ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಎಂಬುದು ಇರುತ್ತದೆ. ಆ ವಿಶೇಷಶ್ರಮದಿಂದ ಆ ಕ್ಷೇತ್ರದಲ್ಲಿ ಆತನಿಗೆ ಎಷ್ಟೋ ಹೊಸ ಹೊಸ ವಿಚಾರಗಳು ಸ್ಫುರಣವಾಗುತ್ತವೆ. ಹೀಗಾಗಿಯೇ ವಿಜ್ಞಾನ ಕ್ಷೇತ್ರದಲ್ಲಿ ಭಾರಿ ಆವಿಷ್ಕಾರವುಂಟಾಗಿ ಇಂದಿನ ಟೆಕ್ನಾಲಜಿಯು ಭೌತಿಕಕ್ಷೇತ್ರದಲ್ಲಿ ಜನರನ್ನು ಮುಗ್ಧರನ್ನಾಗಿ ಮಾಡಿಬಿಟ್ಟಿದೆ. ಹೊಸ ಹೊಸ ವಾಹನಗಳು ಅದರ ವಿನ್ಯಾಸ, ಅದರಲ್ಲಿ ಅಡಗಿಸಿರುವ ಅನುಕೂಲ್ಯತೆ, ಗೃಹೋಪಯೋಗಿಯಾಗಿರುವ ಯಂತ್ರಗಳ ವೈವಿಧ್ಯತೆ, ಮೊಬೈಲ್, ಕಂಪ್ಯೂಟರ್, ದೂರದರ್ಶನ, ಮನೆಗಳನ್ನೂ, ಆಸ್ಪತ್ರೆಗಳನ್ನೂ, ವಿದ್ಯಾನಿಲಯಗಳನ್ನೂ ನಿರ್ಮಿಸುವುದಕ್ಕೆ ಬೇಕಾದ ಯಂತ್ರಗಳು, ಜಮೀನುಗಳಲ್ಲಿ ಕೆಲಸಮಾಡುವುದಕ್ಕೆ ಬೇಕಾದ ಯಂತ್ರಗಳು, ಯುದ್ಧಕ್ಷೇತ್ರದಲ್ಲಿ ಉಪಯೋಗಿಸುವ ಆಯುಧಗಳ ವೈವಿಧ್ಯತೆಯು – ಹೀಗೆ ಒಂದಲ್ಲ ಎರಡಲ್ಲ ನೂರಾರು ಕ್ಷೇತ್ರಗಳಲ್ಲಿ ನೂರಾರು ತರಹದ ಯಂತ್ರಗಳನ್ನು ನಿರ್ಮಾಣ ಮಾಡಿ ಇಡಿ ಪ್ರಪಂಚವನ್ನೇ ಆಶ್ಚರ್ಯಚಕಿತರನ್ನಾಗಿ ಮಾಡಿಬಿಟ್ಟಿದೆ!

ಆದರೂ ಇದರ ಕ್ಷೇತ್ರವು ಪರಿಮಿತವಾಗಿಯೇ ಇರುತ್ತದೆ. ಏನೇ ಮಾಡಿದರೂ ದೇಹೇಂದ್ರಿಯಗಳಿಗೆ ಅನುಕೂಲ್ಯತೆ ಮಾಡುವುದಷ್ಟೇ ಈ ಕ್ಷೇತ್ರದ ಸಾಮರ್ಥ್ಯವೇ ಹೊರತು ಇದನ್ನು ದಾಟಿದ ಆಧ್ಯಾತ್ಮಿಕ ಪ್ರಪಂಚಕ್ಕೆ ಯಾವ ಕೊಡಿಗೆಯನ್ನು ಅದಕ್ಕೆ ಕೊಡುವುದಕ್ಕಾಗುವುದಿಲ್ಲ. ಅಧ್ಯಾತ್ಮಗ್ರಂಥಾವಳಿಯನ್ನು ಮುದ್ರಿಸುವ ಮತ್ತು ಅವುಗಳನ್ನು ಓದುವುದಕ್ಕೆ ಬೇಕಾದ ಸುಲಭ ಯಂತ್ರವನ್ನು ಕಂಡುಹಿಡಿದಿರಬಹುದು. ಆದರೆ ಆಧಿಭೌತಿಕ ಪ್ರಪಂಚದಿಂದ ಮನಸ್ಸನ್ನು ತಿರುಗಿಸಿ ಅಧ್ಯಾತ್ಮ ಪ್ರಪಂಚದ ಕಡೆಗೆ ಹರಿಯುವಂತೆ ಮಾಡುವುದಕ್ಕೆ ಉಪನಿಷತ್ತುಗಳೇ ಮತ್ತು ಅದನ್ನು ಓದಿ ಅನುಭವಕ್ಕೆ ತಂದುಕೊಂಡ ಮಹನೀಯರೇ ಕಾರಣರಾಗಿರುತ್ತಾರೆಯೇ ಹೊರತು ಈಗಿನ ವಿಜ್ಞಾನ ಪ್ರಪಂಚದಿಂದ ಏನೂ ಆಗುವುದಿಲ್ಲ. ಅಧ್ಯಾತ್ಮ ಪ್ರಪಂಚಕ್ಕೆ ವಿಷಯವಾದ ಆತ್ಮವಿಚಾರವು ಸತ್ಯವಾದದ್ದು, ಆಧಿಭೌತಿಕಕ್ಕೆ ವಿಷಯವಾದದ್ದು ಅನೃತವು, ತಾತ್ಕಾಲಿಕವು. ಅಷ್ಟೇ ಅಲ್ಲ, ಅದರಿಂದ ಎಷ್ಟು ಪ್ರಯೋಜನವೋ ಅಷ್ಟೇ ಅಥವಾ ಅದಕ್ಕೆ ಹತ್ತು ಪಟ್ಟು ಅನರ್ಥಗಳೂ ಜೊತೆಯಲ್ಲೇ ಇರುತ್ತವೆ. ಆದರೆ ಶಾಶ್ವತವಾದ ಶಾಂತಿ, ಸುಖ, ಆನಂದ ಮತ್ತು ಜೀವನದ ಪರಿಪೂರ್ಣತೆ ಮತ್ತು ತೃಪ್ತಿಯು ಆದ್ಯಾತ್ಮ ವಿಚಾರದಿಂದಲೇ ದೊರೆಯುವುದು. ಈ ವಿಚಾರವು ಉಪನಿಷತ್ತಿನಲ್ಲೇ ಇರುವುದಾದರೂ ಅದನ್ನು ನಮ್ಮಂತಹ ಸಾಮಾನ್ಯ ಜನರಿಗೂ ಮನದಟ್ಟಾಗುವಂತೆ ಮಾಡಿಕೊಟ್ಟ ಮಹನೀಯರೆಂದರೆ, ಶ್ರೀ ಗೌಡಪಾದಾಚಾರ್ಯರು, ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ಸುರೇಶ್ವರಾಚಾರ್ಯರೇ. ಇನ್ನೂ ಕೆಲವರನ್ನು ಆಚಾರ್ಯರು ಪರಾಮರ್ಶಿಸಿದ್ದಾರಾದರೂ, (ಉದಾ॥ ದ್ರವಿಡಾಚಾರ್ಯರು, ಉಪವರ್ಷಾಚಾರ್ಯರು ಮುಂತಾದವರು) ಅವರ ಗ್ರಂಥಗಳು ಈಗ ಉಪಲಭ್ಯವಿಲ್ಲ. ಹಾಗಾಗಿ ನಾವು ಈ ಮೇಲೆ ಹೇಳಿದ ಮೂವರನ್ನೇ ವೇದಾನ್ತಪ್ರಪಂಚದ ವಿಚಾರದ ಪ್ರಾಮಾಣ್ಯಸ್ತಂಭಕ್ಕೆ ಆಧಾರವಾಗಿಟ್ಟುಕೊಳ್ಳಬೇಕಾಗುತ್ತದೆ. ಈ ಮೂವರಲ್ಲೂ ಸೈದ್ಧಾಂತಿಕ ವಿಚಾರದಲ್ಲೂ ಸಾಧನ ವಿಚಾರವನ್ನು ಹೇಳುವ ವಿಷಯದಲ್ಲೂ ಮತ್ತು ಅನುಭವಯುಕ್ತಿಗಳನ್ನು ತೋರಿಸುವುದರಲ್ಲೂ ಯಾವುದೇ ಮತಭೇದವಿರುವುದಿಲ್ಲ.

ಆದರೆ ಬರುತ್ತಾ ಬರುತ್ತಾ ಈ ಅದ್ವೈತಸಂಪ್ರದಾಯದಲ್ಲೇ ಅನೇಕ ಕವಲು ಸೀಳು ದಾರಿಗಳು ಸೇರಿಕೊಂಡವು. ಇವರೆಲ್ಲರೂ ಅದ್ವೈತಿಗಳೆಂತಲೇ ಶ್ರೀಶಂಕರಾಚಾರ್ಯರ ಶಿಷ್ಯರು ಮತ್ತು ಅವರ ಪರಂಪರೆಯವರೆಂತಲೂ ಹೇಳಿಕೊಂಡು ಬಂದು ತಮ್ಮದೇ ಆದ ಎಷ್ಟೋ ಹೊಸ ವಿಚಾರಗಳನ್ನು (ಅನುಭವ ಯುಕ್ತಿ ಮತ್ತು ಭಾಷ್ಯಕ್ಕೆ ವಿರುದ್ಧವಾದವುಗಳನ್ನೂ) ಆಚಾರ್ಯರ ಅಭಿಪ್ರಾಯವೆಂತಲೇ ಬರೆದುಕೊಂಡು ಬಂದಿರುತ್ತಾರೆ. ಇವರಿಗೆ ಅರ್ವಾಚೀನವೇದಾನ್ತವ್ಯಾಖ್ಯಾನ ಪ್ರಸ್ಥಾನ ಎಂದು ಹೆಸರು. ಅವರು ಕೇವಲ ಮೂಲಾವಿದ್ಯಾ ವಿಚಾರವೊಂದೇ ಆಚಾರ್ಯರಿಗೆ ಭಿನ್ನವಾಗಿರುವುದು ಬಾಕಿ ಎಲ್ಲಾ ವಿಚಾರವೂ ಆಚಾರ್ಯರಿಗೆ ಒಪ್ಪಿಗೆಯಾಗಿರುವುದೆಂದು ಹೇಳುತ್ತಾರೆಂದು ತಿಳಿಯುವುದಕ್ಕಾಗುವುದಿಲ್ಲ. ಅನೇಕ ವಿಚಾರಗಳಲ್ಲಿ, ಉದಾಹರಣೆಗೆ ಸಾಧನೆಗಳ ವಿಚಾರ. ಪ್ರಕ್ರಿಯೆಗಳನ್ನು ಪ್ರತಿಪಾದನೆಮಾಡುವ ವಿಚಾರ, ಜೀವನ್ಮುಕ್ತನ ವಿಚಾರ ಮತ್ತು ಭಾಷ್ಯಾರ್ಥವನ್ನು ವಿವರಿಸುವ ರೀತಿ ಮುಂತಾದ ಬಹಳ ವಿಚಾರದಲ್ಲಿ, ಈ ವ್ಯಾಖ್ಯಾನಕಾರರು ಮುಗ್ಗರಿಸಿರುತ್ತಾರೆ. ಈ ವಿಚಾರವನ್ನು ಇನ್ನೂ ವಿವರವಾಗಿ ತಿಳಿದುಕೊಳ್ಳ ಬೇಕೆಂದುಕೊಂಡವರು ನಮ್ಮ ಶ್ರೀಶ್ರೀಗಳವರ **"ಪಂಚಪಾದಿಕಾಪ್ರಸ್ಥಾನಂ", "ವೇದಾನ್ತಪ್ರಕ್ರಿಯಾಪ್ರತ್ಯಭಿಜ್ಞಾ", "ಮಾಂಡೂಕ್ಯರಹಸ್ಯವಿವೃತಿಃ"** ಮುಂತಾದ ಸಂಸ್ಕೃತ ಗ್ರಂಥಗಳನ್ನೂ **"ಶಂಕರಸಿದ್ಧಾಂತ"** ಮತ್ತು ಸೂತ್ರಭಾಷ್ಯದ ಪಂಚಾಧಿಕರಣ ಗ್ರಂಥವನ್ನು ಓದಬೇಕು. ಶ್ರೀಶ್ರೀಗಳವರ ಪ್ರಸ್ಥಾನತ್ರಯ ಭಾಷ್ಯದ ಕನ್ನಡಾನುವಾದದ ಪೀಠಿಕೆಗಳನ್ನೂ, ಭಾಷ್ಯಾರ್ಥದ ಟಿಪ್ಪಣಿಗಳನ್ನೂ ನೋಡಿದರೆ ಈ ವ್ಯಾಖ್ಯಾನಕಾರರು ಎಷ್ಟೊಂದು ಶಾಂಕರಭಾಷ್ಯಾಭಿಪ್ರಾಯಕ್ಕೆ ಹೊರಚ್ಚಾಗಿದ್ದಾರೆಂದು ತಿಳಿದುಬರುತ್ತದೆ.

ಶ್ರೀಶ್ರೀಗಳವರ ಪ್ರಜ್ಞಾಪಾರಮಿತೆ ಎಂದರೆ ಅಗಾಧವಾದ ಮತ್ತು ವಿಶಾಲವಾದ ಅನಂತವಾದ ಪ್ರಜ್ಞೆ ಎಂದರ್ಥ. "ಪ್ರಜ್ಞೆ"ಯ ಎಂದರೆ ತಿಳಿವಳಿಕೆಯ (ಸಮುದ್ರದ) "ಪಾರ" ಎಂದರೆ ಆಚೆಯ ದಡವನ್ನು "ಇತ" ಮುಟ್ಟಿರುವ ಎಂದರ್ಥ. ಅದಕ್ಕೆ ಉದಾಹರಣೆ ಎಂದರೆ ಅವರ ಪ್ರಸ್ಥಾನತ್ರಯ ಭಾಷ್ಯದ ಗ್ರಂಥಗಳೆ ಆಗಿವೆ.

ಈಗ ಒಂದೊಂದಾಗಿ ಅದರ ಬಗ್ಗೆ ಯಥಾಮತಿಯಾಗಿ ಬರೆಯುತ್ತಾ ಹೋಗುವೆನು. ಪ್ರಧಾನವಾಗಿ ಬ್ರಹ್ಮಸೂತ್ರ ಭಾಷ್ಯದಲ್ಲಿ ಶ್ರೀಶ್ರೀಗಳವರು ಯಾವ ರೀತಿ ಬರೆದಿದ್ದಾರೆಂದರೆ – ಅಧ್ಯಾಸಭಾಷ್ಯ ಮತ್ತು ಚರ್ತುಸೂತ್ರಿಯವರೆಗೆ ಶ್ರೀಶಂಕರಾಚಾರ್ಯರ ಪ್ರತಿಯೊಂದು ವಾಕ್ಯಕ್ಕೇ ಎಂತಲೇ ಹೇಳಬಹುದು ಅಷ್ಟರ ಅಷ್ಟರಮಟ್ಟಿಗೆ ಬೇರೆಬೇರೆ ವ್ಯಾಖ್ಯಾನಕಾರರು ಏನೇನನ್ನು ಹೇಳುತ್ತಾರೆ, ಅದರಲ್ಲಿ ತಪ್ಪು ಏನು, ಎಂಬುದನ್ನು– ಪಂಚಪಾದಿಕಾ, ಭಾಮತಿ, ಆನಂದಗಿರಿಯವರ ನ್ಯಾಯನಿರ್ಣಯ, ಪಂಚಪಾದಿಕಾ ವಿವರಣೆ (ಅಖಂಡಾನಂದರ) ತತ್ತ್ವದೀಪ, (ಶ್ರೀ ಅಮಲಾನಂದರ) ಕಲ್ಪತರು, (ಭಾಸ್ಕರಾಚಾರ್ಯರು) ಮತ್ತು (ಅಪ್ಪಯ್ಯ ದೀಕ್ಷಿತರ) ಪರಿಮಳ ಮತ್ತು (ಶ್ರೀರಾಮಾನುಜಾಚಾರ್ಯರ) ಶ್ರೀಭಾಷ್ಯ ಇವುಗಳನ್ನೇ ಪ್ರಧಾನವಾಗಿಟುಕೊಂಡು – ವಿಮರ್ಶೆ ಮಾಡಿರುತ್ತಾರೆ. ಅನಂತರ ಪಂಚಾಧಿಕರಣದವರೆಗೆ ಎಂದರೆ ಈಕ್ಷತ್ಯಧಿಕರಣ ಮುಗಿಯುವ **"ಶ್ರುತತ್ವಾಚ್ಚ"** ಎಂಬ ಸೂತ್ರದವರೆಗೆ ಪಂಚಪಾದಿಕಾ ಭಾಮತ್ಯಾದಿಗಳ ಜೊತೆಗೆ ಮಧ್ವರಾಮಾನುಜರ ಅಭಿಪ್ರಾಯವನ್ನೂ ವಿಮರ್ಶಿಸಿದ್ದಾರೆ. ಅಲ್ಲಿಂದ ಮುಂದಕ್ಕೆ ಭಾಮತಿ, ವಿವರಣ, ರತ್ನಪ್ರಭಾ ಮತ್ತು ನ್ಯಾಯನಿರ್ಣಯಗಳೆಂಬ ವ್ಯಾಖ್ಯಾನಗ್ರಂಥವನ್ನೇ ಟಿಪ್ಪಣಿಗಳಲ್ಲಿ ತಪ್ಪು ಒಪ್ಪುಗಳನ್ನು

ಸೂಚಿಸುತ್ತಾ ಹೋಗಿರುತ್ತಾರೆ. ಮಧ್ವರಾಮಾನುಜರ ಗ್ರಂಥಗಳ ಪರಾಮರ್ಶೆಗಳು ಕಾಣಬರುವುದಿಲ್ಲ. ಸಾಂಖ್ಯ ವೈಶೇಷಿಕ ಮೀಮಾಂಸಾದಿಗ್ರಂಥಗಳ (ಮತಗಳು) ಪರಾಮರ್ಶೆಗಳು ಬಹಳವಾಗಿ ಕಂಡುಬರುತ್ತವೆ.

ಶ್ರೀಶ್ರೀಗಳವರು ಯಾರನ್ನೇ ವಿಮರ್ಶಿಸುವಾಗಲೂ ಪ್ರಸ್ಥಾನತ್ರಯ ಭಾಷ್ಯ, ಅನುಭವ, ಯುಕ್ತಿ ಇದರ ಆಧಾರದ ಮೇಲೆ ವಿಮರ್ಶಿಸಿರುವುದರಿಂದ ಯಾರಾದರೂ ಸರಿ ಅದನ್ನು ಓದಿದಾಗ ಶ್ರೀಶ್ರೀಗಳವರ ನಿರ್ಣಯವು ಸರಿಯಾಗಿದೆ ಎಂದು ಒಪ್ಪಿಕೊಳ್ಳಲೇಬೇಕು. ಉದಾಹರಣೆಗೆ:

1. ಬ್ರಹ್ಮಸೂತ್ರದ 1ನೇ ಭಾಗದ 85ನೇ ಭಾ. ಭಾಗದಲ್ಲಿ (**"ಸ್ವಾಪ್ಯಯಾತ್"** ಎಂಬ 1–1–9ನೇ ಸೂತ್ರದಲ್ಲಿ) ಭಾಷ್ಯಕಾರರು **"ಸ್ವಾತ್ಮನಿ ಪ್ರಲೀನ ಇವ...."** ಎಂದು ಬರೆದಿದ್ದಕ್ಕೆ ಶ್ರೀಮದದ್ವೈತಾನಂದಸ್ವಾಮಿಗಳು ಬರೆದಿರುವ **"ಬ್ರಹ್ಮವಿದ್ಯಾಭರಣ"** ಎಂಬ ಗ್ರಂಥದಲ್ಲಿ... **"ಸುಷುಪ್ತೌ.... ತಮೋರೂಪೋಪಾದೇರ್ವಿದ್ಯ ಮಾನತಯಾ ನಾತೀವಾಭೇದಾಭಿವ್ಯಕ್ತಿರಿತಿ ಇವ ಶಬ್ದೇನ ದ್ಯೋತ್ಯತೇ"** ಎಂದು ಬರೆದಿದ್ದಾರೆ! ಈ ವಾಕ್ಯದ ಅಭಿಪ್ರಾಯವೇನೆಂದರೆ–ಸುಷುಪ್ತಿಯಲ್ಲಿ ..... ತಮೋರೂಪವಾದ ಉಪಾಧಿಯು ಇರುತ್ತದೆಯಾದ್ದರಿಂದ ಸಂಪೂರ್ಣವಾಗಿ ಜೀವನು ಬ್ರಹ್ಮದೊಡನೆ ಸೇರಿರುವುದಿಲ್ಲ ಎಂಬುದನ್ನು **"ಇವ"** ಎಂಬ ಶಬ್ದವು ಹೇಳುತ್ತದೆ ಎಂದು ಅರ್ಥವನ್ನು ಮಾಡಿದೆ. ಅದಕ್ಕೆ ಶ್ರೀಶ್ರೀಗಳವರು ಟಿಪ್ಪಣಿಯಲ್ಲಿ ಏನು ಬರೆದಿದ್ದಾರೆಂದರೆ – **"ಸ್ವಂ ಅಪೀತಿ"** ಎಂಬ ಅರ್ಥವನ್ನು **"ಸ್ವಪಿತಿ"** ಎಂಬ ಮಾತಿನ ವ್ಯುತ್ಪತ್ತಿಯಿಂದ ತೋರಿಸಿರುತ್ತದೆ. ಇದು ನಿಜವಾದ ಲಯವನ್ನು ಹೇಳುವುದಕ್ಕಲ್ಲ. ವಿಶೇಷರೂಪವು ಇಲ್ಲವೆಂದು ತಿಳಿಸುವುದಕ್ಕೆ, ಇಲ್ಲಿ **"ಪ್ರಲೀನ ಇವ"** (ಲಯವಾದಂತೆ) ಎಂದು ಹೇಳಿರುವುದರಿಂದ ಸಂಪೂರ್ಣಲಯವಾಗುವುದಿಲ್ಲ ಎಂಬರ್ಥವನ್ನು ಕೆಲವರು ತೆಗೆದಿದ್ದಾರೆ. ಅದು **"ಭಾಷ್ಯವಿರುದ್ಧ"** ಎಂದು ಬರೆದಿದ್ದಾರೆ. ಭಾಷ್ಯಕಾರರು ಸ್ಪಷ್ಟವಾಗಿ **"ಸುಷುಪ್ತಿಕಾಲೇಽಯಂ ಜೀವಃ ಪರೇಣ ಬ್ರಹ್ಮಣಾ ಏಕತಾಂ ಗಚ್ಛತಿ" "ಬ್ರಹ್ಮೈವ ಹಿ ಸುಷುಪ್ತ್ಯವಸ್ಥಾ"** ಎಂಬುದಾಗಿ ಜೀವನು ಸುಷುಪ್ತಿಕಾಲದಲ್ಲಿ ಪರಮಾತ್ಮನೊಡನೆಯೇ ಒಂದಾಗಿರುತ್ತಾನೆಂದು ಭಾಷ್ಯಕಾರರು ಹೇಳಿದರೂ ಈ ವ್ಯಾಖ್ಯಾನಕಾರರು ಏತಕ್ಕೆ ಹೀಗೆ ವ್ಯಾಖ್ಯಾನ ಮಾಡುತ್ತಾರೆಂದು ಶ್ರೀಶ್ರೀಗಳವರು ಕಳವಳವನ್ನು ವ್ಯಕ್ತಪಡುಸುತ್ತಿದ್ದಾರೆ.

2. ಹಾಗೆಯೇ ಭಾ. ಭಾಗ 108ರಲ್ಲಿ ಭಾಷ್ಯಕಾರರು **"ಪ್ರಿಯಮೋದಾದಿವಿಶೇಷಸ್ಯ ಆನನ್ದಮಯಸ್ಯ ಸರ್ವಲೋಕಪ್ರಸಿದ್ಧತ್ವಾತ್"** (1–1–9) ಎಂಬಲ್ಲಿ **"ಪ್ರಿಯಮೋದಾದಿ ವಿಶೇಷದವನಾಗಿ ಆನಂದಮಯನು ಸರ್ವಲೋಕ ಪ್ರಸಿದ್ಧನಾಗಿದ್ದಾನೆ"** ಎಂಬ ಸ್ಥಳದಲ್ಲಿ **"ಆನಂದಮಯನೆಂದರೆ ಸುಷುಪ್ತಿಯಲ್ಲಿರುವ ಮೂಲಾಜ್ಞಾನವೆಂದು ಈಚಿನವರು ಕೆಲವು ವೇದಾನ್ತಿಗಳು ಅಭಿಪ್ರಾಯಪಡುತ್ತಾರೆ. ಆದರೆ ಇದು ತೈತ್ತಿರೀಯಭಾಷ್ಯದಲ್ಲಿಯೂ ಈ ಭಾಷ್ಯದಲ್ಲಿಯೂ ಇರುವ ಆನಂದಮಯ ವರ್ಣನೆಗೆ ತೀರವಿರುದ್ಧವೆಂಬುದು ಸುಸ್ಪಷ್ಟವಾಗಿರುತ್ತದೆ"** ಎಂದು ಗುರುಗಳು ಟಿಪ್ಪಣಿಯಲ್ಲಿ ಬರೆದಿರುತ್ತಾರೆ. ಅದೇತಕ್ಕೆ ಯಾರ ಅನುಭವದಲ್ಲೂ ಇಲ್ಲದ ಮೂಲಾಜ್ಞಾನವನ್ನು ಈ ವ್ಯಾಖ್ಯಾನಕಾರರು ತರುತ್ತಾರೋ ದೇವರೇ ಬಲ್ಲ! ಭಾಷ್ಯಕಾರರು ಸ್ಪಷ್ಟವಾಗಿ ಸರ್ವಲೋಕಪ್ರಸಿದ್ಧ ಎಂದು ಜಾಗ್ರತ್ತಿನಲ್ಲೇ ಈ ಆನಂದಮಯನು ತಿಳಿದುಬರುತ್ತಾನೆಂದು ಬರೆದರೂ ಹೀಗೇಕೆ ಬರೆಯುತ್ತಾರೊ! ಎಂಬುದು ಗುರುಗಳ ಆಶಯ.

3. ಭಾಷ್ಯ ಭಾಗ 364 (1–4–13)ರಲ್ಲಿ "ಅತಿರಾತ್ರೇ ವಚನಭೇದಾತ್ ಷೋಡಶಿನೋ ಗ್ರಹಣಾಗ್ರಹಣೇ ತದ್ವತ್" ಎಂಬ ಭಾಷ್ಯವಾಕ್ಯಕ್ಕೆ ವ್ಯಾಖ್ಯಾನಕಾರರು ಅತಿರಾತ್ರವು ಕ್ರಿಯೆಯಾದ್ದರಿಂದ ಅದರಲ್ಲಿ ವಿಕಲ್ಪವಾಗಬಹುದು. ವಸ್ತುವಿನ ವಿಷಯದಲ್ಲಿ ಹೇಗೆ? ಎಂಬ ಶಂಕೆಗೆ ದೃಷ್ಟಿಕ್ರಿಯೆಯಲ್ಲಿ ವಸ್ತುವಿಷಯವಾದ ವಿಕಲ್ಪವೂ ಆಗಬಹುದು ಎಂದು ನ್ಯಾ॥ ನಿ॥; "ಮನಸಾನುದ್ರಷ್ಟವ್ಯಂ (ಬೃ. 4–4–19) ಎಂಬುದು ಧ್ಯಾನಕ್ರಿಯೆಯಾದ್ದರಿಂದ ವಿಕಲ್ಪವೂ ಇರುಬಹುದು ಎಂದು ರ॥ ಪ್ರ॥ ಪರಿಹಾರವನ್ನು ಬರೆದಿದೆ. ಆದರೆ ಜ್ಞಾನದ ವಿಷಯಕ್ಕೆ ವಿಕಲ್ಪಕ್ಕೆ ಅವಕಾಶವಿಲ್ಲ. ದ್ರಷ್ಟವ್ಯಂ ಎಂಬುದು ಧ್ಯಾನಕ್ರಿಯೆಯೂ ಅಲ್ಲ. ದೃಷ್ಟಾಂತದಲ್ಲಿ ವಚನಭೇದದಿಂದ ಗ್ರಹಣಾಗ್ರಹಣಗಳು ಆಗುವಂತೆ ದಾರ್ಷ್ಟಾನ್ತಿಕದಲ್ಲಿ ಅಪೇಕ್ಷಾಭೇದದಿಂದ ಜ್ಯೋತಿಯನ್ನು ಸೇರಿಸುವುದೂ ಬಿಡುವುದೂ ಆಗಬಹುದು ಎಂದಿಷ್ಟೇ ಭಾಷ್ಯಕಾರರ ಅಭಿಪ್ರಾಯವೆಂದು ತೋರುತ್ತದೆ..... ಎಂದು ಶ್ರೀಶ್ರೀಗಳವರು ಸೂಕ್ಷ್ಮೇಕ್ಷಿಕ ದೃಷ್ಟಿಯಿಂದ ಭಾಷ್ಯಕಾರರ ಹೃದಯವನ್ನು ತೋರಿಸಿರುತ್ತಾರೆ. ಇದು ಶಾಸ್ತ್ರಾರ್ಥಕ್ಕೆ ಹೊಂದುಗಡೆಯಾಗಿಯೂ ಇದೆ.

4. ಭಾಷ್ಯ ಭಾಗ 4–37ರಲ್ಲಿ (2–1–14) "ಕಥಂ ತು ಅಸತ್ಯೇನ ವೇದಾನ್ತವಾಕ್ಯೇನ ಸತ್ಯಸ್ಯ ಬ್ರಹ್ಮಾತ್ಮತತ್ತ್ವಸ್ಯ ಪ್ರತಿಪತ್ತಿರುಪಪದ್ಯತೇ? "ಅಸತ್ಯವಾದ ವೇದಾನ್ತವಾಕ್ಯದಿಂದ ಸತ್ಯವಾದ ಬ್ರಹ್ಮಾತ್ಮತತ್ತ್ವದ ಜ್ಞಾನವಾಗುವುದು ಹೇಗೆ? ಎಂಬೀವಾಕ್ಯಕ್ಕೆ ಭಾಮತೀ ವ್ಯಾಖ್ಯಾನದಲ್ಲಿ "ಬ್ರಹ್ಮಜ್ಞಾನವೆಂಬುದು ವೃತ್ತಿಯಾದರೆ ಅದು ಅನೃತವೇ ಆಗಿರುತ್ತದೆ. ಚೈತನ್ಯವಾದರೆ ಹುಟ್ಟುವುದೇ ಇಲ್ಲ. ಆದ್ದರಿಂದ ಈ ಆಕ್ಷೇಪಕ್ಕೆ ಎಡೆಇಲ್ಲ. ಆದರೂ ವೃತ್ತಿಜ್ಞಾನವು ಪಾರಮಾರ್ಥಿಕವೆಂದು ಇಟ್ಟುಕೊಂಡು ಆಕ್ಷೇಪಿಸಿದೆ" ಎಂದು ಬರೆದಿದೆ. ಆದರೆ ಶ್ರೀಶ್ರೀಗಳವರು ಈ ಭಾಷ್ಯವಾಕ್ಯಕ್ಕೆ ತಾತ್ಪರ್ಯವನ್ನು ಬಲುಸುಂದರವಾಗಿ ಬಣ್ಣಿಸಿದ್ದಾರೆ. ಹೇಗೆಂದರೆ – "ಬಾಧಿತವಾಗುವ ಸಾಧನವು ಅಬಾಧಿತವಾದ ಕಾರ್ಯವನ್ನುಂಟುಮಾಡಬಹುದೇ? ಬ್ರಹ್ಮಜ್ಞಾನವು ಬಾಧಿತವಲ್ಲ, ವಾಕ್ಯಪ್ರಾಮಾಣ್ಯವು ಬಾಧಿತವಾಗತಕ್ಕದ್ದು. ಹೀಗಿರುವಲ್ಲಿ ವಾಕ್ಯದಿಂದ ಜ್ಞಾನವು ಹೇಗೆ ಉಂಟಾದೀತು? ಎಂಬುದು ಆಕ್ಷೇಪಕನ ಭಾವವೆಂದು ತಿಳಿಸಿದ್ದಾರೆ!

ಹಾಗೆಯೇ – "ಶಙ್ಕಾ ವಿಷಾದಿನಿಮಿತ್ತಮರಣಾದಿಕಾರ್ಯೋಪಲಬ್ದೇಃ" ಅದೇ ಭಾಷ್ಯಭಾಗದ ವಾಕ್ಯಕ್ಕೆ ಭಾಮತೀಕಾರರು "ವಿಷದ ಶಙ್ಕೆಯಿಂದಾದ ಭಯವೂ ಸತ್ಯ, ಮರಣವೂ ಸತ್ಯ; ಆದ್ದರಿಂದ ಅದನ್ನು ದೃಷ್ಟಾಂತವಲ್ಲ ಎನ್ನಬಾರದು. ಏಕೆಂದರೆ ಭಯಕ್ಕೆ ಹೇತುವಾದ ಸರ್ಪವು ಅಥವಾ ಅದರ ಜ್ಞಾನವು ಅಸತ್ಯ" ಎಂದು ವರ್ಣಿಸಿರುತ್ತಾರೆ. ಆದರೆ ಶ್ರೀಶ್ರೀಗಳವರು "ಹಾವಿಲ್ಲದಿದ್ದರೂ ಅದರ ಜ್ಞಾನ, ವಿಷವಿಲ್ಲದಿದ್ದರೂ ಅದರ ಶಂಕೆ, ಎಂಬ ಕಾರ್ಯವೂ ಅದರಿಂದ ಮರಣವೂ ಆಗುವುದೆಂಬುದೇ ದೃಷ್ಟಾಂತವು ಎಂದಿಟ್ಟುಕೊಂಡರೆ ಸಾಕೆಂದು ತೋರುತ್ತದೆ ಎಂದು ಬರೆಯುತ್ತಾ ಎಷ್ಟೊಂದು ಸರಳವಾಗಿ ದ್ರಷ್ಟಾಂತವನ್ನು ಸ್ಪಷ್ಟಪಡಿಸಿರುತ್ತಾರೆ; ನೋಡಿ!

ಅದರಂತೆ ಅದೇ ಭಾಷ್ಯಭಾಗದ ಇನ್ನೊಂದು ಭಾಷ್ಯವಾಕ್ಯಕ್ಕೆ "ನ ಹಿ ಸ್ವಪ್ನಾದುತ್ಥಿತಃ..... ತದವಗತಿಮ ಮಿಥ್ಯಾ ಇತಿ ಮನ್ಯತೇ ಕಶ್ಚಿತ್" ಎಂಬ ವಾಕ್ಯಕ್ಕೆ ಭಾಮತಿಕಾರರು "ಅನಿರ್ವಾಚ್ಯರೂಪಿತವಾದ ಜ್ಞಾನವೂ

ಅನಿರ್ವಾಚ್ಯವೆನ್ನುವುದು ಯುಕ್ತವಾದರೂ ಲೋಕದ ಜನರ ಬುದ್ಧಿಯಿಂದ ಇದನ್ನು ಹೇಳಿದೆ" ಎಂದು ತಮ್ಮ ಅತಿಬುದ್ಧಿಯನ್ನು ತೋರಿಸಿದ್ದಾರೆ. ಆದರೆ ಹಾವು ಕಚ್ಚಿದ ಜ್ಞಾನ, ಸ್ನಾನ ಮಾಡಿದ ಜ್ಞಾನ ಇವು ಎಚ್ಚರದಲ್ಲಿಯೂ ಬಾಧಿತವಾಗುವುದಿಲ್ಲವೆಂದಿಷ್ಟೇ ಇಲ್ಲಿ ಅಭಿತಪ್ರೇತವಾಗಿದೆ ಎಂದು ಶ್ರೀಶ್ರೀಗಳವರು ಬಲುಸುಂದರವಾಗಿ ಸರಳವಾಗಿ ದೃಷ್ಟಾನ್ತವನ್ನು ವಿಶದಿಪಡಿಸಿರುತ್ತಾರೆ.

ಈ ರೀತಿಯಾಗಿ ನಾನು ಕೆಲವನ್ನು ಮಾತ್ರ ಉದಾಹರಣೆಯಾಗಿ ತೆಗೆದುಕೊಂಡು ತೋರಿಸಿರುತ್ತೇನೆ. ಆದರೆ ಇನ್ನೂ ಅನೇಕ ಸ್ಥಳದಲ್ಲಿ ಭಾಷ್ಯದ ವಾಕ್ಯಾರ್ಥವನ್ನು ಸ್ಪಷ್ಟಪಡಿಸುವಾಗ ದೃಷ್ಟಾನ್ತವನ್ನು ವಿವರಿಸುವಾಗ ವ್ಯಾಖ್ಯಾನ ಗ್ರಂಥದಲ್ಲಿ ತೀರವಿಲಕ್ಷಣವಾದ ವಿಚಿತ್ರವಾದ ಅಭಿಪ್ರಾಯವನ್ನು ಭಾಷ್ಯಕ್ಕೆ ತೆಗೆದಿರುತ್ತಾರೆ. ವಾಚಕರಿಗೆ ಇನ್ನೂ ಅವುಗಳನ್ನು ನೋಡಬೇಕೆಂದು ಕುತೂಹಲವಿದ್ದರೆ ನಾನು ಸೂತ್ರಭಾಷ್ಯದ ಕೆಲವು ಭಾಷ್ಯಭಾಗಗಳನ್ನು ತೋರಿಸುತ್ತೇನೆ. ಇನ್ನು ಬೃಹದಾರಣ್ಯಕ, ಛಾಂದೋಗ್ಯ ಮಾಂಡೂಕ್ಯಾದಿ ಉಪನಿಷದ್ಭಾಷ್ಯಗಳ ಶ್ರೀಶ್ರೀಗಳವರ ಟಿಪ್ಪಣಿಗಳನ್ನು ನೋಡಿದರೆ ಎಲ್ಲೆಲ್ಲಿ ಹೇಗೆ ಹೇಗೆ ಬರೆದಿದ್ದಾರೆಂಬುದನ್ನು ಕಾಣಬಹುದು. ಸದ್ಯಕ್ಕೆ ಸೂತ್ರಭಾಷ್ಯದ ಮೊದಲನೆಯ ಭಾಗದಭಾಷ್ಯಭಾಗವನ್ನು ನೋಡಿರಿ. 120 ಭಾ.ಭಾ. 132ರ ಅಪರ ಆಹ, 144, 201, 204, 207, 269, 339, 341, 353, 356, 357, 359, 363, 376, 388, 411, 425, 437, 442, 464, 471, ಹಾಗೇಯೇ ಸೂ.ಭಾ. ಎರಡನೇ ಭಾಗದಲ್ಲಿ ಭಾ.ಭಾ. 9, 22, 37, 40, 61, 94, 150, 151, 168, 172, 203, 212, 254, 266, 272, 275, 310, 323, 333, 366, 471, 520, 597, 605 ಈ ಸ್ಥಳದ ಟಿಪ್ಪಣಿಯಲ್ಲಿ ಗುರುಗಳು ಆ ವ್ಯಾಖ್ಯಾನಕಾರರ ಅಭಿಪ್ರಾಯವನ್ನು ವಿಮರ್ಶಿಸಿದ್ದಾರೆ. ಆದರೆ ಎಲ್ಲಾ ಸ್ಥಳಗಳಲ್ಲೂ ಈ ವ್ಯಾಖ್ಯಾನಕಾರರನ್ನು ನಿರಾಕರಣೆ ಮಾಡಿದ್ದಾರೆಂದೇನಲ್ಲ, ಎಷ್ಟೋ ಕಡೆಗಳಲ್ಲಿ ಅವರ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ! ಭಾ.ಭಾ. 43ರಲ್ಲಿ ಬೌದ್ಧರ ಪ್ರತೀತ್ಯ ಸಮುತ್ಪಾದವನ್ನು ಭಾಮತಿಯಿಂದಲೇ ಗುರುಗಳು ವರ್ಣಿಸಿರುತ್ತಾರೆ. ಭಾ.ಭಾ. 22ರಲ್ಲಿ ಸೂತ್ರದ ತಾತ್ಪರ್ಯವನ್ನು ಭಾಮತಿಯಿಂದ ಸಂಗ್ರಹಿಸಿದ್ದಾರೆ. ಅಲ್ಲೇ "ಯದಾಪಿ ದ್ವೇ ದ್ವ್ಯಣುಕೇ..... ಆರಂಭಕತ್ವಂ" ಎಂಬ ಭಾಷ್ಯವಾಕ್ಯಕ್ಕೆ ದೊಡ್ಡದಾದ ಭಾಮತಿ, ರತ್ನಪ್ರಭಾ ಪ್ರಕಟಾರ್ಥಕಾರರ ಅಭಿಪ್ರಾಯದ ಟಿಪ್ಪಣಿಯನ್ನು ಬರೆದಿರುತ್ತಾರೆ. ಹೀಗಾಗಿ ಗುರುಗಳಿಗೆ ಯಾವ ವ್ಯಾಖ್ಯಾನಕಾರರಲ್ಲೂ ಮಾತ್ಸರ್ಯವಿಲ್ಲ, ಎಷ್ಟೋ ಸಂದರ್ಭಗಳಲ್ಲಿ ಅವರಿಂದ ಉಪಕಾರವನ್ನೂ ಪಡೆದಿದ್ದಾರೆ. ಆದರೆ ಭಾಷ್ಯಾಭಿಪ್ರಾಯಕ್ಕೆ ಭಿನ್ನವೆಂದು ತೋರಿದ ಸ್ಥಳದಲ್ಲಿ ಸಂಕೋಚವಿಲ್ಲದೇ ವಿಮರ್ಶೆಮಾಡಿರುತ್ತಾರೆ.

ಇನ್ನೂ ವಿಶೇಷವಾಗಿ ಶ್ರೀಗಳವರ ಪ್ರಜ್ಞಾಪಾರಮ್ಯತೆಯನ್ನು ನೋಡಬೇಕಾದರೆ ವೇದಾನ್ತಪ್ರಕ್ರಿಯಾ ಪ್ರತ್ಯಭಿಜ್ಞಾ ಎಂಬ ಗ್ರಂಥದಲ್ಲಿ ಭಾಮತೀಪ್ರಸ್ಥಾನಪರೀಕ್ಷಾ, ಪಂಚಪಾದಿಕಾಪ್ರಸ್ಥಾನ ಪರೀಕ್ಷಾ, ವಿವರಣ ಪ್ರಸ್ಥಾನಾದಿ ಪರೀಕ್ಷೆಯನ್ನು ಸಂಸ್ಕೃತವನ್ನು ಬಲ್ಲವರು ಓದಬೇಕು. ಹಾಗೆಯೇ ವೇದಾನ್ತವಿಚಾರದಇತಿಹಾಸ ಎಂಬ ಗ್ರಂಥವನ್ನೂ, ಬ್ರಹ್ಮಸೂತ್ರದ ಪಂಚಾಧಿಕರಣದ ಎರಡನೇ ಪರಿಶಿಷ್ಟವನ್ನೂ ಓದಬೇಕು.

ಇಂದಿನ ಮುಮುಕ್ಷುಗಳಿಗೆ ಸರಳವಾದ ಸುಲಭವಾದ ವೇದಾನ್ತ ಗ್ರಂಥಗಳೆಂದರೆ ಶ್ರೀಶ್ರೀಗಳವರದ್ದೇ ಆಗಿದೆ. ಸಾಮಾನ್ಯ ಸಂಸ್ಕೃತಜ್ಞರೂ ಸಹ ಶ್ರೀಶ್ರೀಗಳವರ ಭಾಷ್ಯನುವಾದವನ್ನು ಅನುಸರಣೆ ಮಾಡಿದರೆ

ಪ್ರಸ್ಥಾನತ್ರಯ ಭಾಷ್ಯವನ್ನೂ ಸಹ ಅಭ್ಯಾಸವನ್ನು ಮಾಡಿ ಕಾಲಕ್ರಮದಲ್ಲಿ ಜಿತಮಾಡಿಕೊಳ್ಳಬಹುದು. ಭಾಷ್ಯಾರ್ಥದ ಮರ್ಮವು ಗೊತ್ತಾಗುವುದಕ್ಕಾಗಿ ಟಿಪ್ಪಣಿಗಳನ್ನು ಬರೆದದ್ದಲ್ಲದೇ ಉಪನ್ಯಾಸ ಮಂಜರಿಗಳಿಂದ ಇನ್ನೂ ಚೆನ್ನಾಗಿ ಉಪನಿಷತ್ತುಗಳ ಮತ್ತು ಭಾಷ್ಯದ ಅಭಿಪ್ರಾಯವನ್ನು ಮನದಟ್ಟು ಮಾಡಿಕೊಳ್ಳಬಹುದು. ಮುಮುಕ್ಷು ಜನರಿಗೆ ಶ್ರೀಶ್ರೀಗಳವರು ವರಪ್ರಾಯರಾಗಿದ್ದಾರೆ! ಶ್ರೀಶ್ರೀಗಳವರ ಕನ್ನಡ ಗ್ರಂಥವಾದ ಬ್ರಹ್ಮವಿದ್ಯೆ, ಶಾಂಕರವೇದಾನ್ತ ಪ್ರಕ್ರಿಯೆ; ಶಾಂಕರವೇದಾನ್ತ ಮೂಲತತ್ತ್ವಗಳು, ಅನುಭವಪರ್ಯನ್ತ ಆತ್ಮವಿಚಾರ ಈ ಗ್ರಂಥಗಳನ್ನು ಓದಿದರೆ ವೇದಾನ್ತದಲ್ಲಿ ಆಸಕ್ತಿ ಇಲ್ಲದವರಿಗೂ ಆಸಕ್ತಿಯನ್ನು ಹುಟ್ಟಿಸುತ್ತದೆ. ಆದ್ದರಿಂದ ನಿಜವಾದ ಮುಮುಕ್ಷುಗಳು ಶ್ರೀಶ್ರೀಗಳವರ ಗ್ರಂಥವನ್ನೇ ಓದಬೇಕು. ಅವರು ತೊರಿಸಿಕೊಟ್ಟ ಮಾರ್ಗವನ್ನು ಅನುಸರಿಸಿದರೆ ಖಂಡಿತವಾಗಿಯೂ ಶ್ರೇಯಸ್ಸಾಗುವುದರಲ್ಲಿ ಸಂಶಯವಿಲ್ಲ.

ಈ ಶತಮಾನದ ಸಂದರ್ಭದಲ್ಲಿ ಅವರ ಧವಳಕೀರ್ತಿಯನ್ನು ಪ್ರಚಾರಮಾಡುವುದು, ಅವರೇ ಸ್ಥಾಪಿಸಿರುವ ಅಧ್ಯಾತ್ಮಪ್ರಕಾಶಕಾರ್ಯಾಲಯದ ಪರಿಚಯವನ್ನು ಜನಸಾಮಾನ್ಯರಿಗೂ ಪರಿಚಯ ಮಾಡಿಸಿಕೊಡುವುದು, ಮತ್ತು ಜನಸಾಮಾನ್ಯರು ಈ ಸಂಸ್ಥೆಯಿಂದ ಏನೇನು ಲಾಭವನ್ನು ಪಡೆಯಬಹುದು ಎಂಬಿವೇ ಮುಂತಾದ ಅನೇಕ ಉದ್ದೇಶಗಳನ್ನಿಟ್ಟುಕೊಂಡು ಈ ಸ್ಮರಣಸಂಚಿಕೆಯನ್ನು ಬೆಳಕಿಗೆ ಈ ಸಂಸ್ಥೆಯ ಸದಸ್ಯರು ತರುತ್ತಲಿದ್ದಾರೆ. ಈ ಕೆಲಸವು ಯಶಸ್ವಿಯಾಗಲಿ. ಎಲ್ಲಾ ಜಿಜ್ಞಾಸುಗಳಿಗೂ ಈ ಸಂಸ್ಥೆಯಿಂದ ಪರಮಲಾಭ ಉಂಟಾಗಲಿ, ಶ್ರೀಶ್ರೀಗಳವರ ಆಶೀರ್ವಾದವು ನಮ್ಮೆಲ್ಲರಮೇಲೆ ನಿರಂತರ ಇರಲೆಂದು ಹರಸುತ್ತಾ ಈ ಲೇಖನವನ್ನು ಮುಗಿಸುವೆನು.

* * * * *

ಜ್ಞಾನ

1. ಆತ್ಮ ಜ್ಞಾನದ ಸ್ವರೂಪವು ಆತ್ಮನಿಗಿಂತ ಬೇರೆಯಾಗಿ ಮತ್ತೊಂದೇನೂ ಇಲ್ಲವೆನ್ನುವುದೇ. ವಿವೇಕಪ್ರಜ್ಞೆ ಎಂದರೆ ಮನಸ್ಸು ಮೊದಲಾದವುಗಳನ್ನು ಆತ್ಮನಿಗಿಂತ ಬೇರೆಯಾಗಿಲ್ಲವೆಂದು ತಿಳಿಯುವುದು. ತನ್ನ ನೆರಳನ್ನು ಕಂಡು ಅದು ತನಗಿಂತ ಬೇರೆಯಾಗಿಲ್ಲವೆಂದು ತಿಳಿಯುವಂತೆ. ನೆರಳು ಹೇಗೆ ಹೋಗಬೇಕಾಗಿಲ್ಲವೋ ಹಾಗೆ ಮನಸ್ಸು ಮೊದಲಾದವು ಗಳೆಲ್ಲಾ ಇಲ್ಲದಂತಾಗುವುದಲ್ಲ. ತೋರದಂತಾಗುವುದಲ್ಲ. ಇವೆಲ್ಲಾ ಆತ್ಮನೇ ಎಂದು ತಿಳಿಯುವುದು.

2. ದುಃಖವು ತಪ್ಪುವುದರಲ್ಲಿ ಎರಡು ವಿಧ. ಒಂದು ಬಿಡಿಸಿಕೊಳ್ಳುವುದು, ದುಃಖ ಸಂಯೋಗ ವಿಯೋಗ. ಇನ್ನೊಂದು ದುಃಖಕ್ಕೆ ಕಾರಣವಾದ ಪ್ರಕೃತಿಯನ್ನೂ ಪುರುಷರೂಪದಿಂದ ನೋಡುವುದು. ಇದೇ ಸ್ಥಿತಪ್ರಜ್ಞತೆ.

– ಶ್ರೀ ಸಚ್ಚಿದಾನಂದವಾಣಿ

ಶುದ್ಧಶಾಂಕರ ವೇದಾಂತ

– ಶ್ರೀ ಕೌವಲ್ಯಾನಂದಸರಸ್ವತೀಸ್ವಾಮಿಗಳು

ವೇದಾಂತ ಸಾಹಿತ್ಯಕ್ಷೇತ್ರಕ್ಕೆ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಕೊಡುಗೆ ಎಂದರೆ "ಶುದ್ಧ ಶಾಂಕರ ವೇದಾಂತವೇ" ಆಗಿದೆ.

"ಏಳಿರೇಳಿರಿ ಎಚ್ಚರಗೊಳ್ಳಿರಿ, ನೀವಿನ್ನು ಏಳಿರೇಳಿರಿ" ಎಂದು ಎಚ್ಚರಗೊಳಿಸಿರುತ್ತಾರೆ. "ಅಧ್ಯಾತ್ಮ ಗೀತಾವಳಿ"ಯಲ್ಲಿ ಯಾರನ್ನು ಎಚ್ಚರಗೊಳಿಸಿದ್ದಾರೆ? "ಅನಾದಿ ಮಾಯಯಾ ಸುಪ್ತಃ" ಅನಾದಿ ಮಾಯೆಯಲ್ಲಿ ನಿದ್ದೆ ಮಾಡುತ್ತಿರುವವರನ್ನು ಎಚ್ಚರಗೊಳಿಸಿರುತ್ತಾರೆ. ಅಷ್ಟೇ ಅಲ್ಲ. ಯಾರು ವೇದಾಂತಿಗಳೆಂದು ಶಾಂಕರ ಭಾಷ್ಯವನ್ನು ತಪ್ಪಾಗಿ ಅರ್ಥೈಸಿಕೊಂಡು ಮುಕ್ತರೆಂಬ ಭ್ರಮೆಯಲ್ಲಿದ್ದರೋ ಅವರನ್ನೂ ಎಚ್ಚರಿಸಿದ್ದಾರೆ. ಜೋಕೆ, ಕೆಡುವಿರಿ ಎಂದು ಜಾಗ್ರತಗೊಳಿಸಿದ್ದಾರೆ.

ಶ್ರೀಶ್ರೀಗಳು ಮಾಡಿದ ಮಹತ್ತರವಾದ ಕಾರ್ಯವನ್ನು ಅವರ ಶಿಷ್ಯರಾದ ಶ್ರೀ ದೇವರಾಯ ಕುಲಕರ್ಣಿಯವರು :

ಹಾದಿ ತಪ್ಪಿದವ್ಯಾಖ್ಯಾನಂಗಳ ।
ದೋಷವ ಧೈರ್ಯದಿ ಹೊರಗೆಳೆದಿ ॥
ಶೋಧಿಸಿ ವೇದಾಂತದ ಪರಿಶುದ್ಧಿಯ ।
ಶುದ್ಧ ಸಂಪ್ರದಾಯವ ತೋರಿಸಿದಿ ॥
ಭೋಧ ಕಾಲದಲೆ ಅನುಭವ ರೂಪದಿ ।
ಸಾಧಕರನು ನೆಲೆ ನಿಲ್ಲಿಸಿದಿ ॥ – ಎಂದಿರುತ್ತಾರೆ.

ಶ್ರೀಶ್ರೀ ಶಾಂಕರ ಭಾಷ್ಯಗಳ ನಂತರ ಶುದ್ಧವಾದ ವೇದಾಂತ ಸಾಹಿತ್ಯವೆಂದರೆ, ಇಡೀ ಪ್ರಪಂಚದಲ್ಲಿ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಯವರದೆಂದೇ ಹೇಳಬೇಕು ಸರಳವಾಗಿ ಸರ್ವರಿಗೂ ಅರ್ಥವಾಗುವುದು.

"ಮನುಷ್ಯನ ಮೂಲ ಭೂತ ಸಮಸ್ಯೆಯನ್ನು ಅವಿದ್ಯೆ, ಅಜ್ಞಾನ, ಇದು ಭಾವರೂಪ ವಸ್ತು – ರೂಪದಲ್ಲಿದೆ. ಜಗತ್ತಿಗೆ ಉಪದಾನಕಾರಣವಾಗಿದೆ" ಎಂದು ಕೆಲವರು ಹೇಳಿಕೊಂಡು ಬಂದಿದ್ದರು. ಮಡಕೆಗೆ ಮಣ್ಣು ಉಪಾದಾನವಾದಂತೆ, ಇದೇ ಸರಿಯಾದ ವ್ಯಾಖ್ಯಾನವೆಂದು ತೆಗೆದುಕೊಂಡಲ್ಲಿ ಜ್ಞಾನದಿಂದ ಅಜ್ಞಾನವನ್ನು ವಸ್ತುರೂಪವಾಗಿರುವುದನ್ನು ತೆಗೆಯಲಾಗದು. ಇಂತಹ ವಸ್ತು ಎಂದು ಅರ್ಥ ಮಾಡಿಕೊಳ್ಳಬಹುದು. ಆದರೆ ಶ್ರೀಶ್ರೀಗಳು ಇದನ್ನೂ ಒಪ್ಪಲಿಲ್ಲ. ಶಂಕರ ಭಾಷ್ಯದಲ್ಲಿ

ಯದಿ ಜ್ಞಾನಾಭಾವೋ ಯದಿ ಸಂಶಯಜ್ಞಾನಮ್, ಯದಿ ವಿಪರೀತ ಜ್ಞಾನಂ ವಾ ಉಚ್ಯತೇ ।
ಅಜ್ಞಾನಮ್ ಇತಿ ಸರ್ವಂ ಹಿ ತತ್ ಜ್ಞಾನೇನೈವ ನಿವರ್ತ್ಯತೇ ॥ ಬೃ. ಭಾ. 3–3–1,32

(ಆತ್ಮ ಸ್ವರೂಪದ ಬಗ್ಗೆ) ಅಗ್ರಹಣ, ಸಂಶಯ, ವಿಪರೀತ ಜ್ಞಾನ (ಮಾನಸಿಕ ಪ್ರತ್ಯಯ ರೂಪದಲ್ಲಿರು ವುದರಿಂದ) ಆತ್ಮೈಕತ್ವ ವಿದ್ಯೆಯಿಂದಲೇ ತೊಲಗುವವು ಎಂಬುದನ್ನು ಶ್ರೀಶ್ರೀಗಳು ತಮ್ಮ ಸಾಹಿತ್ಯದಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿಸಿರುತ್ತಾರೆ.

ಶ್ರೀಶ್ರೀಗಳು ತಮ್ಮ ಸಾಹಿತ್ಯದಲ್ಲಿ, ಉಪದೇಶದಲ್ಲಿ ಶಾಸ್ತ್ರೀಯವಾದ **'ಅಧ್ಯಾರೋಪಾಪವಾದ'** ಭೋಧನಾ ಕ್ರಮವನ್ನು ಅನುಸರಿಸಿರುತ್ತಾರೆ. ಅಜ್ಞಾನಿಯು ಆತ್ಮನಲ್ಲಿ ಮಾಡಿಕೊಂಡಿರುವ ವಿಕಲ್ಪಗಳಲ್ಲಿ ಒಂದನ್ನು ತೆಗೆದುಕೊಂಡು, ಅದಕ್ಕಿಂತಲೂ ಉನ್ನತವಾದ ಮತ್ತೊಂದು ವಿಕಲ್ಪವನ್ನು ತೋರಿಸಿ ಮೊದಲನೆಯ ವಿಕಲ್ಪ ತಾನಲ್ಲವೆಂಬುದನ್ನು ಅನುಭವದಲ್ಲಿ ತೋರಿಸಿಕೊಡುವುದು – ಈ ಭೋದನಾ ಕ್ರಮವು. ಇದೇ ರೀತಿ ಎಲ್ಲ ವಿಕಲ್ಪಗಳನ್ನು ತೆಗೆದುಹಾಕಿ ಸ್ವಸ್ವರೂಪದಲ್ಲಿ ಉಳಿಸುವುದು ಕ್ರಮವು. ಶ್ರೀಶ್ರೀಗಳ ಉಪದೇಶ, ವೇದಾಂತ ಸಾಹಿತ್ಯವೆಂದರೆ ಈ ವಿಶಿಷ್ಟತೆಯಿಂದ ಕೂಡಿದೆ.

ಶ್ರೀಶ್ರೀಗಳು ತಮ್ಮ ಸಾಹಿತ್ಯವನ್ನು **"ಸಾರ್ವತ್ರಿಕ ಪೂರ್ಣಾನುಭವದಲ್ಲಿ"** ತುಂಬಿರುತ್ತಾರೆ. ಎಲ್ಲ ದೇಶ, ಕಾಲ, ಮತ, ಎಲ್ಲ ವಯಸ್ಸಿನವರ, ಸರ್ವ ಲಿಂಗದವರ ಅನುಭವವನ್ನೂ ತೆಗೆದುಕೊಂಡು ಉಪದೇಶ ಮಾಡಿರುತ್ತಾರೆ. ಇಲ್ಲಿ ಅನುಭವವೆಂದರೆ, ಇಂದ್ರಿಯ, ಮನೋನುಭವವಲ್ಲದೆ ಮಾನವನಲ್ಲಿ ಮತ್ತೊಂದು ಅನುಭವವಿದೆ. ನಿದ್ದೆ ಚೆನ್ನಾಗಿ ಮಾಡಿದೆ, ಹಾಯಾಗಿ ನಿದ್ದೆ ಮಾಡಿದೆ ಎಂದಾಗ ಅದು ಇಂದ್ರಿಯಾನುಭವವಲ್ಲ, ಮನಸ್ಸಿನ ಅನುಭವವಲ್ಲ. ನಿನ್ನೆಯ ರಾತ್ರಿ ಕನಸನ್ನು ನೋಡಿದೆ ಎಂದಾಗ ಇಂದ್ರಿಯಗಳ ಸಹಾಯದಿಂದ ನೋಡಲಿಲ್ಲ. ಎಚ್ಚರದ ಮನಸ್ಸಿನಿಂದಲೂ ನೋಡಲಿಲ್ಲ. ನಿದ್ದೆ ಕನಸನ್ನು ಇಂದ್ರಿಯ ಮನಸ್ಸಿನ ಸಹಾಯವಿಲ್ಲದೆ ಅನುಭವಿಸಿರುತ್ತಾನೆ. ಅವುಗಳ ಪ್ರಮೇಯವಿಲ್ಲದ ಅನುಭವ. ಈ ಅನುಭವ ಸ್ವರೂಪದ ಆಧಾರದ ಮೇಲೆ ಗ್ರಂಥಗಳಲ್ಲಿ ಸ್ಪಷ್ಟ ಉಪದೇಶವಿರುವದು. ಈ ಅನುಭವ ಆಧಾರಿತ ಉಪದೇಶದಿಂದ ಇಡೀ ಪ್ರಪಂಚ ನಾನೇ ಎಂಬ ಅದ್ವೈತ ಸುಲಭಸಾಧ್ಯ. ಉಪನಿಷತ್ ತಿಳಿಸುವ ತತ್ತ್ವವನ್ನು ಶಂಕರ ಭಾಷ್ಯದ ಬೆಳಕಿನಲ್ಲಿ ಅಧ್ಯಯನ, ಚಿಂತನ ನಡೆಸಿರುವುದರಿಂದ **"ದುಃಖ ನಿವೃತ್ತಿ, ಶಾಶ್ವತಾನಂದ ಪ್ರಾಪ್ತಿ"**ಯು ಪ್ರತಿಯೊಬ್ಬರಿಗೂ ಶ್ರೀಶ್ರೀಗಳ ಸಾಹಿತ್ಯ ಅಧ್ಯಯನದಿಂದ ಸುಲಭಸಾಧ್ಯ.

ಸ್ವಾಮಿಗಳ ಸಾಹಿತ್ಯವು ಕನ್ನಡ, ಇಂಗ್ಲೀಷು, ಸಂಸ್ಕೃತ ಭಾಷೆಗಳಲ್ಲಿ ಲಭ್ಯ. ತೆಲುಗು ಭಾಷೆಗೂ ಶ್ರೀಶ್ರೀಗಳ ಸಾಹಿತ್ಯದ ಕೆಲವು ಗ್ರಂಥಗಳು ಅನುವಾದವಾಗಿದೆ. (ತೆಲುಗು ಗ್ರಂಥಗಳು **"ಅಧ್ಯಾತ್ಮ ಪ್ರಚಾರ** ಸೇವಾ ಸಂಘಮು, ರಾಯದುರ್ಗ ಇವರಲ್ಲಿ ಲಭ್ಯ.)

"ಮುಮುಕ್ಷುಗಳೇ ಶ್ರೀಶ್ರೀ ಸಚ್ಚಿದಾನಂದೇಂದ್ರಸ್ವಾಮಿಗಳ ಸಾಹಿತ್ಯವನ್ನು ಅಧ್ಯಯನ ಮಾಡಿ ತಾವುಗಳು ಜೀವಂತರಾಗಿರುವಾಗಲೇ ಮುಕ್ತರಾಗಿ. ಆನಂದ ಜೀವನ ಸಾಧ್ಯ".

* * * * *

ಒಂದು ಅನುಪಮ ಆಧ್ಯಾತ್ಮಿಕ ಅಭಿಯಾನ
ಅಧ್ಯಾತ್ಮಪ್ರಕಾಶ ಕಾರ್ಯಾಲಯ

– ಎಸ್.ಆರ್. ರಾಮಸ್ವಾಮಿ

ಅಧ್ಯಾತ್ಮಜ್ಞಾನಪ್ರಸಾರದ ಏಕೈಕ ಉದ್ದೇಶದಿಂದ ಅಮೂಲ್ಯ ಅನುವಾದಗ್ರಂಥಗಳ ಪ್ರಕಟನೆ, ಪಾಠಪ್ರವಚನಗಳು, ವೇದಾಂತ ಶಿಬಿರಗಳು, ವೇದಾಂತ ಶಾಸ್ತ್ರಸಂಬಂಧಿತ ಸಂಶೋಧನೆ, ಆಸ್ತಿಕ ಸಮುದಾಯದಲ್ಲಿ ವೇದಾಂತಾಸಕ್ತಿಯನ್ನು ಉದ್ದೀಪಿಸಿ ಜಾಗೃತವಾಗಿರಿಸುವ ದೃಷ್ಟಿಯಿಂದ 'ಅಧ್ಯಾತ್ಮ ಪ್ರಕಾಶ' ಹೆಸರಿನ ಮಾಸಪತ್ರಿಕೆಯ ಪ್ರಕಟನೆ – ಈ ಹಲವು ಮುಖಗಳಲ್ಲಿ ಕಳೆದ ನೂರು ವರ್ಷಗಳುದ್ದಕ್ಕೂ ನಿರಂತರ ನಡೆದಿರುವ ಒಂದು ಅನುಪಮ ವೇದಾಂತಾಭಿಯಾನ ಕರ್ನಾಟಕದ 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ' ಸಂಸ್ಥೆಯದು. ಇಡೀ ದೇಶದಲ್ಲಿಯೇ ಅನನ್ಯವೆನ್ನಬಹುದಾದ ಈ ಸಂಸ್ಥೆಯ ಸ್ಥಾಪನೆಯ ಶತಮಾನೋತ್ಸವದ ವರ್ಷ ಇದೀಗ ನಡೆದಿದೆ (ಸ್ಥಾಪನೆ: 1920).

ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸವೆಂದರೆ ಅದರ ಸ್ಥಾಪಕರೂ ಸ್ಫೂರ್ತಿಕೇಂದ್ರವೂ ಆಗಿದ್ದ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ (5.1.1880–5.8.1975) ಜೀವಿತವೃತ್ತವೇ ಆಗುತ್ತದೆ. 'ಅಭಿನವಶಂಕರ'ರೆಂದೇ ತಮ್ಮ ಸಮಕಾಲೀನ ಧೀಮಂತರಿಂದ ಕೀರ್ತಿತರಾಗಿದ್ದವರು ಮಹಾಸ್ವಾಮಿಗಳು (ಪೂರ್ವಾಶ್ರಮದಲ್ಲಿ 'ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮಾ').

ವೇದಾಂತದ ಸಮ್ಯಗ್‌ದರ್ಶನಕ್ಕಾಗಿ

ಒಂದು ದೃಷ್ಟಿಯಿಂದ ನೋಡಿದರೆ ಅಧ್ಯಾತ್ಮವೆಂಬುದು ಭಾರತಕ್ಕೆ ಸೀಮಿತವಾದುದೇನಲ್ಲ. ಜಗತ್ತಿನ ವಿವಿದೆಡೆಗಳಲ್ಲಿ ಪರಮಾರ್ಥಪ್ರವೃತ್ತಿಯ ಸಾಧಕರಿಂದ ಅಧ್ಯಾತ್ಮಚಿಂತನೆ ಹಿಂದಿನಿಂದ ನಡೆದಿರುವುದುಂಟು. ಆದರೆ ಸರ್ವಂಕಷವೆನ್ನಬಹುದಾದ ಅಧ್ಯಾತ್ಮದರ್ಶನವು ಲಭ್ಯವಿರುವುದು ಉಪನಿಷದ್‌ವಾಙ್ಮಯದಲ್ಲಿ. ವೇದಾಂತದ ಹೆಸರಿನಲ್ಲಿ ಭಾರತದಲ್ಲಿ ಜನಸಾಮಾನ್ಯರ ನಡುವೆ ಪ್ರಚಲಿತವಿರುವ ಅಧ್ಯಾತ್ಮಚಿಂತನೆಯಲ್ಲಿ ಹಲವೊಮ್ಮೆ ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ ಮೊದಲಾದ ತತ್ತ್ವಗಳಲ್ಲಿ ಯಾವುದೋ ಒಂದೋ ಎರಡೋ ಪ್ರಾಧಾನ್ಯ ಪಡೆದಿರುವುದನ್ನು ಕಾಣಬಹುದು. ಅಂತಹ ಮಂಡನೆಗಳ ಸಾಧುತ್ವವನ್ನಾಗಲಿ ಉಪಯುಕ್ತತೆಯನ್ನಾಗಲಿ ಅಲ್ಲಗಳೆಯಲಾಗದು. ಅಂತಹ ಮಂಡನೆಗಳು ಅಸಮಗ್ರವೆನಿಸುವ ಸಂಭವವಿರುವುದರ ಹಿನ್ನೆಲೆಯಲ್ಲಿ ಸಮ್ಯಗ್‌ದರ್ಶನದ ಅಪೇಕ್ಷೆಯುಂಟಾಗುತ್ತದೆ. ಈ ಅಪೇಕ್ಷೆಯ ಈಡೇರಿಕೆಯು ಉಪನಿಷದಾಧಾರಿತ ಅರಿವಿನಿಂದ ಮಾತ್ರ ಶಕ್ಯವಾಗಬಲ್ಲದು.

ಎರಡನೆಯದಾಗಿ ಭಾರತೀಯ ತತ್ತ್ವಶಾಸ್ತ್ರದ ಬೆಳವಣಿಗೆಯಲ್ಲಿ ಮೀಮಾಂಸಾ ಮೊದಲಾದ ವೇದಾಂತೇತರ ದರ್ಶನಗಳ ಕೊಡುಗೆಗಳು ಗಣನೀಯವೇ ಆಗಿವೆ. ಅವುಗಳ ಪ್ರಧಾನಾಂಶಗಳ ಸ್ವಲ್ಪಮಟ್ಟಿನ ಪರಿಚಯವಾದರೂ ಜಿಜ್ಞಾಸುಗಳಿಗೆ ಇರುವುದೂ ಪ್ರಯೋಜನಕರ. ಅವುಗಳ ಅನೇಕ ಪ್ರಸ್ತಾವಗಳು ವೇದಾಂತಶಾಸ್ತ್ರದ ಮಾರ್ಗದಲ್ಲಿ ಎದುರಾಗುತ್ತವೆ. ಆದುದರಿಂದ ಅವನ್ನು ಕುರಿತ ಯಥಾರ್ಥ ಗ್ರಹಿಕೆಯೂ ಅವಶ್ಯವಾಗುತ್ತದೆ.

ಮೂರನೆಯದಾಗಿ ಸ್ವ–ವ್ಯಾಸಂಗದ ಕ್ಷಮತೆ ಇರುವವರಿಗೆ ಸಾಧ್ಯವಾದಷ್ಟುಮಟ್ಟಿಗೆ ವೇದಾಂತದರ್ಶನದ ಮೂಲಗ್ರಂಥಗಳನ್ನು ಮೂಲರೂಪದಲ್ಲಿಯೇ ಲಭ್ಯವಾಗಿಸುವುದೂ ಅವಶ್ಯವಿದೆ. ಇದು ನಡೆಯದಿದ್ದಲ್ಲಿ ಜನಪ್ರಿಯತೆಯ ಹೆಸರಿನಲ್ಲಿ ಪ್ರಚಾರ ಪಡೆಯುವ ಹಲವೊಮ್ಮೆ ನ್ಯೂನಾಧಿಕ್ಯಗಳಿರುವ ವಿವರಣೆಗಳಿಂದ ಅಭ್ಯಾಸಿಗಳು ದಾರಿತಪ್ಪುವ ಸಂಭವ ಉಂಟು. ಈ ಹಲವು ಕಾರಣಗಳಿಂದ ಶುದ್ಧಶಾಂಕರಪ್ರಸ್ಥಾನಾಧಾರಿತವಾದ ಅಧ್ಯಾತ್ಮಪ್ರಸಾರವ್ಯವಸ್ಥೆಯು ಅಪೇಕ್ಷಣೀಯ.

ಭಗವಂತನನ್ನು ಇಷ್ಟೊಂದು ಹೆಸರುಗಳ ಮತ್ತು ರೂಪಗಳ ಮೂಲಕ ಜನರು ಗುರುತಿಸುತ್ತಿರುವುದರ ಹಿನ್ನೆಲೆ ಏನು? ಹಲವೊಮ್ಮೆ ಪರಸ್ಪರ ವಿರುದ್ಧಗಳೆಂದೇ ತೋರುವ ವರ್ಣನೆಗಳು ಒಂದೇ ಆತ್ಯಂತಿಕತತ್ತ್ವದ ಪ್ರಕಾರಾಂತರಗಳೆಂದು ನಂಬುವುದು ಹೇಗೆ? ಇಷ್ಟಾಗಿ ಅರಿವು ಅಥವಾ ಜ್ಞಾನ ಎಂಬ ಜನರ ಗ್ರಹಿಕೆಯ ಮೂಲವೇನು? ಸಾಮಾನ್ಯರ ಮನಸ್ಸುಗಳಿಗೂ ತೋರುವ ಸಂದೇಹಗಳಿಗೆ ಪರಿಹಾರ ಕಂಡುಕೊಳ್ಳುವ ಬಗೆ ಹೇಗೆ? ಸುಲಭವಾಗಿ ಅನುಭವಕ್ಕೆಟುಕದ ಹೇಳಿಕೆಗಳನ್ನು ಅವು ಪಾರಂಪರಿಕವೆಂಬಷ್ಟೆ ಕಾರಣದಿಂದ ಸ್ವೀಕರಿಸಬೇಕೆ? ಬಹುತೇಕ ಎಲ್ಲರಲ್ಲಿಯೂ ಇದ್ದೇ ಇರುವ ಸುಖಾಪೇಕ್ಷೆ ಮೊದಲಾದ ಪ್ರವೃತ್ತಿಗಳನ್ನು ನಿರ್ವಹಿಸುವುದರಲ್ಲಿ ಯಾವ ನಯವಂತಿಕೆ ಇರಬೇಕು? ವೇದಾಂತದ ಹೆಸರಿನಲ್ಲಿ ಪ್ರಚಲಿತಗೊಳಿಸಲ್ಪಟ್ಟಿರುವ ವಿರಕ್ತಿ ಮೊದಲಾದ ಲಕ್ಷ್ಯಗಳನ್ನು ಲೋಕದಲ್ಲಿ ಎಲ್ಲರೂ ಸ್ವೀಕರಿಸಲಾದೀತೆ? ಸಾಮಾನ್ಯವಾಗಿ ನೀತಿವಂತಿಕೆಯೆಂದು ಜನರಲ್ಲಿ ಅಂಗೀಕಾರ ಪಡೆದಿರುವ ನಡವಳಿಗಳಿಗೂ ಆತ್ಯಂತಿಕ ತತ್ತ್ವಾನುಷ್ಠಾನಮಾರ್ಗಕ್ಕೂ ನಡುವಣ ಸಂಬಂಧದ ಸ್ವರೂಪ ಏನು? ಎಲ್ಲ ಪರಮಾರ್ಥಸಾಧಕರೂ ಪ್ರಾಥಮಿಕ ಹಂತದಿಂದ ಆರಂಭಿಸಿ ಹಂತಹಂತವಾಗಿ ಸೋಪಾನಕ್ರಮದಲ್ಲಿ ಕ್ರಮಿಸುವುದು ಅನಿವಾರ್ಯವೆ, ಅಥವಾ ಬೇರೆ ಶೀಘ್ರ ಮಾರ್ಗಗಳೂ ಇದ್ದಾವೆ? ಅವಶ್ಯವೆಂದು ಬೋಧಿಸಲ್ಪಡುವ ಆಂತರಿಕಸಿದ್ಧಿಗೆ ಸರ್ವಾಂಗೀಕಾರ್ಯ ಮಾನದಂಡಗಳು ಇವೆಯೆ, ಇದ್ದರೆ ಅವು ಯಾವುವು? ಲೌಕಿಕ ಅನುಭವಕ್ಕೆ ನಿಲುಕದ ಸ್ವರ್ಗ, ನರಕ, ಜನ್ಮಾಂತರ ಮೊದಲ ಕಲ್ಪನೆಗಳ ಬಗೆಗೆ ಸಾಧಕನ ನಿಲುಮೆ ಏನಿರಬೇಕು? ವೈವಿಧ್ಯಮಯ ಬೋಧನೆಗಳು ಎದುರಾಗುವಾಗ ಋಜುವಾದದ್ದೆಂಬುದರ ಆಯ್ಕೆಗೆ ದಾರಿ ಯಾವುದು? 'ಇದೊಂದನ್ನು ನೀವು ಮಾಡಿದರೆ ಸಾಕು ಗುರಿಯನ್ನು ತಲುಪಿಬಿಡುತ್ತೀರಿ' ಎಂಬ ಘೋಷಣೆಗಳೂ ಹಲವಾರು ಇರುವಾಗ ನಿಶ್ಚಯಬುದ್ಧಿ ಬರುವುದು ಹೇಗೆ?

ಸೋಪಾನಕ್ರಮದ ಬೋಧನೆ

ಜಟಿಲವೂ ತರ್ಕಭೂಯಿಷ್ಠವೂ ಆದ ಮೂಲ ಶಾಸ್ತ್ರಗ್ರಂಥಗಳ ಅಧ್ಯಯನ ಎಲ್ಲರಿಗೂ ಸಾಧ್ಯವಾಗುವಂತಹದಲ್ಲ. ವ್ಯಾಕರಣ ನ್ಯಾಯಾದಿ ಹಲವು ಅಂಗಗಳ ಪರಿಜ್ಞಾನವನ್ನು ಪಡೆದುಕೊಂಡ ಮೇಲಷ್ಟೆ ಶಾಸ್ತ್ರಗ್ರಂಥಗಳನ್ನು ಸಮೀಪಿಸಬಹುದು. ಸ್ವಾರಸ್ಯಕರ ಅಂಶವೆಂದರೆ ಇಡೀ ವೇದಾಂತದರ್ಶನಕ್ಕೆ ಅಧಿಷ್ಠಾನವಾದ ಉಪನಿಷತ್ತುಗಳು ಸಂವಾದರೂಪದಲ್ಲಿಯೂ ಆಖ್ಯಾನಗಳ ರೂಪದಲ್ಲಿಯೂ ನಿವೇಶಗೊಂಡಿದ್ದು ಅವು ಎಲ್ಲ ಆಸಕ್ತರಿಗೂ ಎಟುಕುವಂತಿವೆ. ಗಹನವಾದ ಒಳತಿರುಳು, ಸರಳವಾದ ಬಾಹ್ಯನಿರೂಪಣೆ, ಪೆಡಸಲ್ಲದ ಆಕರ್ಷಕ ಭಾಷಾಶೈಲಿ – ಇವು ಉಪನಿಷತ್ತುಗಳ ಲಕ್ಷಣಗಳಾಗಿವೆ. ಹೀಗೆ ಅಧ್ಯಾತ್ಮವಿಷಯವಾಗಿ ಜಗತ್ತಿನಲ್ಲಿಯೆ ಅತ್ಯಂತ ಪ್ರಾಚೀನವಾದ ಉಪನಿಷದ್–ವಾಙ್ಮಯವು ಅರ್ಥದ ಹರಹಿನಲ್ಲಿ ಸಾರ್ವಕಾಲಿಕ

ವಾಗಿರುವುದು ವಿಸ್ಮಯಕರ. ಅದರ ಕಕ್ಷೆಯಿಂದ ಯಾರೂ ಹೊರಗಿನವರಲ್ಲ. ಅದು ಹೇಳುವುದಾದರೂ ನಿತ್ಯಸಿದ್ಧವಾದ ತತ್ತ್ವಗಳನ್ನೇ ಹೊರತು ಯಾವುದೋ ವೈಚಿತ್ರ್ಯಮಯ ಸಂಗತಿಗಳನ್ನಲ್ಲ.

ಈ ಹಿನ್ನೆಲೆಯಲ್ಲಿ ವೇದಾಂತದಲ್ಲಿ ಪ್ರವೇಶವನ್ನು ಬಯಸುವ ಶ್ರದ್ಧಾವಂತ ಸಾಧಕರಿಗೆ ದುರ್ಗ್ರಾಹ್ಯವಲ್ಲದ ಆದರೆ ಶಾಸ್ತ್ರಶುದ್ಧವಾದ ಸರಳ ಪರಿಚಯಗ್ರಂಥಗಳು ಬೇಕಾಗುತ್ತವೆ. ಆಸಕ್ತಿ ಬೆಳೆದಂತೆ ಅವರು ಪ್ರೌಢ ಗ್ರಂಥಗಳತ್ತ ಹೋಗಬಹುದು. ಈ ಕಾರಣದಿಂದಾಗಿ ಶುದ್ಧ ವೇದಾಂತ ಪ್ರಸಾರವನ್ನು ಲಕ್ಷ್ಯವಾಗಿರಿಸಿಕೊಂಡವರು ವಿವಿಧ ಅಧಿಕಾರಿಭೇದಗಳವರಿಗೆ ಹೊಂದುವಂತೆ ಸೋಪಾನಕ್ರಮದಲ್ಲಿ ಸಾಹಿತ್ಯವನ್ನು ಸಜ್ಜುಗೊಳಿಸಿಕೊಡಬೇಕಾಗುತ್ತದೆ.

ಈ ಯೋಜನೆಯು ಸರಳವಾಗಿ ಕಂಡರೂ ಅದರ ನಿರ್ವಹಣೆಯು ತುಂಬಾ ಶ್ರಮವನ್ನೂ ತಾಳ್ಮೆಯನ್ನೂ ಪ್ರಯತ್ನಸಾತತ್ಯವನ್ನೂ ಸುಸಂಘಟನೆಯನ್ನೂ ಅಪೇಕ್ಷಿಸುತ್ತದೆ.

ಪ್ರಾಮಾಣಿಕ ವೈಯಕ್ತಿಕ ಆಸಕ್ತಿಯಿಂದ ವೇದಾಂತದ ಬಳಿಸಾರುವ ಶ್ರದ್ಧಾವಂತರ ಮನಸ್ಸುಗಳಲ್ಲಿ ಏಳುವ ಪ್ರಶ್ನೆಗಳಿಗೆ ಸಮಂಜಸ ಪರಿಹಾರಗಳನ್ನು ನೀಡುವುದು, ವ್ಯವಸ್ಥಿತವಾಗಿ ವಿಷಯಗ್ರಹಣ ಮಾಡಿಕೊಳ್ಳಬಯಸುವವರಿಗೆ ಅನುಕೂಲಕರವಾದ ಸೋಪಾನಕ್ರಮದ ಬೋಧನೆ, ಶಾಸ್ತ್ರೀಯ ಅಂಶಗಳನ್ನು ಎಲ್ಲಿಯೂ ದುರ್ಬಲಗೊಳಿಸದೆ ಶುದ್ಧದರ್ಶನದ ಪ್ರಸಾರ, ಪ್ರೌಢ ಹಂತಗಳಲ್ಲಿ ಪರಂಪರೆಯಲ್ಲಿಯೆ ಮನೆಮಾಡಿಕೊಂಡಿರುವ ಸಂದಿಗ್ಧ ಅಂಶಗಳನ್ನು ತಿಳಿಗೊಳಿಸುವುದು, ಈ ಪ್ರಾಕಾರಕ್ಕೆ ಬದ್ಧವಾಗಿ ಉಳಿದುಕೊಂಡೇ ಆಸ್ತಿಕಜನರಲ್ಲಿ ವೇದಾಂತಾಸಕ್ತಿಯನ್ನು ಬಿತ್ತಿ ಬೆಳೆಸುವುದು, ಮೇಲಿನ ಉದ್ದೇಶಗಳಿಗೆ ಪೂರಕವಾಗುವ ರೀತಿಯಲ್ಲಿ ಅನುವಾದ–ವಿವರಣೆ ಮತ್ತು ಸ್ವತಂತ್ರ ಪ್ರತಿಪಾದನೆ – ಈ ಎರಡೂ ಧಾರೆಗಳಲ್ಲಿ ಸಾಹಿತ್ಯನಿರ್ಮಿತಿ ಮತ್ತು ಪ್ರಸಾರ; – ಸ್ಥೂಲವಾಗಿ ಈ ಚೌಕಟ್ಟನ್ನು ಇರಿಸಿಕೊಂಡು ಅನುಕೂಲ್ಯ ಒದಗಿದಂತೆ ವಿಸ್ತರಿಸುತ್ತಹೋಗುವ ಆಂದೋಲನವನ್ನು ನಡೆಸಹೊರಟವರು ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು – ಬಳಕೆ ಮಾತಿನಲ್ಲಿ ಸುಬ್ಬರಾಯರು.

ಮೇಲಣ ಕಲ್ಪನೆಯನ್ನು ಸುಬ್ಬರಾಯರ ಮನಸ್ಸಿನಲ್ಲಿ ಖಚಿತಗೊಳಿಸಲು ಅವರು ತಾರುಣ್ಯದಶೆಯಿಂದ ತಾವೇ ಎದುರಿಸಿದ್ದ ಜಟಿಲತೆಗಳೂ ಪ್ರೇರಕವಾಗಿದ್ದಿರಬಹುದು. ಅವರು ತಮ್ಮ ಯೋಜನೆಯನ್ನು ಉಪಕ್ರಮಿಸಿದ, ಎಂದರೆ ಈಗ್ಗೆ ನೂರು ವರ್ಷ ಹಿಂದೆ ಶುದ್ಧವೇದಾಂತ ಪ್ರತಿಪಾದನೆಯ ವಿಷಯ ಹಾಗಿರಲಿ; ಪ್ರಸ್ಥಾನತ್ರಯದಂತಹ ಮೂಲ ಆಧಾರಸಾಹಿತ್ಯದ ಯಾವ ಮಟ್ಟದ ಅನುವಾದ–ಪ್ರಕಾಶನಗಳೂ ಆಗ ವಿರಳವೇ ಆಗಿದ್ದವು ಎಂಬುದನ್ನೂ ನೆನಪಿನಲ್ಲಿ ಇರಿಸಿಕೊಳ್ಳಬೇಕು. ಯಾವುದೇ ಸಾಂಸ್ಥಿಕ ಪರಿಮಿತಿಗಳಿಗೆ ಒಳಪಡದೆ ಇದು ಸ್ವತಂತ್ರ ಖಾಸಗಿ ಪ್ರಯಾಸವಾಗಿಯೆ ನಡೆಯಬೇಕಾದುದೂ ಅವಶ್ಯವಿದ್ದಿತು. ಬಾಲ್ಯದಲ್ಲಿಯೂ ತಾರುಣ್ಯದಲ್ಲಿಯೂ ಸುಬ್ಬರಾಯರಿಗೆ ದೈವಿಕವಾಗಿ ಒದಗಿದ್ದ ಅನುಪಮ ಸಾಧಕರ ಹಾಗೂ ವಿದ್ವಜ್ಜನರ ಒಡನಾಟದಿಂದ ಲಭಿಸಿದ್ದ ದಿಗ್ದರ್ಶನವೂ ಅವರ ಅಧ್ಯಾತ್ಮ ಪಯಣವನ್ನು ಋಜುಮಾರ್ಗದಲ್ಲಿ ಮುನ್ನಡೆಸುವ ದೀವಿಗೆಯಾಗಿ ಕೆಲಸ ಮಾಡಿತು.

ಬಾಲ್ಯ–ತಾರುಣ್ಯ

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರ ಬಾಲ್ಯದ ಮತ್ತು ಪೂರ್ವತಾರುಣ್ಯದ ದಿವಸಗಳು ಅತ್ಯಂತ ಕ್ಲೇಶಮಯವಾಗಿದ್ದವು. ಆ ದಿನಗಳಲ್ಲಿ – ಎಂದರೆ ಇಪ್ಪತ್ತನೇ ಶತಮಾನದ ಆರಂಭಕಾಲದಲ್ಲಿ – ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗಳು ತುಂಬಾ ಉತ್ಸಾಹಜನಕವಾಗೇನಿರಲಿಲ್ಲ; ಇನ್ನೊಂದುಕಡೆ ತೀವ್ರ ಬಡತನ. ಹೀಗಾಗಿ ಹೆಜ್ಜೆಹೆಜ್ಜೆಗೂ ಅಡಚಣೆಗಳನ್ನು ಎದುರಿಸುತ್ತಲೇ ಸುಬ್ಬರಾಯರ ಬಾಲ್ಯ ಸಾಗಬೇಕಾಯಿತು. ಹೆಚ್ಚುಕಾಲ 'ವಾರದ ಮನೆ'ಗಳೇ ಮುಖ್ಯ ಆಸರೆಯಾಗಿದ್ದವು. ಮೂಡಿಗೆರೆ ಮೊದಲಾದೆಡೆ ಕುಂಟುತ್ತ ಸಾಗಿ ಬೆಂಗಳೂರಿನಲ್ಲಿ ಹೇಗೋ ಎಫ್.ಎ. ತಲಪುವವರೆಗಿನದು ಸಾಹಸಮಯ ಪಯಣವೇ ಆಯಿತು. (ಇದನ್ನು ಆ ದಿನಗಳಲ್ಲಿ ಅಸಾಮಾನ್ಯ ಎಂದು ಭಾವಿಸಬೇಕಾದದ್ದು ಇಲ್ಲವೇನೋ.) ದೈವಿಕವೆಂಬಂತೆ ಬೆಂಗಳೂರು ವಾಸ್ತವ್ಯದಲ್ಲಿ ಒದಗಿಬಂದ ಸಂಪರ್ಕಗಳು ಅವರಲ್ಲಿ ವೇದಾಂತಾಸಕ್ತಿಯು ಅಂಕುರಗೊಳ್ಳುವುದಕ್ಕೆ ದಾರಿಮಾಡಿತು. ಬೆಂಗಳೂರು ವಾಸ್ತವ್ಯದಿಂದಾಗಿ ಆ ತಲೆಮಾರಿನ ಶ್ರೇಷ್ಠ ಪಂಡಿತರಾದ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು ಮೊದಲಾದವರ ಒಡನಾಟವು ಲಭಿಸಿತು. ಸ್ವಾರಸ್ಯಕರ ಅಂಶವೆಂದರೆ ಸುಬ್ಬರಾಯರಿಗೆ ಉದ್ಯೋಗ ದೊರೆತದ್ದು ಇಂಗ್ಲಿಷ್ ಪ್ರಾಧ್ಯಾಪಕರಾಗಿ; ಆದರೆ ಅವರ ಉಳಿದ ಅಷ್ಟೂ ಸಮಯ ವ್ಯಯವಾಗುತ್ತಿದ್ದದ್ದು ವೇದಾಂತ ವ್ಯಾಸಂಗ ಅನುಸಂಧಾನದಲ್ಲಿ.

ಅವರು ಸಂಸ್ಕೃತ ಕಲಿಕೆಯಲ್ಲಿ ತೊಡಗಿಕೊಂಡದ್ದು ಸ್ಕಾಲರ್‌ಶಿಪ್ ಆಕರ್ಷಣೆಯಿಂದ ಬೆಂಗಳೂರಿನ ಸಂಸ್ಕೃತ ಪಾಠಶಾಲೆಗೆ ಸೇರಿಕೊಂಡಾಗಲಷ್ಟೆ (1900–1901). ಅವರ ಅಂತರಂಗದಲ್ಲಿ ಸುಪ್ತವಾಗಿರಬಹುದಾಗಿದ್ದ ವೇದಾಂತವೆಂಬ ಸಸಿಯು ನಿಜವಾಗಿ ಮೊಳಕೆಯೊಡೆದದ್ದು ಅವರು 1903ರಲ್ಲಿ ಎಫ್.ಎ.(ಸೀನಿಯರ್) ತರಗತಿಗೆ ಸೇರಲು ಬೆಂಗಳೂರಿಗೆ ಬಂದ ದಿನಗಳಿಂದ. ಅವರಿಗೆ ವೇದಾಂತದಲ್ಲಿ ಗಾಢ ಆಸಕ್ತರೂ ಶಾಲಾಧ್ಯಾಪಕರೂ ಆಗಿದ್ದ ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಅವರ ನಿಕಟ ಸಂಪರ್ಕ ದೊರೆತಾಗ ಎನ್ನಿಸುತ್ತದೆ. ಅನಂತರದ ಕಾಲದಲ್ಲಿ ಸುಬ್ಬರಾಯರ ಗಣನೆಯಲ್ಲಿ ಕೃಷ್ಣಸ್ವಾಮಿ ಅಯ್ಯರ್ ಅವರೇ ಆದ್ಯ ಗುರುಗಳೆನಿಸುವಂತೆ ಆಯಿತು. ಅನಂತರದ ಕಾಲದಲ್ಲಿ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳು, ಹೊಸಕೆರೆ ಚಿದಂಬರಯ್ಯನವರು ಮೊದಲಾದವರಿಗೂ ನಿಕಟವರ್ತಿಯಾದರು. ಕುರ್ತಕೋಟಿ ಮಹಾಭಾಗವತರ ಅನುಚರಣೆ ಮಾಡುವ ಸುಯೋಗವೂ ಒದಗಿತು. ಶ್ರೀ ಬ್ರಹ್ಮಚೈತನ್ಯ ಗೋಂದಾವಲೇಕರ ಮಹಾರಾಜರಿಂದ ಮಂತ್ರೋಪದೇಶ, ಶೃಂಗೇರಿ ಶಾರದಾಪೀಠದ ಶ್ರೀ ಶಿವಾಭಿನವ ನೃಸಿಂಹಭಾರತಿಗಳ ಸಾನ್ನಿಧ್ಯದಲ್ಲಿ ಭಾಷ್ಯಶಾಂತಿ – ಈ ಅತ್ಯಪೂರ್ವ ಸಂಸ್ಕಾರಗಳು ಅವರ ಅಂತರಂಗದಲ್ಲಿ ಅವರ ಜೀವಿತೋದ್ದೇಶದ ಬೇರನ್ನು ನೆಟ್ಟಿದುದು ಅವರ ಆಧ್ಯಾತ್ಮಿಕ ಜೀವನಕ್ಕೆ ನಾಂದಿಯಾಯಿತೆನ್ನಬಹುದು(1910–11). ಆ ಕಾಲಘಟ್ಟದಲ್ಲಿ ಅವರು ಇನ್ನೂ ಲೌಕಿಕ ಜೀವನದ ಏಳುಬೀಳುಗಳಲ್ಲಿ ಸಂಚರಿಸುತ್ತಿದ್ದರೂ ಆಧ್ಯಾತ್ಮಿಕಾಸಕ್ತಿಯನ್ನು ತೀವ್ರಗೊಳಿಸಿಕೊಳ್ಳುತ್ತಹೋದರು; ಅಧ್ಯಯನ, ಮನನ, ಬರಹಗಳ ಕಡೆಗೆ ಮನಸ್ಸು ಹೆಚ್ಚುಹೆಚ್ಚಾಗಿ ಬಾಗತೊಡಗಿತು.

1922–23ರ ಸುಮಾರಿನಲ್ಲಿ ಬೆಂಗಳೂರಿನ ಸಂಸ್ಕೃತ ಕಾಲೇಜಿನಲ್ಲಿ ಇಂಗ್ಲಿಷ್ ಬೋಧಕರ ಕೆಲಸ ಖಾಲಿ ಇರುವುದು ತಿಳಿದುಬಂದಿತು. ಬೆಂಗಳೂರಿನಲ್ಲಿ ನೆಲೆಗೊಳ್ಳಬೇಕು ಎಂಬ ಆಕಾಂಕ್ಷೆ ಹೀಗೆ ನೆರವೇರಿದುದರ ಜೊತೆಗೆ ಆಗಿನ ಹಲವು ಪಂಡಿತಶ್ರೇಷ್ಠರ ಒಡನಾಟದ ಲಾಭವೂ ದೊರೆಯಿತು. ಆ ಸನ್ನಿವೇಶವನ್ನು

ಬಳಸಿಕೊಂಡು ಸುಬ್ರಹ್ಮಣ್ಯಶರ್ಮರು ಸಂಸ್ಕೃತ ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಆಧ್ಯಾತ್ಮಿಕ ಬರವಣಿಗೆಯಲ್ಲಿಯೂ ಹೆಚ್ಚುಹೆಚ್ಚಾಗಿ ತೊಡಗಿಕೊಂಡರು. 1920ರ ದಶಕದ ಆರಂಭದ ವರ್ಷಗಳಲ್ಲಿ 'ಅಧ್ಯಾತ್ಮ ಪ್ರಕಾಶ' ಮಾಸಪತ್ರಿಕೆಯನ್ನು ಆರಂಭಿಸುವ ಸಾಹಸವನ್ನೂ ಮಾಡಿ ಅದನ್ನು ಪಟ್ಟುಹಿಡಿದು ಮುಂದುವರಿಸಿದುದು ಈಗ ಇತಿಹಾಸ.

1935ರಲ್ಲಿ ಅಧ್ಯಾಪಕವೃತ್ತಿಯಿಂದ ನಿವೃತ್ತರಾದ ಮೇಲೆ ಸುಬ್ರಹ್ಮಣ್ಯಶರ್ಮರು ಪೂರ್ಣಾವಧಿ ವೇದಾಂತ ಪ್ರಸಾರಕರಾದರು. ಅವರು ಹಿಂದಿನಿಂದಲೇ ಸಂಕಲ್ಪಿಸಿದಂತೆ ಕಾರ್ಯಾಲಯದ ವಹಿವಾಟುಗಳನ್ನು ಅನ್ಯರಿಗೆ ವಹಿಸಿ ತುರೀಯಾಶ್ರಮ ಸ್ವೀಕರಿಸಿ ಶ್ರೀಸಚ್ಚಿದಾನಂದೇಂದ್ರ ಸರಸ್ವತಿಗಳಾಗಿ ಯೋಗಪಟ್ಟ ಧರಿಸಿ ಪ್ರಕಾಶಗೊಂಡದ್ದು 1948ರ ಜೂನ್ 10ರಂದು.

ಕಾರ್ಯಾಲಯದ ಸ್ಥಾಪನೆ, ವಿಕಾಸ

ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಸಂನ್ಯಸ್ತರಾಗುವುದಕ್ಕೆ 28 ವರ್ಷ ಹಿಂದೆಯೇ (ಅವರು ಇನ್ನೂ 'ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ'ರಾಗಿದ್ದಾಗಲೇ) 1920ರಲ್ಲಿ ಸ್ಥಾಪಿಸಿದುದು 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ'. ಸಾಮಾನ್ಯವಾಗಿ 'ಪೀಠ'ಗಳೂ ಆಶ್ರಮಗಳೂ ಯಾವುದೋ ವಿಶಿಷ್ಟ ಸಂಪ್ರದಾಯದ ಪ್ರವರ್ತನೆಗಾಗಿ ಸ್ಥಾಪಿಸಲ್ಪಡುತ್ತವೆ. ಆದರೆ 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ' ಸ್ಥಾಪನೆಗೊಂಡದ್ದು ಜಾತಿ ಮತ್ತು ಸಂಪ್ರದಾಯಾದಿಗಳಿಗೆ ಅತೀರಿಕ್ತವಾಗಿ ಸಮಸ್ತರಿಗೂ ಶುದ್ಧವೇದಾಂತವನ್ನು ಪರಿಚಯಿಸಿ ಅವರನ್ನು ಪಾರಮಾರ್ಥಿಕ ಸಾಧನೆಯಲ್ಲಿ ತೊಡಗಿಸುವ ಏಕೈಕ ಉದ್ದೇಶದಿಂದ. ಈ ಉದ್ದೇಶದ ಈಡೇರಿಕೆಗಾಗಿ ಆಯ್ದುಕೊಂಡ ಮಾಧ್ಯಮಗಳು ವೇದಾಂತಗ್ರಂಥ ರಚನೆ ಮತ್ತು ಪ್ರಕಾಶನ, ಅಧ್ಯಾತ್ಮಜಾಗೃತಿಗಾಗಿ 'ಅಧ್ಯಾತ್ಮ ಪ್ರಕಾಶ' ಮಾಸಪತ್ರಿಕೆಯ ಪ್ರಕಟಣೆ, ಹೆಚ್ಚಿನ ಶಾಸ್ತ್ರಾಧ್ಯಯನಾಸಕ್ತಿ ಇದ್ದವರಿಗಾಗಿ ಪಾಠಪ್ರವಚನಗಳು, ಬೇರೆಬೇರೆಡೆಗಳಲ್ಲಿ ಆಸಕ್ತರಿಗಾಗಿ ವೇದಾಂತೋಪನ್ಯಾಸಗಳು, ಆಗಿಂದಾಗ ವೇದಾಂತಶಿಬಿರಗಳು – ಇವು. ಈ ಅಷ್ಟೂ ರೀತಿಯ ಚಟುವಟಿಕೆಗಳು ಕಳೆದ ನೂರು ವರ್ಷಗಳುದ್ದಕ್ಕೂ ಅವಿಚ್ಛಿನ್ನವಾಗಿ ನಡೆದುಕೊಂಡುಬಂದಿವೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ ಪ್ರಕಟಿಸಿರುವ ಕೃತಿಗಳಲ್ಲಿ ಹೆಚ್ಚಿನವು ಸ್ವಾಮಿಗಳವರೇ ರಚಿಸಿರುವವು. ಉಳಿದವು ಒಂದಷ್ಟು ಪ್ರಕಟಣೆಗಳು ಅನ್ಯರಚಿತಗಳು. ಇದುವರೆಗೆ ಪ್ರಕಟಗೊಂಡಿರುವ ಸುಮಾರು 250 ಗ್ರಂಥಗಳಲ್ಲಿ 200ಕ್ಕೂ ಹೆಚ್ಚಿನವು ಸ್ವಾಮಿಗಳು ಬರೆದಿರುವವು. ಇವುಗಳಲ್ಲಿ ಅತ್ಯಂತ ಸಾರಗರ್ಭಿತವಾದವು ಪ್ರಸ್ಥಾನತ್ರಯದ ಶಾಸ್ತ್ರಶುದ್ಧವೂ ವಿವರಣೆಗಳನ್ನೊಳಗೊಂಡವೂ ಆದ ಪ್ರಸ್ಥಾನತ್ರಯದ ಅನುವಾದ–ವ್ಯಾಖ್ಯಾನಗಳು. ಅಲ್ಲದೆ ಅನ್ಯ ಪ್ರಮುಖ ಮೂಲಕೃತಿಗಳ ಅನುವಾದಗಳೂ ಸಾಮಾನ್ಯರನ್ನು ಉದ್ದೇಶಿಸಿದ ವ್ಯಾಖ್ಯಾನರೀತಿಯ ಸ್ವತಂತ್ರ ಗ್ರಂಥಗಳೂ ಇವೆ. ಇವಕ್ಕಿಂತ ಮಿಗಿಲಾಗಿ ಶಾಂಕರ ದರ್ಶನದಲ್ಲಿ ಹೆಚ್ಚಿನ ಸ್ಪಷ್ಟೀಕರಣವನ್ನು ಅಪೇಕ್ಷಿಸುವ ಭಾಗಗಳ ಮೇಲಣ ವ್ಯಾಖ್ಯಾನಗಳಿಗೂ ವಿವಾದಗಳಿಗೆಡೆಮಾಡಿರುವ ಹಲವು ದಾರ್ಶನಿಕ ವಿವರಗಳ ಬಗೆಗೆ ಶಾಸ್ತ್ರಜಿಜ್ಞಾಸೆಯ ಬರಹಗಳೂ ಇವೆ.

ಹೀಗೆ ಗಾತ್ರದಲ್ಲಿಯೂ ಗುಣವತ್ತತೆಯಲ್ಲಿಯೂ ಅನುಪಮವೆನ್ನಬಹುದಾದ ಅಧ್ಯಾತ್ಮಸಾಹಿತ್ಯರಾಶಿಯು ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಿಂದ ಪ್ರಕಟಗೊಂಡಿದೆ. ಮೊದಲಿಗೆ ಪ್ರಕಟವಾಗಿ ಆರೇಳು ದಶಕಗಳೇ

ಕಳೆದಿದ್ದರೂ ಈ ಗ್ರಂಥಗಳಲ್ಲಿ ಹೆಚ್ಚಿನವು ಮತ್ತೆ ಮತ್ತೆ ಪುನರ್ಮುದ್ರಣಗೊಳ್ಳುತ್ತಿರುವುದೇ ಅವುಗಳ ಅನನ್ಯತೆಗೆ ಸಾಕ್ಷಿಯಾಗಿದೆ. ಸ್ವಾಮಿಗಳು ಬ್ರಹ್ಮೀಭೂತರಾಗಿ (1975) ನಾಲ್ಕೂವರೆ ದಶಕಗಳು ಕಳೆದಿದ್ದರೂ ಅವರು ರಚಿಸಿರುವ ಗ್ರಂಥಗಳಿಗೆ ನಿರಂತರ ಬೇಡಿಕೆ ಈಗಲೂ ಇದೆ. ಹೀಗೆ ಕಳೆದ ನಾಲ್ಕು ಪೀಳಿಗೆಗಳವರ ಅಧ್ಯಾತ್ಮಜ್ಞಾನದಾಹವನ್ನು ಈ ಉತ್ಕೃಷ್ಟ ಗ್ರಂಥರಾಶಿಯು ಪೂರೈಸಿದೆ, ಈಗಲೂ ಪೂರೈಸುತ್ತಿದೆ.

ಗ್ರಂಥಪ್ರಕಾಶನವೂ ಸೇರಿದಂತೆ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಎಲ್ಲ ಚಟುವಟಿಕೆಗಳೂ ಅತಿ ಸಾಮಾನ್ಯ ಜನತೆಯ ಸ್ವಪ್ರೇರಿತ ನೆರವನ್ನು ಅವಲಂಬಿಸಿಯೇ ನಡೆದಿವೆ ಎಂಬುದನ್ನು ಗಮನಿಸಬೇಕು. ಹೀಗೆ ಎಲ್ಲ ದೃಷ್ಟಿಗಳಿಂದಲೂ ಇದೊಂದು ಅನುಪಮ ವಾಙ್ಮಯಾಧ್ವರ.

ಅನುಭವಗಮ್ಯತೆಯೇ ಮಾನದಂಡ

ಉಪನಿಷದಾಧಾರಿತವಾದ ವೇದಾಂತದರ್ಶನವನ್ನು ಆತ್ಮವಿಜ್ಞಾನವೆಂದು ವರ್ಣಿಸುವ ಪ್ರಥೆ ಇದೆ. ಅದರಲ್ಲಿನ ಪ್ರತಿಪಾದನೆಗಳಿಗೆ ಅತಿಶಯ ಮಹತ್ತ್ವ ಬಂದಿರುವುದು ಅವು ಪಾರಂಪರಿಕವೆಂಬಷ್ಟೆ ಕಾರಣದಿಂದ ಅಲ್ಲ. ಆ ತತ್ತ್ವಗಳು ಅತ್ಯಂತ ಉದಾತ್ತಗಳಾಗಿರುವುದು ಮಾತ್ರವಲ್ಲದೆ ಪೂರ್ಣವಾಗಿ ಬುದ್ಧಿಸಮ್ಮತವೂ ಅನುಭವಗಮ್ಯವೂ ಆಗಿವೆ – ಎಂಬ ಕಾರಣದಿಂದ ಅವಕ್ಕೆ 'ವಿಜ್ಞಾನ'ವೆಂಬ ವರ್ಣನೆ ಸಂದಿದೆ. ತಾರ್ಕಿಕತೆ, ಅನುಭವಗಮ್ಯತೆ – ಈ ಎರಡೂ ಕಾರಣಗಳಿಂದ ವೇದಾಂತವು 'ವಿಜ್ಞಾನ'ವೆನಿಸಿದೆ. ಹೀಗೆ ಅದು ದೇಶಕಾಲಾತೀತವಾಗಿದೆ. ಈ ವೈಜ್ಞಾನಿಕತೆಯನ್ನು ತಮ್ಮ ವ್ಯಾಖ್ಯಾನಗಳ ಮೂಲಕ ಸಂದೇಹಾತೀತವಾಗಿ ಪ್ರಕಟೀಕರಿಸಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದವರು ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳು.

ವಿಶ್ರಾಂತಿಯನ್ನರಿಯದ ಜ್ಞಾನತಪಸ್ಸು ಅವರದು. ಅವರು ಸಮಾಜಕ್ಕೆ ನೀಡಿದುದು ಅಪಾರ ಮತ್ತು ಮೌಲಿಕ. ಬಾಹ್ಯ ಆಕಾರದಲ್ಲಿಯೂ ಜೀವನಕ್ರಮದಲ್ಲಿಯೂ ಮಾತ್ರವಷ್ಟೆ ಅವರು ವಿರಕ್ತರಾಗಿರಲಿಲ್ಲ. ವಿರಕ್ತಭಾವವು ಅವರ ಕಣಕಣವನ್ನೂ ಆವರಿಸಿದ್ದಿತು. ವೃದ್ಧಾಪ್ಯದಿಂದಾಗಿ ಪಕ್ಕದಲ್ಲಿ ಕುಳಿತಿದ್ದವರಿಗೂ ಕೇಳಿಸಲಾಗದಷ್ಟು ಅವರ ಶ್ವಾಸವು ದುರ್ಬಲವಾಗಿದ್ದ ಸ್ಥಿತಿಯಲ್ಲಿಯೂ ಅವರು ಬೋಧನೆಯನ್ನು ನಿಲ್ಲಿಸಲಿಲ್ಲ; ಸಂನ್ಯಾಸಧರ್ಮದ ಯಾವ ಕಟ್ಟಳೆಗಳಿಂದಲೂ ವಿರಮಿಸಲಿಲ್ಲ. ಶಾಂಕರಸಿದ್ಧಾಂತವು ಪರಿಪೂರ್ಣವೂ ಶಂಕಾತೀತವೂ ಆಗಿದೆಯೆಂದು ಹೃದಯದಾಳದಿಂದ ನಂಬಿದ್ದ ಅವರು ಆ ದರ್ಶನದ ಸೂಕ್ಷ್ಮತೆಗಳನ್ನು ಆಜೀವವೂ ಅನ್ವೇಷಿಸಿ ಪ್ರಕಾಶಗೊಳಿಸಿದರು. ಅವರು ಎಂದೂ ಶ್ರದ್ಧಾಜಾಡ್ಯಕ್ಕೆ ಒಳಗಾಗಲಿಲ್ಲ.

ಶ್ರೀಶಂಕರಭಗವತ್ಪಾದರ ಜೀವನ ಕುರಿತೂ ಅವರಷ್ಟು ಆಳವಾಗಿ ಶೋಧಿಸಿದವರು ವಿರಳ. ಶ್ರೀಶಂಕರರ ಹೆಸರಿನಲ್ಲಿ ಜನಜನಿತವಾಗಿರುವ ರಚನೆಗಳಲ್ಲಿ ನಿಖರವಾಗಿ ಯಾವುವು ಆಚಾರ್ಯಕೃತ, ಯಾವುವು ಅಲ್ಲ – ಎಂಬ ಬಗೆಗೆ ಇತಿಹಾಸದ, ಭಾಷಾಶಾಸ್ತ್ರಾದಿಗಳ ಹಾಗೂ ಆಂತರಿಕ ತಾರ್ಕಣೆಗಳ ಆಧಾರದ ಮೇಲೆ ಸ್ವಾಮಿಗಳು ವ್ಯಕ್ತಪಡಿಸಿರುವ ಅಭಿಮತಗಳನ್ನು ನಿರಾಕರಿಸುವುದು ದುಷ್ಕರ.

ಶಾಂಕರಭಾಷ್ಯಗಳನ್ನು ಆಧರಿಸಿ ತಾವು ಪ್ರಕಾಶಪಡಿಸಿರುವ ನಿಲುಮೆಗಳು ಜಿಜ್ಞಾಸುಗಳಿಗೆ ಮಾತ್ರವಲ್ಲದೆ ಅಧ್ಯಾತ್ಮಸಾಧಕರಿಗೂ ಪ್ರಯೋಜನಕರಗಳಾಗಬೇಕೆಂದು ಸದಾ ಎಚ್ಚರ ವಹಿಸುತ್ತಿದ್ದುದು ಸ್ವಾಮಿಗಳ ವೈಶಿಷ್ಟ್ಯ.

ಪ್ರಸ್ಥಾನತ್ರಯ ಹೃದಯದ ಪ್ರಕಟೀಕರಣ

ಸ್ವಾಮಿಗಳು ನೀಡಿರುವ ಪ್ರಸ್ಥಾನತ್ರಯ ಭಾಷ್ಯಗಳ ಅನುವಾದಗಳು ಕೇವಲ ಶಬ್ದಶಃ ಮಾಡಿದ ತರ್ಜುಮೆಗಳಲ್ಲ; ಉದ್ದಕ್ಕೂ ಒಳನೋಟಗಳಿಂದ ಕೂಡಿವೆ. ಕರಾರುವಾಕ್ಕಾದ ಅನುವಾದದೊಡಗೂಡಿ ಅವರು ಹೇರಳವಾಗಿ ಪೂರಕ ಟಿಪ್ಪಣಿಗಳನ್ನೂ ಉಲ್ಲೇಖ ನಿರ್ದೇಶನಗಳನ್ನೂ ಪಾಠಾಂತರ ಮಾಹಿತಿಗಳನ್ನೂ ನೀಡಿದ್ದಾರೆ. ಹೀಗೆ ಅವು ಒಂದೊಂದೂ ಮೇಲ್ಮಟ್ಟದ ಶೋಧಕೃತಿಯೇ ಆಗಿದೆ. ಸ್ವಯಂಶ್ರೇಷ್ಠ ವಿದ್ವಾಂಸರಾಗಿದ್ದ ವಿದ್ಯಾಲಂಕಾರ ಶಾಸ್ತ್ರಚೂಡಾಮಣಿ ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಉದ್ಗರಿಸಿರುವಂತೆ: **"ಶ್ರೀಶಂಕರಾಚಾರ್ಯರೇ ಕನ್ನಡದಲ್ಲಿ ಬರೆದಿದ್ದಿದ್ದರೆ ಹೇಗೋ ಹಾಗೆ [ಸ್ವಾಮಿಗಳ] ಅನುವಾದ: ಮೂಲಾಭಿಪ್ರಾಯಗಳಿಗೆ ಏನೇನೂ ಏರುಪೇರು ಬರದಂತೆ, ಭಾವವು ಸ್ಪಷ್ಟವಾಗುವಂತೆ, ಸಂಸ್ಕೃತದ ಮಾತುಗಳು ಕನ್ನಡದ ತೊಡುಗೆ ತೊಟ್ಟು ಬಂದಿವೆ."**

ಪ್ರಸ್ಥಾನತ್ರಯದ ಮೇಲಿನ ಶಾಂಕರಭಾಷ್ಯಗಳು ಇಂದಿಗೂ ಲಭ್ಯವಿರುವಾಗ ಅವುಗಳ ಭಾಗಗಳಿಗೆ ಹೊಸ ಯುಕ್ತಿಸಮ್ಮತ ಸೇರ್ಪಡೆಗಳ ಅಥವಾ ವಿವರಣೆಗಳ ಆವಶ್ಯಕತೆ ಇದೆಯೇ? – ಎಂಬ ಶಂಕೆ ಉದಿಸಬಹುದು. ಸ್ವಲ್ಪ ಆಳಕ್ಕೆ ಇಳಿದು ಪರಿಶೀಲಿಸುವಾಗ ಇದರ ಆವಶ್ಯಕತೆಯ ಮನವರಿಕೆಯಾಗುತ್ತದೆ. ಶಂಕರರ ಕಾಲದಲ್ಲಿ ಅವೈದಿಕ ಮತಗಳ ಪ್ರಾಚುರ್ಯ ಇದ್ದಿತಾಗಿ ವೇದಾಧಾರಿತ ದರ್ಶನದ ಪುನಃಸ್ಥಾಪನೆ ಆಚಾರ್ಯರಿಗೆ ಆದ್ಯತೆಯ ಕಾರ್ಯವಾಗಿದ್ದಿತು. ಇದರ ಜೊತೆಜೊತೆಗೆ ಅದ್ವೈತವೇ ಸಮ್ಯಗ್‌ದರ್ಶನವೆಂದು ಸ್ಥಾಪಿಸಬೇಕಾಗಿತ್ತು. ಶಂಕರರ ಕಾಲದಲ್ಲಿ ಭಕ್ತಿಪಂಥವು ವ್ಯಾಪಕವಾಗಿ ಹರಡುತ್ತಿತ್ತು. ಭಕ್ತಿಯೂ ಜ್ಞಾನವೂ ಪರಸ್ಪರ ಪೂರಕಗಳೆಂದು ತಿಳಿಸಿಕೊಡಬೇಕಾಗಿದ್ದಿತು. ಈ ಉದ್ದೇಶಗಳಿಗೆ ಅವಶ್ಯವಿದ್ದ ತರ್ಕಪರಿಷ್ಕರಣಗಳನ್ನೂ ಆಸ್ವಾದ್ಯ ಶೈಲಿಯನ್ನೂ ಭಗವತ್ಪಾದರು ಆವಿಷ್ಕರಿಸಿದರು. ಅದಾದ ಸಾವಿರದಿನ್ನೂರು ವರ್ಷಗಳ ತರುವಾಯ ವೇದಾಂತಾನುಸಂಧಾನದಲ್ಲಿ ತೊಡಗಿಕೊಂಡ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿಗಳ ಕಾಲಕ್ಕೆ ಹೊಸ ಸನ್ನಿವೇಶ ಇದ್ದಿತು. ಶಂಕರರ ಕಾಲದಲ್ಲಿ ಜನರಲ್ಲಿ ಇದ್ದ ಶಾಸ್ತ್ರಗ್ರಹಣಶಕ್ತಿ ಈಗ ಹ್ರಾಸಗೊಂಡಿತ್ತು. ಶಾಂಕರದರ್ಶನದ ಮುಂದುವರಿಕೆಯ ಹೆಸರಿನಲ್ಲಿ ಕಾಲಗತಿಯಲ್ಲಿ ಹಲವು ವಿಕೃತಿಗಳು ಹುಟ್ಟಿಕೊಂಡಿದ್ದವು. ನಿದರ್ಶನಕ್ಕೆ: ಶಾಂಕರಭಾಷ್ಯದ ಅಭಿಪ್ರಾಯಗಳಿಗೂ ಭಾಮತಿ ಧಾರೆಯ ವಿವರಣೆಗಳಿಗೂ ಅಲ್ಲಲ್ಲಿ ವ್ಯತ್ಯಾಸಗಳಿದ್ದವು. ಇಂತಹ ಜಿಜ್ಞಾಸ್ಯ ವಿಷಯಗಳ ಪರಾಮರ್ಶೆಯನ್ನೂ ಒಳಗೊಂಡು ಶಾಂಕರದರ್ಶನದ ಅಧಿಷ್ಠಾನವನ್ನು ದೃಢಗೊಳಿಸಬೇಕಾಯಿತು. ಈ ದಿಶೆಯ ಪ್ರತಿಪಾದನೆಗಳು ಈಗಿನ ಓದುಗರಿಗೆ ಕ್ಲಿಷ್ಟವೆನಿಸದ ಶೈಲಿಯಲ್ಲಿಯೂ ಇರಬೇಕಾಯಿತು. ಈ ದೃಷ್ಟಿಯೇ ಸ್ವಾಮಿಗಳ ಜೀವನಕಾರ್ಯವನ್ನು ಪ್ರೇರಿಸಿದುದು. ಸಂಗ್ರಹವಾಗಿ ಹೇಳಬೇಕೆಂದರೆ: ಶಂಕರ ಭಗವತ್ಪಾದರು ಸನಾತನಧರ್ಮವನ್ನು ಪುನಃಸ್ಥಾಪಿಸಿದಂತೆ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಶಾಂಕರದರ್ಶನವನ್ನು ಪುನಃಸ್ಥಾಪಿಸಲೆಳಸಿದರು.

ಒಂದು ಎದ್ದುಕಾಣುವ ಸಂಗತಿ ಇದು: ವಿಷಯದ ಜಟಿಲತೆಯ ಕಾರಣದಿಂದಾಗಿ ಶಾಂಕರಭಾಷ್ಯದಲ್ಲಿ ಪೂರ್ವಪಕ್ಷಗಳೂ ಸಿದ್ಧಾಂತಗಳೂ ಸರಣಿಯಾಗಿ ಬರುತ್ತವೆ. ವ್ಯುತ್ಪತ್ತಿಯ ಕೊರತೆ ಇದ್ದವರು ಅಲ್ಲಲ್ಲಿ ಗೊಂದಲಕ್ಕೆ ಸಿಲುಕುವ ಸಂಭವವಿರುತ್ತದೆ. ಸ್ವಾಮಿಗಳು ತಮ್ಮ ಅನುವಾದಗ್ರಂಥಗಳಲ್ಲಿ ಇಂತಹ ತೊಡಕುಗಳನ್ನೆಲ್ಲ ನಿವಾರಿಸಿ ವಿಷಯವಿಭಜನೆಯನ್ನು ಸ್ಪಷ್ಟೀಕರಿಸಿ ಸುಲಭಗ್ರಾಹ್ಯಗೊಳಿಸಿದ್ದಾರೆ. ಪಾಠಾಂತರಗಳನ್ನೂ ಟಿಪ್ಪಣೀಕರಿಸಿದ್ದಾರೆ.

ತಮ್ಮ ಸ್ವೀಯ ಹೆಚ್ಚುವರಿ ವಿವರಗಳನ್ನು ಮೂಲದಲ್ಲಿ ಮಿಶ್ರಮಾಡದೆ ಪ್ರತ್ಯೇಕವಾಗಿ ನೀಡುತ್ತಹೋಗಿದ್ದಾರೆ. ಹೆಚ್ಚಿನ ವಿವರಣೆಗಳನ್ನು ಅಪೇಕ್ಷಿಸುವ ಗ್ರಂಥಾಂಶಗಳ ಬಗೆಗೆ ಪ್ರತ್ಯೇಕ ಪರಿಶಿಷ್ಟಗಳನ್ನು ನೀಡಿದ್ದಾರೆ.

ಜಿಜ್ಞಾಸುಗಳಿಗೆ ತೋರಬಹುದಾದ ಬಹುತೇಕ ಎಲ್ಲ ಸಂದೇಹಾಂಶಗಳನ್ನೂ ಸ್ವಾಮಿಗಳು ನಿರೀಕ್ಷಿಸಿ ವಿಶ್ಲೇಷಿಸಿ ಗ್ರಾಹ್ಯವಾದ ಸ್ವಾಭಿಪ್ರಾಯಗಳನ್ನು ನೀಡಿದ್ದಾರೆ. ನಿದರ್ಶನಕ್ಕೆ: ಕೇನೋಪನಿಷತ್ತಿನ ಮೇಲೆ ಶಂಕರರ ಎರಡು ಭಾಷ್ಯಗಳು ಪ್ರಚಲಿತವಿವೆಯಷ್ಟೆ. ಇದರ ಬಗೆಗೆ ಸ್ವಾಮಿಗಳು ಸೂಕ್ಷ್ಮ ವಿಶ್ಲೇಷಣೆ ನಡೆಸಿದ್ದಾರೆ; ಒಂದು ಭಾಷ್ಯದಲ್ಲಿ ಇರುವ ಅಸಮಗ್ರತೆಗಳನ್ನು ಇನ್ನೊಂದು ಭಾಷ್ಯವು ಪೂರೈಸಿರುವ ಅಂಶಗಳನ್ನು ಗುರುತಿಸಿ ವ್ಯಾಖ್ಯೆ ಮಾಡಿದ್ದಾರೆ. ಎರಡು ಭಾಷ್ಯಗಳೂ ಏಕಕರ್ತೃಕವಿರಲಾರದು ಎಂಬ ಸಂಭವನೀಯತೆಯನ್ನು ತಮ್ಮ ಸ್ವೀಯ ಅಭಿಪ್ರಾಯವಾಗಿ ಮಂಡಿಸಿದ್ದರೂ, ಜಿಜ್ಞಾಸುಗಳ ಸೌಕರ್ಯಕ್ಕಾಗಿ ಎರಡೂ ಭಾಷ್ಯಗಳ ಯಥಾವತ್ ಅನುವಾದಗಳನ್ನು ಕೊಟ್ಟಿದ್ದಾರೆ.

ವೇದಾಂತಸಂವಾದದಲ್ಲಿ ಪದೇ ಪದೇ (ಒಮ್ಮೊಮ್ಮೆ ಸಾಮಾನ್ಯವಾಗಿ, ಒಮ್ಮೊಮ್ಮೆ ಪಾರಿಭಾಷಿಕವಾಗಿ) ಬಳಕೆಯಾಗುವ 'ಅವಿದ್ಯೆ', 'ಮಿಥ್ಯೆ' ಮೊದಲಾದ ಶಬ್ದಗಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಯಾವಾವ ಅರ್ಥಗಳು ಸಲ್ಲುತ್ತವೆ – ಎಂಬ ಬಗೆಗೆ ಸ್ವಾಮಿಗಳು ವಿಸ್ತಾರವೂ ನಿಷ್ಕೃಷ್ಟವೂ ಆದ ಪರಾಮರ್ಶನೆ ನಡೆಸಿ ಇದಮಿತ್ಥಂ ಎಂಬಂತೆ ದಿಗ್ದರ್ಶನ ಮಾಡಿರುವುದು ವೇದಾಂತಾಸಕ್ತರಿಗೆ ವರದಾನವಾಗಿದೆ.

ಶಾಸ್ತ್ರದೃಷ್ಟಿಯಿಂದ ಜಟಿಲತೆಯನ್ನೊಳಗೊಂಡ 'ಅವಿದ್ಯೆ', 'ಮಾಯೆ' – ಇವುಗಳ ಪ್ರಸ್ತಾವಗಳು ಕಠೋಪನಿಷತ್ ಮೊದಲಾದೆಡೆ ಬಂದಿವೆ. ಅವನ್ನು ಕೂಲಂಕಷವಾಗಿ ಪರಾಮರ್ಶಿಸಿ ಸ್ವಾಮಿಗಳು ವಿಶದಗೊಳಿಸಿದ್ದಾರೆ. ಸಾಮಾನ್ಯವಾಗಿ ಎಲ್ಲೆಡೆ ಅವಿದ್ಯೆ ಎಂಬ ಶಬ್ದವು ಕರ್ಮಪರವಾಗಿ ಉಪನಿಷತ್ತುಗಳಲ್ಲಿ ಪ್ರಯುಕ್ತವಾಗಿರುವುದನ್ನು ಗಮನಿಸಿ ಸ್ವಾಮಿಗಳು ಇದನ್ನು ಅಧ್ಯಾಸಭಾಷ್ಯಪ್ರಯುಕ್ತ 'ಅವಿದ್ಯಾ' ಶಬ್ದದೊಡನೆ ಸಮೀಕರಿಸಬಾರದು, ಹೀಗಾಗಿ ಉಪಾಧಿಸ್ವಭಾವಭೇದ ದೃಷ್ಟಿಯಿಂದಷ್ಟೇ ಅವಿದ್ಯೆ, ಮಾಯಾ ಎಂಬ ಪ್ರಸ್ತಾವಗಳು ಬಂದಿದ್ದರೂ 'ಅಬ್ರಹ್ಮ'ವಾಗಿ ತೋರುವುದೂ ದಿಟವಾಗಿ ಬ್ರಹ್ಮವೇ – ಎಂಬ ಭಾಷ್ಯದ ನಿಲವಿಗೆ ಬಾಧೆ ಬರದು – ಎಂದು ವಿವರಿಸಿದ್ದಾರೆ.

ಸಂದಿಗ್ಧಾಂಶಗಳ ಪರೀಕ್ಷಣೆ

ಮಾಂಡೂಕ್ಯೋಪನಿಷದ್ ಭಾಷ್ಯದ ಶೈಲಿ, ಬೇರಾವ ಉಪನಿಷದ್ ಭಾಷ್ಯದಲ್ಲಿಯೂ ಕಾಣದ ಮಂಗಲ ಶ್ಲೋಕಗಳು – ಇಂತಹ ಅಂಶಗಳನ್ನು ಆಧರಿಸಿ ಮಾಂಡೂಕ್ಯಭಾಷ್ಯವು ಶಂಕರಕೃತವಲ್ಲದಿರಬಹುದು ಎಂಬ ಹಲವರ ವಾದವನ್ನು ಸ್ವಾಮಿಗಳು ಭಾಷ್ಯದ ವಿಷಯಪ್ರತಿಪಾದನರೀತಿಯು ಶಾಂಕರ ರೀತಿಯದೇ ಆಗಿರುವುದನ್ನು ಆಧರಿಸಿ ಭಾಷ್ಯವು ಶಂಕರಕೃತವೇ ಎಂದು ನಿರ್ಣಯಿಸಿದ್ದಾರೆ.

ಅದ್ವೈತಪ್ರಕ್ರಿಯೆಗೆ ಸಂಬಂಧಿಸಿದಂತೆ ಬ್ರಹ್ಮಸೂತ್ರಭಾಷ್ಯವೂ ಬೃಹದಾರಣ್ಯಕಭಾಷ್ಯವೂ ಒಂದಕ್ಕೊಂದು ಪೂರಕವಾಗಿವೆ ಎಂದು ಗುರುತಿಸಿ ಸ್ಥಾಪಿಸಿರುವುದು ಸ್ವಾಮಿಗಳ ಮತ್ತೊಂದು ಅನನ್ಯ ಕೊಡುಗೆ; ಅಂತೆಯೇ ಬೃಹದಾರಣ್ಯಕಭಾಷ್ಯಕ್ಕೂ ತೈತ್ತಿರೀಯೋಪನಿಷದ್ ಭಾಷ್ಯಕ್ಕೂ ನಡುವೆ ತೋರುವ ಅಂತಃಸಂಬಂಧಗಳನ್ನು ಎತ್ತಿ ತೋರಿಸಿರುವುದೂ ಸ್ವಾಮಿಗಳ ಒಂದು ವಿಶೇಷ ಕೊಡುಗೆ.

ಶ್ವೇತಾಶ್ವತರ ಉಪನಿಷತ್ತಿನಲ್ಲಿ ದ್ವೈತ–ಅದ್ವೈತ, ನಿರ್ಗುಣ–ಸಗುಣ, ಯೋಗ–ಸಾಂಖ್ಯ ಮತ್ತಿತರ ಹಲವಾರು ಸಂಕೀರ್ಣ ವಿಷಯಗಳು ಬಂದಿವೆ. ಉಪಲಬ್ಧ ಭಾಷ್ಯದಲ್ಲಿ ಶಂಕರರ ಬೇರೆ ಬರಹಗಳಲ್ಲಿ ಕಾಣದಂತಹ ಪುರಾಣೋದ್ಧೃತಗಳು ನುಸುಳಿರುವುದನ್ನೂ ಶೈಲಿಯ ಶಿಥಿಲತೆಯನ್ನೂ ಗಮನಿಸಿ ಸ್ವಾಮಿಗಳು ಶ್ವೇತಾಶ್ವತರಭಾಷ್ಯವು ಆಚಾರ್ಯರದಿರಲಾರದು ಎಂದು ನಿರ್ಣಯಿಸಿದ್ದಾರೆ. ಆದರೆ ಮೂಲ ಉಪನಿಷತ್ತಿನ ಶ್ರುತಿತ್ವವನ್ನು ಅವರು ಅಲ್ಲಗಳೆದಿಲ್ಲ.

ಆಕಾರದ ದೃಷ್ಟ್ಯಾ 'ಸ್ಮೃತಿ' ಎನಿಸಿರುವ ಭಗವದ್ಗೀತೆಯನ್ನು ಶಾಸ್ತ್ರವೆಂದು ಗಣಿಸಿರುವುದು ಯುಕ್ತವೇ? – ಎಂದು ಹಲವರು ಎತ್ತಿರುವ ಪ್ರಶ್ನೆಯನ್ನು ಸ್ವಾಮಿಗಳು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಶಂಕರರಿಗಿಂತ ಹಿಂದಿನ ಕಾಲದಲ್ಲಿಯೇ ಗೀತೆಯು ಶಾಸ್ತ್ರವೆಂದು ಕರೆಯಲ್ಪಟ್ಟಿರುವ ಸಂಗತಿಗೆ ಗಮನ ಸೆಳೆದು, ಗೀತೆಯ ಪ್ರಮುಖಾಂಶಗಳು ಉಪನಿಷದನುವರ್ತಿಗಳೆಂಬುದನ್ನು ಗಣಿಸಿ ಗೀತೆಯ ಶಾಸ್ತ್ರತ್ವವನ್ನು ಸಮರ್ಥಿಸಿದ್ದಾರೆ.

ವೇದಾಂತವಿಷಯಗಳು ಭಗವದ್ಗೀತೆಯಲ್ಲಿ ಬೇರೆಬೇರೆಯಾಗಿ ಚದರಿರುವಂತೆ ಮೇಲ್ನೋಟಕ್ಕೆ ಕಾಣುವುದರಿಂದ ಅಭ್ಯಾಸಿಗಳ ಮನಸ್ಸಿನಲ್ಲಿ ತೋರಬಹುದಾದ ಶಂಕೆಗಳನ್ನು ಪರಿಹರಿಸಿ ಗೀತೆಯಲ್ಲಿನ ದರ್ಶನವನ್ನು ಸಮಂಜಸವೂ ಗ್ರಾಹ್ಯವೂ ಆದ ರೀತಿಯಲ್ಲಿ ಪರಿಚಯಿಸಲು ಸ್ವಾಮಿಗಳು 'ಗೀತಾ–ಶಾಸ್ತ್ರಾರ್ಥ–ಸರ್ವಸ್ವ' ಎಂಬ ಸ್ವತಂತ್ರ ಗ್ರಂಥವನ್ನೇ ರಚಿಸಿ ಉಪಕರಿಸಿದ್ದಾರೆ. ಗೀತೆಯ ಸ್ಮೃತಿಸ್ಥಾನೀಯತೆ, ಶಾಸ್ತ್ರತ್ವ ಮೊದಲಾದ ಅಂಶಗಳನ್ನೂ ಸ್ವಾಮಿಗಳು ಸ್ಫುಟಗೊಳಿಸಿದ್ದಾರೆ.

ಶಂಕರಭಾಷ್ಯದ ಸಾರ್ವಭೌಮತೆ

ಬ್ರಹ್ಮಸೂತ್ರಗಳ ಮೇಲಣ ಶಂಕರಾಚಾರ್ಯಕೃತ ಭಾಷ್ಯವು ಭಾಷ್ಯಗಳಲ್ಲೆಲ್ಲ ಪ್ರಾಚೀನತಮವಾಗಿರುವುದು, ವೇದಾಂತದರ್ಶನಕ್ಕೆ ಅಡಿಪಾಯದಂತಿರುವುದು, ವಿಚಾರಪ್ರಧಾನವಾಗಿರುವುದು, ಜ್ಞಾನದಿಂದಲೇ ಕೈವಲ್ಯವೆಂಬುದನ್ನು ಶಂಕಾತೀತವಾಗಿ ಸ್ಥಾಪಿಸಿರುವುದು, ಬುದ್ಧಿಗೋಚರ ಯುಕ್ತಿಗೂ ಅನುಭವಕ್ಕೂ ವಿರೋಧಿಯಲ್ಲದಿರುವುದು, ಭಾಷಾಗಾಂಭೀರ್ಯ, ಪ್ರಮುಖವಾಕ್ಯಗಳ ಹೇರಳ ಉದ್ಧೃತಗಳು, ಅನಂತರಕಾಲದ ಭಿನ್ನ ಸಂಪ್ರದಾಯ ಭಾಷ್ಯಗಳೆಲ್ಲಕ್ಕೂ ಅದೇ ನೇರ ಪ್ರೇರಕವಾಗಿರುವುದು – ಈ ಹಲವು ಕಾರಣಗಳಿಂದಾಗಿ ಬ್ರಹ್ಮಸೂತ್ರ ಶಾಂಕರಭಾಷ್ಯಕ್ಕೆ ಸರ್ವೋನ್ನತ ಸ್ಥಾನ ಸಂದಿದೆ – ಎಂದು ಸ್ವಾಮಿಗಳು ವಿಶದೀಕರಿಸಿದ್ದಾರೆ.

ಬಾದರಾಯಣಸೂತ್ರಗಳು ಅದ್ವೈತಪರವೇ ಹೊರತು ಬೇರೆಯಲ್ಲ ಎಂಬುದನ್ನೂ ಸ್ವಾಮಿಗಳು ವಿಮರ್ಶನಪೂರ್ವಕ ಸ್ಥಾಪಿಸಿದ್ದಾರೆ.

ಪ್ರಸ್ಥಾನತ್ರಯಭಾಷ್ಯಗಳ ಅನುವಾದ ಮಾತ್ರವಲ್ಲದೆ ಅವಕ್ಕೆ ಪೂರಕಗಳಾದ ಪದ್ಮಪಾದಾಚಾರ್ಯರ 'ಪಂಚಪಾದಿಕಾ', ಸುರೇಶ್ವರಾಚಾರ್ಯರ 'ನೈಷ್ಕರ್ಮ್ಯಸಿದ್ಧಿ' ಮೊದಲಾದ ಶಾಸ್ತ್ರಗ್ರಂಥಗಳನ್ನೂ ಸ್ವಾಮಿಗಳು ಅನುವಾದಿಸಿ ಕೊಟ್ಟಿದ್ದಾರೆ.

ಹೀಗೆ ಸ್ವಾಮಿಗಳ ಒಂದೊಂದು ಬರಹವೂ ಅನುವಾದ–ವಿವರಣೆ ಮಾತ್ರವಲ್ಲದೆ ಸಂಶೋಧನಾಂಶಗಳನ್ನು ಒಳಗೊಂಡಿದೆ. ಆಚಾರ್ಯರ 'ಉಪದೇಶಸಾಹಸ್ರೀ' ಮೊದಲಾದ ಪ್ರಕರಣಗ್ರಂಥಗಳ

ಅನುವಾದದೊಡಗೂಡಿ ಸ್ವಾಮಿಗಳು ಆ ಗ್ರಂಥಗಳ ಕರ್ತೃತ್ವವಿಚಾರಾದಿ ಅಂಶಗಳ ಮೇಲೆ ಶೋಧಪೂರ್ವಕ ಜಿಜ್ಞಾಸೆ ನಡೆಸಿದ್ದಾರೆ.

ಸ್ವಾಮಿಗಳ ಸ್ವತಂತ್ರ ಗ್ರಂಥಗಳಾದರೋ ಬೇರೆಬೇರೆ ಸ್ತರಗಳ ಅಭ್ಯಾಸಿಗಳ ಆವಶ್ಯಕತೆಯನ್ನು ಪೂರೈಸಿವೆ. ಇವಷ್ಟನ್ನೇ ಅವಧಾನಪೂರ್ವಕ ಅಧ್ಯಯನ ಮಾಡಿದಲ್ಲಿ ವೇದಾಂತದರ್ಶನದ ಸುಷ್ಠುವಾದ ಪರಿಚಯ ದೊರೆಯುವುದು ನಿಶ್ಚಿತ. ಈ ಸ್ವತಂತ್ರ ರಚನೆಗಳಲ್ಲಿ ಅವಶ್ಯ ಗಮನಿಸಬೇಕಾದ ಪ್ರಮುಖ ಕೃತಿಗಳು – ಕನ್ನಡದಲ್ಲಿ 'ಪರಮಾರ್ಥಚಿಂತಾಮಣಿ' ಮತ್ತು 'ಶಂಕರಭಗವತ್ಪಾದ–ವೃತ್ತಾಂತ–ಸಾರಸರ್ವಸ್ವ'; ಸಂಸ್ಕೃತದಲ್ಲಿ 'ಮಾಂಡೂಕ್ಯರಹಸ್ಯ ವಿವೃತಿಃ'. ಈ ಒಂದೊಂದೂ ಅದ್ಭುತ ಶೋಧಕೃತಿಯೇ ಆಗಿದೆ.

ಮೇಲಿನವು ಮಧ್ಯಮವರ್ಗಾಧಿಕಾರಿಗಳನ್ನು ಉದ್ದೇಶಿಸಿರುವವಾದರೆ ಸ್ವಲ್ಪಹೆಚ್ಚಿನ ಸ್ತರದ ಶಾಸ್ತ್ರಾಸಕ್ತರಿಗಾಗಿ ಅವರು ರಚಿಸಿರುವ 'ವೇದಾಂತ–ಪ್ರಕ್ರಿಯಾ–ಪ್ರತ್ಯಭಿಜ್ಞಾ' ಒಂದು ಅನನ್ಯವೂ ಅತ್ಯುಪಯುಕ್ತವೂ ಆದ ಆಕರಗ್ರಂಥವಾಗಿದೆ.

ವಿಶಿಷ್ಟ ಕೊಡುಗೆಗಳು

ಅನುವಾದ–ಪ್ರತಿಪಾದನ ಗ್ರಂಥಗಳನ್ನು ವಿಪುಲವಾಗಿ ನೀಡಿರುವ ಸ್ವಾಮಿಗಳು ಅದ್ವೈತಸಿದ್ಧಾಂತ ಪರಂಪರೆಯ ಇತಿಹಾಸಕಾರರೂ ಆಗಿದ್ದಾರೆ. ಭಗವತ್ಪಾದಭಾಷ್ಯದಲ್ಲಿ ಉಲ್ಲೇಖಗೊಂಡಿರುವ ಆತ್ರೇಯ, ಉಪವರ್ಷ ಮೊದಲಾದ ಪೂರ್ವಾಚಾರ್ಯರ ವಾದಸರಣಿಗಳ ಇತಿಹಾಸವನ್ನು ನಮಗೆ ತಿಳಿದಂತೆ ದೇಶದಲ್ಲಿಯೇ ಮೊದಲ ಬಾರಿಗೆ ರಚಿಸಿರುವವರು ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು. ಅಂತೆಯೇ ಅದ್ವೈತದರ್ಶನ ವಿಕಾಸದಲ್ಲಿ ಗೌಡಪಾದ–ಗೋವಿಂದಪಾದರ ಸ್ಥಾನವನ್ನು ಖಚಿತವಾಗಿ ಗುರುತಿಸಿರುವುದು ಸ್ವಾಮಿಗಳ ಮತ್ತೊಂದು ಮಹತ್ತ್ವದ ಕೊಡುಗೆ.

ವೇದಾಂತದರ್ಶನದ ಅಡಿಪಾಯ ಎನ್ನಬಹುದಾದ ಹಲವು ಅಂಶಗಳಿವೆ. ಉದಾಹರಣೆಗೆ ಕರ್ಮ–ಜ್ಞಾನ ಸಂಬಂಧ, ಇತ್ಯಾದಿ. ಈ ವಿಷಯಗಳ ಪ್ರಸ್ತಾವ ಬರುವೆಡೆಗಳಲ್ಲಿ (ಉಪನಿಷದ್‌ಭಾಷ್ಯಗಳು ಇತ್ಯಾದಿ) ಈ ವಿಷಯಗಳನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ಸ್ವಾಮಿಗಳು ಪರಾಮರ್ಶಿಸಿ ದಿಗ್ದರ್ಶನ ಮಾಡಿದ್ದಾರೆ. ಈ ಕಾರಣದಿಂದಾಗಿ ಸ್ವಾಮಿಗಳ ತಥೋಕ್ತ 'ಅನುವಾದ' ಕೃತಿಗಳನ್ನು ಅವಧಾನಪೂರ್ವಕ ಅವಲೋಕಿಸಿದಲ್ಲಿ ವೇದಾಂತದರ್ಶನದ ಸ್ವರೂಪವು ಅಭ್ಯಾಸಿಗಳಿಗೆ ಅವಗತವಾಗಬಲ್ಲದೆಂಬುದು ನಿಶ್ಚಿತ. ಸ್ವಾಮಿಗಳ 'ಪರಮಾರ್ಥ–ಚಿಂತಾಮಣಿ' ಗ್ರಂಥದಲ್ಲಿ ಪ್ರಧಾನವಾಗಿ ಪರಾಮರ್ಶನೆಗೊಂಡಿರುವುದು ಅವಸ್ಥಾತ್ರಯ ವಿವೇಚನೆಯೇ. ಗೌಡಪಾದೀಯ ವಿವರಗಳು ವೇದಾಂತಪರಂಪರೆಯವೇ ಹೊರತು ಬೌದ್ಧಧಾರೆಯವಲ್ಲ ಎಂದು ಸ್ಥಾಪಿಸಿರುವ ಸ್ವಾಮಿಗಳ 'ಮಾಂಡೂಕ್ಯರಹಸ್ಯವಿವೃತಿಃ' ಗ್ರಂಥವು ದಾರ್ಶನಿಕವಾಗಿ ಮಹತ್ತ್ವದ್ದಾಗಿದ್ದು ಕನ್ನಡದಲ್ಲಿಯೂ ('ಗೌಡಪಾದಹೃದಯ') ಲಭ್ಯವಿದೆ.

ಸ್ವಾಮಿಗಳ 'ಶಂಕರಭಗವತ್ಪಾದ–ವೃತ್ತಾಂತ–ಸಾರಸರ್ವಸ್ವ' ಗ್ರಂಥವಂತೂ ಶಂಕರರನ್ನು ಕುರಿತ ಅತ್ಯಂತ ಪ್ರಮಾಣಬದ್ಧ ಶೋಧಕೃತಿಯಾಗಿದೆ.

ಜೀವದ ಅವಸ್ಥಾಭೇದಗಳು, ಸಗುಣ–ನಿರ್ಗುಣ ಮೀಮಾಂಸೆ ಮೊದಲಾದ ವಿಷಯಗಳೆಲ್ಲ 'ಅಧ್ಯಾರೋಪಾಪವಾದ' ಪ್ರಕ್ರಿಯೆಯಲ್ಲಿಯೇ ಅಂತರ್ಗತವಿವೆ – ಎಂದು ಸಮರ್ಥವಾಗಿ ಮಂಡಿಸಿರುವವರು ಸ್ವಾಮಿಗಳು. ಈ ಕಾರಣದಿಂದಲೇ ಅಧ್ಯಾರೋಪಾಪವಾದ ಪ್ರಕಟೀಕರಣವು ವೇದಾಂತಪ್ರಕ್ರಿಯೆಗಳಲ್ಲೆಲ್ಲ ಸಾರ್ವಭೌಮಸ್ಥಾನೀಯವಾದದ್ದೆಂದು ಪ್ರಸಿದ್ಧವಿದೆ.

ಸ್ವಾಮಿಗಳ ಸಾಧನೆ: ಮೈಲಿಗಲ್ಲು

ಮಾಂಡೂಕ್ಯದ ಅಲಾತಶಾಂತಿಪ್ರಕರಣ ಮೊದಲಾದೆಡೆ ಬಂದಿರುವ ಹಲವು ಶಬ್ದಪ್ರಯೋಗಗಳು ಬೌದ್ಧದರ್ಶನದಿಂದ ಬಂದವೆಂದು ಹೊರತೋರಿಕೆಗೆ ಕಂಡರೂ ಅವೆಲ್ಲ ಅದ್ವೈತ ವೇದಾಂತ ಧಾರೆಯವೇ ಹೊರತು ಬೌದ್ಧಮೂಲದವಲ್ಲ – ಎಂದು ಸ್ವಾಮಿಗಳು ದೃಢವಾಗಿ ಸ್ಥಾಪಿಸಿದ್ದಾರೆ.

ಶಾಂಕರವಾಙ್ಮಯದಿಂದ ಅನಂತರದ ಕಾಲದಲ್ಲಿ ಅನುವೃತ್ತಗಳಾದ ಅಭಿಮತಗಳಷ್ಟನ್ನೂ ವಿಮರ್ಶನೆಗೊಳಪಡಿಸಿರುವವರು ನಮಗೆ ತಿಳಿದಂತೆ ಸ್ವಾಮಿಗಳು ಮಾತ್ರ.

ಪ್ರಧಾನವಾಗಿ ಶಾಂಕರಾದ್ವೈತ ಪ್ರತಿಪಾದನೆಗೇ ಮೀಸಲಾಗಿ ನೂರು ವರ್ಷ ಕಾಲ ಸತತವಾಗಿಯೂ ಉನ್ನತಮಟ್ಟದಲ್ಲಿಯೂ ನಡೆದಿರುವ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯಷ್ಟು ನೈರಂತರ್ಯದಿಂದ ಮುಂದುವರಿದಿರುವ ವೇದಾಂತವಿಷಯಕ ನಿಯತಕಾಲಿಕೆ ಬಹುಶಃ ಬೇರೆ ಇರಲಾರದು.

ಶೈಲಿಯ ರಮ್ಯತೆ, ಜನಪ್ರಿಯತೆ ಮೊದಲಾದ ಕಾರಣಗಳಿಂದಾಗಿ 'ವಿವೇಕಚೂಡಾಮಣಿ' ಗ್ರಂಥವು ಗಣ್ಯತೆ ಪಡೆದುಕೊಂಡಿದ್ದರೂ ಅಲ್ಲಿಯ ಹಲವು ಮಂಡನೆಗಳು ಶುದ್ಧವೇದಾಂತಪ್ರಕ್ರಿಯೆಗೆ ಹೊಂದಿಕೆಯಾಗುವುದು ದುಷ್ಕರ – ಎಂಬ ಸ್ವಾಮಿಗಳ ವಿಶ್ಲೇಷಣೆಯು ಪರಾಮರ್ಶನಾರ್ಹವಾಗಿದೆ.

ಹೀಗೆ ಯಾವ ವಿವರಾಂಶಗಳ ಬಗೆಗೂ ಈಗಿನ ಮತ್ತು ಮುಂದಿನ ಕಾಲದ ಅಭ್ಯಾಸಿಗಳ ಮನಸ್ಸಿನಲ್ಲಿ ಶಾಂಕರಾದ್ವೈತದರ್ಶನದ ಬಗೆಗೆ ಯಾವುದೇ ಸಂದೇಹಗಳು ಉಳಿಯದಿರಲಿ – ಎಂಬ ನೆಲಗಟ್ಟಿನಿಂದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಆಜೀವವೂ ಪರಿಶ್ರಮಿಸಿರುವುದನ್ನು ಭಾರತದ ಸಾರಸ್ವತಜಗತ್ತಿನಲ್ಲಿ ಒಂದು ಮೈಲಿಗಲ್ಲು ಎಂದು ಪರಿಗಣಿಸಿದರೆ ತಪ್ಪಾಗದೆನಿಸುತ್ತದೆ.

ವೇದಾಂತಮಾರ್ಗಕ್ಕೂ ಅನ್ಯ ಉಪಾಸನಾಪ್ರಧಾನ ಭಾಗವತಾದಿ ಪಂಥಗಳಿಗೂ ನಡುವಣ ಪಾರಸ್ಪರಿಕತೆಯ ಬಗೆಗೆ ಸ್ವಾಮಿಗಳು ವಿಸ್ತಾರವಾಗಿ ಪರಾಮರ್ಶನೆ ನಡೆಸಿದ್ದಾರೆ. ಇದು ಐತಿಹಾಸಿಕ ದೃಷ್ಟಿಯಿಂದಲೂ ಮಹತ್ತ್ವದ್ದಾಗಿದೆ.

ವಿಮರ್ಶನಪೂರ್ವಕ ಪ್ರತಿಪಾದನೆ

ಶುದ್ಧ ಶಾಸ್ತ್ರದೃಷ್ಟಿಗೂ ಲೌಕಿಕಾನುಭವಕ್ಕೂ ನಡುವೆ ಪೂರ್ಣ ವಿರೋಧವಿದೆಯೆಂದು ಭಾವಿಸಿದಲ್ಲಿ ಅದು ಪ್ರಯೋಜನಕರವಾಗದು. ಈ ಎರಡು ದೃಷ್ಟಿಗಳಲ್ಲಿ ಯಾವ ಅಂಶಗಳಲ್ಲಿ ಭೇದವಿದೆ ಎಂದು ವಿಮರ್ಶನಪೂರ್ವಕವಾಗಿ ಅರಿಯುವುದು ಸಾಧಕರಿಗೆ ಲಾಭಕಾರಿಯಾಗುತ್ತದೆ – ಎಂಬ ವಾಸ್ತವವನ್ನು

ಗ್ರಹಿಸಿ ಸ್ವಾಮಿಗಳು ದರ್ಶನದ ನಿಜಸ್ವರೂಪವನ್ನು ಪ್ರಕಟೀಕರಿಸಿದ್ದಾರೆ: ಲೌಕಿಕದೃಷ್ಟಿಯಲ್ಲಿ 'ಅವಿದ್ಯೆ' ಎಂದರೆ ಅಜ್ಞಾನ; ವೇದಾಂತದೃಷ್ಟಿಯಲ್ಲಿ 'ಅವಿದ್ಯೆ' ಎಂದರೆ ಆತ್ಮ–ಅನಾತ್ಮಗಳ ಪರಸ್ಪರ ಅಧ್ಯಾಸ. ಲೌಕಿಕದೃಷ್ಟಿಯಲ್ಲಿ ಆತ್ಮನು ತಾನೇ ವ್ಯವಹಾರ ಮಾಡುವವನಾದರೆ ವೇದಾಂತದೃಷ್ಟಿಯಲ್ಲಿ ಆತ್ಮನು ಎಲ್ಲ ಪ್ರತ್ಯಯಗಳಿಗೆ ಸಾಕ್ಷಿಯಾಗಿರುತ್ತಾನೆ. ಇಂತಹ ಅರ್ಥಸೂಕ್ಷ್ಮಗಳ ಗ್ರಹಿಕೆಯಿಂದ ಗೊಂದಲವು ನಿವಾರಣೆಯಾಗುವುದೆಂಬುದನ್ನು ಮನಗಂಡು ಸ್ವಾಮಿಗಳು ಈ ಸೂಕ್ಷ್ಮತೆಗಳನ್ನು ತಮ್ಮ ವ್ಯಾಖ್ಯಾನಗಳುದ್ದಕ್ಕೂ ಪ್ರಕಟೀಕರಿಸಿದ್ದಾರೆ. ಈ ಅಂಶಗಳಾದರೋ ಅಧ್ಯಾರೋಪ–ಅಪವಾದ ಪ್ರಕ್ರಿಯೆಯ ಭಾಗಗಳೇ ಆಗಿವೆ. ಅಧ್ಯಾರೋಪ–ಅಪವಾದ ಪ್ರಕ್ರಿಯೆಯನ್ನೂ ಅವಸ್ಥಾತ್ರಯ ಮೀಮಾಂಸೆಯನ್ನೂ ಮನನ ಮಾಡಿ ಅರಿತುಕೊಂಡಲ್ಲಿ ವೇದಾಂತದರ್ಶನಕ್ಕೆ ಅಭಿಮುಖರಾದಂತೆಯೇ.

ವೇದಾಂತದ ಅನುಸಂಧಾನ–ಪ್ರಸಾರ ಕ್ಷೇತ್ರದಲ್ಲಿ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ದಿಗಂತವ್ಯಾಪಿ ಸಾಧನೆಯನ್ನು ಮೆಲುಕುಹಾಕಿದಲ್ಲಿ ಇಂತಹ ಸಮುನ್ನತ ಸಾಧಕರು ಕರ್ನಾಟಕದಲ್ಲಿ ಜನಿಸಿ ಯಶಃಕಾಯರಾದುದು ನಮ್ಮ ರಾಜ್ಯದ ದೊಡ್ಡ ಭಾಗ್ಯವೆಂದು ಹೇಳಬೇಕಾಗುತ್ತದೆ. ಅವರು ಬ್ರಹ್ಮಲೀನರಾಗಿ ನಲವತ್ತೈದು ವರ್ಷಗಳು ಗತಿಸಿದ ಮೇಲೂ ಅವರು ಉಪಕ್ರಮಿಸಿದ ಆಧ್ಯಾತ್ಮಿಕಾಭಿಯಾನವು ಅವರ ಶಿಷ್ಯಪ್ರಶಿಷ್ಯರ ಮೂಲಕ ಈಗಲೂ ಅವಿಚ್ಛಿನ್ನವಾಗಿ ಮುಂದುವರಿದಿರುವುದು ಸಂತಸ ತರುವ ವಿಷಯವಾಗಿದೆ.

ಲೇಖನಕಲೆಯು ಎಲ್ಲರಿಗೂ ಒಲಿಯುವಂತಹದಲ್ಲ; ಆ ಜಾಡಿನ ಅಂತರಂಗಪ್ರವೃತ್ತಿ ಇದ್ದವರು ಕಷ್ಟಪಟ್ಟು ರೂಢಿಸಿಕೊಳ್ಳಬೇಕಾದದ್ದು. ಶಾಸ್ತ್ರಸಂಬಂಧಿತ ಬರಹವಂತೂ ಇನ್ನೂ ಹೆಚ್ಚು ಕ್ಲಿಷ್ಟ. ಆದರೆ ಸ್ವಾಮಿಗಳು (ಆಗ ಇನ್ನೂ 'ಸುಬ್ರಹ್ಮಣ್ಯಶರ್ಮ') ಆರಂಭದ ದಿನಗಳಲ್ಲಿಯೆ ಬರವಣಿಗೆಯ ಅನಿವಾರ್ಯತೆಯನ್ನು ಮನಗಂಡು ಅದನ್ನು ಅಭ್ಯಾಸ ಮಾಡಿಕೊಳ್ಳತೊಡಗಿದುದು ಸಮಾಜಕ್ಕೆ ವರದಾನವಾಯಿತು; ವೇದಾಂತ ಪರಿಚಯ ಪುಸ್ತಿಕೆಗಳಿಂದ ಆರಂಭಿಸಿ 'ವೇದಾಂತ–ಪ್ರಕ್ರಿಯಾ–ಪ್ರತ್ಯಭಿಜ್ಞಾ'ದಂತಹ ಪ್ರೌಢ ಸ್ವತಂತ್ರ ಶಾಸ್ತ್ರೀಯ ಗ್ರಂಥಗಳ ರಚನೆಯ ವರೆಗೆ ಅವರ ಲೇಖನೋದ್ಯಮ ನಿರಂತರ ಸಾಗಿತು. ಅವರಲ್ಲಿ ಅಂತರ್ಮಥನದ, ಪರೀಕ್ಷಣದ, ಅನ್ವೇಷಣದ ಹಾಗೂ ಯಾಥಾರ್ಥ್ಯ ಸ್ಥಾಪನೆಯ ಪ್ರವೃತ್ತಿ ಮೊದಲಿನಿಂದಲೇ ಇದ್ದುದರಿಂದ ಆಜೀವವೂ ಅವರದು ಸಂಶೋಧನವ್ಯವಸಾಯವೇ ಆಯಿತು.

'ಮೂಲಾವಿದ್ಯಾ'

'ಅವಿದ್ಯೆ'ಗೆ ಸಂಬಂಧಿಸಿದಂತೆ 'ಮೂಲ ಅವಿದ್ಯೆ' ಎಂಬ ಕಲ್ಪನೆ ಶಂಕರಸಮ್ಮತವಲ್ಲದಿದ್ದರೂ ಪಂಚಪಾದಿಕಾಕಾರರಿಂದ ಪ್ರವೃತ್ತವಾಗಿ ನೆಲೆಗೊಂಡಿತು – ಎಂಬ ಸ್ವಾಮಿಗಳ ಮಂಡನೆಯು ಅವರ ಗುರುಸ್ಥಾನೀಯರಾದ ವಿರೂಪಾಕ್ಷಶಾಸ್ತ್ರಿಗಳೂ ಸೇರಿದಂತೆ ಹಲವರ ದೃಷ್ಟಿಯಲ್ಲಿ ಸಂಪ್ರದಾಯವಿರುದ್ಧವಾದೀತೆಂಬ ಅಭಿಪ್ರಾಯ ಹೊಮ್ಮಿದರೂ, ಸ್ವಾಮಿಗಳು ತಮ್ಮಲ್ಲಿ ಮೂಡಿದ್ದ ನಿಶ್ಚಯದಿಂದಾಗಿ ತಮ್ಮ ನಿಲವನ್ನು ದೃಢವಾಗಿ ಮುಂದೊತ್ತುತ್ತಹೋದರು. 1920–1930ರ ದಶಕಗಳಲ್ಲಿ ಇದು ಪಂಡಿತವಲಯಗಳಲ್ಲಿ ತೀಕ್ಷ್ಣವಾದ ವಿವಾದಗಳಿಗೆ ಚೋದನೆಯನ್ನು ನೀಡಿತ್ತು.

'ಮೂಲ ಅವಿದ್ಯೆ' ಎಂಬ ಕಲ್ಪನೆಯು ಶಾಂಕರಭಾಷ್ಯಕ್ಕೆ ಸಮ್ಮತವೇ ಎಂದು ಪ್ರತಿಪಾದಿಸಿ ವಿದ್ವಾನ್

ಕೋಡೂರು ಕೃಷ್ಣ ಜೋಯಿಸರು, ಪಾಲಘಾಟ್ ನಾರಾಯಣಶಾಸ್ತ್ರಿಗಳು, ಪಾಟನಕರ ಚಂದ್ರಶೇಖರಶಾಸ್ತ್ರಿಗಳು ಮೊದಲಾದವರು ವಾದಪ್ರಬಂಧಗಳನ್ನು ಪ್ರಕಟಿಸಿದರೆ 'ಮೂಲ ಅವಿದ್ಯೆ' ಎಂಬ ಕಲ್ಪನೆಯು ಶಾಂಕರಭಾಷ್ಯ ವಿರುದ್ಧ ಎಂಬ ಸ್ವಾಮಿಗಳ ನಿಲವನ್ನು ಸಮರ್ಥಿಸಿದವರು ವಿದ್ವಾನ್ ವಿಠ್ಠಲಶಾಸ್ತ್ರಿಗಳು, ವಿದ್ವಾನ್ ಅನಂತಮೂರ್ತಿಶಾಸ್ತ್ರಿಗಳು ಮೊದಲಾದವರು.

ಒಟ್ಟಿನ ಮೇಲೆ ಈಗಲೂ ಕಗ್ಗಂಟಾಗಿಯೇ ಉಳಿದಿರುವ ಶಾಸ್ತ್ರಸೂಕ್ಷ್ಮತೆಗಳ ಪೈಕಿ ಇದೂ ಒಂದು ಎನ್ನಬಹುದು. ಏನೇ ಆದರೂ, ಈ ಸೂಕ್ಷ್ಮ ವಿಷಯವನ್ನು ಸ್ಫೋಟಮಾಡಿದವರಂತೂ ಸ್ವಾಮಿಗಳೇ ಎಂದು ಒಪ್ಪಬೇಕು. ಅವರ ಈ ದಿಕ್ಕಿನ ಚಿಂತನೆಯನ್ನು ಬೀಜರೂಪದಲ್ಲಿ ಪ್ರಚೋದಿಸಿದ್ದವರು ಅವರ ಗುರುಸ್ಥಾನೀಯರಾದ ಕೆ. ಎ. ಕೃಷ್ಣಸ್ವಾಮಿ ಅಯ್ಯರ್.

ಅಸದೃಶ ಸಾಧನೆ

ಸ್ವಾಮಿಗಳ ಗ್ರಂಥರಚನೆಯ ಗಾತ್ರವೇ ದಿಗ್ಭ್ರಮೆ ತರಿಸುವಂತಹದು. ಅವರ ಪ್ರಸ್ಥಾನತ್ರಯ ಭಾಷ್ಯಾನುವಾದ ಸಂಪುಟಗಳೇ ದೊಡ್ಡ ಗಾತ್ರದಲ್ಲಿ 8000 ಪುಟಗಳಷ್ಟು ಇವೆ. ಇವಲ್ಲದೆ ಆಚಾರ್ಯರ ಎಲ್ಲ ಪ್ರಕರಣಗ್ರಂಥಗಳನ್ನೂ ಅನುವಾದಿಸಿಕೊಟ್ಟಿದ್ದಾರೆ. ಸ್ವಾಮಿಗಳವೇ ಸ್ವತಂತ್ರ ರಚನೆಗಳಾದ 'ಪರಮಾರ್ಥ–ಚಿಂತಾಮಣಿ' ಮೊದಲಾದ ಗ್ರಂಥಗಳಂತೂ ವೇದಾಂತದರ್ಶನಕ್ಕೆ ಅಪೂರ್ವ ನೂತನ ಕೊಡುಗೆಗಳೇ ಆಗಿವೆ.

ಸ್ವಾಮಿಗಳು ಸಂಪ್ರದಾಯಜಡರಲ್ಲವೆನ್ನಲು ಅವರು ಹೃದಯಂಗಮವಾಗಿ ರಚಿಸಿರುವ ಬೌದ್ಧಮತಧಾರೆಯ 'ಧಮ್ಮಪದ', ಬ್ರಹ್ಮಸೂತ್ರಗಳ ಮೇಲಣ ಭಗವದ್ರಾಮಾನುಜಾಚಾರ್ಯರ 'ಶ್ರೀಭಾಷ್ಯ' ಮೊದಲಾದ ಅನ್ಯಧಾರೆಗಳ ಆಧಾರಕೃತಿಗಳ ಅನುವಾದಗಳು ಸಾಕ್ಷ್ಯಗಳಾಗಿವೆ.

ಸ್ವಾಮಿಗಳಿಗೆ ಅತ್ಯಂತ ನಿಕಟವರ್ತಿಗಳೂ ಸ್ವಯಂ ಪ್ರಕಾಂಡ ವೇದಾಂತಜ್ಞರೂ ಆಗಿದ್ದ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಗಳು (ಪೂರ್ವಾಶ್ರಮದಲ್ಲಿ ಎಸ್. ವಿಠ್ಠಲಶಾಸ್ತ್ರಿಗಳು) ಒಂದು ಹೃದಯಂಗಮ ಸನ್ನಿವೇಶವನ್ನು ದಾಖಲೆ ಮಾಡಿದ್ದಾರೆ. ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಶ್ರೀ ವಿಠ್ಠಲಶಾಸ್ತ್ರಿಗಳೊಡನೆ ತಮಿಳುನಾಡು ಪ್ರವಾಸದಲ್ಲಿದ್ದಾಗ ಕಾರೈಕುಡಿಯಲ್ಲಿ ಕಾಂಚಿ ಪರಮಾಚಾರ್ಯರ ಮೊಕ್ಕಾಂ ಇದ್ದುದು ತಿಳಿದುಬಂದು ಆ ಮಹಾಮಹಿಮರ ಸಂದರ್ಶನಕ್ಕೆ ತೆರಳಿದರು. ಪರಮಾಚಾರ್ಯರು ವಿಠ್ಠಲಶಾಸ್ತ್ರಿಗಳನ್ನು ಕೇಳಿದರು: **"ಶಾಸ್ತ್ರಿಗಳೇ, 'ಆಸುಪ್ತೇರಾಮೃತೇಃ ಕಾಲಂ ನಯೇದ್ ವೇದಾಂತಚಿಂತಯಾ' ಎಂಬುದರ ಅಭಿಪ್ರಾಯವೇನು?"**

ಶಾಸ್ತ್ರಿಗಳು **"ಮನುಷ್ಯರು ಎಚ್ಚರವಾದಾಗಿನಿಂದ ನಿದ್ರಿಸುವವರೆಗೂ ವೇದಾಂತ ಚಿಂತನೆಯಲ್ಲಿ ಕಳೆಯಬೇಕು"** ಎಂದು ಹೇಳಿದರು. ಪರಮಚಾರ್ಯರು ಮುಗುಳ್ನಕ್ಕು **"ಆ ವಾಕ್ಯಕ್ಕೆ ಜೀವಂತ ಉದಾಹರಣೆಯೆಂದರೆ ಈ ನಿಮ್ಮ ಸ್ವಾಮಿಗಳು!"** – ಎಂದು ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಕಡೆಗೆ ಬೊಟ್ಟುಮಾಡಿ ಹೇಳಿದರಂತೆ. ಸ್ವಾಮಿಗಳು ಸಾಧಿಸಿದ್ದ ಉನ್ನತಿಗೆ ಮೇಲಣ ಪರಮಾಚಾರ್ಯರ ಉದ್ಗಾರಕ್ಕಿಂತ ಅನ್ಯ ಪ್ರಮಾಣ ಇರುವುದು ಸಾಧ್ಯವಿಲ್ಲ.

ಋಷಿಋಣ ಸಲ್ಲಿಸೋಣ

ದೇಶದಲ್ಲಿಯೇ ಅಪೂರ್ವವಾಗಿ ಅಗಾಧ ಪ್ರಮಾಣದಲ್ಲಿ ಶಾಂಕರವೇದಾಂತದರ್ಶನದ ಪ್ರಸಾರವನ್ನು ಮಾಡಿದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಾಧನೆಯು ವೇದಾಂತಾಸಕ್ತ ವಲಯಗಳಲ್ಲಿ ಒಂದಷ್ಟು ಪ್ರಚಾರವನ್ನು ಆ ಸಾಧನೆಯ ಅನನ್ಯತೆಯ ಕಾರಣದಿಂದಾಗಿ ಪಡೆದುಕೊಂಡದ್ದು ಹೌದು. ಆದರೆ ಆ ಅನುಪಮ ಸಾಧನೆಗೆ ನ್ಯಾಯವಾಗಿ ದೊರೆಯಬೇಕಾಗಿದ್ದಷ್ಟು ಮಟ್ಟದ ಯಾವ ಗೌರವ–ಮನ್ನಣೆಗಳೂ ಸಲ್ಲದಿದ್ದುದು ಒಂದು ವಿಪರ್ಯಾಸವೆಂದೇ ಖೇದದಿಂದ ಹೇಳಬೇಕಾಗಿದೆ. ವಿರಕ್ತರೂ ಸಂಮಾನದೂರರೂ ಆದ ಆ ಮಹನೀಯರೇನೊ ನಿರಂತರ ಜ್ಞಾನೋಪಾಸನೆಯಿಂದ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡು ಮುಕ್ತರಾದರು. ಆದರೆ ಸಮಾಜವು ಸ್ವಾಮಿಗಳಿಗೆ ಸಹಜವಾಗಿ ಸಲ್ಲಬೇಕಾಗಿದ್ದ ಋಷಿಋಣವನ್ನು ತೀರಿಸಿತೆನ್ನಲಾಗದು. ಈ ದೊಡ್ಡ ಲೋಪವು ಸ್ವಾಮಿಗಳು ಬ್ರಹ್ಮೈಕ್ಯರಾಗಿ ನಾಲ್ಕೂವರೆ ದಶಕಗಳು ಕಳೆದು ಇದೀಗ 'ಅಧ್ಯಾತ್ಮಪ್ರಕಾಶಕಾರ್ಯಾಲಯ'ದ ಸ್ಥಾಪನೆಯ ಶತಮಾನದ ಸಂದರ್ಭದಲ್ಲಿ ಯಾದರೂ ಪರಿಮಾರ್ಜನೆಗೊಂಡೀತೆಂದು ಆಶಿಸೋಣ. ಬಹುಶಃ ಶುದ್ಧ ಜ್ಞಾನೋಪಾಸಕ ಕ್ಷೇತ್ರದಲ್ಲಿ ಬೆಡಗು–ಬಿನ್ನಾಣ ಆಕರ್ಷಣೆಗಳು ಇಲ್ಲದಿರುವುದರಿಂದ ಇಂತಹ ಕರ್ತವ್ಯಲೋಪಗಳು ಘಟಿಸುತ್ತವೇನೋ!

ಸ್ವಾಮಿಗಳು ಕನ್ನಡ ಓದುಗರಿಗೆ ಅತ್ಯಂತ ನಿಷ್ಕೃಷ್ಟಮಟ್ಟದಲ್ಲಿ ಲಭ್ಯವಾಗಿಸಿರುವ ಪ್ರಸ್ಥಾನತ್ರಯದ ಅನುವಾದಗಳೂ ಅನ್ಯ ಪ್ರಕರಣಗ್ರಂಥಗಳ ಅನುವಾದಗಳೂ ಸ್ವತಂತ್ರ ಗ್ರಂಥಗಳೂ ಕನ್ನಡಭಾಷೆಗೂ ವೇದಾಂತಕ್ಷೇತ್ರಕ್ಕೂ ನೀಡಿರುವ ಕೊಡುಗೆ ಚಿರಕಾಲ ಉಳಿಯುತ್ತದೆಂಬುದು ನಿಸ್ಸಂಶಯ. ಸ್ವಾಮಿಗಳ ಈ ಹೋಲಿಕೆಯಿಲ್ಲದ ವಾಙ್ಮಯಸೇವೆಗೆ ಈಗಲಾದರೂ ನಮನಗಳನ್ನು ಸಲ್ಲಿಸೋಣ. ಸ್ವಾಮಿಗಳಂತಹ ನಿಃಸ್ಪೃಹರು ಸಮಾಜದಿಂದ ಬಯಸುವ 'ನಮನ' ಸಮರ್ಪಣೆಯೆಂದರೆ ಅವರು ಉಳಿಸಿಹೋಗಿರುವ ಅಧ್ಯಾತ್ಮಸಾಹಿತ್ಯರಾಶಿಯ ಅಧ್ಯಯನ–ಪ್ರಸರಣಗಳು ಮತ್ತು ಸ್ವಾಮಿಗಳು ನಿರಂತರ ನಡೆಸುತ್ತಿದ್ದಂತಹ ವೇದಾಂತಶಿಬಿರಗಳ ವ್ಯಾಪಕ ಆಯೋಜನೆ. ಇದು ಎಲ್ಲ ದೃಷ್ಟಿಗಳಿಂದಲೂ ಕಲ್ಯಾಣಕಾರಿಯಾದೀತು. ಸಮಾಜದಲ್ಲಿನ ಆಢ್ಯರು ಸ್ವಾಮಿಗಳ ಜನಪ್ರಿಯ ಕೃತಿಗಳ ದಾನರೂಪದ ಪ್ರಸಾರವನ್ನು ಪ್ರಾಯೋಜಿಸಬಹುದು; ಈಗಲೂ ಹಿಂದಿನಂತೆಯೆ ಮುಂದುವರಿಯುತ್ತಿರುವ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಚಟುವಟಿಕೆಗಳನ್ನು ಹೆಚ್ಚು ವ್ಯಾಪಕಗೊಳಿಸಲು ನೆರವಾಗಬಹುದು; ಸ್ವಾಮಿಗಳ ಜೀವನ–ಸಾಧನೆಗಳನ್ನು ಪರಿಚಯಿಸುವ ಬರಹವನ್ನು ವಿವಿಧ ಭಾಷೆಗಳಿಗೆ ತರ್ಜುಮೆ ಮಾಡಿಸಿ ಪ್ರಸಾರ ಮಾಡಬಹುದು.

॥ ಇತಿ ಶಿವಂ ॥

ಜ್ಞಾನ–ಭಕ್ತಿ–ಕರ್ಮ–ಸಮನ್ವಯ

ಶ್ರೀಶ್ರೀಗಳವರನ್ನು ಅವರ ಪೂರ್ವಾಶ್ರಮದ ಕಾಲದಿಂದ ತಿಳಿದಿರುವವರಲ್ಲಿ ನಾನೂ ಒಬ್ಬ. ಆಗ ಶ್ರೀಶ್ರೀಗಳವರು ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮಾ ಎಂದು ಸುವಿಖ್ಯಾತರಾಗಿ ಬೆಂಗಳೂರು ಕೋಟೆಯಲ್ಲಿದ್ದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಇಂಗ್ಲಿಷ್ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಆಗ ಆ

ಕಾಲೇಜು ಟಿಪ್ಪು ಸುಲ್ತಾನ್ ಅರಮನೆಗೆದುರಾಗಿ ಈಗ ಚಂದ್ರಶೇಖರಯ್ಯರ್ ಪಾರ್ವತಮ್ಮ ಜ್ಞಾಪಕಾರ್ಥವಾದ ಪ್ರಸೂತಿ ಆಸ್ಪತ್ರೆಯಿರುವ ಜಾಗದಲ್ಲಿ ಇತ್ತು, ಮತ್ತು ಆಗ ಅದರಲ್ಲಿ ಸ್ವಲ್ಪಮಟ್ಟಿಗೆ ಸ್ಕೂಲ್ ರೀತಿಯ ಇಂಗ್ಲಿಷ್ ಪಾಠವೂ ನಡೆಯುತ್ತಿತ್ತು. ಶ್ರೀ ಸುಬ್ರಹ್ಮಣ್ಯಶರ್ಮಾರವರು ಒಳ್ಳೆಯ ಬೋಧಕರೆಂದು ಹೆಸರಾಗಿದ್ದರು.

* * * * *

ಶ್ರೀಶ್ರೀಗಳವರಲ್ಲಿ ಮೆಚ್ಚತಕ್ಕದ್ದು ಅವರ ಆಶ್ರಮಸ್ವೀಕಾರವೊಂದೇ ಅಲ್ಲ. ಅವರ ಪಾಂಡಿತ್ಯ ಅದ್ಭುತವಾದದ್ದು. ಸಂಸ್ಕೃತ, ಸಾಹಿತ್ಯ, ವ್ಯಾಕರಣ ಮೊದಲಾದ ಭಾಗಗಳಲ್ಲಿಯೂ ತರ್ಕ, ಮೀಮಾಂಸಾದಿಗಳಲ್ಲಿಯೂ ಅವರಿಗಿರುವ ಪಾಂಡಿತ್ಯ ಪ್ರಮಾಣಭೂತವಾದದ್ದೆಂದು ತಕ್ಕ ಅಧಿಕಾರಿಗಳಾದ ಪಂಡಿತರು ನನ್ನೊಡನೆ ಹೇಳಿದ್ದಾರೆ. ಶ್ರೀ ಸ್ವಾಮಿಗಳ ಕರ್ಮನಿಷ್ಠೆ, ಆಶ್ರಮನಿಷ್ಠೆಗಳು ಸರ್ವಪೂಜ್ಯವಾಗಿವೆ. ಅವರ ಪ್ರವಚನಶೈಲಿಯ ಸೊಗಸನ್ನು ನಾನು ಮಾತಿನಿಂದ ವರ್ಣಿಸಲಾರೆ. ಅವರ ಉಪನ್ಯಾಸಗಳು ವಿಶದವಾಗಿ, ಮನೋರಂಜಕವಾಗಿ, ಎಲ್ಲರಿಗೂ ಮನಸ್ಸಿನ ಒಳಗಡೆ ರುಜುವಾತು ಕೊಡಬಲ್ಲವಾಗಿರುತ್ತವೆ.

* * * * *

[ಶ್ರೀಶ್ರೀಗಳು ಬೆಂಗಳೂರು ವಾಸ್ತವ್ಯದಲ್ಲಿದ್ದಾಗ] ಅವರು ಶಸ್ತ್ರಚಿಕಿತ್ಸೆಗಾಗಿ ಒಂದು ಚಿಕಿತ್ಸಾಲಯವನ್ನು ಸೇರಬೇಕಾಗಿತ್ತು. ಅಲ್ಲಿಂದ ಅವರು ಸ್ವಸ್ಥಾನಕ್ಕೆ ಹಿಂದಿರುಗಿದ ಬಳಿಕ ಮತ್ತು ಹದಿನೈದು ದಿವಸವಾದ ಮೇಲೆ ನಾನು ದರ್ಶನಕ್ಕೆಂದು ಹೋಗಿದ್ದೆ. ಆಗ ಬಸವನಗುಡಿಯಲ್ಲಿ ಎಲ್. ಶ್ರೀನಿವಾಸಯ್ಯಂಗಾರ್ಯರದೆಂದು ಹೆಸರಾಗಿದ್ದ ದೊಡ್ಡ ಮನೆಯಲ್ಲಿದ್ದರು. ಹೊತ್ತು ಬಹುಶಃ ಮೂರುವರೆ–ನಾಲ್ಕು. ನಾನು ಅಲ್ಲಿಗೆ ಬಂದದ್ದನ್ನು ಶ್ರೀಗಳವರು ಕೇಳಿ ನನ್ನನ್ನು ಅನುಗ್ರಹಿಸಲು ತಾವಿದ್ದ ಕೋಣೆಯಿಂದ ಹೊರಗೆ ಕುಳಿತು ದೇಕಿಕೊಂಡೇ ಬಂದರು. ದೇಹ ದುರ್ಬಲವಾಗಿತ್ತು. ಆದರೆ ಮುಖ ಮುಗುಳ್ನಗೆಯಿಂದ ಕೂಡಿತ್ತು. ನಾನು ಹಜಾರದಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಸಣ್ಣ ಬೂದಿರಾಶಿಗಳ ಕಡೆಗೆ ಕಣ್ಣು ಹೊರಳಿಸಿದೆ. ಶ್ರೀಗಳವರು ನನ್ನ ಇಂಗಿತವನ್ನು ಗ್ರಹಿಸಿ ಹೇಳಿದರು: "ಆಸ್ಪತ್ರೆಯಿಂದ ಬಂದಮೇಲೆ ಪಂಚಗವ್ಯ ಮಾಡಿಕೊಂಡದ್ದಾಯಿತು; ಹೋಮ ಮಾಡಿದ್ದಾಯಿತು. ಅದರದು ಈ ಬೂದಿ."

ಈ ಸಂಗತಿಯನ್ನು ಇಲ್ಲಿ ಹೇಳಿರುವುದೇತಕ್ಕೆಂದರೆ ಸ್ವಾಮಿಗಳವರ ಶಾಸ್ತ್ರಶ್ರದ್ಧೆಯನ್ನು ತೋರಿಸುವುದಕ್ಕಾಗಿ. ತಮ್ಮ ಸಂಸ್ಕಾರೋಪಾಸನಕ್ರಮದಲ್ಲಿ ಸ್ವಾಮಿಗಳವರು ಜ್ಞಾನ–ಭಕ್ತಿ–ಕರ್ಮಗಳನ್ನು ಸಮನ್ವಯ ಮಾಡಿಕೊಂಡಿದ್ದಾರೆ. ಇದು ನಮ್ಮಲ್ಲಿ ಪ್ರಬಲವಾಗಿದ್ದ ಒಂದು ಪ್ರಶ್ನೆಗೆ ಸರ್ವಸಮಾಧಾನಕರ ಉತ್ತರ: ಭಕ್ತಿ ಕರ್ಮಾನುಷ್ಠಾನಗಳನ್ನು ಬಿಟ್ಟು ಜ್ಞಾನವಿಲ್ಲ. ಶ್ರೀಗಳವರಲ್ಲಿ ಜ್ಞಾನ–ಕರ್ಮ–ಭಕ್ತಿಗಳು ತೀರಾ ಬೇರೆಬೇರೆಯಾಗಿ ಅಸಂಬದ್ಧಗಳಾಗಿರುವವುಗಳಲ್ಲವೆಂದು ಅವರ ಆಚಾರ ಅನುಷ್ಠಾನಗಳಿಂದ ಚೆನ್ನಾಗಿ ತೋರಿಬರುತ್ತದೆ. ಜೀವಕ್ಕೆ ಸಂಸ್ಕಾರವಾಗಬೇಕಾದದ್ದು ಮುಖ್ಯ. ಅದನ್ನು ಯಾರೂ ಬಿಡತಕ್ಕದ್ದಲ್ಲವೆಂಬುದು ಶ್ರೀಗಳವರ ಬೋಧೆಯಾಗಿದೆ.

– ಡಿ.ವಿ.ಜಿ.

ಅಪೂರ್ವ ಅದ್ವೈತಜ್ಯೋತಿ

ಶ್ರೀಶಂಕರಭಗವತ್ಪಾದರ ಅದ್ವೈತಸಿದ್ಧಾಂತವು ವೇದವೆಂಬ ಕ್ಷೀರಸಾಗರದಿಂದ ಕಡೆದು ತೆಗೆದ ಅಮೃತ. ಈ

ಅಮೃತವನ್ನುಂಡು ತೃಪ್ತರೂ ಕೃತಕೃತ್ಯರೂ ಆದ ಅನೇಕ ಮಹಾತ್ಮರು, ತಮ್ಮಂತೆ ಇತರರೂ ಶ್ರೇಯೋಭಾಗಿಗಳಾಗಲೆಂದು ಕಾರುಣ್ಯದಿಂದ ಅದನ್ನು ಹಂಚಲು ಪ್ರಯತ್ನಿಸಿದ್ದಾರೆ – ಸಾಕ್ಷಾತ್ತಾಗಿ ಶಿಷ್ಯರಿಗೆ ಬೋಧಿಸುವುದರಿಂದ ಮತ್ತು ಗ್ರಂಥಗಳ ರಚನೆಯಿಂದ. ಈ ಎರಡು ಬಗೆಯಿಂದಲೂ ತನುಮನಧನಗಳನ್ನು ಧಾರೆಯಾಗಿ ಎರೆದು ಧನ್ಯರೆನಿಸಿದ ಮಹಾತ್ಮರಲ್ಲಿ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಕೊಡುಗೆ ವಿಶಿಷ್ಟವಾದುದು.

– ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ

ಅಭಿನವಶಂಕರರ ಸಾರಸ್ವತ ಸೇವೆ

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ಉಸಿರಾಡಿದ ಒಂದೊಂದು ಗಳಿಗೆಯೂ ವೇದಾಂತಕ್ಕೇ ಮೀಸಲಾಗಿದ್ದಿತು. ಗುರುಗಳು ಕೈಗೊಂಡು ನೆರವೇರಿಸಿದ ಕೆಲಸ ಶುದ್ಧಶಾಂಕರವೆನ್ನಬಹುದಾದ ಸುಮಾರು ಒಂದು ಸಾವಿರದ ಮುನ್ನೂರು ವರ್ಷಗಳ ಹಿಂದೆ ಭಗವತ್ಪಾದರು ಮಾಡಿದ ಕೆಲಸದಂತೆ ಶುದ್ಧವೇದಾಂತಪ್ರಕ್ರಿಯೆಯನ್ನು ತಿಳಿಸಿಕೊಡುವುದು. ಔಪನಿಷದ ದರ್ಶನದ ಸಾಂಪ್ರದಾಯಿಕ ನಿಲವನ್ನು ಸ್ಪಷ್ಟಪಡಿಸಿ, ಅದನ್ನು ಮರೆಮಾಚುವ, ಹದಗೆಡಿಸುವ, ಗಾಸಿಪಡಿಸುವ ಪ್ರಯತ್ನಗಳಿಂದ ಜಿಜ್ಞಾಸುಗಳನ್ನೂ ಮುಮುಕ್ಷುಗಳನ್ನೂ ಪಾರುಮಾಡಿದವರು ಶ್ರೀಮಚ್ಛಂಕರರು. ನಮ್ಮ ಕಾಲದಲ್ಲಿಯೂ ಇಂಥದೊಂದು ಪರಿಸ್ಥಿತಿ ಮತ್ತೆ ತಲೆದೋರಿಕೊಂಡಾಗ, ಶಾಂಕರದರ್ಶನದ ನಿಲವನ್ನು ಮರೆಮಾಚಿದ ವ್ಯಾಖ್ಯಾನಗಳ ಹಿಡಿತದಿಂದ ನಮ್ಮನ್ನು ಪಾರುಮಾಡುವ ಪ್ರಯತ್ನ ಶ್ರೀಶ್ರೀಗಳವರಿಂದ ನಡೆಯಿತು.

– ವಿದ್ಯಾಲಂಕಾರ ಶಾಸ್ತ್ರಚೂಡಾಮಣಿ ಪ್ರೊ॥ ಎಸ್.ಕೆ. ರಾಮಚಂದ್ರರಾವ್

ಅಸಾಧಾರಣ ಸಾಧನೆ

ಶ್ರೀಶ್ರೀಗಳವರು ಶಾಂಕರವೇದಾಂತಪ್ರಪಂಚಕ್ಕೆ ಸಲ್ಲಿಸಿರುವ ಸೇವೆ ಅಗಾಧವಾದುದು. ಒಂದು ಅಕ್ಯಾಡೆಮಿಯು ಅಥವಾ ವಿಶ್ವವಿದ್ಯಾಲಯವು ಮಾಡಬಹುದಾದಷ್ಟು ಕೆಲಸವನ್ನು ಅವರೊಬ್ಬರೇ ಮಾಡಿರುವುದನ್ನು ನೋಡಿದರೆ 'ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಮ್' ಎಂಬ ಸೂಕ್ತಿಯು ನೆನಪಾಗುತ್ತದೆ. ಅಲ್ಲದೆ ಶ್ರೀಗಳವರ ಯಾವ ಗ್ರಂಥವನ್ನೇ ತೆಗೆದುಕೊಂಡರೂ ಅದು ಚಿಕ್ಕದಾಗಿರಲಿ, ದೊಡ್ಡದಾಗಿರಲಿ – ಸತ್ತ್ವಪೂರ್ಣವಾಗಿಯೂ ಖಚಿತವಾದ ಅಭಿಪ್ರಾಯವುಳ್ಳದ್ದಾಗಿಯೂ ಪ್ರಾಮಾಣಿಕವಾಗಿಯೂ ವಿಮರ್ಶಾತ್ಮಕವಾಗಿಯೂ ಇರುತ್ತದೆ.

ಶ್ರೀಗಳವರ ಗ್ರಂಥಗಳಲ್ಲಿರುವ ಪರಾಮರ್ಶನ ವಾಕ್ಯಗಳನ್ನು ನೋಡಿದರೆ ಓದುಗರು ಅವರ ಒಂದೇ ಪುಸ್ತಕದಿಂದ ನೂರು ಪುಸ್ತಕಗಳಲ್ಲಿ ಸಂಗ್ರಹಿಸಬಹುದಾದಷ್ಟು ವಿಚಾರಗಳ ಲಾಭವನ್ನು ಸಂಶಯವಿಲ್ಲದೆ ಪಡೆಯುತ್ತಾರೆ. ಹೀಗೆ ಪೂಜ್ಯ ಶ್ರೀಗಳವರ ಗ್ರಂಥರಚನೆ, ಗ್ರಂಥಸಂಪಾದನೆ, ಅನುವಾದ – ಎಲ್ಲವೂ ಉಚ್ಚತರಗತಿಯ ಕೆಲಸಗಳಾಗಿದ್ದು ಅವುಗಳ ಬೆಲೆಯನ್ನು ಕಟ್ಟಲು ಅಸಾಧ್ಯವೆನಿಸುತ್ತದೆ. ಅದರಲ್ಲಿಯೂ ವೇದಾಂತಕ್ಷೇತ್ರದಲ್ಲಿ ಇಂಥ ಅಸಾಧಾರಣವಾದ ಕೆಲಸ ಶತಮಾನಗಳಿಂದೀಚೆಗೆ ಆಗಿಲ್ಲವೆಂದರೆ ಅತಿಶಯೋಕ್ತಿಯೆನಿಸಲಾರದು.

– ಡಾ॥ ಎನ್.ಎಸ್. ಅನಂತರಂಗಾಚಾರ್

* * * * *

ಪರಿಶುದ್ಧ ಶಾಂಕರಾದ್ವೈತವೇದಾನ್ತ ಸಿದ್ಧಾನ್ತವೂ ಇದಕ್ಕೆ ಶ್ರೀಶ್ರೀಗಳವರ ಅಸಾಧಾರಣ ಕೊಡುಗೆಯೂ

'ಅಧ್ಯಾತ್ಮವಿದ್ಯಾಪ್ರವೀಣ' ಮಹಾಮಹೋಪಾಧ್ಯಾಯ, ಡಾ॥ ಶ್ರೀ ಕೆ.ಜಿ. ಸುಬ್ರಾಯಶರ್ಮಾ

ನಮಾಮಿ ಸಚ್ಚಿದಾನಂದಂ ಯತಿವರ್ಯಂ ಮಹಾಮತಿಮ್ ।
ವೇದವೇದಾನ್ತಸಾರಜ್ಞಂ ಸದ್ಗುರುಂ ಪ್ರಣತೋಽಸ್ಮ್ಯಹಮ್ ॥

"ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತತ್ ಯದೃಗ್ವೇದಃ"..... (ಬೃ. 2–4–10). "ತಸ್ಮಾದೃಚಃ ಸಾಮ ಯಜೂಗ್ಂಷಿ".... (ಮುಂ. 2–1–6), "ವೇದ್ಯಂ ಪವಿತ್ರಮ್ ಓಂಕಾರಃ ಋಕ್ಸಾಮ ಯಜುರೇವ ಚ" (ಭ.ಗೀ. 9–17) ಮುಂತಾದ ಶ್ರುತಿಸ್ಮೃತಿಪ್ರಮಾಣಗಳಿಂದ ಋಗಾದಿವೇದಗಳು ಭಗವನ್ತನ ಉಸಿರಾಗಿವೆ – ಎಂದು ತಿಳಿಯುತ್ತದೆ. ಈ ವೇದಗಳು ಮಂತ್ರ, ಬ್ರಾಹ್ಮಣ. ಆರಣ್ಯಕಗಳೆಂಬ ಮೂರು ಭಾಗಗಳಾಗಿದ್ದು ಸಮಸ್ತವಿಷಯಗಳನ್ನೂ ತಿಳಿಸಿಕೊಡುತ್ತಿರುವದರಿಂದ "ಸರ್ವಜ್ಞಕಲ್ಪ" ಎಂದು ಕರೆಯಲ್ಪಡುತ್ತವೆ. ಈ ವೇದಗಳ ಕೊನೆಯ ಭಾಗವಾದ ಆರಣ್ಯಕಗಳಲ್ಲಿ ವಿಶೇಷವಾಗಿ ಪರಬ್ರಹ್ಮತತ್ತ್ವದ ಸ್ವರೂಪವನ್ನೇ ವಿಚಾರ ಮಾಡಿರುತ್ತದೆ. ಈ ಭಾಗಗಳಿಗೇ "ವೇದಾನ್ತ" ಎಂದೂ "ಉಪನಿಷತ್ತುಗಳು" ಎಂದೂ ಹೆಸರು. ಇಡೀ ಜಗತ್ತಿಗೆ ಆಸ್ಪದವಾಗಿರುವ ನಿರ್ವಿಶೇಷವಾದ ಅತೀಂದ್ರಿಯವಾದ ಅದ್ವಿತೀಯಬ್ರಹ್ಮಾತ್ಮ ಸ್ವರೂಪವನ್ನು ಸಾರ್ವತ್ರಿಕಪರಿಪೂರ್ಣ ಅನುಭವ ಮತ್ತು ಅನುಭವಾನುಸಾರಿಯುಕ್ತಿಗಳಿಂದ ಈ ಉಪನಿಷತ್ತುಗಳಲ್ಲಿ ತಿಳಿಸಿರುತ್ತದೆ. ಈ ವಾಕ್ಯಗಳು ಆತ್ಮತತ್ತ್ವವನ್ನು ಇರುವಂತೆಯೇ ನೇರಾಗಿ ಸರಿಯಾಗಿ ತಿಳಿಸಿಯೇ ತಿಳಿಸುತ್ತವೆಯಾದ್ದರಿಂದ "ಪ್ರಮಾಣ" ಎನ್ನಿಸಿಕೊಳ್ಳುತ್ತವೆ. ಇಂಥ ಪ್ರಮಾಣಭೂತವಾಕ್ಯಗಳಿಗೆ "ಶಾಸ್ತ್ರ" ಎಂಬ ಹೆಸರೂ ಇದೆ. ಈ ಕಾರಣದಿಂದಲೇ ಶ್ರೀ ಶಂಕರಾಚಾರ್ಯರವರು ಬ್ರಹ್ಮತತ್ತ್ವವನ್ನು "ಶಾಸ್ತ್ರಪ್ರಮಾಣಕಂ" "ಶಾಸ್ತ್ರಪ್ರತಿಪಾದ್ಯಂ" ಎಂದು ಕರೆದಿರುತ್ತಾರೆ. ಈ ತತ್ತ್ವವನ್ನೇ "ಔಪನಿಷದಃ ಪುರುಷಃ" ಎಂದು ಮಹರ್ಷಿಗಳು ಕರೆಯುತ್ತಾರೆ.

ಅದ್ವಿತೀಯಪರಬ್ರಹ್ಮಾತ್ಮಸ್ವರೂಪವನ್ನೇ ತಾತ್ಪರ್ಯದಿಂದ ಉಪದೇಶಿಸುತ್ತಿರುವ ಪ್ರಮಾಣಭೂತವಾದ ಈ ಉಪನಿಷತ್ತುಗಳಿಗೆ ಶ್ರೀ ಶಂಕರಾಚಾರ್ಯರವರಿಗಿಂತ ಹಿಂದೆಯೇ ಅನೇಕರು ವ್ಯಾಖ್ಯಾನಗಳನ್ನು ಮಾಡಿದ್ದರು. ಉಪನಿಷತ್ಪ್ರಮಾಣವಾದಿಗಳಾದ ಈ ವೇದಾನ್ತಿಗಳು ಅದ್ವೈತಿಗಳೇ ಆಗಿದ್ದರೂ ವೇದಾನ್ತಗಳ ಆಳವಾದ ಮರ್ಮವನ್ನು ಸರಿಯಾಗಿ ತಿಳಿಯದೆ ನಾನಾರೀತಿಯಲ್ಲಿ ಮೋಸಹೋಗಿದ್ದರು. ಇನ್ನು ಸಾಂಖ್ಯ, ಯೋಗ, ನ್ಯಾಯ. ವೈಶೇಷಿಕ, ಮೀಮಾಂಸಾ ಮೊದಲಾದ ದರ್ಶನಕಾರರು ಕೂಡ ತಮ್ಮ ತಮ್ಮ ದರ್ಶನಕ್ಕೆ ಪೋಷಕವಾಗಿಯೇ ಈ ಉಪನಿಷದ್ವಾಕ್ಯಗಳನ್ನು ಪ್ರಮಾಣವಾಗಿ ಉದಾಹರಿಸುತ್ತಿದ್ದರು. ಸಾಂಖ್ಯರು ಮತ್ತು ಯೋಗಿಗಳಂತೂ ತಮ್ಮ ಪಾರಿಭಾಷಿಕಶಬ್ದಗಳೇ ವೇದಾಂತಗಳಲ್ಲಿಯೂ ಹೇರಳವಾಗಿ ಕಾಣುತ್ತಿವೆ ಎಂದು ಭ್ರಾನ್ತರಾಗಿ "ವೇದಾನ್ತದರ್ಶನ"ವೆಂದರೆ "ಸಾಂಖ್ಯಯೋಗದರ್ಶನಗಳೇ" ಎಂದು ಪ್ರಚಾರಮಾಡುತ್ತಿದ್ದರು. **ಹೀಗಾಗಿ ತತ್ತ್ವಜಿಜ್ಞಾಸುಗಳಾದ ನಿಜವಾದ ಮುಮುಕ್ಷುಗಳಿಗೆ ಉಪನಿಷತ್ತುಗಳ ನಿಜವಾದ ಮತ್ತು ಸರಿಯಾದ ಉಪದೇಶವು ಯಾವದೆಂದು ಗೊತ್ತಾಗದೆ ಅವರು ಪರಮಾರ್ಥತತ್ತ್ವದಿಂದ ವಂಚಿತರಾಗುತ್ತಿದ್ದರು.** ತನ್ನ ಉಸಿರಾಗಿ ಬಂದಿರುವ (ತನ್ನ ಉಪದೇಶಗಳಾದ), ಆತ್ಮತತ್ತ್ವವನ್ನು ತಿಳಿಯಲು ಏಕೈಕ ಪ್ರಮಾಣವಾಗಿರುವ

ಉಪನಿಷದ್ವಾಕ್ಯಗಳಿಗೆ ಆಗಿದ್ದ ಈ ವಿಶುದ್ಧನಾನಾರ್ಥಗಳನ್ನು ನೋಡಿ ಸಹಿಸಲಾರದೆ ಸರ್ವಜ್ಞನಾದ ಆ ಪರಮೇಶ್ವರನೇ ಉಪನಿಷತ್ತುಗಳಿಗೆ ಸರಿಯಾದ ಅರ್ಥವನ್ನು ತಾನೇ ಸ್ವತಃ ವ್ಯಾಖ್ಯಾನದ ಮೂಲಕ ತಿಳಿಸುವದಕ್ಕಾಗಿಯೋ ಎನ್ನುವಂತೆ **ಶ್ರೀ ಶಂಕರಾಚಾರ್ಯರ ರೂಪದಿಂದ ಅವತಾರ ಮಾಡಿದನು! "**ಏತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ**"** (ಇದೆಲ್ಲವೂ ಅದ್ವಿತೀಯನಾದ ಆತ್ಮನೇ, ಅವನೊಬ್ಬನೇ ಸತ್ಯ. ಆತನೇ ನಮ್ಮೆಲ್ಲರಿಗೂ ಆತ್ಮನು) ಛಾಂ. 6–8–7 ಎಂಬಿದೇ ಸಕಲ ವೇದಗಳ, ಶಾಸ್ತ್ರಗಳ, ಪುರಾಣಗಳ ಮುಖ್ಯವಾದ ನೇರಾದ ಉಪದೇಶ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡು **ಶ್ರೀ ಶಂಕರಭಗವತ್ಪೂಜ್ಯಪಾದಾಚಾರ್ಯರವರು** ಪ್ರಧಾನವಾದ ಈಶಾದಿ ದಶೋಪನಿತ್ತುಗಳಿಗೂ ಭಾಷ್ಯಗಳನ್ನು ರಚಿಸಿ ಅವುಗಳಲ್ಲಿ ಅಡಕವಾಗಿರುವ ಪರಮಾರ್ಥಸತ್ಯವಾದ ಅದ್ವೈತಸಿದ್ಧಾಂತತತ್ತ್ವವನ್ನು ಮುಮುಕ್ಷುಗಳಿಗೆ ಅನುಗ್ರಹಿಸಿರುತ್ತಾರೆ. ಇಷ್ಟೇ ಅಲ್ಲದೆ ಬಾದರಾಯಣಪ್ರಣೀತವಾದ **"ವೇದಾನ್ತಮೀಮಾಂಸಾಶಾಸ್ತ್ರ", "ಶಾರೀರಕಮೀಮಾಂಸಾಶಾಸ್ತ್ರ"** ಎಂದು ಕರೆಯಲ್ಪಡುತ್ತಿರುವ **ಬ್ರಹ್ಮ (ವೇದಾನ್ತ) ಸೂತ್ರಗಳಿಗೂ, ಸಾಕ್ಷಾತ್ ಶ್ರೀ ಕೃಷ್ಣಪರಮಾತ್ಮನ ಮುಖಾರವಿಂದದಿಂದಲೇ ಮುಮುಕ್ಷುಗಳ ಉದ್ಧಾರಕ್ಕಾಗಿ ಉಪದೇಶಿಸಲ್ಪಟ್ಟು ಸರ್ವಜ್ಞರಾದ** ಭಗವಾನ್ ವೇದವ್ಯಾಸದಿಂದ ರಚಿಸಲ್ಪಟ್ಟಿರುವ **ಶ್ರೀಮದ್ಭಗವದ್ಗೀತೆಗೂ ಶ್ರೀಶಂಕರರು ಉಪನಿಷದ್ವಾಕ್ಯಗಳಿಗನುಸಾರವಾಗಿ ಭಾಷ್ಯಗಳನ್ನು ರಚಿಸಿ ಮುಮುಕ್ಷುಪ್ರಪಂಚಕ್ಕೆ ಅತ್ಯಂತ ಹೆಚ್ಚಿನ ಅನುಗ್ರಹವನ್ನು ಮಾಡಿರುತ್ತಾರೆ.** ತಮ್ಮ ಪರಮಗುರುಗಳಾದ **ಶ್ರೀಗೌಡಪಾದಾಚಾರ್ಯರವರ ಮಾಂಡೂಕ್ಯಕಾರಿಕೆಗಳಿಗೂ ಶ್ರೀಶಂಕರರು ಭಾಷ್ಯವನ್ನು ರಚಿಸಿದ್ದಾರೆ.** ವೇದಾನ್ತಪ್ರಪಂಚದ ಮೂಲೆಮೂಲೆಗಳಲ್ಲಿಯೂ ಅದ್ವೈತತತ್ತ್ವವನ್ನು ಗುಡುಗಾಡುತ್ತಾ ಮುಮುಕ್ಷುಗಳಿಗೆ ಪರಮಾನಂದದ ಸೂರೆಯನ್ನೇ ಸುರಿಸುತ್ತಿರುವ ಈ ಮೂರೂ ಭಾಷ್ಯಗಳಿಗೆ ಒಟ್ಟು **ಪ್ರಸ್ಥಾನತ್ರಯಭಾಷ್ಯಗಳು** ಎಂದು ಹೆಸರು. ಇಂಥ ಸರಳಸುಂದರವೂ ಅತ್ಯಂತ ಗಂಭೀರವೂ ಆಗಿರುವ ಶಾಂಕರಭಾಷ್ಯಗಳಲ್ಲಿ ಮಧ್ಯೇ ಮಧ್ಯೇ ಒದಗಬಹುದಾದ ಕೆಲವು ಗ್ರಂಥಗ್ರಂಥಿಗಳನ್ನೂ ವಿಷಯ ಗ್ರಂಥಿಗಳನ್ನೂ ತುಂಡು ತುಂಡು ಮಾಡಿ ಈ ಸದ್ಯೋಮುಕ್ತಿಯೆಂಬ ಜೀವನ್ಮುಕ್ತಿಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡುವದರ ಮೂಲಕ ತತ್ತ್ವಜಿಜ್ಞಾಸುಗಳಿಗೆ ಪರಮೋಪಕಾರವನ್ನು ಮಾಡುವದಕ್ಕಾಗಿ ಶ್ರೀಶಂಕರರ ಸಾಕ್ಷಾಚ್ಛಿಷ್ಯರಾದ **ಶ್ರೀಶ್ರೀಸುರೇಶ್ವರಾಚಾರ್ಯರವರು 1) ಬೃಹದಾರಣ್ಯಕೋಪನಿಷದ್ಭಾಷ್ಯವಾರ್ತಿಕ 2) ತೈತ್ತಿರೀಯೋಪನಿಷದ್ಭಾಷ್ಯ ವಾರ್ತಿಕ ಮತ್ತು 3) ನೈಷ್ಕರ್ಮ್ಯಸಿದ್ಧಿಗಳೆಂಬ ಮೂರು ಮೇರುಗ್ರಂಥಗಳನ್ನು ಬರೆದು ಅನುಗ್ರಹಿಸಿರುತ್ತಾರೆ. ಈ ಮೂವರೂ ಶಂ.(ಮಂಗಳ) ಕರ–ರೂಪರಾದ ಆಚಾರ್ಯರುಗಳು ತಮ್ಮ ಕೃತಿರತ್ನಗಳ ಮೂಲಕ ಜಗತ್ತಿಗೆ ಮಾಡಿರುವ ಉಪದೇಶಗಳನ್ನೇ ನಾವು ಈಗ ಇಲ್ಲಿ "ಪರಿಶುದ್ಧಶಾಂಕರಾದ್ವೈತವೇದಾಂತಸಿದ್ಧಾನ್ತ" ಎಂದು ಕರೆದಿರುವದು.** ಈ ಉಪದೇಶಗಳನ್ನು ಸರಿಯಾಗಿ ಅನುಭವದಿಂದ ತಿಳಿದೊಡನೆಯೇ ಮುಮುಕ್ಷುವಾದವನು ಅನರ್ಥರೂಪವಾದ ಈ ಸಕಲಸಂಸಾರಬಂಧನಗಳಿಂದಲೂ ಬಿಡುಗಡೆಯನ್ನು ಹೊಂದಿ **ಸಚ್ಚಿದಾನಂದ ಬ್ರಹ್ಮಸ್ವರೂಪನೇ ಆಗಿಬಿಡುತ್ತಾನೆ.**

ಈ ಶಾಂಕರಸಿದ್ಧಾನ್ತದ ಒಟ್ಟು ಸಾರವೇನೆಂಬುದನ್ನು ಈಗ ಅತಿಸಂಕ್ಷೇಪವಾಗಿ ನೋಡೋಣ. **ಪ್ರತಿಯೊಬ್ಬನೂ ಬಿಡಿಬಿಡಿಯಾದ ಶರೀರೇಂದ್ರಿಯಮನೋಬುದ್ಧಿಗಳೆಂಬ ಉಪಾಧಿಗಳನ್ನೇ ತಾನೆಂದು ತಪ್ಪಾಗಿ ತಿಳಿದು "ನಾನು ಹುಟ್ಟಿದ್ದೇನೆ, ಸಾಯುವೆನು" ಎಂದು ಯಾರೂ ತನಗೆ ಹೇಳಿಕೊಡದಿದ್ದರೂ ತಾನೇ ಸಹಜವಾಗಿ ತಿಳಿದುಕೊಂಡಿರುತ್ತಾನಲ್ಲವೆ! ಇದಕ್ಕೇ "ಅವಿದ್ಯಾ–ಅಧ್ಯಾಸ" ಎಂದು ಹೆಸರು. ಪ್ರತಿಯೊಬ್ಬಜೀವನೂ ತನ್ನ**

ಸ್ವರೂಪದಿಂದ ನಿಜವಾಗಿ ನೋಡಿದರೆ ಜನನ–ಮರಣ ಸುಖದುಃಖಾದಿ ಸಕಲ ಸಂಸಾರ ಧರ್ಮರಹಿತವೂ ನಿರುಪಾಧಿಕವೂ ಕಾಲದೇಶಗಳಿಂದ ಅಪರಿಚ್ಛಿನವೂ ಸಚ್ಚಿದಾನಂದಘನಸ್ವರೂಪವೂ ಪರಿಪೂರ್ಣವೂ ಆದ ಅದ್ವಿತೀಯಬ್ರಹ್ಮವೇ **ಆಗಿರುತ್ತಾನೆ**. ಹೀಗೆ ತಿಳಿದರೂ ತಿಳಿಯದಿದ್ದರೂ **ಅವನ ಸ್ವರೂಪದಲ್ಲಿ ಮಾತ್ರಾ ಯಾವ ವಿಶೇಷವೂ ಇಲ್ಲ**. ಶಾಸ್ತ್ರಾಚಾರ್ಯರ ಉಪದೇಶದಿಂದ ಈ ಸತ್ಯವಿಚಾರವನ್ನು ತಿಳಿದುಕೊಂಡ ಕೂಡಲೇ "ನಾನು ಎಂದೆಂದಿಗೂ ಸಂಸಾರಿಯಾಗಲಿ ಕರ್ತೃಭೋಕ್ತೃವಾಗಲಿ ಆಗಿರಲೇ ಇಲ್ಲ. ನಾನು ಯಾವಾಗಲೂ ಅಸಂಸಾರಿಯಾದ ಬ್ರಹ್ಮಸ್ವರೂಪನೇ ಆಗಿದ್ದೇನೆ" ಎಂದು ನಿಶ್ಚಯಿಸಿಕೊಂಡು **"ತಮೇವಂ ವಿದ್ವಾನ್ ಅಮೃತ ಇಹ ಭವತಿ"** ಎನ್ನುವಂತೆ **ಅಮೃತಸ್ವರೂಪನೇ ಆಗಿಬಿಡುತ್ತಾನೆ**. ಹೀಗೆ ತಿಳಿದುಕೊಳ್ಳದ ಮಾತ್ರಕ್ಕೆ ಇವನು ಅಮೃತಸ್ವರೂಪನಲ್ಲ, ಸಂಸಾರಿಯಾದ ಜೀವನೇ ಎಂದಾಗಲೀ, ತಿಳಿದುಕೊಂಡ ಮೇಲೆ ಈ ಸಂಸಾರಿಯಾದ ಜೀವನು ಹೊಸದಾಗಿ ಅಸಂಸಾರಿಯೂ ಅಮೃತಸ್ವರೂಪನೂ ಆದ ಬ್ರಹ್ಮವಾಗುವನು ಎಂದಾಗಲೀ **ಅಭಿಪ್ರಾಯವಲ್ಲ**. ಮತ್ತೇನೆಂದರೆ **ಹಗ್ಗವು ಹಾವಿನಂತೆ, ನೀರಿನ ಧಾರೆಯಂತೆ, ಕೋಲಿನಂತೆ ಕಂಡರೂ– ನಿಜವಾಗಿ ಯಾವಾಗಲೂ ಹಗ್ಗವೇ ಆಗಿರುವಂತೆ ಈ ಸಂಸಾರಿಯಾದ ಜೀವನಂತೆ ಕಾಣುತ್ತಿರುವ ಪರಿಚ್ಛಿನ್ನನಾದ ಆತ್ಮನು ಯಾವಾಗಲೂ (ತೋರುವಾಗಲೂ) ಅಸಂಸಾರಿಯಾಗಿರುವ ಪರಿಪೂರ್ಣ ಬ್ರಹ್ಮವೇ ಆಗಿರುತ್ತಾನೆ ಎಂದರ್ಥ**. ಭ್ರಾಂತಿಕಾಲದಲ್ಲಿ "ಇದು ನಿಜವಾಗಿಯೂ ಹಾವೇ ಆಗಿದೆ" ಎಂದು ತಿಳಿದಿರುವಾಗಲೂ, ವಿಚಾರಮಾಡಿ **"ಇಲ್ಲಿ ಇರುವುದು ಹಗ್ಗವೇ ಹೊರತು ಹಾವಲ್ಲ"** ಎಂತ ತಿಳಿದಾಗಲೂ **ವಾಸ್ತವವಾಗಿ ಇರುವದು ಯಾವಾಗಲೂ ಹಗ್ಗವೇ ಅಲ್ಲವೆ? ಹಾಗೆಯೇ ಇಲ್ಲಿಯೂ ತನ್ನ ಸ್ವರೂಪವನ್ನು ಸರಿಯಾಗಿ ತಿಳಿಯದೆ ತಪ್ಪಾಗಿ ತಿಳಿದಿರುವಾಗಲೂ ಸರಿಯಾಗಿ ತಿಳಿದಾಗಲೂ ಸ್ವರೂಪದಲ್ಲಿ ಮಾತ್ರ ಯಾವ ಬದಲಾವಣೆಯೂ ಎಂದೆಂದಿಗೂ ಆಗಲು ಸಾಧ್ಯವೇ ಇಲ್ಲ**. ಜ್ಞಾನ ಅಜ್ಞಾನದಲ್ಲಿ ಮತ್ತು ಫಲದಲ್ಲಿ ಹೆಚ್ಚುಕಡಿಮೆಯಂತೆ ತೋರಬಹುದು. ತನ್ನ ಸ್ವರೂಪವನ್ನು ಇರುವಂತೆ ಸರಿಯಾಗಿ ತಿಳಿಯದ್ದರಿಂದಲೇ ತಪ್ಪು ತಪ್ಪಾಗಿ ತಿಳಿದುಕೊಂಡು (ಅಧ್ಯಾಸದಿಂದ) ಜೀವನು ಸುಖದುಃಖಾದಿಸಕಲ ಅನರ್ಥಗಳನ್ನೂ ಅನುಭವಿಸುತ್ತಿದ್ದಾನೆ. ಸಾಧನಚತುಷ್ಟಯಸಂಪನ್ನರಾದ ಮುಮುಕ್ಷುಗಳು ಶ್ರೋತ್ರಿಯರು ಬ್ರಹ್ಮನಿಷ್ಠರೂ ಆಗಿರುವ ಸದ್ಗುರುಗಳನ್ನು ವಿನಯಶ್ರದ್ಧಾಭಕ್ತಿಗಳಿಂದ ಬಳಿಸಾರಿ ಅವರು ಅನುಗ್ರಹಿಸುವ ಅನುಭವಾನುಸಾರಿಯಾದ ಆಗಮೋಪನಿಷತ್ತ್ರಧಾನವಾದ ಆತ್ಮತತ್ತ್ವೋಪದೇಶಗಳನ್ನು ಏಕಾಗ್ರಚಿತ್ತದಿಂದ ಶ್ರವಣ ಮಾಡಿದರೆ ಅಷ್ಟರಿಂದಲೇ ಅವರಲ್ಲಿ ವಿಜ್ಞಾನವು ಉದಯಿಸಿ ಅದು ಆ ಕ್ಷಣದಲ್ಲಿಯೇ ಅನಾದಿಯಾದ ಅಧ್ಯಾಸವೆಂಬ ಅವಿದ್ಯೆಯನ್ನು ಬಾಧಿಸುತ್ತದೆ. **ಆದ್ದರಿಂದ ಆತ್ಮಜ್ಞಾನವು ಹುಟ್ಟಿದ ಕ್ಷಣದಲ್ಲಿಯೇ ಅಜ್ಞಾನವು ಪೂರಾ ಬಾಧಿತವಾಗಿಯೇ ಬಿಡುವದರಿಂದ ಸ್ವಲ್ಪವೂ ಲೇಶವು ಉಳಿಯುವುದಿಲ್ಲ. ಈ ವಿಜ್ಞಾನದಿಂದ "ನಾನು ಸದಾ ಅಮೃತಸ್ವರೂಪನಾಗಿದ್ದೇನೆ" ಎಂದು ದೊರಕುವ ಈ ಸ್ಥಿತಿಯೇ ಜೀವನ್ಮುಕ್ತಿ, ಸದ್ಯೋಮುಕ್ತಿ, ಬ್ರಹ್ಮರೂಪಾಪತ್ತಿ, ಬ್ರಾಹ್ಮೀಸ್ಥಿತಿ, ಮೋಕ್ಷ, ಕೈವಲ್ಯ, ಬ್ರಹ್ಮನಿರ್ವಾಣ, ಅಮೃತತ್ವ, ಪರಪ್ರಾಪ್ತಿ–ಎಂದು ಮುಂತಾಗಿ ಕರೆಯಲ್ಪಡುತ್ತದೆ.**

ಪರಮಪೂಜ್ಯರಾದ ಶ್ರೀ ಶಂಕರಾಚಾರ್ಯರವರು ಮಂಗಳಕರವಾದ ಈ ಮೇಲಿನ ಅಭಿಪ್ರಾಯವನ್ನು ಅತ್ಯಂತ ಸ್ಪಷ್ಟವಾಗಿ ಅತಿಸರಳಭಾಷೆಯಿಂದ ಅನೇಕ ಚರ್ಚೆಗಳ ಮೂಲಕವೂ ಪ್ರತಿಪಕ್ಷವಾದಿಗಳ ಮತಖಂಡನದ ಮೂಲಕವೂ ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪುನಃ ಪುನಃ ತಿಳಿಸಿಕೊಟ್ಟಿದ್ದಾರೆ. **ಹೀಗಿದ್ದರೂ ಮುಮುಕ್ಷುಗಳ ದುರದೃಷ್ಟವೋ ಅಥವಾ ಮಾಯಾವಿಲಾಸವೋ ಎನ್ನುವಂತೆ ಅನೇಕ ಪಂಡಿತರು ತಾವು "ವೇದಾನ್ತಿಗಳು"**

"ಶಂಕರಾನುಯಾಯಿಗಳು" ಎಂಬ ನೆಪದಿಂದ ಈ ಶಾಂಕರಸಿದ್ಧಾಂತವನ್ನು ಬೇರೆಬೇರೆಯಾಗಿಯೇ ಅಂದರೆ ಕೆಲವು ಕಡೆಗಳಲ್ಲಿ ವಿರುದ್ಧವಾಗಿಯೇ ಪ್ರಚಾರಮಾಡಿರುತ್ತಾರೆ. ಉದಾಹರಣೆಗೆ : ಶ್ರೀಶಂಕರರು "ನ ಹಿ 'ತತ್ತ್ವಮಸಿ' ಇತ್ಯಸ್ಯ ವಾಕ್ಯಸ್ಯ ಅರ್ಥಃ 'ತತ್ ತ್ವಂ ಮೃತೋ ಭವಿಷ್ಯಸಿ' ಇತ್ಯೇಂ ಪರಿಣೇತುಂ ಶಕ್ಯಃ ..... ತಸ್ಮಾದ್ಯೈಕಾನ್ತಿಕೀ ವಿದುಷಃ ಕೈವಲ್ಯಸಿದ್ಧಿಃ" (ಬೃ. ಭಾ. 3–3–32) ('ತತ್ತ್ವಮಸಿ' 'ನೀನು ಬ್ರಹ್ಮವಾಗಿದ್ದೀಯೆ' ಎಂಬ ವಾಕ್ಯಕ್ಕೆ **'ನೀನು ಸತ್ತಮೇಲೆ ಬ್ರಹ್ಮವಾಗುವೆ' ಎಂದು ಅರ್ಥವನ್ನು ಬದಲಾಯಿಸುವದು ಸಾಧ್ಯವಿಲ್ಲ.... ಆತ್ಮಜ್ಞಾನಿಗೆ ಕೈವಲ್ಯವು ಇಲ್ಲಿಯೇ ಈಗಲೇ ಆಗಿಯೇ ತೀರುತ್ತದೆ**). 'ಸಶರೀರತ್ವಸ್ಯ ಮಿಥ್ಯಾಜ್ಞಾನನಿಮಿತ್ತತ್ವಾತ್, ಅಶರೀರತ್ವಸ್ಯ ಸ್ವಾಭಾವಿಕತ್ವಾತ್" (ಬೃ. ಭಾ. 1–1–4) **(ನಾನು ಶರೀರೇಂದ್ರಿಯವುಳ್ಳವನು ಎಂಬುದೇ ತಪ್ಪುತಿಳಿವಳಿಕೆಯಿಂದ ತೋರುತ್ತಿದೆ**. ನಾನು ಯಾವಾಗಲೂ ಅಶರೀರಸ್ವರೂಪನು ಎಂಬುದೇ ಸ್ವಾಭಾವಿಕವಾಗಿರುತ್ತದೆ) ಎಂದಿರುತ್ತಾರೆ. ಹೀಗೆ ಸುಸ್ಪಷ್ಟವಾಗಿ ಜೀವನ್ಮುಕ್ತಿಯನ್ನು ತಿಳಿಸಿದ್ದರೂ ಇಂಥ ಭಾಷ್ಯವಾಕ್ಯಗಳಿಗೆ ವ್ಯಾಖ್ಯಾನಬರೆದಿರುವ ಕೆಲವರು ಪಂಡಿತರುಗಳು – ಆತ್ಮಜ್ಞಾನವು ಬಂದಮೇಲೂ ಶರೀರಾದಿಗಳು ಇದ್ದೇ ಇರುವದರಿಂದ ಇದಕ್ಕೆ ಕಾರಣವಾದ ಅವಿದ್ಯೆಯು ಸಂಪೂರ್ಣವಾಗಿ ನಾಶವಾಗದೇ ಇರುವದರಿಂದ ಮೋಕ್ಷವು ದೊರಕಿದರೂ ಅದು ಆತ್ಯಂತಿಕವಲ್ಲ. ಈ ಪ್ರಾರಬ್ಧ ಶರೀರವು ಬಿದ್ದುಹೋದ ಮೇಲೆ (ಅಂದರೆ ಸತ್ತಮೇಲೆ) ಅವಿದ್ಯೆಯು ಪೂರಾ ನಾಶವಾಗುತ್ತದೆ. ಆಗ ಮೋಕ್ಷ ಪ್ರಾಪ್ತಿಯು. ಆದ್ದರಿಂದ ಸದ್ಯೋಮುಕ್ತಿಯು ಗೌಣವು, ವಿದೇಹಮುಕ್ತಿಯೇ ಮುಖ್ಯ–ಇತ್ಯಾದಿ ಇತ್ಯಾದಿ ಹೇಳಿರುತ್ತಾರೆ.

ಹೀಗೆ ತಮ್ಮ ಭಾಷ್ಯಗಳಿಗೆ ಆಗುತ್ತಿದ್ದ ಅಪವ್ಯಾಖ್ಯಾನಗಳನ್ನೂ (ವಿರುದ್ಧವ್ಯಾಖ್ಯಾನಗಳನ್ನೂ) ತಪ್ಪು ಪ್ರಚಾರಗಳನ್ನೂ ತಮ್ಮ ದಿವ್ಯದೃಷ್ಟಿಯಿಂದ ತಿಳಿದು ಸರ್ವಜ್ಞರಾದ ಶ್ರೀಶಂಕರಾಚಾರ್ಯರವರೇ ಮತ್ತೊಮ್ಮೆ ಮುಮುಕ್ಷುಜನಗಳಿಗೆ ಅನುಗ್ರಹಮಾಡುವದಕ್ಕಾಗಿಯೂ ತಮ್ಮ ಪ್ರಸ್ಥಾನತ್ರಯಭಾಷ್ಯಗಳಿಗೆ ಸರಿಯಾದ ವ್ಯಾಖ್ಯಾನವನ್ನು ಮಾಡುವದರ ಮೂಲಕ ತಮ್ಮ ಹೃದಯದ ಅಭಿಪ್ರಾಯವನ್ನು ತಾವೇ ತಿಳಿಸುವದಕ್ಕಾಗಿಯೂ ಪುನಃ ತಾವೇ ಅವತಾರ ಮಾಡಿದರೋ ಎನ್ನುವಂತೆ ನಮ್ಮೆಲ್ಲರಿಗೂ ಪರಮಪೂಜ್ಯರಾದ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರು 5–1–1880 ರಂದು ಸೂರ್ಯೋದಯಕ್ಕೆ ಸರಿಯಾಗಿ ಶಂಕರಸೂರ್ಯನಂತೆ ಉದಿಸಿದರು.

ಶ್ರೀಶ್ರೀಗಳವರು ಶಾಸ್ತ್ರವಿಧಿಗನುಸಾರವಾಗಿ ಸಕಾಲಕ್ಕೆ ಉಪನಯನಸಂಸ್ಕಾರವನ್ನು ಹೊಂದಿ, ಕ್ರಮವಾಗಿ ಬ್ರಹ್ಮಚರ್ಯೆ, ಗಾರ್ಹಸ್ಥ್ಯಜೀವನ, ವಾನಪ್ರಸ್ಥಗಳನ್ನು ಪೂರೈಸಿದ ಮೇಲೆ ಸಾಂಪ್ರದಾಯಿಕಕ್ರಮದಿಂದ 'ಸಂನ್ಯಾಸ' ವೆಂಬ ತುರಿಯಾಶ್ರಮವನ್ನೇ ಸ್ವೀಕರಿಸಿ ಆದರ್ಶಯತಿಶ್ರೇಷ್ಠರಾಗಿದ್ದರು. ಸುಮಾರು 1961ರಲ್ಲಿ ಶ್ರೀಶ್ರೀಗಳವರು ಕಂಚೀಕಾಮಕೋಟಿಜಗದ್ಗುರುಪೀಠಾಧೀಶ್ವರರಾದ ಶಂಕರಾಚಾರ್ಯ ಶ್ರೀಶ್ರೀಚಂದ್ರಶೇಖರೇಂದ್ರಸರಸ್ವತೀ ಮಾಹಾ ಸ್ವಾಮಿಗಳನ್ನು ಸಂದರ್ಶಿಸಲು ಹೋಗಿದ್ದಾಗ ಜಗದ್ಗುರು ಶ್ರೀಶಂಕರಾಚಾರ್ಯರವರು ಜೊತೆಯಲ್ಲಿದ್ದ ವೇ॥ಬ್ರ॥ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರನ್ನು ಕುರಿತು **"ಆ ಸುಪ್ತೇರಾ ಮೃತೇಃ ಕಾಲಂ ನಯೇದ್ವೇದಾನ್ತಚಿನ್ತಯಾ ಎಂಬ ಹಿರಿಯರ ಉಕ್ತಿಗೆ ಈ ನಿಮ್ಮ ಸ್ವಾಮಿಗಳವರೇ ಜೀವನ್ತ ಉದಾಹರಣೆ" ಎಂದು ಅಪ್ಪಣೆ ಕೊಡಿಸಿದ್ದರಂತೆ.** ಇರಲಿ.

ಶ್ರೀಶ್ರೀಗಳವರು ಶಾಂಕರಪ್ರಸ್ಥಾನತ್ರಯಭಾಷ್ಯಗಳನ್ನು ಕೂಲಂಕುಷವಾಗಿ ಆಮೂಲಾಗ್ರವಾಗಿಯೂ ಪರಿಪೂರ್ಣವಾಗಿ ಆಳವಾಗಿಯೂ ಕ್ರಮವಾಗಿ ಅಭ್ಯಾಸಮಾಡಿದರು. ಆಮೇಲೆ ವಾರ್ತಿಕಕಾರರ ಗ್ರಂಥಗಳನ್ನೂ ಅನುಶಾಂಕರ (ವ್ಯಾಖ್ಯಾನ) ಗ್ರಂಥಗಳನ್ನೂ ಇತರ ದಾರ್ಶನಿಕಗ್ರಂಥಗಳನ್ನೂ ತುಲನಾತ್ಮಕದೃಷ್ಟಿಯಿಂದ

ಆಳವಾಗಿ ಪರಿಶೀಲಿಸಿದರು. ಆಗ–ಶಾಂಕರಭಾಷ್ಯಕ್ಕೆ ವಾರ್ತಿಕಗ್ರಂಥಗಳು ಪರಿಪೂರ್ಣವಾಗಿ ಅನುಗುಣವಾಗಿದೆಯೆಂದೂ ಇತರ ವ್ಯಾಖ್ಯಾನರೂಪವಾದ ಪಂಚಪಾದಿಕಾ, ಭಾಮತ್ಯಾದಿಗ್ರಂಥಗಳು ಭಾಷ್ಯಸಿದ್ಧಾಂತಕ್ಕೆ ಹೊರಚ್ಚಾದವುಗಳೆಂದೂ ಪೂರ್ಣವಾಗಿ ನಿಶ್ಚಯಿಸಿದರು. ವ್ಯಾಖ್ಯಾನಗ್ರಂಥಗಳು ಶಾಂಕರಭಾಷ್ಯಾಭಿಪ್ರಾಯಗಳನ್ನು ಅನೇಕ ಸ್ಥಳಗಳಲ್ಲಿ ಸುಸ್ಪಷ್ಟವಾಗಿ ವಿವರಿಸಿರುವದು ದಿಟ, ಇದನ್ನೇನೂ ಶ್ರೀಶ್ರೀಗಳವರು ಅಲ್ಲಗಳೆದಿಲ್ಲ. ಆದರೆ **ವ್ಯಾಖ್ಯಾನಸಿದ್ಧಾನ್ತವು ಮಾತ್ರ ಶಾಂಕರಭಾಷ್ಯಸಿದ್ಧಾಂತಕ್ಕೆ ಕೇವಲ ಬಾಹ್ಯವೆಂದಲ್ಲ, ಮತ್ತೇನೆಂದರೆ ಕೆಲವೆಡೆಗಳಲ್ಲಿ ತೀರ ವಿರುದ್ಧವಾಗಿಯೇ ಇದೆ** ಎಂಬ ಸತ್ಯಾಂಶವನ್ನು ಚೆನ್ನಾಗಿ ಮನಗಂಡ ಶ್ರೀಶ್ರೀಗಳವರು ಶಾಂಕರಸಿದ್ಧಾಂತವನ್ನು ಯಾವ ವ್ಯಾಖ್ಯಾನಗಳ ಹಾವಳಿಯೂ ಇಲ್ಲದೆ ನೇರಾಗಿ ತಿಳಿಯಿಸಿಕೊಡುವ ಸದುದ್ದೇಶದಿಂದ ಇಡೀ **ಪ್ರಸ್ಥಾನತ್ರಯಭಾಷ್ಯಗಳನ್ನು ಕನ್ನಡ ಭಾಷೆಗೆ ಅನುವಾದಿಸಿದರು.** ಸಂಸ್ಕೃತಭಾಷೆಯಲ್ಲಿಯೇ ಇರುವ ಪ್ರಸ್ಥಾನತ್ರಯಭಾಷ್ಯಗಳಿಗೆ ಸಂಸ್ಕೃತಭಾಷೆಯಲ್ಲಿಯೇ ವ್ಯಾಖ್ಯಾನವನ್ನು ಮಾಡಿ ಶಾಂಕರಸಿದ್ಧಾಂತದ ರಹಸ್ಯಗಳನ್ನು **ಸಂಸ್ಕೃತಪಂಡಿತರಿಗೂ ಪ್ರೌಢಜಿಜ್ಞಾಸುಗಳಿಗೂ ತಿಳಿಸಿರುತ್ತಾರೆ.** ಗೀತಾಭಾಷ್ಯದಲ್ಲಿರುವ ರಹಸ್ಯಗಳನ್ನು **ಗೀತಾಶಾಸ್ತ್ರಾರ್ಥವಿವೇಕಃ** ಎಂಬ ಗ್ರಂಥದಲ್ಲಿಯೂ, ಬ್ರಹ್ಮಸೂತ್ರ ಶಾಂಕರಭಾಷ್ಯದ ಮರ್ಮವನ್ನು **ಸುಗಮಾ, ಸೂತ್ರಭಾಷ್ಯಾರ್ಥತತ್ತ್ವ ವಿವೇಚಿನೀ** ಎಂಬ ಗ್ರಂಥಗಳಲ್ಲಿಯೂ, ಉಪನಿಷದ್ಭಾಷ್ಯಗಳ ತಾತ್ಪರ್ಯವೇನೆಂಬುದನ್ನು **ಭಾಷ್ಯಾರ್ಥವಿಮರ್ಶಿನೀ, ಮಾಂಡೂಕ್ಯರಹಸ್ಯವಿವೃತಿಃ** ಮೊದಲಾದ ಗ್ರಂಥರತ್ನಗಳಲ್ಲಿಯೂ ತಿಳಿಸಿರುತ್ತಾರೆ. ಶಾಂಕರಭಾಷ್ಯಗಳಿಗೆ ವ್ಯಾಖ್ಯಾನರೂಪವಾದ ಶ್ರೀಶ್ರೀಗಳವರ ಇಂಥ ಉತ್ತಮಗ್ರಂಥಗಳು ಉದಯಿಸದೇ ಹೋಗಿದ್ದರೆ ಶಾಂಕರಾದ್ವೈತಸಿದ್ಧಾಂತವೆಂಬ ಸೂರ್ಯನಿಗೆ ಕವಿತಿದ್ದ ವ್ಯಾಖ್ಯಾನ ರೂಪವಾದ ಮೋಡಗಳ ಹಾವಳಿಯೇ ಜೋರಾಗಿ ಮುಮುಕ್ಷುಗಳ ಅಜ್ಞಾನವೆಂಬ ಅಂಧಕಾರವು ನಾಶವಾಗದೆ ಅವರು ದುಃಖದಿಂದಲೇ ನರಳಬೇಕಾಗುತ್ತಿತ್ತು. **ಆದರೆ ಮುಮುಕ್ಷುಗಳ ಪುಣ್ಯದಿಂದಲೋ ಎಂಬುವಂತೆ ಶ್ರೀಶ್ರೀಗಳವರು ಅವತಾರವನ್ನು ಮಾಡಿ ಶಾಂಕರಭಾಷ್ಯಗಳಿಗೆ ಸರಿಯಾದ ಬೆಳಕನ್ನು ಚೆಲ್ಲಿ ಅವು ಹೆಚ್ಚು ಪ್ರಕಾಶವಾಗುವಂತೆ ಮಾಡಿರುತ್ತಾರೆ. ಶ್ರೀಶ್ರೀಗಳವರು ಶಾಂಕರಸಿದ್ಧಾಂತದ ಮೇಲೆ ಚೆಲ್ಲಿರುವ ಬೆಳಕಿನ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಸೂಚಿಸಿರುತ್ತೇನೆ. ಇವೇ ಶ್ರೀಶ್ರೀಗಳವರ ಕೊಡುಗೆ.**

1. **ಅಧ್ಯಾರೋಪ ಅಪವಾದ ಪ್ರಕ್ರಿಯೆಯಿಂದಲೇ ಶಾಂಕರಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬೇಕು.** 'ಅವಿದ್ಯೆಯಿಂದ ಬಂಧವಾಗಿದೆ', 'ವಿದ್ಯೆಯಿಂದ ಮೋಕ್ಷವಾಗುತ್ತದೆ' – **ಎಂಬುದೂ ಒಂದು ಅಧ್ಯಾರೋಪವೇ. 'ಇದು ಅಧ್ಯಾರೋಪ, ಇದು ಅಪವಾದ' ಎಂಬುದೂ ಒಂದು ಅಧ್ಯಾರೋಪವು.**

2. **ಅಧ್ಯಾಸವೇ ಎಲ್ಲಕ್ಕೂ ಮೂಲಕಾರಣವಾಗಿರುವದರಿಂದಲೂ** ಸ್ವಾಭಾವಿಕವಾಗಿರುವದರಿಂದಲೂ ಇದಕ್ಕೆ **ಮತ್ತೊಂದು ಕಾರಣವನ್ನು (ಕಲ್ಪಿಸಬಾರದು) ಕಲ್ಪಿಸಲಾಗದು. ಈ ಅಧ್ಯಾಸಕ್ಕೆ ಕಾಲ, ದೇಶ, ಕಾರಣದ ಅಪೇಕ್ಷೆಯಿಲ್ಲ.** ಈ ಅಧ್ಯಾಸವು–ತಪ್ಪುತಿಳಿವಳಿಕೆಯ ರೂಪವಾಗಿರುವದರಿಂದ ಸರಿಯಾದ ತಿಳಿವಳಿಕೆಯೆಂಬ ವಿದ್ಯೆಯು ಹುಟ್ಟಿದ ಕೂಡಲೇ–ಸಂಪೂರ್ಣವಾಗಿ ಬಾಧಿತವಾಗಿಬಿಡುತ್ತದೆ. ಆ ಕ್ಷಣದಲ್ಲಿಯೇ ಅವಿದ್ಯೆಯಿಂದ ತೋರುತ್ತಿದ್ದ ಎಲ್ಲ ವ್ಯವಹಾರಗಳೂ ಬಾಧಿತವಾಗಿ ಬಿಡುವುದರಿಂದ ಪುನಃ ಮಾಡಬೇಕಾದದ್ದು ಉಳಿಯುವದಿಲ್ಲ. **ಇದೇ ಜೀವನ್ಮುಕ್ತಿಯು.**

3. **ಕೈವಲ್ಯವೆಂಬ ಮೋಕ್ಷವು ಸ್ವತಸ್ಸಿದ್ಧವಾಗಿರುವದರಿಂದ ಅದನ್ನು ಸ್ವರ್ಗಾದಿಗಳಂತೆ ಸತ್ತಮೇಲೆ ಪಡೆಯ**

ಬೇಕಾಗಿಲ್ಲ. ಪಡೆಯಲು ಸಾಧ್ಯವೂ ಇಲ್ಲ. ಇದಕ್ಕೆ ಕೇವಲ ಅಧ್ಯಾಸ ಅಡ್ಡಿಯಾಗಿದೆ. ಜ್ಞಾನವು ಈ ಅಧ್ಯಾಸವನ್ನು ಪೂರಾ ಬಾಧಮಾಡಿಬಿಡುವದರಿಂದ ಅದರಿಂದ ಅಡ್ಡಿಯಾಗಿದ್ದ (ಸಹಜವಾಗಿಯೇ ಇದ್ದ) ಅಮೃತತ್ವವು ತೋರುತ್ತದೆ. ಆದ್ದರಿಂದ **'ಜ್ಞಾನವಾದ ಮೇಲೂ ಅವಿದ್ಯಾಲೇಶ ಉಳಿಯುತ್ತದೆ. ಸತ್ತಮೇಲೆ ಮೋಕ್ಷ' ಎನ್ನುವದು ತಪ್ಪು.**

4. ಶಾಸ್ತ್ರ, ಗುರು, ಶಿಷ್ಯ, ವಿದ್ಯಾ, ಅವಿದ್ಯಾ, ಬಂಧ, ಮೋಕ್ಷ–ಮುಂತಾದ ವೇದಾನ್ತವ್ಯವಹಾರವೂ–ಧರ್ಮ, ಅಧರ್ಮ, ಪುಣ್ಯ, ಪಾಪ, ಸ್ವರ್ಗ, ನರಕಾದಿ ವೈದಿಕವ್ಯವಹಾರದಂತೆ ಮತ್ತು ಕ್ರಿಯಾಕಾರಕಾದಿಲೌಕಿಕವ್ಯವಹಾರದಂತೆ ಅಧ್ಯಾಸಪುರಸ್ಸರವಾಗಿದ್ದರೂ **ಲೌಕಿಕ ವೈದಿಕ ವ್ಯವಹಾರಗಳಲ್ಲಿ ಮೊದಲೂ ಆಮೇಲೂ ಭೇದವು ಉಳಿದುಕೊಂಡೇ ಸತ್ಯವಾಗಿಯೇ ಇರುತ್ತದೆ. ಆದರೆ ವೇದಾನ್ತವ್ಯವಹಾರವು ಪ್ರಾರಂಭದಲ್ಲಿ ಸತ್ಯವಾಗಿ ಕಂಡರೂ ವಿಚಾರದ ಕೊನೆಯಲ್ಲಿ 'ಹುಸಿ' ಎಂದು ಗೊತ್ತಾಗುತ್ತದೆ.**

5. **ವೇದಾಂತಗಳು** ಆತ್ಮತತ್ತ್ವದ ವಿಷಯಕ್ಕೆ **'ಅಂತ್ಯಪ್ರಮಾಣ' ಎನ್ನಿಸಿಕೊಳ್ಳುತ್ತವೆ.** ಅಂದರೆ ಆತ್ಮ ತತ್ತ್ವವನ್ನು ಮುಮುಕ್ಷುಗಳಿಗೆ ತಿಳಿಸುವವರೆಗೆ ಮಾತ್ರ ಪ್ರಮಾಣವಾಗಿದ್ದು **ತತ್ತ್ವವನ್ನು ತಿಳಿಸಿದ ಮೇಲೆ ಆ ಕ್ಷಣದಲ್ಲಿಯೇ ತಮ್ಮ ಪ್ರಾಮಾಣ್ಯವನ್ನೂ ಕಳೆದುಕೊಂಡುಬಿಡುತ್ತವೆ. ಬ್ರಹ್ಮದ ಪ್ರಮೇಯತ್ವವನ್ನೂ ಮುಮುಕ್ಷುವಿನ ಪ್ರಮಾತೃತ್ವವನ್ನೂ ತಮ್ಮ ಪ್ರಮಾಣತ್ವವನ್ನೂ (ಪ್ರಮಾತೃಪ್ರಮಾಣಪ್ರಮೇಯವ್ಯವಹಾರವನ್ನೇ) ಕಳೆದುಬಿಡುವದರಿಂದ ವೇದಾನ್ತಗಳು "ಅಂತ್ಯಪ್ರಮಾಣ"ವೆನಸಿಕೊಳ್ಳುತ್ತವೆ.**

6. **ಉತ್ತಮಾಧಿಕಾರಿಯಾದವನಿಗೆ ಕೇವಲ ಶ್ರವಣದಿಂದಲೇ ಜ್ಞಾನವು ಉಂಟಾಗುತ್ತದೆ.** ಆದ್ದರಿಂದ ಅವನಿಗೆ ಆಮೇಲೆ ಮನನನಿದಿಧ್ಯಾಸನಗಳು ಬೇಕಾಗಿಲ್ಲ. **ಮಧ್ಯಮಾಧಿಕಾರಿಗಳಿಗೆ ಶ್ರವಣದ ಜೊತೆಗೆ ಮನನನಿದಿಧ್ಯಾಸನಗಳೂ ಬೇಕಾಗುತ್ತವೆ.**

7. **ಜ್ಞಾನಾಭಾವ, ಸಂಶಯಜ್ಞಾನ ಮತ್ತು ವಿಪರೀತಜ್ಞಾನ–ಈ ಮೂರಕ್ಕೇ ಅಜ್ಞಾನ, ಅವಿದ್ಯಾ ಎಂಬ ಹೆಸರು.** ಈ ಮೂರೂ ಅಂತಃಕರಣದ ವೃತ್ತಿರೂಪವಾಗಿರುತ್ತವೆ. **ಈ ಮೂರರಲ್ಲಿ ಜ್ಞಾನಾಭಾವವೇ ಉಳಿದೆರಡಕ್ಕೂ ಕಾರಣವಾಗಿದೆ.** ವಿಪರೀತಜ್ಞಾನಕ್ಕೆ ವಿಪರೀತಪ್ರತ್ಯಯಃ, ಮಿಥ್ಯಾಜ್ಞಾನಮ್, ಮಿಥ್ಯಾಪ್ರತೀತಿಃ, ವಿರುದ್ಧಜ್ಞಾನಮ್ ಮುಂತಾದ ಹೆಸರುಗಳಿವೆ. **ಇದು ಬ್ರಹ್ಮಜ್ಞಾನೋದಯಸಮಸಮಯದಲ್ಲೇ ಬಾಧಿತವಾಗುತ್ತದೆ.**

8. **ಒಂದು ಸಲ ಅಧ್ಯಾಸವು ವಿದ್ಯೆಯಿಂದ ಬಾಧಿತವಾದ ಮೇಲೆ ಪುನಃ ಹುಟ್ಟುವದಿಲ್ಲ.** ಏಕೆಂದರೆ 'ಬಾಧ' ಎಂದರೆ 'ಎಂದೆಂದಿಗೂ ಇರಲೇ ಇಲ್ಲ' ಎಂಬ ನಿಶ್ಚಿತವಾದ ತಿಳಿವಳಿಕೆ. **ಜ್ಞಾನಕ್ಕೆ ಮುಂಚೆಯೇ ಇಲ್ಲದಿದ್ದ ಅಧ್ಯಾಸವು ಜ್ಞಾನೋದಯಾನಂತರ ಪುನಃ ಹುಟ್ಟಬಹುದು ಎಂಬ ಮಾತಿಗೆ ಅರ್ಥವಿಲ್ಲ.**

9. **ಜ್ಞಾನಕ್ಕೆ ನೇರಾದ ಶ್ರವಣಾದಿಸಾಧನಗಳನ್ನು ಶಾಸ್ತ್ರದಲ್ಲಿ ವಿಧಾನಮಾಡಿರುವದರಿಂದಲೂ,** ಜ್ಞಾನವನ್ನು ಪಡೆದು ಜ್ಞಾನನಿಷ್ಠರಾದ **ವಾಮದೇವ, ನಚಿಕೇತ, ಶ್ವೇತಕೇತು, ಭೃಗು, ನಾರದಾದಿಗಳ ನಿದರ್ಶನವು** ಶ್ರುತಿಪ್ರತ್ಯಕ್ಷವಾಗಿರುವದರಿಂದಲೂ **ಆತ್ಮಜ್ಞಾನವು ಯೋಗ್ಯಅಧಿಕಾರಿಗೆ ಉದಯಿಸಿಯೇ ಉದಯಿಸುತ್ತದೆ.** ಜ್ಞಾನವು ಹುಟ್ಟುತ್ತಲೇ ತನಗೆ ವಿರೋಧಿಯಾದ ಅಜ್ಞಾನವನ್ನು ಪೂರಾ ಬಾಧಿಸುತ್ತದೆ. ಆದ್ದರಿಂದ

ಈ ಜನ್ಮದಲ್ಲಿ ಈ ಪ್ರಾರಬ್ಧಶರೀರವಿರುವವರೆಗೆ ಯಾರಿಗೂ ಆತ್ಮಜ್ಞಾನವೇ ಉಂಟಾಗುವುದಿಲ್ಲ ಎಂದಾಗಲಿ, ಉಂಟಾದರೂ ಅಜ್ಞಾನವನ್ನು ಪೂರಾ ಕಳೆಯುವದಿಲ್ಲ – ಎಂದಾಗಲಿ ಹೇಳುವದು ಶ್ರುತಿಯುಕ್ತಿ ಅನುಭವಗಳಿಗೆ ಹೊಂದದ ಮಾತು.

10. ಮೇಲೆ ಹೇಳಿದ ಪ್ರತ್ಯಯರೂಪವಾದ ಅಂತಃಕರಣವೃತ್ತಿಯೆಂಬ **ಅಜ್ಞಾನಕ್ಕಿಂತ ಬೇರೆಯಾದ** ಭಾವರೂಪವೂ ಜಡಶಕ್ತಿರೂಪವೂ ಆದ **ಮೂಲಾವಿದ್ಯೆಯು ಇಲ್ಲವೇ ಇಲ್ಲ.** ಇಂಥ ಮೂಲಾವಿದ್ಯೆಯೊಂದನ್ನು ಒಪ್ಪಿದರೆ ಅದು ಜ್ಞಾನದಿಂದ ಬಾಧಿತವಾಗುವುದಿಲ್ಲ. ಏಕೆಂದರೆ **ಜ್ಞಾನವು ವಸ್ತುವನ್ನು ಏನೂ ಮಾಡುವದಿಲ್ಲ. ಆ ವಸ್ತುವಿನ ವಿಷಯಕ್ಕಿರುವ ಭ್ರಾಂತಿಯನ್ನು ಮಾತ್ರ ಕಳೆಯುತ್ತದೆ. ಇರುವದನ್ನು ನಾಶಮಾಡುವದಿಲ್ಲ ಮತ್ತು ಇಲ್ಲದ್ದನ್ನು ಹೊಸದಾಗಿ ಸೃಷ್ಟಿಸುವದಿಲ್ಲ. ಇದೇ ಜ್ಞಾನದ ಸ್ವಭಾವ. ವಸ್ತುಸ್ವರೂಪವನ್ನು ತಿಳಿಸುತ್ತದೆ.**

11. **ಅಧ್ಯಾರೋಪದೃಷ್ಟಿಯಿಂದಲೇ ಅವಸ್ಥಾತ್ರಯಪ್ರಕ್ರಿಯೆಯನ್ನು ವಿಚಾರಮಾಡಬೇಕು.** ಎಚ್ಚರವು ಒಂದು, ಕನಸು ಎರಡು, ಸುಷುಪ್ತಿ ಮೂರು–ಎಂದು ಮೂರು ಅವಸ್ಥೆಗಳಲ್ಲ. ಎಚ್ಚರವೇ ಒಂದು ಅವಸ್ಥೆಯಲ್ಲ. ಅವಸ್ಥೆಯೆಂದರೆ ಗೊತ್ತಾದ ದೇಶಕಾಲದಲ್ಲಿ ವಸ್ತುವಿಗೆ ಆಗುವ ಮಾರ್ಪಾಟು (ಬದಲಾವಣೆ). **ಎಚ್ಚರದೊಳಗೇ ದೇಶ, ಕಾಲ, ಕಾರ್ಯಕಾರಣಭಾವ, ಕ್ರಿಯಾಕಾರಕಫಲಗಳು – ಎಲ್ಲವೂ ಅಡಕವಾಗಿರುವದರಿಂದ ಎಚ್ಚರವನ್ನು 'ಅವಸ್ಥೆ' ಎಂದು ಕರೆಯುವದು ಸರಿಯಲ್ಲ. ಸುಷುಪ್ತಿಯಂತೂ ಅವಸ್ಥೆಯಲ್ಲವೇ ಅಲ್ಲ.**

12. **ಜಾಗ್ರತ್ತು, ಸ್ವಪ್ನ ಮತ್ತು ಸುಷುಪ್ತಿ – ಈ ಮೂರರಲ್ಲಿ ಒಂದೊಂದು ಸಂಪೂರ್ಣವಾಗಿ ಸ್ವತಂತ್ರವಾಗಿರುತ್ತದೆ.** ಒಂದಿದ್ದಾಗ ಮತ್ತೊಂದು ಸಂಪೂರ್ಣವಾಗಿ ಇಲ್ಲವಾಗಿರುತ್ತದೆ. **ಒಂದಕ್ಕೆ ಇನ್ನೊಂದು ಅಧೀನವಲ್ಲ. ಎಚ್ಚರವು ಪರಿಪೂರ್ಣವಾದ ಅವಸ್ಥೆಯೆಂದೂ ಉಳಿದೆರಡು ಅಪೂರ್ಣವೆಂದೂ ತಿಳಿಯುವದು ಸರಿಯಲ್ಲ.**

13. **'ಅವಸ್ಥೆ'** ಎನ್ನುವದು ಪಾರಿಭಾಷಿಕಶಬ್ದ. **ಆತ್ಮತತ್ತ್ವವು ತೋರಿಕೊಳ್ಳುವ ಬಗೆಗೆ 'ಅವಸ್ಥೆ' – ಎಂದು ಹೆಸರು. ಆದ್ದರಿಂದ ಆತ್ಮಸ್ವರೂಪವು ಎಚ್ಚರದಲ್ಲಿಯೂ ಪರಿಪೂರ್ಣವಾಗಿಯೇ ತೋರುತ್ತದೆ. ಇಡೀ ಎಚ್ಚರವೆಂದರೂ ಒಂದೇ ಪೂರ್ಣಬ್ರಹ್ಮಸ್ವರೂಪ ಎಂದರೂ ಒಂದೇ.**

14. **ಆಯಾ ಅವಸ್ಥೆಯನ್ನು ಆಯಾ ಅವಸ್ಥಾದೃಷ್ಟಿಯಿಂದಲೇ ಅಳೆಯಬೇಕು.** ಕೇವಲ ಎಚ್ಚರದ ಕಣ್ಣಿನಿಂದಲೇ ಕನಸನ್ನೂ ತನಿನಿದ್ರೆಯನ್ನೂ ನೋಡಿದರೆ ಅದು ಪಾಕ್ಷಿಕದೃಷ್ಟಿಯಾಗುತ್ತದೆ. ಇದು ಸರಿಯಲ್ಲ.

15. **ಸುಷುಪ್ತಿಯನ್ನು ಆತ್ಮಾನುಭವಕ್ಕೆ ಸಾರ್ವತ್ರಿಕದೃಷ್ಟಾಂತವಾಗಿ ಶ್ರುತಿಭಾಷ್ಯಗಳಲ್ಲಿ ಹೇಳಿರುತ್ತದೆ.** ಅಲ್ಲಿ ಅವಿದ್ಯಾಕಾಮಕರ್ಮಗಳಾಗಲೀ ಕ್ರಿಯಾಕಾರಕಫಲಗಳಾಗಲೀ ಸುಖದುಃಖಾದಿಸಂಸಾರ ಧರ್ಮಗಳಾಗಲೀ – ಇರುವದಿಲ್ಲ.

16. ಎಚ್ಚರಕನಸುಗಳ ದೃಷ್ಟಿಕೋಣದಿಂದ ಸುಪ್ತಿಯನ್ನು ಅಳೆದಾಗ ಅಲ್ಲಿಯೂ ಅವಿದ್ಯಾಕಾಮಕರ್ಮಗಳು ಬೀಜರೂಪದಿಂದ ವಾಸನಾರೂಪದಿಂದ ಇರಬೇಕು – ಎಂಬುದು ಅನುಮಾನ. ಸುಷುಪ್ತಿಯಲ್ಲಿ

ದ್ವೈತವ್ಯವಹಾರವಿಲ್ಲ – ಎನ್ನುವದು ಸಾರ್ವತ್ರಿಕಾನುಭವ. ಅನುಮಾನ ಅನುಭವಗಳಿಗೆ ಪರಸ್ಪರವಿರೋಧವು ತೋರಿದಾಗ ಅನುಮಾನವನ್ನು ಕೈಬಿಟ್ಟು ಅನುಭವವನ್ನೇ ಪ್ರಮಾಣವನ್ನಾಗಿ ಇಟ್ಟುಕೊಳ್ಳಬೇಕು.

17. ವೇದಾಂತ ಗ್ರಂಥಗಳನ್ನು ಆಳವಾಗಿ ಅಭ್ಯಾಸಮಾಡುವದು ನನ್ನ ಅಧ್ಯಾಸವನ್ನು ಕಳೆದುಕೊಂಡು ಜ್ಞಾನವನ್ನು ಪಡೆದುಕೊಂಡು ಅದರ ಮೂಲಕ ಮುಕ್ತಿಯನ್ನು ಹೊಸದಾಗಿ ಪಡೆಯುವದಕ್ಕೆಂದಲ್ಲ. ಮತ್ತೇನೆಂದರೆ **"ಕಳೆದುಕೊಳ್ಳಬೇಕಾದ ಅಜ್ಞಾನವಾಗಲಿ ಹೊಸದಾಗಿ ಪಡೆಯಬೇಕಾದ ಜ್ಞಾನವಾಗಲಿ ಇಲ್ಲವೇ ಇಲ್ಲ. ನಾನು ಯಾವಾಗಲೂ ಬದ್ಧನಾಗಿಯೇ ಇಲ್ಲ. ನಿತ್ಯಮುಕ್ತಸ್ವರೂಪನಾಗಿದ್ದೇನೆ" ಎಂದು ನಿಶ್ಚಯಜ್ಞಾನವನ್ನು ಹೊಂದುವದಕ್ಕಾಗಿ.**

18. **ವಿವೇಕಜ್ಞಾನವು ಹುಟ್ಟಿದ ಮೇಲೆ 'ಹಾಗಾದರೆ ನಾನು ಇನ್ನು ಮೇಲೆ ಕರ್ಮಗಳನ್ನು ಮಾಡಬೇಕಾಗಿಲ್ಲವಷ್ಟೆ' – ಎಂಬ ಪ್ರಶ್ನೆಯೇ ಹೊಂದುವುದಿಲ್ಲ. ಏಕೆಂದರೆ ನಾನು ಯಾವಾಗಲೂ ಅಕರ್ತೃಸ್ವರೂಪನು – ಎಂದಲ್ಲವೆ ಜ್ಞಾನವು ಉದಿಯಿಸಿರುತ್ತದೆ. ಹಾಗೆ ಪ್ರಶ್ನಿಸುವವನಿಗೆ ಜ್ಞಾನವೇ ಆಗಿಲ್ಲ.**

19. "ವಿದ್ಯೋದಯಾನಂತರ ಲೌಕಿಕವೈದಿಕವ್ಯವಹಾರಗಳು ಬಾಧಿತವಾದರೆ ಆಗಲಿ, ಆದರೆ ವೇದಾನ್ತಶಾಸ್ತ್ರದ ಗತಿಯೇನು"? ಎಂದರೆ **'ನದೀನಾಂ ಸಾಗರೋ ಗತಿಃ' ಎನ್ನುವಂತೆ ಅದೂ ಕಲ್ಪಿತವೆಂದೇ ಆಗುತ್ತದೆ. ತಾನೂ ಬ್ರಹ್ಮವೇ ಆಗಿಬಿಡುತ್ತದೆ. "ಆತ್ಮೈವೇದಂ ಸರ್ವಮ್" ಎಂದು ಶ್ರುತಿ.**

20. ಈ ತರಹದ **ಪ್ರಶ್ನೆ, ಉತ್ತರ : ಆಕ್ಷೇಪ, ಸಮಾಧಾನ – ಸಂಶಯ, ಪರಿಹಾರ : ಎಲ್ಲವೂ ಅವಿದ್ಯಾ ಪ್ರಪಂಚದಲ್ಲೇ, ಆತ್ಮವಿಜ್ಞಾನವು ಹುಟ್ಟಿದ ಕೂಡಲೇ ಯಾವದೂ ಇಲ್ಲ. ನ ನಿರೋಧೋ ನ ಚೋತ್ಪತ್ತಿಃ ನ ಬದ್ಧೋ ನ ಚ ಸಾಧಕಃ । ನ ಮುಮುಕ್ಷುರ್ನ ವೈ ಮುಕ್ತಃ ಇತ್ಯೇಷಾ ಪರಮಾರ್ಥತಾ ॥**

ಇಂಥ ಮಂಗಳವಾದ ಶಾಂಕರಸಿದ್ಧಾಂತದ ಬೆಳಕನ್ನು ಪ್ರಜ್ವಲಗೊಳಿಸಿ ನಮ್ಮಂಥ ಮುಮುಕ್ಷುಗಳ ಅಜ್ಞಾನವನ್ನು ಪೂರ್ಣವಾಗಿ ಹೋಗಲಾಡಿಸಿರುವ ಮಹಾಮಹಿಮರೂ, ತಪೋಮೂರ್ತಿಗಳೂ, ಯತಿಶ್ರೇಷ್ಠರೂ, ಶ್ರೋತ್ರಿಯಬ್ರಹ್ಮ ನಿಷ್ಠರೂ, ಜ್ಞಾನ, ಆಶ್ರಮವಯಸ್ತಪೋವೃದ್ಧರೂ, **ನಮ್ಮ ಪಾಲಿನ ಶ್ರೀ ಶಂಕರಾಚಾರ್ಯರೂ ಆಗಿರುವ ಪರಮಪೂಜ್ಯರಾದ ಶ್ರೀಶ್ರೀಗಳವರಿಗೆ ತ್ರಿಕರಣಶುದ್ಧನಾಗಿ ವಂದಿಸಿ ನನ್ನ ಈ ಲೇಖನಿಯನ್ನು ಇಲ್ಲಿಗೆ ಬಿಡುತ್ತೇನೆ.**

ಸುಮಾರು ತೊಂಭತ್ತಾರು ವರ್ಷಗಳ ಸುದೀರ್ಘಕಾಲ ಸಾರ್ಥಕವಾದ ಪವಿತ್ರ ಆದರ್ಶಜೀವನವನ್ನು ನಡೆಸಿ ಶ್ರೇಷ್ಠವಾದ ನೂರಾರು ವೇದಾಂತಗ್ರಂಥಗಳ ರೂಪದಿಂದ ಈಗಲೂ ಜೀವನ್ತರಾಗಿದ್ದು ನಮ್ಮನ್ನೆಲ್ಲ ಅನುಗ್ರಹಿಸುತ್ತಿರುವ–ಕಾರ್ಯಾಲಯದ ಈ ಶತಮಾನಮಹೋತ್ಸವ ಸುಸಂದರ್ಭದಲ್ಲಿ–ಶ್ರೀಶ್ರೀಗಳವರನ್ನು ನಾವುಗಳೆಲ್ಲರೂ ತುಂಬುಮನಸ್ಸಿನಿಂದ ಭಕ್ತಿಯಿಂದ ನಮಸ್ಕರಿಸೋಣ. ಹೀಗೆಯೇ ಅವರನ್ನು ಸ್ಮರಿಸುತ್ತಾ ಅವರ ಸೇವಾಕಾರ್ಯವನ್ನು ಯಾವಾಗಲೂ ಮಾಡುತ್ತಿರೋಣ.

॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

* * * * *

ಕಾರ್ಯಾಲಯದ ಕೊಡುಗೆ

– ರಾ. ಗಣೇಶ್

(ಶತಾವದಾನಿ ಡಾ॥ ಆರ್. ಗಣೇಶ್)

ಅಧ್ಯಾತ್ಮಪ್ರಕಾಶಕಕಾರ್ಯಾಲಯಕ್ಕೆ ನೂರು ವರ್ಷಗಳಾಗುತ್ತಿರುವ ಈ ಶುಭಾವಸರದಲ್ಲಿ ಇದರ ಕೊಡುಗೆಯನ್ನು ವಿಶದವಾಗಿ ಚಿತ್ರಿಸುವುದು ಸಾಹಸದ ಮಾತು. ಏಕೆಂದರೆ ವೇದಾಂತ ಕ್ಷೇತ್ರದಲ್ಲಿ ಸಾವಿರಾರು ವರ್ಷಗಳಿಂದ ಸಾಧ್ಯವಾಗದ ಮಹತ್ಕಾರ್ಯವನ್ನು ಈ ಒಂದೇ ಒಂದು ಸಂಸ್ಥೆ ಕೆಲವೇ ದಶಕಗಳಲ್ಲಿ ಮಾಡಿ ತೋರಿಸಿದೆ. ಇದೊಂದು ಊಹಾತೀತವಿಕ್ರಮ. ಹೀಗಾಗಿ ಕಾರ್ಯಾಯಲಕ್ಕೆ ನನ್ನ ತ್ರಿಕರಣಪೂರ್ವಕವಾದ ಆಧಮರ್ಣ್ಯವನ್ನು ನಿವೇದಿಸಬಲ್ಲೆನಲ್ಲದೆ ಹೆಚ್ಚಿನ ವಿಸ್ತರವನ್ನು ಕೈಗೊಳ್ಳಲಾರೆ. ಅದೂ ಅಲ್ಲದೆ ಇಂಥ ವಿಸ್ತೃತಕಾರ್ಯವನ್ನು ಈಗಾಗಲೇ ಹತ್ತಾರು ಮಂದಿ ಪ್ರಾಜ್ಞರು ಮಾಡಿದ್ದಾರೆ ಕೂಡ. ಹೀಗಿರುವಾಗ ನನ್ನ ಪಾಲಿಗೆ ಕೃತಜ್ಞತಾಭರಿತವಾದ ನತಿಸಮರ್ಪಣವೇ ಉಳಿದಿರುವುದು.

ಇಷ್ಟಕ್ಕೂ ಕಾರ್ಯಾಲಯವೆಂದರೆ ತತ್ತ್ವತಃ ಇದರ ಸ್ಥಾಪಕರಾಗಿದ್ದ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಇಚ್ಛಾಶಕ್ತಿ–ಜ್ಞಾನಶಕ್ತಿ–ಕ್ರಿಯಾಶಕ್ತಿಗಳ ಸಮಾಹಾರವಲ್ಲದೆ ಮತ್ತೇನು? ಆದುದರಿಂದ ಕಾರ್ಯಾಲಯದ ಕೊಡುಗೆಯೆಂದರೆ ಶ್ರೀಗಳು ಜಗತ್ತಿಗಿತ್ತ ಯೋಗದಾನವೆಂದೇ ತಾತ್ಪರ್ಯ.

ತೊಂಬತ್ತಕ್ಕೂ ಹೆಚ್ಚು ವರ್ಷ ಭೌತಿಕವಾಗಿ ಬಾಳಿ, ಇನ್ನೂರಕ್ಕೂ ಹೆಚ್ಚು ವೇದಾಂತ ಗ್ರಂಥಗಳನ್ನು ರಚಿಸಿ, ಪ್ರಕಟಿಸಿ, ಸಾವಿರಾರು ಭಾಷಣ–ಪ್ರವಚನ–ಪ್ರಶಿಕ್ಷಣವರ್ಗಗಳನ್ನು ನಡಸಿ ಲಕ್ಷಾಂತರ ಜನರಿಗೆ ತಿಳಿವನ್ನಿತ್ತು ಮುಂದೆ ಬರಲಿರುವ ಮತ್ತಷ್ಟೋ ಕೋಟ್ಯಾಂತರ ಜಿಜ್ಞಾಸುಗಳಿಗೆ ಮಾರ್ಗದರ್ಶಿಯಾಗುವ ನಮ್ಮ ಸ್ವಾಮಿಗಳ ಯೋಗದಾನವನ್ನು ಯಾವ ರೀತಿಯಲ್ಲಿ ವರ್ಣಿಸಲು ಸಾಧ್ಯ? ಆದರೂ ಸೂಚ್ಯಗ್ರವಾಗಿ ಕೆಲವೇ ಮಾತುಗಳಲ್ಲಿ ನಿರೂಪಿಸುವ ಯತ್ನ ಮಾಡುತ್ತೇನೆ.

* ಶ್ರೀಗಳು ತಮ್ಮ ಗುರುಗಳಾದ ಶ್ರೀ ಕೆ.ಎ. ಕೃಷ್ಣಸ್ವಾಮಿಅಯ್ಯರ್ ಅವರ ಸ್ಫೂರ್ತಿಯಿಂದ ನಿಸ್ಸಂದಿಗ್ಧವಾಗಿ ನಿರೂಪಿಸಿದ ವೇದಾಂತ ಪ್ರಕ್ರಿಯೆಗೆ ಎಣೆಯೇ ಇಲ್ಲ. ಇದನ್ನು ಜ್ಞಾನಜಗತ್ತಿನಲ್ಲಿ ಎಲ್ಲ ಕಾಲದ, ಎಲ್ಲ ದೇಶಗಳ ಅತ್ಯುನ್ನತ ಸಿದ್ಧಿಯೆಂದರೆ ತಪ್ಪಾಗದು.

* ಅಧ್ಯಾರೋಪ ಅಪವಾದ ಪ್ರಕ್ರಿಯೆಯೆಂಬ ಮಹಾಯುಕ್ತಿಯು ಅವಸ್ಥಾತ್ರಯಮೀಮಾಂಸೆಯಲ್ಲಿ ತನ್ನ ಸರ್ವೋಚ್ಚಸಾಧ್ಯತೆಯನ್ನು ಕಂಡುಕೊಳ್ಳುತ್ತದೆ. ಇದನ್ನು ನಿರ್ವಿವಾದವಾಗಿ, ನಿಶ್ಶೇಷವಾಗಿ ನಿರೂಪಿಸಿದ ಶ್ರೇಯಸ್ಸು ಶ್ರೀಗಳದು.

* ನಿರ್ವಿಶೇಷವಾದ ಸಾರ್ವತ್ರಿಕಾನುಭವವೆಂಬ ಒಂದೇ ಪ್ರಮಾಣದ ಮೂಲಕ ವೇದಾಂತದ ಪರಮತತ್ತ್ವವು ನಿರೂಪಿತವಾಗಬೇಕು. ಹೀಗಲ್ಲದೆ ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ, ಉಪಮಾನ, ಅರ್ಥಾಪತ್ತಿಗಳೇ ಮುಂತಾದ ಮತ್ತಾವ ಪ್ರಮಾಣಗಳನ್ನು ನಚ್ಚಿಕೊಂಡರೂ ಅವು ಆತ್ಯಂತಿಕವಾಗಿ

ಸಫಲವಾಗುವುದಿಲ್ಲ. ಜೊತೆಗೆ ಈ ಬಗೆಯ ಪ್ರಮಾಣಗಳಿಂದ ತಿಳಿಯಲ್ಪಡುವ ವೇದಾಂತತತ್ತ್ವವು ದಿಟವಾಗಿ ಪರಮಾರ್ಥವೆನಿಸದೆ ಕೇವಲ ಶ್ರದ್ಧಾಜಾಡ್ಯ ಮತ್ತು ಭ್ರಮೆಗಳೇ ಆಗುತ್ತದೆ. ಹೀಗಾಗಿ ವೇದಾಂತವನ್ನು ಒಂದು ನಿತ್ಯಸತ್ಯವಾದ ಸರ್ವೋಚ್ಚ ಜ್ಞಾನವನ್ನಾಗಿಸಿರುವುದು ಈ ಬಗೆಯ ವಿವೇಕವೇ. ಇದು ತನ್ನ ಪರಿಪೂರ್ಣತೆಯನ್ನು ಕಂಡದ್ದು ಶ್ರೀಗಳ ನಿರ್ವಿರಾಮವಾದ ಕೃಷಿಯಿಂದಲೇ.

* ವಾಮದೇವ, ವಾಗಂಭೃಣೀ, ಯಾಜ್ಞವಲ್ಕ್ಯ, ಶ್ರೀಕೃಷ್ಣ ಮುಂತಾದ ಶ್ರುತಿ–ಸ್ಮೃತಿಗಳ ಆಚಾರ್ಯರ ದರ್ಶನವೇ ಗೌಡಪಾದ–ಶಂಕರ–ಸುರೇಶ್ವರರೆಂಬ ಮನಿತ್ರಯರ ಮೂಲಕ ಹೆಚ್ಚಿನ ತರ್ಕಸೌಷ್ಠವದ ಜೊತೆಗೆ ಬೆಳೆದುಬಂದಿತು. ಇದನ್ನು ಆಧುನಿಕ ಜಗತ್ತಿನಲ್ಲಿ ರಮಣಮಹರ್ಷಿಗಳಂಥ ಬ್ರಹ್ಮಜ್ಞಾನಿಗಳು ಸ್ವಾನುಭವವಾಗಿ ನಿರೂಪಿಸಿದರಾದರೂ ಅದಕ್ಕೆ ಪರಿಪೂರ್ಣವಾದ ವೈಚಾರಿಕತೆ ಸಿದ್ಧವಾದದ್ದು ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀಗಳ ಶ್ರಮದಿಂದ. ಇದು ನಿಜವಾಗಿ ಜಾಗತಿಕಸ್ತರದಲ್ಲಿಯೇ ಸರ್ವೋಚ್ಚ ಸಾಧನೆ.

* ಶ್ರೀಗಳು ತಮ್ಮ ಅನೇಕ ಗ್ರಂಥಗಳ ಪೈಕಿ ಪರಮಾರ್ಥಚಿಂತಾಮಣಿ, ಅವಸ್ಥಾತ್ರಯ ಚಂದ್ರಿಕೆ, ಶಾಂಕರದರ್ಶನ, ವೇದಾಂತದ ಇತಿಹಾಸ, ಶ್ರೀಶಂಕರಭಗವತ್ಪಾದವೃತ್ತಾಂತ ಸಾರಸರ್ವಸ್ವ, ಶಾಂಕರವೇದಾಂತದ ಮೂಲತತ್ತ್ವಗಳು, ಭಕ್ತಿಚಂದ್ರಿಕೆ ಮುಂತಾದ ಕನ್ನಡದ ಸ್ವತಂತ್ರ ಕೃತಿಗಳಿಂದಲೂ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳೂ ಸೇರಿದಂತೆ ಅನೇಕ ಕೃತಿಗಳ ಸಟಿಪ್ಪಣಾನುವಾದಗಳಿಂದಲೂ ಮಾಡಿದ ಮಹಾಕಾರ್ಯವೇ. ಸಂಸ್ಕೃತದ ಮೂಲಾವಿದ್ಯಾನಿರಾಸಃ, ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ, ಶಾಂಕರಪ್ರಕ್ರಿಯಾಭಾಸ್ಕರಃ, ಸುಗಮಾ, ಮಾಂಡೂಕ್ಯರಹಸ್ಯವಿವೃತಿಃ ಮೊದಲಾದ ಕೃತಿಗಳ ಮೂಲಕವೂ ಸ್ವತಂತ್ರವಾಗಿ ಆವಿರ್ಭವಿಸಿದೆ. ಇದೇರೀತಿ ಅವರ ಅನೇಕ ಇಂಗ್ಲಿಷ್ ಗ್ರಂಥಗಳೂ ಇನ್ನುಳಿದ ನೂರಾರು ಕೃತಿಗಳೂ ಪರಿಭಾವನೀಯ. ಇವೆಲ್ಲಕ್ಕೂ ಮೂಲಧಾತುವು ಅಯ್ಯರ್ ಅವರ ಆಂಗ್ಲಗ್ರಂಥ 'ವೇದಾಂತ–ದ ಸೈನ್ಸ್ ಆಫ್ ರಿಯಾಲಿಟಿ' ಎಂಬುದರಲ್ಲಿದೆಯೆಂದರೆ ತಪ್ಪಲ್ಲ.

* ಇಂಥ ವಿಚಾರ ಶುದ್ಧಿಯಿಲ್ಲದೆ ಸನಾತನಧರ್ಮದ ಅದೆಷ್ಟು ಶಾಸ್ತ್ರಗಳ, ಅದೆಷ್ಟು ಕಲೆಗಳ, ಇನ್ನೆಷ್ಟು ಗ್ರಂಥಗಳನ್ನೂ ವಿಚಾರಗಳನ್ನೂ ಜಗತಿಗೆ ಮತ್ತೆಷ್ಟು ಬಗೆಯಲ್ಲಿ ಬಿತ್ತರಿಸಿದರೂ ಪರಮಾರ್ಥತಃ ಪ್ರಯೋಜನವಾಗದೆಂದರೆ ಕಠೋರವಾದ ಮಾತಾದರೂ ಸತ್ಯದೂರವಲ್ಲ. ಏಕೆಂದರೆ ಇಂಥ ಪ್ರಕಲ್ಪಗಳೆಲ್ಲ ಅವಿದ್ಯೆಯನ್ನೇ ಪ್ರಕಾರಾಂತರವಾಗಿ ಹಬ್ಬಿಸುತ್ತಿರುತ್ತವೆ. ಹೆಚ್ಚೆಂದರೆ ವೇದಾಂತಾ ಭಾಸವನ್ನೋ ಸ್ಥೂಲಾದ್ವೈತವನ್ನೋ ಜನತೆಗೆ ಮುಟ್ಟಿಸಬಲ್ಲದೇನೋ ಇದಕ್ಕಿಂತ ಮಿಗಿಲಾದ ಒಳಿತನ್ನೇನನ್ನೂ ಮಾಡಲಾರವು.

* ಭಾರತದೇಶವಾಗಲಿ, ಸನಾತನಧರ್ಮವಾಗಲಿ ಇಡಿಯ ವಿಶ್ವಕ್ಕೆ ನೀಡಿದ ಬಲುದೊಡ್ಡ ಕೊಡುಗೆಯೆಂದರೆ ವೇದಾಂತತತ್ತ್ವ. ಇದು ತನ್ನ ಅನುಭವನಿಷ್ಠವಾದ ತರ್ಕಶುದ್ಧವಾಗ್ರೂಪದಲ್ಲಿ ಪಡೆದ ಸರ್ವೋನ್ನತಾಭಿವ್ಯಕ್ತಿಯೆಂದರೆ ಶ್ರೀಗಳ ಸಾರಸ್ವತ ಮಾತ್ರ. ಹೀಗಾಗಿ ಕಾರ್ಯಾಲಯದ ಕೊಡುಗೆ ಈ ನಿಟ್ಟಿನಿಂದ ಅನನ್ಯ, ಅಪೂರ್ವ, ಅಮೇಯ.

* ಈ ಮೂಲಭೂತವಾದ ಯೋಗದಾನಕ್ಕೆ ಪೂರಕವಾಗಿ ಹೇಳಬಹುದಾದ ಮತ್ತೊಂದು ಅಂಶವೆಂದರೆ ಗೌಡಪಾದ–ಶಾಂಕರ–ಸುರೇಶ್ವರರೆಂಬ ಅದ್ವೈತತತ್ತ್ವದ ಮುನಿತ್ರಯದ ಮುಖ್ಯಗ್ರಂಥಗಳನ್ನೆಲ್ಲ ನಿರ್ದುಷ್ಟವಾಗಿ ಸಂಪಾದಿಸಿ, ಅನುವಾದ – ವಿವರಣೆ – ಟಿಪ್ಪಣಿಗಳಂಥ ಅಧ್ಯಯನಾನುಕೂಲ ಸಾಮಗ್ರಿಗಳ ಮೂಲಕ ಅನುಭವನಿಷ್ಠವೇದಾಂತಕ್ಕೆ ಅನುಬಂಧವಾಗಿ ಕೊಟ್ಟಿರುವ ಪರಿ.

ಹೀಗೆ ಸೂಚ್ಯಗ್ರವಾದ ಈ ಕಿರುಬರೆಹದಲ್ಲಿ ಕಾರ್ಯಾಲಯದ ಕೊಡುಗೆಯ ಹೃದ್ಭಾಗವನ್ನಷ್ಟೇ ಪರಿಗಣಿಸಲಾಗಿದೆ. ಮಿಕ್ಕವನ್ನೆಲ್ಲ ಯಥೋಚಿತವಾಗಿ ವಿವೇಕಿಗಳು ಅನ್ವಯಿಸಿಕೊಳ್ಳಬಹುದು. ಏಕೆಂದರೆ ಗಜಪಾದದಲ್ಲಿ ಅಜಪಾದವೂ ಅಡಗುತ್ತದೆ. ಇಂಥ ಮಹಾಕಾರ್ಯ ಮಾಡಿ ನಮ್ಮನ್ನೆಲ್ಲ ಅನುಗ್ರಹಿಸಿದ ಶ್ರೀಗಳಿಗೆ ನಾವು 'ನಮಸ್ಕುರ್ಮೋ ಯಥಾಬಲಮ್' ಎಂದಷ್ಟೇ ಪರೋಕ್ಷವಿನಯವನ್ನು ಸಮರ್ಪಿಸ ಬಹುದು.

* * * * *

ಜ್ಞಾನ

1. ಜ್ಞಾನಿಗಳು ಎಲ್ಲದರಲ್ಲಿಯೂ ಆತ್ಮನನ್ನೇ ಕಾಣುತ್ತಾರೆ. ಇದೇ ಸಂನ್ಯಾಸ. ಇದೇ ಜ್ಞಾನ. ಅವರಿಗೆ ಬೇರೆ ಬೇರೆ ಎನ್ನುವುದು. ಎಲ್ಲಾ ಎನ್ನುವುದೂ ಇಲ್ಲವೇ ಇಲ್ಲ. ಆತ್ಮನೊಬ್ಬನೇ ಇರುವುದು.

2. ಸರ್ವಕರ್ಮ ಸಂನ್ಯಾಸವೆಂದರೆ ಬಿಡುವುದಲ್ಲ. "ಕರ್ಮಣ್ಯಕರ್ಮ ಯಃ ಪಶ್ಯೇತ್", ಅಂದರೆ ಕರ್ಮಗಳನ್ನು ಬಿಡಬೇಕೆಂದು ಅರ್ಥಮಾಡುತ್ತಾರೆ. ಇದಲ್ಲ.

3. ಆಕಾಶವು ಡಬ್ಬು ಹಾಕಿದಂತೆ ನಾವು ಗಾಬರಿಯಾಗುವುದಿಲ್ಲ. ಅದು ಹಾಗೆ ತೋರುವುದೇಪ ಹೊರತು ಹಾಗಿಲ್ಲ. ನೀಲಿ ಬಣ್ಣವೂ ಇಲ್ಲ. ಹಾಗೆ ದೇಹಾದಿಗಳು ತೋರುವುದು ನಿಜ. ಇವು ಇಲ್ಲವೇ ಇಲ್ಲ. ಎಂದೆಂದಿಗೂ ಇರಲಿಲ್ಲವೆಂದಾಗ ಬೇಕು, ಏನೂ ಆಗಲಿಲ್ಲ ಬರಲಿಲ್ಲ ಹೋಗಲಿಲ್ಲ. ನೆರಳು ಮೊದಲಾದವುಗಳು ತೋರಿದರೂ ಹೇಗಿಲ್ಲವೋ ಹಾಗೆ.

– ಶ್ರೀ ಸಚ್ಚಿದಾನಂದವಾಣಿ

ಬ್ರಹ್ಮಜ್ಞನು ಕಂಡ ಸರ್ವಜ್ಞ

– ಡಾ॥ ಕೆ. ಅನಂತರಾಮು

ನಿವೃತ್ತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ನೇರ ಶಿಷ್ಯಕೋಟಿಯಲ್ಲಿ ಗದಗಜಿಲ್ಲೆಯ ಹೊಂಬಳದ ದೇವರಾಯ ಕುಲಕರ್ಣಿ (1922–1993) ಅವರೂ ಒಬ್ಬರು. ಅತ್ಯಂತ ಪ್ರತಿಭಾವಂತರೂ ಬಹುಭಾಷಾಪಂಡಿತರೂ ಕವಿಹೃದಯಸಂಪನ್ನರೂ ಆದ ಅವರು ವೇದಾಂತಕ್ಕೆ ಸಂಬಂಧಿಸಿದಂತೆ ಗ್ರಂಥರಚನೆಯನ್ನೂ ಮಾಡಿದ್ದಾರೆ. ಆ ಪೈಕಿ 'ಶಾಂಕರವೇದಾಂತ ಸೌರಭ' ಎಂಬ ಹೆಬ್ಬೊತ್ತಗೆಯು ಸರ್ವಶ್ರೇಷ್ಠವಾದುದು. ಕವಿಗಳಾಗಿ ಅವರು ಶಂಕರದರ್ಶನವನ್ನೆಲ್ಲ 'ತ್ರಿಪದಿ'ಯೆಂಬ ಪದ್ಯರೂಪದಲ್ಲಿ ಸರಸವಾದ ಶೈಲಿಯಲ್ಲಿ ನಿರೂಪಿಸಿರುವುದು ಅಪೂರ್ವವಾದ ವಿಚಾರವೇ ಸರಿ. ಆ ಗ್ರಂಥಕ್ಕೆ 'ಶಂಕರದರ್ಶನ' ಎಂಬುದಲ್ಲದೆ, 'ಬ್ರಹ್ಮಜ್ಞವಚನಗಳು' ಎಂಬ ಪರ್ಯಾಯನಾಮವೂ ಇದೆ. 'ಬ್ರಹ್ಮಜ್ಞ' ಎಂಬ ಅಂಕಿತವು ಅಲ್ಲಿರುವ ಎಲ್ಲ ತ್ರಿಪದಿಗಳ ಅಂತ್ಯದಲ್ಲಿಯೂ ಕೂಡಿಕೊಂಡಿದೆ; ಈ ಮೂಲಕ ದೇವರಾಯರು 'ಬ್ರಹ್ಮಜ್ಞರು' ಎನಿಸಿಕೊಂಡಿದ್ದಾರೆ. ಈ ಮೇಲಿನ ಎರಡೂ ಗ್ರಂಥಗಳು ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕವೇ ಪ್ರಕಟಗೊಂಡಿವೆ. ಈ ಕೃತಿಗಳ ರಚನೆಗೆ ಸಚ್ಚಿದಾನಂದೇಂದ್ರ ಗುರುಗಳಿಂದ ನಿರೂಪಿತವಾಗಿರುವ ಶಾಂಕರವೇದಾಂತ ಸರಣಿಯೇ ಮೂಲವೆಂದು ಅವರು ಭಕ್ತಿಪೂರ್ವಕವಾಗಿ ಹೇಳಿಕೊಂಡಿದ್ದಾರೆ. ಹೀಗೊಬ್ಬ ಸಚ್ಛಿಷ್ಯರನ್ನು ವೇದಾಂತ ಲೋಕಕ್ಕೆ ನೀಡಿದ ಸಚ್ಚಿದಾನಂದೇಂದ್ರರ ಔನ್ನತ್ಯವನ್ನು ಬಣ್ಣಿಸುವುದಾದರೂ ಹೇಗೆ!

'ಬ್ರಹ್ಮಜ್ಞ' ಎಂದರೆ ಬ್ರಹ್ಮವನ್ನು ಅರಿತವನು ಎಂದರ್ಥ. ದೇವರಾಯ ಕುಲಕರ್ಣಿಗಳು ಬ್ರಹ್ಮಜ್ಞರೆಂಬುದರಲ್ಲಿ ಎರಡು ಮಾತಿಲ್ಲ. ಸಚ್ಚಿದಾನಂದೇಂದ್ರ ಸದ್ಗುರುಗಳಾದರೋ ಬ್ರಹ್ಮಜ್ಞರೂ ಹೌದು; ಶಂಕರಸಿದ್ಧಾಂತದ ಒಳಹೊರಗುಗಳನ್ನೆಲ್ಲ ತಲಸ್ಪರ್ಶಿಯಾಗಿ ಅರಿತ ಸರ್ವಜ್ಞರೂ ಹೌದು. ಅಂತಹ ಸರ್ವಜ್ಞರನ್ನು ಕುರಿತು ಬ್ರಹ್ಮಜ್ಞರು ತಮ್ಮ 'ಬ್ರಹ್ಮಜ್ಞ ವಚನಗಳು' ಎಂಬ ಕೃತಿಯಲ್ಲಿ ಅನೇಕ ಕಾವ್ಯಮಯವಾದ ತ್ರಿಪದಿಗಳನ್ನು ರಚಿಸಿದ್ದಾರೆ. ಗ್ರಂಥದ ಮೊದಲನೆಯ ಅಧ್ಯಾಯದಲ್ಲಿ 'ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸ್ಮರಣೆ' ಎಂಬ ಶೀರ್ಷಿಕೆಯಲ್ಲಿ ಸರಿಯಾಗಿ ಒಂಬತ್ತು ತ್ರಿಪದಿಗಳನ್ನು ಬರೆದಿದ್ದಾರೆ. ಅಷ್ಟರಿಂದ ತೃಪ್ತರಾಗದೆ ಗ್ರಂಥದ ಒಡಲಿನಲ್ಲಿ ಮೂರುಕಡೆ 'ಶ್ರೀಗಳವರ ಉಪಕಾರ' ಎಂಬ ತಲೆಬರಹದಲ್ಲಿ ಸಚ್ಚಿದಾನಂದೇಂದ್ರರು ಶಂಕರಸಿದ್ಧಾಂತ ಕ್ಷೇತ್ರಕ್ಕೆಸಗಿರುವ ಮಹೋಪಕಾರವನ್ನು ಭಾವನಿರ್ಭರರಾಗಿ ಕೊಂಡಾಡಿದ್ದಾರೆ. ಅವೆಲ್ಲವುಗಳ ಸಾರವನ್ನು ತಿಳಿಸುವದೇ ಈ ಲೇಖನದ ಉದ್ದೇಶವಾಗಿದೆ. ಅದಕ್ಕಾಗಿಯೇ 'ಬ್ರಹ್ಮಜ್ಞನು ಕಂಡ ಸರ್ವಜ್ಞ' ಎಂಬ ಹೆಸರನ್ನು ಕೊಡಲಾಗಿದೆ.

ಸಚ್ಚಿದಾನಂದೇಂದ್ರರು ಅತ್ಯಂತ ಶ್ರೇಷ್ಠಮಟ್ಟದ ಯತಿವರರಾಗಿದ್ದರು. ಅವರ ಉಪದೇಶದ ಮೂಲಕ, ಯಾರಾದರೂ ಸರಿಯೆ, ಆದಿಶಂಕರರ ಪ್ರಸ್ಥಾನತ್ರಯ ಭಾಷ್ಯಗಳ ಹೆಚ್ಚುಗಾರಿಕೆಯೇನೆಂಬುದನ್ನು ಅರಿಯಬಹುದಾಗಿತ್ತು. ಕನ್ನಡಾಂಬೆಯ ಸುಪುತ್ರರಿಗೆ ತತ್ತ್ವವರಿಯಲು ಸರಾಗವಾಗಲೆಂದು ಸದುದ್ದೇಶದಿಂದ

ಅವರು ಆ ಭಾಷ್ಯಗ್ರಂಥಗಳನ್ನೆಲ್ಲ ಕೊಂಚವೂ ಲೋಪವಿಲ್ಲದಂತೆ ಕನ್ನಡಕ್ಕೆ ಅನುವಾದಿಸಿಕೊಟ್ಟು ಮಹೋಪಕಾರ ಮಾಡಿದರು:

ಕನ್ನಡದ ಕುವರರಿಗೆ ಸನ್ನುತದ ಭಾಷ್ಯವನು
ಕನ್ನಡಿಸಿಕೊಟ್ಟ ಯತಿಚಕ್ರವರ್ತಿಗಳು
ಪುಣ್ಯಾತ್ಮರಿವರು ಬ್ರಹ್ಮಜ್ಞ॥

ಧರ್ಮಕ್ಕೆ ಚ್ಯುತಿಯುಂಟಾದಾಗಲೆಲ್ಲ, ಅದರ ಮರ್ಮವು ಮಸುಕಾದಾಗಲೆಲ್ಲ ಭಗವಂತನೇ ಧರ್ಮೋದ್ಧಾರಕ್ಕಾಗಿ ಅವತರಿಸಿ ಬರುತ್ತಾನೆಂಬುದು ಗೀತಾವಾಣಿಯಾಗಿದೆ. ಅಂತೆಯೇ ವೇದಾಂತ ಧರ್ಮದಲ್ಲಿ ಹರಡಿಕೊಂಡ ಗ್ಲಾನಿಯನ್ನು ಕಂಡಾಗಲೂ ಆ ಭಗವಂತನೇ ಶಂಕರಾಚಾರ್ಯರೂಪವಾಗಿ ಅವತರಿಸಿ ಬಂದು ಸಮ್ಯಗ್ದರ್ಶನ ಮಾಡಿಸಿದನು. ಶಂಕರರ ಬಳಿಕ ಮತ್ತೆ ವ್ಯಾಖ್ಯಾನಪಂಥಗಳ ಎಳೆದಾಟದಿಂದಾಗಿ ಆ ವೇದಾಂತ ಮಾರ್ಗವು ಮುಳ್ಳುಕಲ್ಲುಗಳಿಂದ ಮುಚ್ಚಿಹೋಯಿತು. ಆಗ ಆದಿಗುರು ಶಂಕರರೇ ಕನ್ನಡಿಗರ ಪುಣ್ಯಪರಿಪಾಕದಿಂದ ಸಚ್ಚಿದಾನಂದೇಂದ್ರಸರಸ್ವತೀ ಸದ್ಗುರುಗಳಾಗಿ ದೇಹಧರಿಸಿ ಬಂದರು:

ಆದಿಗುರುಶಂಕರರೆ ಹಾದಿತೋರಿಸಲೆಂದು
ಮೋದದಲಿ ಮರಳಿ ಬಂದಿಹರು ಶ್ರೀಗಳಾ
ಈ ದೇಹ ಧರಿಸಿ ಬ್ರಹ್ಮಜ್ಞ॥

ವೇದಾಂತವು ತರ್ಕದೊಡನೆ ಕಲಬೆರಕೆಯಾಗಿ ನಿರ್ಮಲವಾದ ತತ್ತ್ವವು ಮರೆಯಾಗಿಬಿಟ್ಟಿತು. ಶಂಕರರ ಭಾಷ್ಯಕ್ಕೆ ಹೊಂದದ ವಿವರಣೆಗಳು ಹೆಜ್ಜೆಹೆಜ್ಜೆಗೂ ಕಾಣಿಸಿಕೊಂಡವು. ಹಲವು ಗ್ರಂಥಗಳಾಗಿ, ಹಲವು ಗುರುಪಥವಾಗಿ, ತತ್ತ್ವಕ್ಕೆ ನೆಲಯಿಲ್ಲದಂತಾಯಿತು. ಅಂತಹ ವಿಷಮಪರಿಸ್ಥಿತಿಯಲ್ಲಿ ಸಚ್ಚಿದಾನಂದೇಂದ್ರರು ಶಂಕರಭಾಷ್ಯಗಳನ್ನು ಆಳವಾಗಿ ಅಧ್ಯಯನಮಾಡಿ, ವ್ಯಾಖ್ಯಾನಕಾರರ ದೋಷಗಳನ್ನು ಕೆಚ್ಚೆದೆಯಿಂದ ಬಯಲಿಗೆಳೆದು ಸಂಪ್ರದಾಯವೇನೆಂಬುದನ್ನು ತೋರಿಸಿಕೊಟ್ಟರು. ಆ ಮಹತ್ಕಾರ್ಯಕ್ಕಾಗಿಯೇ ಆ ಸದ್ಗುರುಗಳು ತಮ್ಮ ಆಯುಷ್ಯವನ್ನೆಲ್ಲ ತೆಯ್ದುಬಿಟ್ಟರು:

ಶೋಧಿಸಿದರೆಲ್ಲವನು ಬೋಧಿಸಿದರೀಗಿದನು
ತೇದು ನಿಜಜೀವವಿದಕಾಗಿ ಮುಡುಪಿಟ್ಟ
ಸಾಧುಗಳೆ ಇವರು ಬ್ರಹ್ಮಜ್ಞ॥

ಸಚ್ಚಿದಾನಂದೇಂದ್ರರು ಕರುಣಿಸಿರುವ ಶಂಕರಭಾಷ್ಯಗಳ ಕನ್ನಡ ಅವತರಣಿಕೆಗಳು ಕೇವಲ ಭಾಷಾಂತರಗಳಲ್ಲ. ಅಲ್ಲಿನ ಅಡಿಟಿಪ್ಪಣಿಗಳಲ್ಲಿ ತಾವು ಭಾಷ್ಯಸಾಗರವನ್ನು ಕಡೆದು ಮೇಲೆತ್ತಿತಂದ ಮುತ್ತುರತ್ನಗಳನ್ನೆಲ್ಲ ಸಾಲುಸಾಲಾಗಿ ಅಣಿಗೊಳಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ವಿಪುಲವಾದ ಅಧ್ಯಯನ ಸಾಮಗ್ರಿಯಿದೆ. ಪಂಡಿತರಿಗೆಂದೇ ಶ್ರೀಗಳು ಅವರಿಗೊಪ್ಪುವ ಸಂಸ್ಕೃತಭಾಷೆಯಲ್ಲಿ ವಿವಾದಾತ್ಮಕ ವಿಚಾರವೆನಿಸಿದ 'ಮೂಲಾವಿದ್ಯಾ' ಎಂಬುದರ ಬಗ್ಗೆ ಕೃತಿರಚನೆ ಮಾಡಿದ್ದಾರೆ. ಅದನ್ನು ಚಿತ್ತಶುದ್ಧಿಯಿಂದ ಮನನ ಮಾಡಿದ

ಬಳಿಕ ಯಾರೂ ಮೊಂಡು ವಾದವನ್ನು ಹೂಡುವಂತೆಯೇ ಇಲ್ಲ:

ಪಂಡಿತರಿಗೋಸುಗವೆ ಖಂಡಿತದ ಸಂಸ್ಕೃತದಿ
ಮಂಡಿಸಿಹ ಗ್ರಂಥ ನೋಡಿದರೆ ಪಂಡಿತರ
ಮೊಂಡುತನ ನಿಲದು ಬ್ರಹ್ಮಜ್ಞ॥

ತಾವೇ ಜ್ಞಾನಿಗಳೆನ್ನುತ್ತ ಠೀವಿಯಿಂದ ಬೀಗಿನಡೆಯುತ್ತ ಮುಗ್ಧಜಿಜ್ಞಾಸುಗಳನ್ನು ಮೋಸಗೊಳಿಸುತ್ತಿದ್ದ ಗುರುಗಳಿಗೆ ಶ್ರೀಗಳ ಕೃತಿಗಳಿಂದ ಜೀವವೇ ಹೋದಂತಾಗಿದೆ. ಸಂಸ್ಕೃತವನ್ನರಿಯದ ವೇದಾಂತಜಿಜ್ಞಾಸುಗಳಾದ ಶ್ರೀಸಾಮಾನ್ಯರಿಗೆ ತಮಗೆ ತೋಚಿದನ್ನೇ ಶಂಕರಸಿದ್ಧಾಂತವೆಂದು ವ್ಯಾಖ್ಯಾನಿಸುತ್ತಿದ್ದ ಪಂಡಿತರ ಬಣ್ಣವೆಲ್ಲ ಈಗ ಬಯಲಾಗಿಬಿಟಿದೆ:

ಅರಿಯದಿರೆ ಸಂಸ್ಕೃತವ ಮರುಳುಗೊಳಿಸುತ ಜನರ
ಪರಿಪರಿಯ ಬೋಧೆ ಮಾಡುತಿಹ ಪಂಡಿತರ
ಹುರುಳು ಬಯಲಾಯ್ತು ಬ್ರಹ್ಮಜ್ಞ॥

ಕುರುಡ ನಂಬಿಕೆಗಳಿಗಂತೂ ಶ್ರೀಗಳ ಸುವಿವೇಕ ಬೋಧನೆಯಿಂದ ಮರಣವೇ ಬಂದೊದಗಿದೆ. ಆಧುನಿಕ ಜನರ ಉಪಕಾರಕ್ಕಾಗಿ ಸಚ್ಚಿದಾನಂದೇಂದ್ರರು ಆಂಗ್ಲಭಾಷೆಯಲ್ಲಿ ಗ್ರಂಥಗಳನ್ನು ಬರೆದಿದ್ದಾರೆ; ತನ್ಮೂಲಕ ಪರದೇಶಗಳ ಜಿಜ್ಞಾಸುಗಳ ಮೆಚ್ಚುಗೆಗೂ ಪಾತ್ರರಾಗಿದ್ದಾರೆ. ಶಂಕರಸಿದ್ಧಾಂತದ ಮಹಾದ್ವಾರವು ಸಂಸ್ಕೃತವರಿಯದ ಕನ್ನಡಿಗರ ಪಾಲಿಗೆ ಮುಚ್ಚಿಯೇ ಹೋಗಿತ್ತು. ಹಾಗೆ ಮುಚ್ಚಿಹೋಗಿದ್ದ ಹೆಬ್ಬಾಗಿಲನ್ನು ತೆರೆದ ಧೀರರೆಂದರೆ ಸಚ್ಚಿದಾನಂದೇಂದ್ರ ಶ್ರೀಗಳು. ಒಂದು ವೇಳೆ ಆ ಪುಣ್ಯಪುರುಷರು ಅವತರಿಸದಿದ್ದರೆ ಕನ್ನಡಿಗರು ಶಂಕರಭಾಷ್ಯದರಮನೆಯನ್ನು ಪ್ರವೇಶಿಸುವುದು ದೂರವೇ ಉಳಿದುಬಿಡುತ್ತಿತ್ತು:

ದ್ವಾರವನು ತೆರೆದಾಯ್ತು ಧೀರ ಶ್ರೀಗಳು ಇದನು
ಸಾರದಿರೆ ಇವರು ಭಾಷ್ಯಗಳ ತಿಳಿಯುವುದು
ದೂರವೇ ಇತ್ತು ಬ್ರಹ್ಮಜ್ಞ॥

ವೇದಾಂತದಲ್ಲಿ ಭಕ್ತಿಯ ಸ್ಥಾನವೇನೆಂಬುದನ್ನು ಸಚ್ಚಿದಾನಂದೇಂದ್ರ ಶ್ರೀಗಳು ಖಚಿತವಾಗಿ ತೋರಿಸಿಕೊಟ್ಟಿದ್ದಾರೆ. ಶಂಕರಭಾಷ್ಯಗಳಲ್ಲಿ ಮೂಡಿರುವ ಈಶಭಕ್ತಿಯ ಮಹಿಮೆಯನ್ನು ಸ್ಫುಟಗೊಳಿಸಿಕೊಟ್ಟು ಎಲ್ಲರನ್ನೂ ಭಕ್ತಿರಸದಲ್ಲಿ ತೋಯಿಸಿದ್ದಾರೆ. ತಮ್ಮ ಜೀವಿತಕಾಲದಲ್ಲಿ ಆ ಗುರುವರ್ಯರು ನಿತ್ಯವೂ ಸಂಧ್ಯಾಕಾಲದಲ್ಲಿ ತಮ್ಮ ಹತ್ತಿರದ ಭಕ್ತರನ್ನೆಲ್ಲ ಕೂಡಿಕೊಂಡು ಭಜನೆಯಲ್ಲಿ ಚಿತ್ತವು ಮುಳುಗುವಂತೆ ಮಾಡುತ್ತಿದ್ದರು. ಅವರ 'ಅಧ್ಯಾತ್ಮಗೀತಾವಳಿ'ಯಂತೂ ಭಕ್ತಿರಸದ ತವನಿಧಿಯಾಗಿದೆ. ಬ್ರಹ್ಮಚೈತನ್ಯ ಮಹಾರಾಜರಿಂದ ರಾಮಮಂತ್ರದ ಉಪದೇಶವನ್ನು ಪಡೆದುಕೊಂಡು ಭಕ್ತಿಸಂವರ್ಧನೆಗೆಂದೇ 'ಭಕ್ತಿವರ್ಧನ ಕ್ಷೇತ್ರ' ವೆನಿಸಿದ ಹೊಳೆನರಸೀಪುರದ ತಮ್ಮದೇ ಆದ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಅಪರೂಪವೆನಿಸುವ ದಿಗ್ವಿಜಯ ರಾಮದೇವರ ಗುಡಿಯನ್ನು ಸ್ಥಾಪಿಸಿದರು:

ದಿಗ್ವಿಜಯರಾಮಗುಡಿ ಹಿಗ್ಗಿನಲಿ ಸ್ಥಾಪಿಸುತ
ಒಗ್ಗಿಸಿಹರಿಲ್ಲಿ ನಿತ್ಯಕೀರ್ತನೆ ಭಜನೆ
ವೆಗ್ಗಳದಿ ನಡೆಯೆ ಬ್ರಹ್ಮಜ್ಞ॥

ಸಚ್ಚಿದಾನಂದೇಂದ್ರ ಸದ್ಗುರು ಮಹಾರಾಜರು ಮಾಡಿರುವ ಸಾಧನೆ, ಪಡೆದಿರುವ ಸಿದ್ಧಿಗಳ ಪರಿಪೂರ್ಣದರ್ಶನವಾಗಬೇಕಾದರೆ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆ ಹೋಗಬೇಕು. ಕನ್ನಡ, ಸಂಸ್ಕೃತ ಮತ್ತು ಆಂಗ್ಲಭಾಷೆಗಳಲ್ಲಿ ಅವರು ರಚಿಸಿರುವ ಮುನ್ನೂರಕ್ಕೂ ಹೆಚ್ಚು ಗ್ರಂಥಗಳನ್ನು ಅಲ್ಲಿ ನೋಡಬೇಕು; ಕೊಂಡು + ಆಡಬೇಕು = ಕೊಂಡಾಡಬೇಕು. ಒಂದೊಂದು ಗ್ರಂಥವೂ ಒಂದೊಂದು ಬಂಧುರವಾದ ರತ್ನವಿದ್ದಂತೆ – ಶೈಲಿಯೋ ಸುಮನೋಹರ; ವಿಷಯವೋ ವೈವಿಧ್ಯಮಯ. ಗುರುಗಳು ಗೈದಿರುವ ಮಹೋಪಕಾರವನ್ನು ಆದಿಶೇಷನೂ ಬಣ್ಣಿಸಲಾರ:

ಒಂದೊಂದು ಗ್ರಂಥವದು ಬಂಧುರದ ರತ್ನವಲೆ
ಸುಂದರದ ಸರಳ ಶೈಲಿಯಲಿ ಬರೆದಿರುವ
ಚಂದವನು ನೋಡಿ ಬ್ರಹ್ಮಜ್ಞ॥

ದೇವರಾಯ ಕುಲಕರ್ಣಿಯವರು ಸಚ್ಚಿದಾನಂದಗುರುವರ್ಯರ ಸಂಪರ್ಕಕ್ಕೆ ಬರುವ ಮುನ್ನವೇ ವೇದಾಂತವನ್ನು ಕುರಿತು ಸಾಕಷ್ಟು ಓದಿಕೊಂಡಿದ್ದರು; ತಲೆಕೆಡಿಸಿಕೊಂಡಿದ್ದರು. ಅದರ ಪರಿಣಾಮವಾಗಿ ಗುರುಗಳೊಡನೆ ಸಾಕಷ್ಟು ವಾದಮಾಡಿದರು. 'ನಾನು ತಿಳಿದಿರುವುದೇ ಸರಿ' ಎಂಬ ಆತ್ಮಾಭಿಮಾನವೇ ಕಾರಣವಾಗಿ ವಿಶುದ್ಧತತ್ತ್ವವನ್ನು ಅರಿಯುವುದು ಅವರಿಗೆ ಮೊದಮೊದಲು ಕಷ್ಟವೇ ಆಯಿತು:

ಮೊದಮೊದಲು ಬಡಿದಾಡಿ ಕದನ ಮಾಡಿದವರೊಡನೆ
ಹದವರಿಯೆ ಎನಗೆ ಕಡುಕಷ್ಟವಾಯ್ತೆನ್ನ
ಮದವನೇಂ ಪೇಳ್ವೆ ಬ್ರಹ್ಮಜ್ಞ॥

ಆದರೆ ಸದ್ಗುರುವಿನ ಕರುಣೆಯನ್ನು ಯಾಚಿಸಲಾಗಿ 'ಬುದ್ಧಿಯಲಿ ಸ್ಫುರಿಸಿತ್ತು ತತ್ತ್ವ'; 'ಬ್ರಹ್ಮಜ್ಞ'ರಾಗುವ ಭಾಗ್ಯ ಅವರದಾಯಿತು. ಈ ಹಿನ್ನೆಲೆಯಲ್ಲಿ ಬ್ರಹ್ಮಜ್ಞವಚನಗಳಿಗೆ 'ಅಭಿನಂದನೆ'ಯನ್ನು ಬರೆದಿರುವ ಸದ್ಗುರುಗಳ ನೇರ ಶಿಷ್ಯರಲ್ಲಿ ಒಬ್ಬರಾದ ಅಧ್ಯಾತ್ಮವಿದ್ಯಾಪ್ರವೀಣ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಮಾತುಗಳು ಮನನಯೋಗ್ಯವಾಗಿವೆ: "ಇವರು ಮೊದಲು ಅರ್ವಾಚೀನ ವೇದಾಂತಗ್ರಂಥಗಳಾದ ಪಂಚದಶೀ, ವಿವೇಕಚೂಡಾಮಣಿ, ಲಘುಯೋಗವಾಸಿಷ್ಠ – ಮುಂತಾದ ಗ್ರಂಥಗಳಿಂದ ಪ್ರಭಾವಿತರಾಗಿದ್ದು ಅನಂತರ ಶ್ರೀಶ್ರೀಗಳ ಪರಿಚಯವಾದ ಮೇಲೆ ಶಾಂಕರಭಾಷ್ಯ ಕನ್ನಡ ಅನುವಾದ ಗ್ರಂಥಗಳ ಪಠನಚಿಂತನಾದಿಗಳಿಂದಲೂ ಆಗಾಗ್ಗೆ ಶ್ರೀಶ್ರೀಗಳವರಲ್ಲಿ ವಿಚಾರವಿನಿಮಯ ಮಾಡಿಕೊಳ್ಳುವುದರ ಮೂಲಕವೂ ತಮ್ಮ ವಿಚಾರಸರಣಿಯನ್ನೂ ದೃಷ್ಟಿಕೋನವನ್ನೂ ಸಂಪೂರ್ಣವಾಗಿ ಬದಲಾಯಿಸಿಕೊಂಡು ಶುದ್ಧಶಾಂಕರಪ್ರಕ್ರಿಯೆಯನ್ನವಲಂಬಿಸಿ ಈ ಗ್ರಂಥವನ್ನು ರಚಿಸಿರುತ್ತಾರೆ. ಈ ಸಂದರ್ಭದಲ್ಲಿ ಶಂಕರವಿಜಯದಲ್ಲಿ ಬರುವ, ಮೊದಲು ಅತ್ಯಂತ

ಕರ್ಮನಿಷ್ಠರಾಗಿದ್ದು ಭಗವತ್ಪಾದರ ಶಿಷ್ಯರಾದ, ಅನಂತರ ನೈಷ್ಕರ್ಮ್ಯಸಿದ್ಧಿಯೆಂಬ ಕರ್ಮವಾಸನಾರಹಿತವಾದ, ಜ್ಞಾನನಿಷ್ಠೆಯನ್ನೇ ಎತ್ತಿ ಹಿಡಿಯುವ ಅಮೋಘ ಗ್ರಂಥವನ್ನು ಬರೆದು ಗುರುಗಳಿಗೆ ಪ್ರಿಯಶಿಷ್ಯರಾದಂಥ ಶ್ರೀಸುರೇಶ್ವರಾಚಾರ್ಯರ ನೆನಪು ನನಗೆ ಬರುತ್ತಿದೆ." ಸುರೇಶ್ವರಾಚಾರ್ಯರನ್ನು ಹೋಲುವ ಸಚ್ಛಿಷ್ಯರೊಬ್ಬರು ದೇವರಾಯ ಕುಲಕರ್ಣಿಯವರ ರೂಪದಲ್ಲಿ ಶಂಕರಾಚಾರ್ಯರನ್ನು ಹೋಲುವ ಸದ್ಗುರುವೊಬ್ಬರ ಪ್ರಭಾವದಿಂದ ಮೇಲೆದ್ದು ಬಂದರೆಂದರೆ ಸದ್ಗುರುಸಚ್ಚಿದಾನಂದೇಂದ್ರಸರಸ್ವತಿಗಳ ಮಹಿಮಾ ವಿಶೇಷಗಳನ್ನು ಹೇಗೆ ತಾನೆ ಬಣ್ಣಿಸಬಲ್ಲೆವು! ಸದ್ಗುರುಗಳಿಗೆ, ಅವರು ಸ್ಥಾಪಿಸಿದ್ದ ಅಧ್ಯಾತ್ಮವಿದ್ಯಾನಿಲಯಕ್ಕೆ, ಅವರು ಪ್ರಾರಂಭಿಸಿದ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಗೆ ಬ್ರಹ್ಮಜ್ಞರು ಹೀಗೆ ಶುಭಮಂಗಳವನ್ನು ಹಾರೈಸಿದ್ದಾರೆ:

ಸಚ್ಚಿದಾನಂದೇಂದ್ರ ಸಚ್ಚರಿತ ಯತಿವರಗೆ
ಉಚ್ಚವಹ ಇವರ ಕೃತಿಗಳಿಗೆ ಮಂಗಲವ
ನುಚ್ಚರಿಸುತಿರುವೆ ಬ್ರಹ್ಮಜ್ಞ॥

ಅಧ್ಯಾತ್ಮವಿದ್ಯೆಯಾ ಶುದ್ಧನಿಲಯಕೆ ಶುಭವು
ಅಧ್ಯಾತ್ಮಬೆಳಕ ಬೀರುತಿಹ ಪತ್ರಿಕೆಗೆ
ಶ್ರದ್ಧೆಯಲಿ ಶುಭವು ಬ್ರಹ್ಮಜ್ಞ॥

ಸಂತಸದ ಸಂಗತಿಗಳು

ಸಚ್ಚಿದಾನಂದೇಂದ್ರಸರಸ್ವತೀ ಮಹಾರಾಜರ ಕಾಲದ ಅಧ್ಯಾತ್ಮಪ್ರಕಾಶಕಾರ್ಯಾಲಯದ ಬಣ್ಣವೇ ಇಂದು ಬದಲಾಗಿಹೋಗಿದೆ. ಗುರುಗಳೇ ಎದ್ದುಬಂದರೂ ಗುರುತಿಸಲಾರದಷ್ಟು ದೊಡ್ಡಪ್ರಮಾಣದಲ್ಲಿ ಅದರ ಕಾಯಕಲ್ಪವಾಗಿ ಬಿಟ್ಟಿದೆ. ಅರಕಲಗೂಡು ಶ್ರೀಕಂಠಯ್ಯನವರೆಂಬ ಮಹನೀಯರು ದಾನವಾಗಿ ಕೊಟ್ಟ ಜಾಗದಲ್ಲಿ ಗುರುಗಳು ಸ್ಥಾಪಿಸಿದ್ದ ಕಾರ್ಯಾಲಯವು ಇಂದು ವಟವೃಕ್ಷವಾಗಿ ಬೆಳೆದಿದೆ. ಅದಕ್ಕೆ ಅಧ್ಯಾತ್ಮ ವಿದ್ಯಾಪ್ರಮೀಣ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳನ್ನು ಉತ್ಸವಮೂರ್ತಿಯಾಗಿಸಿಕೊಂಡು ಗುರುಭಕ್ತಶಿರೋಮಣಿಗಳಾದ ಹೆಚ್. ವೆಂಕಟನರಸಪ್ಪನವರು ಕನ್ನಡನಾಡಿನಾದ್ಯಂತ ಸಂಚರಿಸಿ, ನೂರಾರು ವೇದಾಂತ ಸಪ್ತಾಹಗಳನ್ನು ನಡೆಸಿ, ಕಾಣಿಕೆಗಳನ್ನು ಸಂಗ್ರಹಿಸಿ, ಆಧುನಿಕವೂ ಸುಸಜ್ಜಿತವೂ ಮಂಗಳಮಯವೂ ಆದ ಕುಟೀರಗಳನ್ನು ಎಬ್ಬಿಸಿರುವುದೇ ಕಾರಣವಾಗಿದೆ. ಈಗ ಸಚ್ಚಿದಾನಂದೇಂದ್ರ ಸದ್ಗುರುಗಳ ಹೆಸರಿನಲ್ಲಿ ಕಾರ್ಯಾಲಯದಲ್ಲಿ ವೇದಾಂತವಿದ್ಯಾಪ್ರವೀಣರನ್ನು ತಯಾರುಮಾಡುವ ವೇದಾಂತ ವಿದ್ಯಾಲಯವೊಂದು ನಡೆಯುತ್ತಿದೆ. ಮೊದಲಿಗೆ ಶಿವಮೊಗ್ಗ ಜಿಲ್ಲೆಯ 'ಸಂಸ್ಕೃತಗ್ರಾಮ' ವೆಂಬ ಖ್ಯಾತಿಗೆ ಪಾತ್ರವಾಗಿರುವ, ಮತ್ತೂರು ಗ್ರಾಮದಿಂದ ವೇದಾಂತ ವಿದ್ಯಾಸಾಗರರೆನಿಸಿದ ಶ್ರೀ ಚಂದ್ರಮೌಳಿ ಅವಧಾನಿಗಳು ಪ್ರಾಚಾರ್ಯರಾಗಿ ಆಗಮಿಸಿ ಹಲವು ವರ್ಷಗಳ ಕಾಲ ತಮ್ಮ ವಿದ್ಯೆಯನ್ನು ಧಾರೆಯೆರೆದು ಅನೇಕ ವೇದಾಂತ ವಿದ್ಯಾಪ್ರವೀಣರನ್ನು ನಾಡಿಗೆ ಸಮರ್ಪಿಸಿದ್ದಾರೆ. ಅವರು ಸನ್ಯಾಸವನ್ನು ಸ್ವೀಕರಿಸಿ ಅದ್ವಯಾನಂದೇಂದ್ರಸರಸ್ವತಿಗಳೆಂಬ ಪುಣ್ಯನಾಮದಿಂದ ಶೋಭಿಸುತ್ತ, ಈಗ ಬೆಂಗಳೂರು ಮಹಾನಗರದ ರಾಜಾಜಿನಗರದಲ್ಲಿ 'ಸಚ್ಚಿದಾನಂದ

ಅದ್ವೈತಾಶ್ರಮ' ಎಂಬ ಹೆಸರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ, ವೇದಾಂತ ಪ್ರಚಾರವನ್ನು ಎಡೆಬಿಡದೆ ಮಾಡುತ್ತ, ಸಚ್ಚಿದಾನಂದೇಂದ್ರಗುರುಗಳ ಕೀರ್ತಿಪತಾಕೆಯನ್ನು ಎತ್ತಿಹಿಡಿದಿದ್ದಾರೆ.

ಈಗ ಕಾರ್ಯಾಲಯದಲ್ಲಿ ಸಚ್ಚಿದಾನಂದೇಂದ್ರಸದ್ಗುರುಗಳ ವೇದಾಂತ ಪರಂಪರೆಗೇ ಸೇರಿದ ಶ್ರೀ ಪ್ರಕಾಶನಂದೇಂದ್ರಸರಸ್ವತಿಗಳು ನೆಲೆಯಾಗಿದ್ದಾರೆ. ಶ್ರೀ ಅದ್ವಯಾನಂದೇಂದ್ರಸರಸ್ವತಿಗಳ ಶಿಷ್ಯರಾಗಿ ಕಾರ್ಯಾಲಯದಲ್ಲಿಯೇ ಅಧ್ಯಾತ್ಮವಿದ್ಯಾಪ್ರವೀಣರಾದ ಶ್ರೀ ವೆಂಕಟೇಶ ಅವರಿದ್ದಾರೆ. ಇವರೆಲ್ಲರ ಪರಿಶ್ರಮದಿಂದ ಕಾರ್ಯಾಲಯದಲ್ಲಿರುವ ವೇದಾಂತ ವಿದ್ಯಾಲಯವು ಯಶಸ್ವಿಯಾಗಿ ಮುಂದುವರಿಯುತ್ತಿದೆ.

ಕಾರ್ಯಾಲಯವನ್ನು ಕಟ್ಟಲು ನಿವೇಶನವನ್ನು ದೊರಕಿಸಿಕೊಟ್ಟ ಅಡ್ವೊಕೇಟ್ ಅರಕಲಗೂಡು ಶ್ರೀಕಂಠಯ್ಯನವರ ಸುಪುತ್ರರಾದ ಅರಕಲಗೂಡು ತಾಂಡವೇಶ್ವರರು ಕಾರ್ಯಾಲಯದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ 45ಕ್ಕೂ ಹೆಚ್ಚು ವರ್ಷಗಳಷ್ಟು ದೀರ್ಘಕಾಲ ಸೇವೆಸಲ್ಲಿಸಿದ್ದಾರೆ. ತಮ್ಮ ತಂದೆಯವರಂತೆಯೇ ತಾಂಡವೇಶ್ವರರೂ ಅಡ್ವೊಕೇಟರಾಗಿದ್ದು, ತಮ್ಮ ವೃತ್ತಿಯಲ್ಲಿ ಜನಪ್ರಿಯರಾಗಿದ್ದರು. ಕಾರ್ಯಾಲಯಕ್ಕೆ ಸಂಬಂಧಿಸಿದ ಕಾನೂನು ಸಂಬಂಧಿ ಸಲಹೆಗಳನ್ನು ನೀಡುತ್ತ, ಅದು ನಿರ್ವಿಘ್ನವಾದ ಮಾರ್ಗದಲ್ಲಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳುತ್ತಿದ್ದರು. ಕಾರ್ಯಾಲಯವು ಕೈಗೊಳ್ಳುತ್ತಿದ್ದ ಎಲ್ಲ ಹೊಸಹೊಸ ಯೋಜನೆಗಳಿಗೂ ತಾಂಡವೇಶ್ವರರು ಸೂಕ್ತವಾದ ಸಲಹೆನೀಡಿ, ಅವೆಲ್ಲವೂ ಯಶಸ್ವಿಯಾಗಿ ಸಂಪನ್ನಗೊಳ್ಳುವಂತೆ ನೋಡಿಕೊಳ್ಳುತ್ತಿದ್ದರು. ಸಚ್ಚಿದಾನಂದೇಂದ್ರಸದ್ಗುರುಗಳ ಜನ್ಮಜಯಂತಿಸಪ್ತಾಹ ಮತ್ತು ಆರಾಧನಾಮಹೋತ್ಸವಗಳ ಸಪ್ತಾಹಗಳ ಸಮಾರೋಪ ಸಮಾರಂಭದಲ್ಲಿ ತಾಂಡವೇಶ್ವರರು ತಪ್ಪದೆ ಭಾಗವಹಿಸುತ್ತಿದ್ದರು. ಆಗ ಅಲ್ಲಿ ನೆರೆದಿರುತ್ತಿದ್ದ ಭಕ್ತರಿಗೆ ಕಾರ್ಯಾಲಯದ ಆಗುಹೋಗುಗಳನ್ನು ಕುರಿತಂತೆ ಪಾರದರ್ಶಕವಾದ ಮಾಹಿತಿಗಳನ್ನು ನೀಡುತ್ತಿದ್ದರು. "ದಾನಿಗಳು ನೀಡುವ ಒಂದೊಂದು ಕಾಸನ್ನೂ ನಾವು ಪೋಲುಮಾಡದೆ ಕಾರ್ಯಾಲಯದ ಅಭಿವೃದ್ಧಿಗಾಗಿಯೇ ವಿನಿಯೋಗಿಸುತ್ತಿದ್ದೇವೆ. ಒಂದು ನಯಾಪೈಸಾ ದುರುಪಯೋಗವಾಗಿದೆ ಎಂದು ಯಾರಾದರೂ ತೋರಿಸಿಕೊಡಲಿ ನೋಡೋಣ" ಎಂದು ಅವರು ಪ್ರತಿಬಾರಿಯೂ ಸವಾಲೆಸೆಯುತ್ತಿದ್ದರು. ಅಧ್ಯಾತ್ಮಪ್ರಕಾಶಕಾರ್ಯಾಲಯದ ಬೆಳೆವಣಿಗೆಯ ಇತಿಹಾಸದಲ್ಲಿ ಅಧ್ಯಾತ್ಮವಿದ್ಯಾಪ್ರವೀಣ ಶ್ರೀ ಹೆಚ್. ಎಲ್. ಲಕ್ಷ್ಮೀನರಸಿಂಹಮೂರ್ತಿ, ಶ್ರೀ ಹೆಚ್. ವೆಂಕಟನರಸಪ್ಪ, ಶ್ರೀ ಎ. ತಾಂಡವೇಶ್ವರ – ಇವರುಗಳ ಹೆಸರು ಚಿರಸ್ಮರಣೀಯ.

ಹೊಳೆನರಸೀಪುರ ಟೌನಿನ ಪುರಸಭೆಯ ಅಧ್ಯಕ್ಷರಾಗಿ ಪಟ್ಟಣದ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿದ ಶ್ರೀ ಶ್ರೀನಿವಾಸ್ ಅವರ ಸೇವೆ ಕಾರ್ಯಾಲಯಕ್ಕೂ ದೊರಕುವಂತಾದುದು ಭಕ್ತವೃಂದದ ಭಾಗ್ಯವೆಂದೇ ಹೇಳಬೇಕು. ಸಚ್ಚಿದಾನಂದೇಂದ್ರಗುರುಗಳು ಬ್ರಹ್ಮೀಭೂತರಾದಾಗ ಪಟ್ಟಣದ ನಡುವೆ, ಕಾರ್ಯಾಲಯದೊಳಗೆ, ಅವರ ಸಮಾಧಿ ಮಂದಿರವನ್ನು ನಿರ್ಮಿಸುವ ವಿಷಯದಲ್ಲಿ ಒದಗಿಬಂದಿದ್ದ ತೊಡಕನ್ನು ಅತ್ಯಂತ ಜಾಣ್ಮೆಯಿಂದ ಪರಿಹರಿಸಿದ ಕೀರ್ತಿ ಶ್ರೀನಿವಾಸರಿಗೆ ಸಲ್ಲುತ್ತದೆ. ಅವರೊಬ್ಬ ವಯೋಲಿನ್ ವಿದ್ವಾಂಸರೂ ಹೌದು, ಹಾಡುಗಾರರೂ ಹೌದು. ಕಾರ್ಯಾಲಯದಲ್ಲಿ ನಡೆಯುವ ಸಪ್ತಾಹಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಶ್ರೀನಿವಾಸರು ಹಲವು ಬಾರಿ ವಯೋಲಿನ್‌ವಾದನ ಮತ್ತು ಹಾಡುಗಾರಿಕೆಗಳ

ಮೂಲಕ ಭಕ್ತಸಮುದಾಯಕ್ಕೆ ಸಂತೋಷವನ್ನುಂಟುಮಾಡಿದ್ದಾರೆ. ಈಗಲೂ ಅವರು ಕಾರ್ಯಾಲಯದ ಅಧ್ಯಕ್ಷರಾಗಿದ್ದುಕೊಂಡು ಅನುಪಮವಾದ ಸೇವೆ ಸಲ್ಲಿಸುತ್ತಿದ್ದಾರೆ.

ಇಂದಿಗೂ ವಿಕಾಸವೇ ಅದರ ಹಾದಿ

ಇಂದಿಗೂ ಅಧ್ಯಾತ್ಮಪ್ರಕಾಶಕಾರ್ಯಾಲಯವು ಪ್ರಗತಿಪಥದಲ್ಲಿಯೇ ಸಾಗುತ್ತಿದೆ. ಸಚ್ಚಿದಾನಂದೇಂದ್ರ ಗುರುಗಳಿಂದ ರಚಿತವಾದ ಎಲ್ಲ ಗ್ರಂಥಗಳೂ ಪುನರ್ಮುದ್ರಣಗೊಳ್ಳುತ್ತಲೆ ಇವೆ. ಒಂದೊಂದು ಗ್ರಂಥಕ್ಕೂ ಭಕ್ತರು ಮುದ್ರಣಕ್ಕೆ ನೀಡುವ ದಾನವೇ ಕಾರಣವಾಗಿ ಎಲ್ಲ ಗ್ರಂಥಗಳೂ ಇಂದಿನ ಲೆಕ್ಕದಲ್ಲಿ ಬಹಳ ಕಡಿಮೆಬೆಲೆಗೆ ಜಿಜ್ಞಾಸುಗಳಿಗೆ ಲಭಿಸುತ್ತಿವೆ. ಸದ್ಗುರುಗಳೇ ಹುಟ್ಟುಹಾಕಿದ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆ ಎಂದಿಗಿಂತ ಹೆಚ್ಚು ಆಕರ್ಷಕವಾಗಿ ತಪ್ಪದೆ ವೇದಾಂತ ರಸಿಕರ ಕೈಸೇರುತ್ತಿದೆ. ಸಚ್ಚಿದಾನಂದೇಂದ್ರ ಗುರುಗಳು ರಚಿಸಿದ ವೇದಾಂತ ಗ್ರಂಥಗಳನ್ನೇ ಕೈಗೆತ್ತಿಕೊಂಡು, ಅಧ್ಯಯನ ನಡೆಸಿ, ಮಹಾಪ್ರಬಂಧವನ್ನು ಮಂಡಿಸಿ, ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದುಕೊಂಡಿರುವ ಡಾ. ಎಸ್. ಹೇಮಲತಾ ಅವರು 'ಅಧ್ಯಾತ್ಮಪ್ರಕಾಶ'ದ ಪ್ರಧಾನಸಂಪಾದಕರಾಗಿ ಭಕ್ತಜನೋಪಯೋಗಿಯಾಗುವಂತೆ ಹೊರತರುತ್ತಿದ್ದಾರೆ. ಕಾರ್ಯಾಲಯದ ವಿದ್ಯಾಲಯದಲ್ಲಿಯೇ ಅಧ್ಯಯನಮಾಡಿ 'ಅಧ್ಯಾತ್ಮ ವಿದ್ಯಾಪ್ರವೀಣ'ರಾಗಿರುವ ಶ್ರೀಲಕ್ಷ್ಮೀಶ ಭಟ್ಟ ಅವರು ಕೂಡ ಪ್ರಧಾನ ಸಂಪಾದಕರೊಡನೆ ದುಡಿಯುತ್ತಿದ್ದಾರೆ.

ಸದ್ಗುರುಗಳ ಜನ್ಮಜಯಂತಿ ಸಪ್ತಾಹ, ಆರಾಧನಾಸಪ್ತಾಹ ಎಂಬೆರಡು ಸಪ್ತಾಹಗಳು ಜಿಜ್ಞಾಸುಗಳಿಗೆ ಊಟವಸತಿಗಳ ಸಹಿತವಾಗಿ ಹಾಗೂ ಶುಲ್ಕಸಹಿತವಾಗಿ ಜಿಜ್ಞಾಸುಗಳ ಬೇಡಿಕೆಯಂತೆ ಎರಡು ಸಪ್ತಾಹಗಳು – ಹೀಗೆ ವರ್ಷದಲ್ಲಿ ನಾಲ್ಕು ವೇದಾಂತ ಸಪ್ತಾಹ **"ಕನ್ನಡನಾಡಿನಲ್ಲಿ ಎಲ್ಲಿಯೂ ಇಲ್ಲ"** ಎಂಬ ಪರಿಯಲ್ಲಿ ಮಹೋನ್ನತವಾಗಿ ಸಂಪನ್ನಗೊಳ್ಳುತ್ತಿವೆ. ಆ ವೈಖರಿಯನ್ನೆಲ್ಲ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅನುಭವಿಸಬೇಕೇ ಹೊರತು ಬಾಯಿಮಾತಿನಿಂದ ಬಣ್ಣಿಸಿ ತಿಳಿಸುವುದು ಸಾಧ್ಯವಿಲ್ಲ. ಸಚ್ಚಿದಾನಂದೇಂದ್ರ ಸರಸ್ವತಿಗಳೆಂದರೆ ಅವರು ಅಭಿನವ ಶಂಕರರು. ಹೇಮಾವತಿ ನದಿಯ ತೀರದ ಭಕ್ತಿವರ್ಧನ ಕ್ಷೇತ್ರವೆನಿಸಿದ ಹೊಳೆನರಸೀಪುರವೆಂದರೆ ಅದು ಅಭಿನವ ಕಾಲಟಿ. ಹೇಮಾವತಿಯೆಂದರೆ ಅದು ಅಭಿನವ ಪೂರ್ಣಾನದಿ. ಇದಕ್ಕಿಂತ ಹೆಚ್ಚು ಹೇಳುವುದೇನಿದೆ!

* * * * *

ಜ್ಞಾನ

1. ಜ್ಞಾನಿಗೆ ಜಗತ್ತು ಕಂಡರೂ ಆತ್ಮನೇ.
2. ಜ್ಞಾನವು ಇದ್ದುದನ್ನು ಕಳೆಯುವುದಿಲ್ಲ. ಅದರ ಸ್ವರೂಪವನ್ನು ತೋರಿಸುತ್ತದೆ. ಪ್ರತಿಬಿಂಬವನ್ನು ನಿವೆಂದು ತಿಳಿಯುವವನು ಒಬ್ಬನು. ತಿಳಿದವನು ಅದು ತೋರಿದರೂ ಸುಳ್ಳೆಂದು ತಿಳಿಯುವನು.

– ಶ್ರೀ ಸಚ್ಚಿದಾನಂದವಾಣಿ

ಭಗವದ್ಗೀತೆಯಲ್ಲಿ ಭಕ್ತಿಯೋಗ ಮತ್ತು ಜ್ಞಾನನಿಷ್ಠಾ ಸಾಧನಗಳು

– ಡಾ॥ ಕೆ.ಎಸ್. ರಾಮನಾಥ ಶರ್ಮಾ
9900087425

1. ಪೀಠಿಕೆ:

ವೇದೋಕ್ತ ಧರ್ಮವು ಪ್ರವೃತ್ತಿಧರ್ಮ ಮತ್ತು ನಿವೃತ್ತಿಧರ್ಮ ಎಂಬ ಎರಡು ಪ್ರಕಾರಗಳಿಂದ ಇದೆ ಎಂದು ಭಗವದ್ಗೀತೆಯ ಭಾಷ್ಯಕಾರರು ತಮ್ಮ ಭಾಷ್ಯದ ಅವತರಣಿಕೆಯಲ್ಲಿ ಬರೆದಿದ್ದಾರೆ. ಜ್ಞಾನ ವೈರಾಗ್ಯರೂಪವಾದ ನಿವೃತ್ತಿ ಧರ್ಮದ ಆಚರಣೆಯಿಂದ ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮಜ್ಞಾನ ನಿಷ್ಠೆಯು ಪ್ರಾಪ್ತವಾಗುತ್ತದೆ. ಅದರಿಂದ ಸಂಸಾರವು ಸಮೂಲವಾಗಿ ನಾಶವಾಗುತ್ತದೆಯಾಗಿ, ನಿವೃತ್ತಿಧರ್ಮವು ನಿಃಶ್ರೇಯಸಕ್ಕೆ (ಸದ್ಯೋಮುಕ್ತಿಗೆ) ನೇರವಾದ ಸಾಧನವಾಗಿರುತ್ತದೆ.

ವರ್ಣಾಶ್ರಮಿಗಳ ಧರ್ಮವಾದ ಪ್ರವೃತ್ತಿಧರ್ಮವು ಮಾನವನ ಅಭ್ಯುದಯಕ್ಕಾಗಿ ವಿಹಿತವಾಗಿದ್ದರೂ, ಆ ಧರ್ಮವನ್ನು ಈಶ್ವರಾರ್ಪಣ ಬುದ್ಧಿಯಿಂದ, ಫಲದ ಆಸೆಯಿಲ್ಲದೆ ಅನುಷ್ಠಾನ ಮಾಡಿದರೆ, ಅದು ದುರಿತಕ್ಷಯ, ಸತ್ತ್ವಶುದ್ಧಿ, ಜ್ಞಾನನಿಷ್ಠಾಯೋಗ್ಯತೆ, ಜ್ಞಾನೋತ್ಪತ್ತಿ, ಸರ್ವಕರ್ಮಸಂನ್ಯಾಸ, ಜ್ಞಾನನಿಷ್ಠೆ ಎಂಬ ಕ್ರಮದಿಂದ ನಿಃಶ್ರೇಯಸಕ್ಕೂ ಕಾರಣವಾಗುತ್ತದೆ.

ಭಗವದ್ಗೀತೆಯಲ್ಲಿ ಈ ಎರಡು ಧರ್ಮಗಳನ್ನೂ, ವಾಸುದೇವನೆಂಬ ಪರಮಾರ್ಥತತ್ತ್ವವನ್ನೂ ತಿಳಿಸಿಕೊಟ್ಟಿರುತ್ತದೆಯೆಂದೂ, ಸಮಸ್ತ ವೇದಾರ್ಥದ ಸಾರವೇ ಇದು ಎಂದೂ ಭಾಷ್ಯಕಾರರು ಬರೆದಿರುತ್ತಾರೆ.

ಶ್ರೀಮದ್ ಭಗವದ್ಗೀತಾ ಅವತರಿಣಿಕಾ ಭಾಷ್ಯದಲ್ಲಿ–

ದ್ವಿವಿಧೋ ಹಿ ಧರ್ಮಃ ಪ್ರವೃತ್ತಿಲಕ್ಷಣೋ ನಿವೃತ್ತಿಲಕ್ಷಣಶ್ಚ ಜಗತಃ ಸ್ಥಿತಿಕಾರಣಮ್ ।
ತದಿದಂ ಗೀತಾಶಾಸ್ತ್ರಂ ಸಮಸ್ತವೇದಾರ್ಥಸಾರಸಂಗ್ರಹಭೂತಂ... ॥

ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯ ಅತ್ಯಂತೋಪರಮಲಕ್ಷಣಂ । ತಚ್ಚ ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನನಿಷ್ಠಾರೂಪಾತ್ ಧರ್ಮಾತ್ ಭವತಿ ।

ಅಭುದಯಾಥೋ೯ಽಪಿ ಯಃ ಪ್ರವೃತ್ತಿಲಕ್ಷಣೋ ಧರ್ಮೋ ವರ್ಣಾನಾಶ್ರಮಾಂಶ್ಚ ಉದ್ದಿಶ್ಯ ವಿಹಿತಃ ಸ ದೇವಾದಿಸ್ಥಾನಪ್ರಾಪ್ತಿಹೇತುರಪಿ ಸನ್ ಈಶ್ವರಾರ್ಪಣಬುದ್ಧ್ಯಾ ಅನುಷ್ಠೀಯಮಾಣಃ ಸತ್ತ್ವಶುದ್ಧಯೇ ಭವತಿ ಫಲಾಭಿಸಂಧಿವರ್ಜಿತಃ । ಶುದ್ಧಸತ್ತ್ವಸ್ಯ ಚ ಜ್ಞಾನನಿಷ್ಠಾಯೋಗ್ಯತಾಪ್ರಾಪ್ತಿದ್ವಾರೇಣ ಜ್ಞಾನೋತ್ಪತ್ತಿಹೇತುತ್ವೇನ ಚ ನಿಃಶ್ರೇಯಸಹೇತುತ್ವಮಪಿ ಪ್ರತಿಪದ್ಯತೇ ।

ಭಗವದ್ಗೀತೆಯಲ್ಲಿ ಉಪದೇಶಿಸಿರುವ ಜ್ಞಾನನಿಷ್ಠಾ ಸಾಧನಗಳನ್ನು ತಿಳಿಯುವ ಮೊದಲು ಸಾಂಖ್ಯ, ಯೋಗ, ಭಕ್ತಿ, ಜ್ಞಾನ ಎಂಬ ಶಬ್ದಗಳ ಅರ್ಥವನ್ನು ಸರಿಯಾಗಿ ತಿಳಿಯುವುದು ಅವಶ್ಯಕ.

2. ಸಾಂಖ್ಯ, ಯೋಗ ಪದಾರ್ಥಗಳು

ಗೀತೆಯ ಎರಡನೆಯ ಅಧ್ಯಾಯದಲ್ಲಿ ಆತ್ಮಾನಾತ್ಮವಿವೇಕ ಲಕ್ಷಣವಾದ ಜ್ಞಾನವನ್ನು ಪರಾಮರ್ಶಿಸುವ ಮೂಲಕ ಆತ್ಮತತ್ವವನ್ನು ನಿರೂಪಣೆ ಮಾಡಿದನಂತರ, "ಇಲ್ಲಿಯವರೆಗೆ ಸಾಂಖ್ಯಬುದ್ಧಿಯನ್ನು ಹೇಳಿದ್ದಾಯಿತು, ಇನ್ನು ಮುಂದೆ ಯೋಗದ ವಿಷಯವನ್ನು ಕೇಳು" ಎಂದು ಭಗವಂತನು ಹೇಳಿದ್ದಾನೆ (ಶ್ಲೋಕ 2.39). ಇದನ್ನೇ ಮೂರನೆಯ ಅಧ್ಯಾಯದಲ್ಲಿಯೂ "ಸಾಂಖ್ಯರಿಗೆ ಜ್ಞಾನಯೋಗದಲ್ಲಿಯೂ, ಯೋಗಿಗಳಿಗೆ ಕರ್ಮಯೋಗದಲ್ಲಿಯೂ ನಿಷ್ಠೆ" ಎಂದು ಎರಡು ವಿಧವಾದ ನಿಷ್ಠೆಗಳನ್ನು ಬೇರೆ ಬೇರೆ ಅಧಿಕಾರಿಗಳಿಗೆಂದು ಹೇಳಿದ್ದಾನೆ (ಶ್ಲೋಕ 3.3). ಶ್ವೇತಾಶ್ವತರ ಉಪನಿಷತ್ತಿನಲ್ಲಿ "ಎಲ್ಲದಕ್ಕೂ ಕಾರಣನಾದ ಆ ದೇವನನ್ನು ಸಾಂಖ್ಯ ಮತ್ತು ಯೋಗ ಎಂಬ ಸಾಧನಗಳಿಂದ ತಿಳಿದು ಎಲ್ಲ ಬಂಧನಗಳಿಂದ ಮುಕ್ತನಾಗುತ್ತಾನೆ" ಎಂದು ಹೇಳಿದೆ. ಈ ಕಾರಣಗಳಿಂದ ಭಗವದ್ಗೀತೆಯಲ್ಲಿ ಹೇಳಿರುವ ಸಾಂಖ್ಯ ಶಬ್ದವು ವೇದೋಕ್ತ ಜ್ಞಾನವೆಂದೂ, ಸಾಂಖ್ಯವೆಂಬ ಹೆಸರಿನ ದ್ವೈತದರ್ಶನದಲ್ಲಿ ಹೇಳಿರುವ ಜ್ಞಾನವಲ್ಲವೆಂದೂ ಸಿದ್ಧವಾಗುತ್ತದೆ.

ಏಷಾ ತೇऽಭಿಹಿತಾः ಸಾಂಖ್ಯೇ ಬುದ್ಧಿರ್ಯೋಗೇತ್ವಿಮಾಂ ಶೃಣು । ಭ.ಗೀ. 2.39

ಲೋಕೇऽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥ ಭ.ಗೀ. 3.3

ತತ್ಕಾರಣಂ ಸಾಂಖ್ಯಯೋಗಾಭಿಗಮ್ಯಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ । ಶ್ವೇ.ಉಪ. 6.13

ಹಿಂದೆ ಉದಾಹರಿಸಿದ ಭಗವದ್ಗೀತೆಯ ಶ್ಲೋಕದಲ್ಲಿ (2.39) "ಇನ್ನು ಮುಂದೆ ಯೋಗದಲ್ಲಿ ಬುದ್ಧಿಯನ್ನು ಕೇಳು" ಎಂದು ಹೇಳಿ ಕರ್ಮಯೋಗವನ್ನೇ ಪರಾಮರ್ಶಿಸಿದೆಯಾದರೂ, ಗೀತೆಯಲ್ಲಿ ಅನೇಕ ಕಡೆಗಳಲ್ಲಿ ಸಾಂಖ್ಯಯೋಗ, ಧ್ಯಾನಯೋಗ, ಜ್ಞಾನಯೋಗ, ಭಕ್ತಿಯೋಗ ಎಂಬಲ್ಲಿ ಸವಿಶೇಷಣವಾಗಿ ಯೋಗ ಶಬ್ದವನ್ನು ಉಪಯೋಗಿಸಿದೆ. ಆದರೆ ಗೀತೆಯಲ್ಲಿ ಆತ್ಮಜ್ಞಾನನಿಷ್ಠೆಯೇ ಮುಖ್ಯವಾದ ಉಪದೇಶವೆಂದು ಭಾಷ್ಯಕಾರರು ಹೇಳಿರುವುದರಿಂದ ಮತ್ತು ಕರ್ಮಯೋಗವೇ ಮುಂತಾದವು ಆ ನಿಷ್ಠೆಗೆ ಉಪಾಯಭೂತವಾಗಿರುವುದರಿಂದ, ಯೋಗ ಶಬ್ದವು ಪ್ರಾಧಾನ್ಯವಾಗಿ ಜ್ಞಾನನಿಷ್ಠೆಯನ್ನೇ ಹೇಳುತ್ತದೆಯೆಂದೂ, ಕರ್ಮಯೋಗ, ಭಕ್ತಿಯೋಗ ಮುಂತಾದ ಕಡೆಗಳಲ್ಲಿ ಗೌಣವಾಗಿ ಆ ಶಬ್ದವು ಪ್ರಯೋಗಿಸಲ್ಪಟ್ಟಿದೆಯೆಂದೂ ತೀರ್ಮಾನಿಸಬಹುದು. ಯೋಗವೆಂದರೆ "ಪರಮಾತ್ಮನೊಡನೆ ಸೇರಿಸುತ್ತದೆ ಎಂಬ ಅರ್ಥವಶದಿಂದಲೂ ಜ್ಞಾನನಿಷ್ಠೆಯು ಯೋಗಶಬ್ದದಿಂದ ಹೇಳಲ್ಪಟ್ಟಿದೆ" ಎಂದು ತಿಳಿಯುತ್ತದೆ.

ಪರಮಾತ್ಮನಾ ಯುಜ್ಯತೇ, ಏಕೀಕ್ರಿಯತೇ ಅನೇನ ಇತ್ಯರ್ಥಯೋಗೇನ ಜ್ಞಾನನಿಷ್ಠಾ 'ಯೋಗಃ' ಇತ್ಯುಚ್ಯತೇ। ಕರ್ಮಯೋಗಾದಯಸ್ತು ತಾದರ್ಥ್ಯಾತ್ ಯೋಗಶಬ್ದಾರ್ಹಾಃ । (ಅಧ್ಯಾಯ 5, ಗೀತಾಶಾಸ್ತ್ರಾರ್ಥವಿವೇಕಃ).

3. ಭಕ್ತಿ ಮತ್ತು ಜ್ಞಾನ ಪದಾರ್ಥಗಳು

ಭಕ್ತಿ ಎಂಬ ಶಬ್ದವು ಶಬ್ದಶಾಸ್ತ್ರದ ಪ್ರಕಾರ "ಸೇವೆ ಮಾಡುವುದು" ಎಂಬ ಅರ್ಥದ ಧಾತುವಿನಿಂದ ಹುಟ್ಟಿರುವುದು. ಮಾತೃಭಕ್ತಿ, ಪಿತೃಭಕ್ತಿ. ಗುರುಭಕ್ತಿ ಮುಂತಾದ ಕಡೆಗಳಲ್ಲಿ ಶ್ರದ್ಧೆಯಿಂದ ಪ್ರೀತಿಪೂರ್ವಕವಾಗಿ ಮಾಡುವ ಸೇವೆಯೇ ಭಕ್ತಿ ಎಂಬ ಪದಾರ್ಥವು ಎಂದಾಗುತ್ತದೆ. ಆದ್ದರಿಂದ ಭಕ್ತಿ ಎಂದರೆ ಪೂಜ್ಯವಿಷಯಕವಾದ ಪ್ರೇಮವೇ. ಆ ರೀತಿಯ ಪ್ರೇಮದಿಂದ ಕೂಡಿದ ಮನೋವೃತ್ತಿಯು ಭಕ್ತಿ ಶಬ್ದದ ಅರ್ಥವೆಂದು ತಿಳಿಯಬಹುದು.

ನಾರದ ಭಕ್ತಿ ಸೂತ್ರಗಳಲ್ಲಿ ಎರಡನೆಯ ಸೂತ್ರವು "ಸಾ ತ್ವಸ್ಮಿನ್ ಪರಮಪ್ರೇಮರೂಪಾ"– ಅದಾದರೋ (ಭಕ್ತಿಯು) ಇವನಲ್ಲಿ (ಪರಮಾತ್ಮನಲ್ಲಿ) ಮಿಗಿಲಿಲ್ಲದ ಪ್ರೇಮದ ರೂಪವಾಗಿರುತ್ತದೆ (ಭಕ್ತಿಚಂದ್ರಿಕೆ, –ಪುಟ 5) ಎಂದು ಭಕ್ತಿಯ ಲಕ್ಷಣವನ್ನು ಹೇಳುತ್ತದೆ.

ದೇವತಾವಿಶೇಷಗಳನ್ನು ಶ್ರದ್ಧೆಯಿಂದ ಅರ್ಚಿಸುವ ಭಕ್ತರಿಗೆ ಆ ದೇವತೆಗಳಲ್ಲೇ ಅಚಲವಾದ ಶ್ರದ್ಧೆಯನ್ನು ಕೊಡುತ್ತೇನೆ ಎಂದು ಭಗವಂತನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಹಾಗೆಯೇ, ಯಾವನು ನನಗಾಗಿ ಕರ್ಮವನ್ನು ಮಾಡುವನೋ, ಮತ್ತು ಯಾವನು ನನ್ನನ್ನೇ ಪರಮ ಗತಿ (ಸೇರಬೇಕಾದ ಹೆಚ್ಚಿನ ಗತಿಯು) ಎಂದು ತಿಳಿದಿರುತ್ತಾನೋ ಅವನು ನನ್ನ ಭಕ್ತನು, ಅವನು ನನ್ನನ್ನೇ ಬಂದು ಸೇರುತ್ತಾನೆ ಎಂದು ಉಪದೇಶ ಮಾಡಿದ್ದಾನೆ.

ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ ॥ ಭ.ಗೀ. 7.21

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥ ಭ.ಗೀ. 11.55

ಗೀತೆಯಲ್ಲಿ ಆರ್ತ, ಅರ್ಥಾರ್ಥೀ, ಜಿಜ್ಞಾಸು ಮತ್ತು ಜ್ಞಾನಿ ಎಂದು ನಾಲ್ಕು ವಿಧದ ಭಕ್ತರು ಭಗವಂತನನ್ನು ಭಜಿಸುತ್ತಾರೆ ಎಂದು ಹೇಳಿದೆ (7.16). ಇವರಲ್ಲಿ ಜ್ಞಾನಿಯು ತತ್ವವನ್ನು ತಿಳಿದವನೆಂದೂ, ತನಗೆ ಅತ್ಯಂತ ಪ್ರಿಯನೆಂದೂ, ಅವನು ತನ್ನ ಆತ್ಮನೇ, ತನಗಿಂತ ಬೇರೆಯಲ್ಲವೆಂದೂ ಭಗವಂತನು ಹೇಳಿದ್ದಾನೆ (7.17). ಆದ್ದರಿಂದ ಮುಖ್ಯಾರ್ಥದಲ್ಲಿ ಜ್ಞಾನಿಯನ್ನೇ ಭಕ್ತನೆಂದು ಹೇಳಬೇಕು. ಉಳಿದವರ ಭಕ್ತಿಯು ಗೌಣಾರ್ಥದಲ್ಲಿ, ಅಂದರೆ ಭೃತ್ಯನು ತನ್ನ ಸ್ವಾಮಿಯನ್ನು ಭಜಿಸುವ ರೀತಿಯ ಭಕ್ತಿಯು. ಅವರ ಭಕ್ತಿಯಲ್ಲಿ ತಮ್ಮ ಸ್ವಾಮಿಯ ಬಗೆಗೆ ಪೂಜ್ಯಭಾವವೂ, ಪ್ರೀತಿಯೂ ಇರುತ್ತಿದ್ದರೂ, ಸೇವೆಯಲ್ಲಿ ಶ್ರದ್ಧೆಯು ಇರುತ್ತಿದ್ದರೂ, ಅದು ಪರಮಪ್ರೇಮ ರೂಪದ್ದಾಗಿರಲಾರದು. ನಿರತಿಶಯ ಪ್ರೀತಿಯನ್ನೇ ಪರಾಭಕ್ತಿಯೆಂದೂ ಆ ಉತ್ತಮವಾದ ಜ್ಞಾನರೂಪವಾದ ನಾಲ್ಕನೆಯ ಭಕ್ತಿಯನ್ನು ಜ್ಞಾನನಿಷ್ಠನು ಪಡೆಯುತ್ತಾನೆ ಎಂದು ಗೀತೆಯಲ್ಲಿ ಹೇಳಿದೆ (18.54).

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋऽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ ಭ.ಗೀ. 7.16

ಉದಾರಾಃ ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಂ ॥ ಭ.ಗೀ. 7.18

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ ॥ ಭ.ಗೀ. 18.54

ಭಾಷ್ಯ– ತಸ್ಯ ವಕ್ಷ್ಯಮಾಣತ್ವಾತ್ 'ಭಕ್ತ್ಯಾ ಮಾಂ ಅಭಿಜಾನಾತಿ' (ಭ.ಗೀ. 18.55) ಇತಿ ಏವಂಭೂತಃ ಜ್ಞಾನನಿಷ್ಠಃ ಮದ್ಭಕ್ತಿಂ ಮಯಿ ಪರಮೇಶ್ವರೇ ಭಕ್ತಿಂ ಭಜನಂ ಪರಾಂ ಉತ್ತಮಾಂ ಜ್ಞಾನಲಕ್ಷಣಾಂ ಚತುರ್ಥೀಂ ಲಭತೇ । 'ಚತುರ್ವಿಧಾ ಭಜಂತೇ ಮಾಂ' ಇತಿ ಹಿ ಉಕ್ತಂ ॥ 18.54

ಜ್ಞಾನವೆಂಬ ಶಬ್ದವು ಭಗವದ್ಗೀತೆಯಲ್ಲಿ ಆತ್ಮಾನಾತ್ಮವಿವೇಕರೂಪವಾದ ಸಮ್ಯಗ್ಜ್ಞಾನವನ್ನೇ ಮುಖ್ಯವೃತ್ತಿಯಿಂದ ಹೇಳುತ್ತದೆ. ಕ್ಷೇತ್ರ ಮತ್ತು ಕ್ಷೇತ್ರಜ್ಞನಾಗಿ ತೋರುವ ಈಶ್ವರ ಇವರ ತತ್ವವನ್ನು ಬಿಟ್ಟರೆ, ಜ್ಞಾನಕ್ಕೆ ವಿಷಯವಾದದ್ದು ಮತ್ತೊಂದು ಉಳಿದಿರುವುದಿಲ್ಲ. ಅಂದರೆ ಆತ್ಮ, ಅನಾತ್ಮ ಎಂಬ ವಿಭಾಗದಲ್ಲಿ ಅಡಕವಾಗದ್ದು ಯಾವುದೂ ಉಳಿಯುವುದಿಲ್ಲ.

ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತತ್ ಜ್ಞಾನಂ ಮತಂ ಮಮ ॥ ಭ.ಗೀ. 13.2

ಭಾಷ್ಯ– ಯಸ್ಮಾತ್ ಕ್ಷೇತ್ರಕ್ಷೇತ್ರಜ್ಞೇಶ್ವರಯಾಥಾತ್ಮ್ಯವ್ಯತಿರೇಕೇಣ ನ ಜ್ಞಾನಗೋಚರಂ ಅನ್ಯತ್ ಅವಶಿಷ್ಟಂ ಅಸ್ತಿ ತಸ್ಮಾತ್ ಕ್ಷೇತ್ರಕ್ಷೇತ್ರಜ್ಞಯೋಃ ಜ್ಞೇಯಭೂತಯೋಃ ಯತ್ ಜ್ಞಾನಂ ಕ್ಷೇತ್ರಕ್ಷೇತ್ರಜ್ಞೌ ಯೇನ ಜ್ಞಾನೇನ ವಿಷಯೀಕ್ರಿಯೇತೇ ತತ್ ಜ್ಞಾನಂ ಸಮ್ಯಗ್ಜ್ಞಾನಂ ಇತಿ ಮತಂ ಅಭಿಪ್ರಾಯಃ ಮಮ (13.7) ಈಶ್ವರನ್ಯವಿಷ್ಣೋಃ ॥

ಪ್ರಾಧಾನ್ಯವಾಗಿ ಜ್ಞಾನವೆಂಬ ಶಬ್ದವು ಸಮ್ಯಗ್ಜ್ಞಾನವೆಂಬ ಅರ್ಥದಲ್ಲಿಯೇ ಉಪಯೋಗಿಸಲ್ಪಡುವುದಾದರೂ, ಆ ಜ್ಞಾನದ ಪ್ರಾಪ್ತಿಗಾಗಿ ಅನುಷ್ಠಿಸಬೇಕಾಗುವ ಅಮಾನಿತ್ವಾದಿ ಸಾಧನಗಳನ್ನೂ ಗೌಣಾರ್ಥದಲ್ಲಿ ಜ್ಞಾನಶಬ್ದದಿಂದಲೇ ಕರೆದಿದೆ. ಅಮಾನಿತ್ವಮದಂಭಿತ್ವಂ ಅಹಿಂಸಾ ಕ್ಷಾಂತಿರಾರ್ಜವಂ ಎಂಬ ಶ್ಲೋಕದಿಂದ ಆರಂಭಿಸಿ ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಂ (13.11) ಎಂಬ ಶ್ಲೋಕದ ವರೆಗೆ ಹೇಳಿರುವ ಜ್ಞಾನ ಸಾಧನಗಳನ್ನು ಜ್ಞಾನವೆಂದೇ ಹೇಳಿದೆ. ಏಕೆಂದರೆ ಆ ಸಾಧನಗಳಿಂದ ಜ್ಞಾನವು ಉಂಟಾಗುತ್ತದೆ. ಜ್ಞಾನಿಗಾದರೋ ಅಮಾನಿತ್ವಾದಿಗಳು ಸ್ವಭಾವವೇ ಆಗಿರುತ್ತವೆ.

ಭಾಷ್ಯ– ಏತತ್ ಅಮಾನಿತ್ವಾದಿತತ್ತ್ವಜ್ಞಾನಾರ್ಥದರ್ಶನಾಂತಂ ಉಕ್ತಂ ಜ್ಞಾನಂ ಇತಿ ಪ್ರೋಕ್ತಂ । ಜ್ಞಾನಾರ್ಥತ್ವಾತ್ । ಭ.ಗೀ. 13.11

ಅಮಾನಿತ್ವಾದಿಗಳ ಭಾವನಾಪರಿಪಾಕದಿಂದ ಯಾವ ಅವಗತಿಯು ಹುಟ್ಟುವುದೋ ಅದನ್ನು ಮಾತ್ರ ಜ್ಞಾನಶಬ್ದಾರ್ಥವೆಂದು ತಿಳಿಯಬೇಕೇ ಹೊರತು ಕೇವಲ ಅಂತಃಕರಣ ವೃತ್ತಿಯನ್ನಲ್ಲ. ವೃತ್ತಿರೂಪವಾದ ಇಂದ್ರಿಯಜನ್ಯಜ್ಞಾನಕ್ಕಿಂತ ಬೇರೆಯಾಗಿ, ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದ ಉಂಟಾಗಿ ತನ್ನ ಅನುಭವಕ್ಕೆ ಬಂದಿರುವುದರಿಂದ ಈ ಜ್ಞಾನವನ್ನು 'ಜ್ಞಾನಚಕ್ಷು' (ಜ್ಞಾನವೇ ಚಕ್ಷು) ಎಂದು ನಿರ್ದೇಶ ಮಾಡಿರುತ್ತದೆ (13.34).

ಅನುಷ್ಠೇಯವಾದ ಅಮಾನಿತ್ವಾದಿಗಳಿಗೆ ವಿರುದ್ಧವಾಗಿ, ಜ್ಞಾನವನ್ನು ಪ್ರತಿಬಂಧಿಸಿ ಸಂಸಾರಪ್ರವೃತ್ತಿಗೆ ಕಾರಣವಾಗುವ ಮಾನಿತ್ವಾದಿಗಳನ್ನು ಅಜ್ಞಾನ ಶಬ್ದದಿಂದಲೇ ಹೇಳಿದೆ (13.11)

ಏತಜ್ಜ್ಞಾನಮಿತಿ ಪ್ರೋಕ್ತಂ ಅಜ್ಞಾನಂ ಯದತೋऽನ್ಯಥಾ ॥ ಭ.ಗೀ. 13.11

ಭಾಷ್ಯ– ಮಾನಿತ್ವಮ್, ದಂಭಿತ್ವಂ, ಹಿಂಸಾ, ಅಕ್ಷಾಂತಿಃ, ಅನಾರ್ಜವಂ ಇತ್ಯಾದಿ ಅಜ್ಞಾನಂ ವಿಜ್ಞೇಯಂ ಪರಿಹರಣಾಯ । ಸಂಸಾರಪ್ರವೃತ್ತಿಕಾರಣತ್ವಾತ್ ಇತಿ ॥

ಭಗವದ್ಗೀತೆಯಲ್ಲಿ ಅನುಭವಪರ್ಯಂತವಾದ ಜ್ಞಾನವೆಂಬ ಅರ್ಥದಲ್ಲಿ 'ವಿಜ್ಞಾನ' ಎಂಬ ಶಬ್ದವೂ ಉಪಯೋಗಿಸಲ್ಪಟ್ಟಿದೆ. ಮೋಕ್ಷವನ್ನು ಫಲವಾಗಿ ಹೇಳುವ ಸಂದರ್ಭಗಳಲ್ಲಿ ಜ್ಞಾನ ಹಾಗೂ ವಿಜ್ಞಾನ ಶಬ್ದಗಳು ಅನುಭವಪರ್ಯಂತವಾದ ಸಮ್ಯಜ್ಞಾನವನ್ನೇ ಹೇಳುತ್ತವೆ. ಇವೆರಡೂ ಶಬ್ದಗಳನ್ನು ಜೊತೆಯಲ್ಲಿ ಪ್ರಯೋಗಿಸಿದ್ದರೆ ಅಲ್ಲಿ ಜ್ಞಾನ ಶಬ್ದವು ಶಾಸ್ತ್ರೋಪದೇಶಜನಿತ ಪರೋಕ್ಷಜ್ಞಾನದ ವಿಷಯವಾಗಬಹುದು. ಕೆಲವು ಕಡೆ ಜ್ಞಾನ ಶಬ್ದವು ವಸ್ತುತಂತ್ರವಲ್ಲದ ಉಪಾಸ್ಯದ ಸ್ವರೂಪ ವಿಷಯವನ್ನೂ ತಿಳಿಸಲು ಉಪಯೋಗಿಸಿರುತ್ತದೆ.

4. ಜ್ಞಾನನಿಷ್ಠಾ ಮಾರ್ಗಗಳು

ಹಿಂದೆಯೇ ಉದಾಹರಿಸಿದ ಭಗವದ್ಗೀತೆಯ ಶ್ಲೋಕ(3.3) ದಂತೆ, ನಿವೃತ್ತಿಧರ್ಮದ ಅನುಷ್ಠಾನದಲ್ಲಿರುವವರಿಗೆ ಸಾಂಖ್ಯಯೋಗ ಅಥವಾ ಜ್ಞಾನಯೋಗದಲ್ಲಿ ನಿಷ್ಠೆ ಮತ್ತು ಯೋಗರಿಗೆ ಕರ್ಮಯೋಗದಲ್ಲಿ ನಿಷ್ಠೆ. ಆರಂಭದಿಂದಲೇ ಜ್ಞಾನವೈರಾಗ್ಯಪರರಾಗಿರುವ ಉತ್ತಮಾಧಿಕಾರಿಗಳಿಗೆ ಸಾಂಖ್ಯ/ಜ್ಞಾನಯೋಗವು ನಿಃಶ್ರೇಯಸಕ್ಕೆ ನೇರವಾದ ಸಾಧನ. ಇದಕ್ಕೆ ಕಾರಣವೆಂದರೆ ಉತ್ತಮಾಧಿಕಾರಿಗಳಲ್ಲಿರುವ ಪೂರ್ವಜನ್ಮಸಂಸ್ಕಾರದಿಂದ ಪ್ರಾಪ್ತವಾಗಿರುವ ಆತ್ಮಾನಾತ್ಮವಿವೇಕ, ವೈರಾಗ್ಯ, ಶಮದಮಾದಿಗಳು ಹಾಗೂ ಮುಮುಕ್ಷುತ್ವ (ಸಾಧನಚತುಷ್ಟಯ ಸಂಪತ್ತಿ). ಅಂಥವರಿಗೆ ಜ್ಞಾನೋತ್ಪತ್ತಿಗೆ ಇರಬಹುದಾದ ಪ್ರತಿಬಂಧಗಳು ಬಹುತೇಕ ಕ್ಷಯವಾಗಿದ್ದು, ಭಗವತ್ಸ್ವರೂಪದ ಶ್ರವಣ ಮನನಗಳಿಂದಲೇ ಜ್ಞಾನವುಂಟಾಗಬಹುದು.

ಇನ್ನು ಮಂದಮಧ್ಯಮಾಧಿಕಾರಿಗಳಾದ ಮುಮುಕ್ಷುಗಳಿಗೆ ಯೋಗಮಾರ್ಗವು ಉಪದೇಶಿಸಲ್ಪಟ್ಟಿದೆ. ಇಲ್ಲಿಯೂ ಅವರವರ ಯೋಗ್ಯತೆಗೆ ಅನುಸಾರವಾಗಿ, ಅಧಿಕಾರಿತಾರತಮ್ಯದಿಂದ, ಸಾಧನಗಳು ಬೇರೆಬೇರೆಯಾಗುತ್ತವೆ. ಬಹಿರ್ಮುಖರಾದವರು ಕರ್ಮಯೋಗವನ್ನು ಮಾಡಬೇಕು. ಚಿತ್ತಶುದ್ಧಿಯಾಗಿದ್ದು ಚಿತ್ತಚಾಂಚಲ್ಯವನ್ನು ಕಳೆದುಕೊಳ್ಳಬೇಕೆನ್ನುವವರು ಉಪಾಸನಾಯುಕ್ತ ಕರ್ಮಗಳನ್ನು ಮಾಡಬೇಕು, ಅಥವಾ ಕರ್ಮಸಂನ್ಯಾಸವನ್ನು ಮಾಡಿ ಶಮಾದ್ಯುಪಾಯಗಳನ್ನು ಕೈಗೊಳ್ಳಬೇಕು. ಚಿತ್ತಶುದ್ಧಿಯೂ ಚಿತ್ತೈಕಾಗ್ರತೆಯೂ ಇದ್ದವರು ವೇದಾಂತಶ್ರವಣವನ್ನು ಮಾಡಬೇಕು. ಶ್ರವಣಮಾತ್ರದಿಂದ ಕೃತಕೃತ್ಯರಾಗದವರು ಮನನನಿದಿಧ್ಯಾಸನ ಗಳನ್ನು ಮಾಡಬೇಕು. (ಜ್ಞಾನಸಾಧನಗಳ ವಿನಿಯೋಗಕ್ಕೆ ಸ್ವಾಮೀಜಿಯವರ "ಶಾಂಕರವೇದಾಂತಸಾರ" ಎಂಬ ಅಮೂಲ್ಯಗ್ರಂಥವನ್ನು ನೋಡಬೇಕು).

ಕರ್ಮಯೋಗ, ಧ್ಯಾನಯೋಗಗಳಿಂದ ಜ್ಞಾನನಿಷ್ಠೆ

ಕಾಮ್ಯಕರ್ಮಗಳನ್ನು ವರ್ಜಿಸಿ, ವಿಹಿತವಾದ ನಿತ್ಯಕರ್ಮಗಳನ್ನು ವಿಶಿಷ್ಟವಾದ ರೀತಿಯಲ್ಲಿ ಮಾಡುವುದೇ ಕರ್ಮಯೋಗ. ಕರ್ಮದಲ್ಲಿ ನಿಃಸಂಗತೆಯೂ, ಸುಖದುಃಖಗಳಿಗೆ ಕಾರಣಭೂತವಾದ ರಾಗದ್ವೇಷಗಳೇ ಮುಂತಾದ ದ್ವಂದ್ವಗಳನ್ನು ಜಯಿಸುವುದೂ, ಸಮತ್ವಬುದ್ಧಿಯನ್ನು ಆಶ್ರಯಿಸುವುದರಿಂದ ಕರ್ಮಫಲವನ್ನು ಈಶ್ವರಾರ್ಥವಾಗಿ ಮಾಡುತ್ತಾ ಫಲಾಭಿಸಂಧಿಯನ್ನು ತ್ಯಾಗ ಮಾಡುವುದೂ ಯೋಗಮಾರ್ಗಾವಲಂಬಿಗಳು ಅನುಷ್ಠಿಸಬೇಕಾಗಿರುವ ಕರ್ಮಯೋಗದ ನಾಲ್ಕು ಅಂಶಗಳು.

ಭಾಷ್ಯ– ಯೋಗೇ ತು ತತ್ತ್ವಾಪ್ತ್ಯುಪಾಯೇ ನಿಃಸಂಗತಯಾ ದ್ವಂದ್ವಪ್ರಹಾಣಪೂರ್ವಕಂ ಈಶ್ವರಾರಾಧನಾರ್ಥೇ ಕರ್ಮಯೋಗೆ ಕರ್ಮಾನುಷ್ಠಾನೇ, ಸಮಾಧಿಯೋಗೇ ಚ, ಇಮಾಂ ಅನಂತರಮೇವ ಉಚ್ಯಮಾನಾಮ್ ಬುದ್ಧಿಂ ಶೃಣು.....। **ಭ.ಗೀ. 2.39**

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ॥ ಭ.ಗೀ. 2.48

ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥ ಭ.ಗೀ. 2.45

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ॥ ಭ.ಗೀ. 3.9

ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ಭ.ಗೀ. 18.46

ಧ್ಯಾನಯೋಗದ ಮೆಟ್ಟಿಲನ್ನು ಏರಿ ಆ ಯೋಗದಲ್ಲಿಯೇ ಸ್ಥಿತಿಯನ್ನು ಹೊಂದುವುದಕ್ಕೆ ಅಂದರೆ ಯೋಗಾರೂಢನ ಸ್ಥಿತಿಯನ್ನು ಪಡೆಯುವುದಕ್ಕೆ, ಶಮವು ಎಂದರೆ ಉಪಶಮವು, ಸರ್ವಕರ್ಮಗಳನ್ನು ಬಿಡುವುದು, ಸಾಧನವು. ಆ ಯೋಗ್ಯತೆಯು ಬರುವವರೆಗೆ ಕರ್ಮವೇ ಸಾಧನವು. ಎಷ್ಟೆಷ್ಟು ಕರ್ಮಗಳನ್ನು ಬಿಡುವನೋ ಅಷ್ಟಷ್ಟು ಸುಲಭವಾಗಿ ಜಿತೇಂದ್ರಿಯನಾಗುವುದರಿಂದ, ಅವನ ಚಿತ್ತವು ಸಮಾಧಾನವಾಗುವುದು. ಹಾಗಾದರೆ ಅವನು ಬೇಗನೇ ಯೋಗಾರೂಢನಾಗುವನು.

ಯಾವಾಗ ಇಂದ್ರಿಯಾರ್ಥಗಳಲ್ಲಾಗಲೀ ಕರ್ಮಗಳಲ್ಲಾಗಲೀ ಆಸಕ್ತಿಯು ಉಳ್ಳವನಾಗಿರುವುದಿಲ್ಲವೋ, ಈ ಲೋಕದ ಮತ್ತು ಪರಲೋಕದ ವಿಷಯಗಳನ್ನು ಬಯಸುವುದಕ್ಕೆ ಕಾರಣವಾಗಿರುವ ಎಲ್ಲಾ ಕಾಮಗಳನ್ನೂ ಸಂನ್ಯಾಸಮಾಡಿರುವನೋ, ಆಗ, ಆ ಕಾಲದಲ್ಲಿ ಅವನು ಯೋಗಾರೂಢನು, ಯೋಗಸಿದ್ಧಿಯನ್ನು ಪಡೆದುಕೊಂಡವನು ಎನಿಸಿಕೊಳ್ಳುತ್ತಾನೆ. ಜ್ಞಾನವೇ ಯೋಗದ ಸಿದ್ಧಿಯು.

ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ । ಭ.ಗೀ. 6.3

ಭಾಷ್ಯ– ಆರುರುಕ್ಷೋಃ ಆರೋಢುಂ ಇಚ್ಛತಃ, ಅನಾರೂಢಸ್ಯ, ಧ್ಯಾನಯೋಗೇ ಅವಸ್ಥಾತುಂ ಅಶಕ್ತಸ್ಯೈವ ..... ಕರ್ಮ ಕಾರಣಂ ಸಾಧನಂ ಉಚ್ಯತೇ । ಯೋಗಾರೂಢಸ್ಯ ಪುನಃ ತಸ್ಯೈವ ಶಮಃ ಉಪಶಮಃ ಸರ್ವಕರ್ಮಭ್ಯಃ ನಿವೃತ್ತಿಃ ಕಾರಣಂ, ಯೋಗಾರೂಢತ್ವಸ್ಯ ಸಾಧನಂ ಉಚ್ಯತೇ ಇತ್ಯರ್ಥಃ।

ಯಾವತ್ ಯಾವತ್ ಕರ್ಮಭ್ಯಃ ಉಪರಮತೇ, ತಾವತ್ ತಾವತ್ ನಿರಾಯಾಸಸ್ಯ ಜಿತೇಂದ್ರಿಯಸ್ಯ ಚಿತ್ತಂ ಸಮಾಧೀಯತೇ । ತಥಾ ಸತಿ ಝಟಿತಿ ಯೋಗಾರೂಢೋ ಭವತಿ।

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಯತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ । ಭ.ಗೀ. 6.4

ಭಾಷ್ಯ– ಯದಾ ಸಮಾಧೀಯಮಾನಚಿತ್ತಃ ಯೋಗೀ ಹಿ ಇಂದ್ರಿಯಾರ್ಥೇಷು .... ಕರ್ಮಸು ..... ಕರ್ತವ್ಯತಾಬುದ್ಧಿಂ ನ ಕರೋತಿ ..... ಸರ್ವಸಂಕಲ್ಪಸಂನ್ಯಾಸೀ, ಸರ್ವಾನ್ ಸಂಕಲ್ಪಾನ್ ಇಹಾಮುತ್ರಾರ್ಥಕಾಮಹೇತೂನ್ ಸಂನ್ಯಸಿತುಂ ಶೀಲಂ ಅಸ್ಯ ಇತಿ ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಃ ಪ್ರಾಪ್ತಯೋಗಃ ಇತ್ಯೇತತ್ ತದಾ ತಸ್ಮಿನ್ ಕಾಲೇ ಉಚ್ಯತೇ ॥

ಕರ್ಮಯೋಗಾನುಷ್ಠಾನದಿಂದ ಧ್ಯಾನಯೋಗದ ಮೆಟ್ಟಿಲನ್ನು ಏರಲು ಯೋಗ್ಯತೆಯನ್ನು ಸಂಪಾದಿಸಿಕೊಂಡು, ಅನಂತರ ಧ್ಯಾನಯೋಗದಿಂದ ತನ್ನನ್ನು ಯಾವಾಗಲೂ ಯೋಗದಲ್ಲಿ ಇಟ್ಟುಕೊಂಡಿರುವುದರಿಂದ ಯೋಗಿಯು ವಿಗತಕಲ್ಮಶನಾಗಿ ಬ್ರಹ್ಮಸಂಸ್ಪರ್ಶವೆಂಬ ಮಿಗಿಲಿಲ್ಲದ ಸುಖವನ್ನು ಪಡೆದುಕೊಳ್ಳುವನು. ಅಂತಹ ಯೋಗಯುಕ್ತಾತ್ಮನು ಬ್ರಹ್ಮಾದಿಯಾಗಿ ಸ್ತಂಬದವರೆಗಿನ ಸಕಲಪ್ರಾಣಿಗಳೂ ತನ್ನ (ಆತ್ಮನಲ್ಲಿ) ಇರುವುವೆಂದು ತಿಳಿದು, ಸರ್ವಭೂತಗಳಲ್ಲಿಯೂ ಸಮವನ್ನು ಎಂದರೆ ನಿರ್ವಿಶೇಷವಾದ ಬ್ರಹ್ಮಾತ್ಮೈಕ್ಯವನ್ನೇ ಕಾಣುವ ಸಮದರ್ಶನನಾಗಿ ಇರುವನು.

ಯುಞ್ಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥ ಭ.ಗೀ. 6.28

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥ ಭ.ಗೀ. 6.29

ಧ್ಯಾನಯೋಗವನ್ನು ಮಾಡುವ ಕ್ರಮವನ್ನು ಆರನೇ ಅಧ್ಯಾಯದಲ್ಲಿ ವಿಸ್ತಾರವಾಗಿಯೂ ಹದಿನೆಂಟನೆಯ ಅಧ್ಯಾಯದಲ್ಲಿ ಸಂಗ್ರಹವಾಗಿಯೂ ಹೇಳಿರುತ್ತದೆ.

ಕರ್ಮಯೋಗದ ಅನುಷ್ಠಾನದಿಂದ ಕಾರ್ಯಕರಣಸಂಘಾತಕ್ಕೆ ಜ್ಞಾನನಿಷ್ಠಾಯೋಗ್ಯತಾಲಕ್ಷಣ ಸಿದ್ಧಿಯು ಪ್ರಾಪ್ತವಾಗಿರುವವನಿಗೆ ಸರ್ವಕರ್ಮಸಂನ್ಯಾಸಪೂರ್ವಕ ಧ್ಯಾನಯೋಗದಿಂದ ಅನಾತ್ಮನಿರಸನ ಪೂರ್ವಕವಾಗಿ ಜ್ಞಾನನಿಷ್ಠೆಯೂ, ಬ್ರಹ್ಮಪ್ರಾಪ್ತಿಯೆಂಬ ಪರಾಸಿದ್ಧಿಯೂ ಆಗುವುದೆಂದು ಭಗವದ್ಗೀತೆಯ 18ನೇ ಅಧ್ಯಾಯದಲ್ಲಿಯೂ ಹೇಳಿರುತ್ತದೆ.

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ ।
ಶಬ್ದಾದಿನ್ ವಿಷಯಾನ್ ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥ ಭ.ಗೀ. 18.51

ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥ ಭ.ಗೀ. 18.52
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಪರಿಗ್ರಹಂ ।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮ ಭೂಯಾಯ ಕಲ್ಪತೇ ॥1 ಭ.ಗೀ. 8.53

ಸಾಂಖ್ಯಯೋಗ (ಜ್ಞಾನಯೋಗ)

ಆರಂಭದಿಂದಲೂ ಜ್ಞಾನವೈರಾಗ್ಯಪರರಾದ ಮುಮುಕ್ಷುಗಳಿಗೆ ಸಾಂಖ್ಯಯೋಗವೇ ಮೋಕ್ಷಕ್ಕೆ ನೇರವಾದ ಸಾಧನ. ಸಾಂಖ್ಯವೆಂದರೆ "ಈ ಸತ್ವರಜಸ್ತಮಗಳೆಂಬ ಗುಣಗಳು ನನಗೆ ದೃಶ್ಯವಾಗಿರುವುವು. ನಾನು ಅವುಗಳಿಗಿಂತ ಬೇರೆಯಾಗಿ ಅವುಗಳ ವ್ಯಾಪಾರಗಳಿಗೆ ಸಾಕ್ಷಿಯಾಗಿರುವ ನಿತ್ಯನಾದ ಗುಣವಿಲಕ್ಷಣನಾದ ಆತ್ಮನು" ಎಂದು ಆಲೋಚಿಸಿಕೊಳ್ಳುತ್ತಿರುವುದು. ಗೀತಾಶಾಸ್ತ್ರದಲ್ಲಿ ಪ್ರಕೃತಿ ಅಥವಾ ಮಾಯೆ ಎಂದರೆ ಸತ್ವರಜಸ್ತಮೋಗುಣಗಳ ಸಾಮ್ಯದ ಅವಸ್ಥೆ. ಇಲ್ಲಿ ಗುಣಗಳೂ ಗುಣಿಯೂ (ಪ್ರಕೃತಿಯೂ) ಬೇರೆಯೆಂಬುದು ವಿವಕ್ಷಿತವಾಗಿಲ್ಲ. ದೇಹೇಂದ್ರಿಯಾದಿಗಳು ಹಾಗೂ ಸಮಸ್ತ ವಿಷಯ ವಸ್ತುಗಳೂ ಗುಣವಿಕಾರಗಳೇ. ಅಲ್ಲಿಗೆ ಅನಾತ್ಮತಿರಸ್ಕರಣದಿಂದ ತನ್ನ ಸ್ವರೂಪವನ್ನು ವಿವೇಚಿಸಿ ನಿಶ್ಚಯಿಸಿಕೊಳ್ಳುವುದೇ ಸಾಂಖ್ಯಯೋಗವು.

ಭಾಷ್ಯ– ಸಾಂಖ್ಯಂ ನಾಮ "ಇಮೇ ಸತ್ವರಜಸ್ತಮಾಂಸಿ ಗುಣಾಃ ಮಯಾ ದೃಶ್ಯಾಃ, ಅಹಂ ತೇಭ್ಯೋऽನ್ಯಃ ತದ್ವ್ಯಾಪಾರಸಾಕ್ಷಿಭೂತಃ ನಿತ್ಯಃ ಗುಣವಿಲಕ್ಷಣಃ ಆತ್ಮಾ" ಇತಿ ಚಿಂತನಂ, ಏಷ ಸಾಂಖ್ಯಯೋಗಃ। ಗೀ.ಭಾ. 13.24

ಸಾಂಖ್ಯಯೋಗವು ದೃಗ್ದೃಶ್ಯವಿವೇಚನಾತ್ಮಕವು ಮತ್ತು ಅನುಭವಾನುಸಾರಿಯಾದ ತರ್ಕವುಳ್ಳದ್ದು. ಸಾಂಖ್ಯಂ ಚ ತತ್ ಯೋಗಶ್ಚ ಇತಿ ಸಾಂಖ್ಯಯೋಗಃ. ಆದ್ದರಿಂದ ಸಾಂಖ್ಯವೇ ಪರಮಾತ್ಮನೊಡನೆ ಏಕೀಭಾವಪ್ರಾಪ್ತಿಗೆ ಸಾಧನವು. ಭಗವದ್ಗೀತೆಯಲ್ಲಿ ಮುಖ್ಯವಾಗಿ ಎರಡನೆಯ ಅಧ್ಯಾಯದಲ್ಲಿಯೂ, ಹದಿಮೂರನೆಯ ಅಧ್ಯಾಯದಲ್ಲಿಯೂ ಆತ್ಮಾನಾತ್ಮಗಳ ಸ್ವರೂಪ ವಿವೇಚನೆಯನ್ನು ಕಾಣಬಹುದು.

ದೇಹಿನೋऽಸಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥ ಭ.ಗೀ. 2.13

ಪ್ರಾಕೃತ ಜನರು ತಮಗೆ ದೇಹವೆಂಬುದು ನಿಜವಾಗಿ ಉಂಟೆಂದೂ. ಆ ದೇಹಕ್ಕಾಗುವ ಕೌಮಾರ, ಯೌವನ, ಮುಪ್ಪು ಎಂಬ ಅವಸ್ಥೆಗಳು ತಮಗೇ ಆಗುತ್ತಿರುವುದೆಂದೂ ಭಾವಿಸಿರುತ್ತಾರೆ. ಆದರೆ ದೇಹದ ಈ ಅವಸ್ಥೆಗಳು ಒಂದಿರುವಾಗ ಉಳಿದವು ಇರುವುದಿಲ್ಲ. ಅಲ್ಲದೆ ದೇಹವೂ, ಅದರ ಅವಸ್ಥೆಗಳೂ ಬದಲಾಗದ ತನ್ನ ಸ್ವರೂಪಕ್ಕೆ ದೃಶ್ಯವಾಗಿಯೇ ಗೋಚರವಾಗುತ್ತಿರುವುದರಿಂದ ಆತ್ಮನು ನಿಜವಾಗಿಯೂ ನಿತ್ಯನು, ನಿರವಸ್ಥನು. ಅವಸ್ಥಾವಂತನೆಂದು ಅಜ್ಞರು ಭಾವಿಸುತ್ತಾರೆ. ಹಾಗೆಯೇ ಸತ್ತಮೇಲೆ ದೇಹಾಂತರವು ಪ್ರಾಪ್ತವಾಗುವುದೆಂದೂ ಭಾವಿಸಿರುತ್ತಾರೆ. ಆದರೆ ದೇಹಾಂತರ ಪ್ರಾಪ್ತಿಯೂ ಅವ್ಯಭಿಚರಿತ ಸ್ವರೂಪನಾದ ಆತ್ಮನಲ್ಲಿ ಮೂಢರಿಂದ ಅಧ್ಯಾರೋಪಿಸಲ್ಪಡುತ್ತದೆ ಎಂದು ಅನುಭವಾನುಸಾರಿಯಾದ ತರ್ಕದಿಂದ ಈ ಶ್ಲೋಕದಲ್ಲಿ ಉಪದೇಶಿಸಿದೆ.

ಈ ಶ್ಲೋಕದಲ್ಲಿ ಕೇವಲ ದೇಹಾಂತರಪ್ರಾಪ್ತಿಯನ್ನು ಉಪದೇಶಿಸಿಲ್ಲ. ಏಕೆಂದರೆ ಅರ್ಜುನನಿಗೆ ಲೋಕಾಂತರ ಹಾಗೂ ಜನ್ಮಾಂತರಗಳ ಬಗ್ಗೆ ಶ್ರದ್ಧೆಯಿತ್ತೆಂಬುದು, ಪುಣ್ಯ, ಪಾಪ, ವರ್ಣಸಂಕರ, ನರಕ ಇವುಗಳ ಬಗ್ಗೆ ಅವನು ಆಡಿದ ಮಾತುಗಳಿಂದ ವ್ಯಕ್ತವಾಗುತ್ತದೆ. ಆದ್ದರಿಂದ, ಭಗವಂತನು ಅರ್ಜುನನು ತಿಳಿಯದೇ ಇದ್ದ, ಅವನ ಮೋಹವನ್ನು ಹೋಗಲಾಡಿಸುವಂತಹ ತತ್ವವನ್ನೇ, ದೇಹವು ನಾಶವಾದರೂ ಆತ್ಮನು ನಿತ್ಯನು, ಸಾಕ್ಷಿರೂಪನು, ಇನ್ನೊಂದು ದೇಹವು ಅವನಿಗೆ ಪ್ರಾಪ್ತವಾಗುತ್ತದೆ ಎಂದು ಅಜ್ಞರು ಅಧ್ಯಾರೋಪ ಮಾಡುತ್ತಾರೆ ಎಂದು ಈ ಶ್ಲೋಕದಲ್ಲಿ ಉಪದೇಶಿಸಿದ್ದಾನೆ.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಸ್ತಾಂಸ್ತಿಕ್ಷಸ್ವ ಭಾರತ ॥ 2.14

ಈ ಶ್ಲೋಕದಲ್ಲಿ ಇಂದ್ರಿಯ ಮತ್ತು ವಿಷಯಗಳ ಸಂಯೋಗಗಳಿಂದ ನಿಜವಾಗಿ ಶೀತೋಷ್ಣ ಸುಖದುಃಖ ರೂಪ ದ್ವಂದ್ವಗಳು ನಿಜವಾಗಿಯೇ ಉಂಟಾಗುವುವೆಂದೂ, ಅವುಗಳು ಬಂದುಹೋಗುವ ಸ್ವಭಾವದ್ದಾಗಿರುವುದರಿಂದ ಅವುಗಳನ್ನು ಸಹಿಸಿಕೊಳ್ಳಬೇಕೆಂದೂ ಉಪದೇಶಿಸಿಲ್ಲ. ಅಸಾಮಾನ್ಯ ಶೂರನಾದ, ಮರಣಕ್ಕೂ ಅಂಜದ ಅರ್ಜುನನಿಗೆ ಈ ವಿಷಯೇಂದ್ರಿಯ ಸಂಯೋಗದಿಂದ ಉಂಟಾಗುವ ಸುಖದುಃಖಗಳನ್ನು ಸಹಿಸಿಕೋ ಎಂದು ಉಪದೇಶಿಸುವುದು ಹೊಂದುವುದಿಲ್ಲ.

ಆತ್ಮನಿಗೆ ಸ್ಥೂಲದೇಹಸಂಬಂಧವೂ, ದೇಹದ ಬೇರೆಬೇರೆ ಅವಸ್ಥೆಗಳ ಸಂಬಂಧವೂ ಇಲ್ಲವೆಂದಾದಮೇಲೆ, ಆ ಅವಸ್ಥೆಗಳಲ್ಲಿ ಮಾಡಿರುವುದೆಂದು ತೋರುವ ಪುಣ್ಯಪಾಪಗಳ ಸಂಬಂಧವೂ ಇಲ್ಲವೆಂದೇ ಆಗುತ್ತದೆ. ಹಾಗೆಯೇ ಸೂಕ್ಷ್ಮದೇಹ, ಅದರ ಧರ್ಮ, ಕರ್ಮ ಮತ್ತು ಫಲಗಳೂ ಅಸಂಸರ್ಗಿಯಾದ ಆತ್ಮನಲ್ಲಿ ಮೂಢರಿಂದ ಅಧ್ಯಾರೋಪಿತವಾಗುತ್ತವೆ. ಆದ್ದರಿಂದ ದೃಗ್ರೂಪನಾದ ಆತ್ಮನಿಗೆ ದೃಶ್ಯವಾದ, ಬದಲಾಯಿಸುವ ಸ್ವಭಾವದ ಶೀತೋಷ್ಣಗಳ ಹಾಗೂ ಸುಖದುಃಖಗಳ ಸಂಬಂಧವು ಇಲ್ಲ. ಶೀತೋಷ್ಣಗಳೇ ಮೊದಲಾದ ದ್ವಂದ್ವಗಳು ಕೆಲವು ವೇಳೆ, ಕೆಲವರಿಗೆ, ಸುಖಕ್ಕೂ, ಕೆಲವು ವೇಳೆ ದುಃಖಕ್ಕೂ ಕಾರಣವೆಂದು ತೋರುತ್ತದೆ.

ಆದ್ದರಿಂದ ಅವು ಬದಲಾಯಿಸುವ ಸ್ವಭಾವದವು. ಅವು ಉಂಟಾಗುವುದಕ್ಕೆ ಮುಂಚೆಯೂ, ಕಡೆಯಲ್ಲಿಯೂ ಹಾಗಿರುವುದಿಲ್ಲ. ಆದ್ದರಿಂದ ಅವು ಸುಳ್ಳೇ, ಅವುಗಳು ಸತ್ವವುಳ್ಳವಲ್ಲವೆಂದೇ ಆಗುತ್ತದೆ. ಈ ವಿಚಾರದ ಬಲದಿಂದ ಶೀತೋಷ್ಣಗಳೇ ಮೊದಲಾದ ದ್ವಂದ್ವಗಳನ್ನು ಸಹಿಸಿಕೋ ಎಂಬುದೇ ಇಲ್ಲಿ ಉಪದೇಶ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥ ಭ.ಗೀ. 2.16

ಅಸತ್ವದಾರ್ಥಗಳಿಗೆ ಅಸ್ತಿತ್ವವೇ ಇರುವುದಿಲ್ಲ. ಏಕೆಂದರೆ ಕಾರ್ಯವಾದ ಅವುಗಳು ತೋರುವುದಕ್ಕೆ ಕಾರಣವಿರುತ್ತದೆ. ಘಟವೆಂಬ ಕಾರ್ಯವು ಮಣ್ಣೆಂಬ ತನ್ನ ಕಾರಣಕ್ಕಿಂತ ಬೇರೆಯಾಗಿ ಕಾಣಬರುವುದಿಲ್ಲ. ಆದ್ದರಿಂದ ಅದು ತನಗೆ ತಾನೇ ಅಸತ್ತೇ. ಹಾಗೆಯೇ ಆತ್ಮನನ್ನು ಹೊರತುಪಡಿಸಿ ಮಿಕ್ಕವೆಲ್ಲಾ ಅನಾತ್ಮಗಳೇ, ಕಾರಣವುಳ್ಳವುಗಳೇ, ಆದ್ದರಿಂದ ಅವಕ್ಕೆ ಅಸ್ತಿತ್ವವು, ಇರವು, ಇಲ್ಲ. ಅನಾತ್ಮವಸ್ತುಗಳಿಗೆ ತಮ್ಮ

ಕಾರಣರೂಪದಿಂದಲೇ ಅಸ್ತಿತ್ವ. ಮಣ್ಣು ಮುಂತಾದ ಕಾರಣವೂ ಕೂಡ ತನ್ನ ಕಾರಣಕ್ಕಿಂತ ಬೇರೆಯಾಗಿ ಕಾಣಬರದೇ ಇರುವುದರಿಂದ ಅದೂ ಅಸತ್ತಾಗಿರುತ್ತದೆ.

ಇದೆ ಎಂದು ತೋರುತ್ತಿರುವ ಕಾರ್ಯವು ನಾಶವಾದರೆ ಅದರ, ಅಂದರೆ ಕಾರ್ಯವಿಷಯವಾದ, ಬುದ್ಧಿಯು ಬೇರ್ಪಡುತ್ತದೆ. ಆದರೆ ಇದೆ ಎಂಬ ಸದ್ಬುದ್ಧಿಯು ಆತ್ಮವಿಷಯಕವಾದ್ದರಿಂದ, ಕಾರ್ಯದ ಕಾರಣದಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ಸತ್ತಿಗೆ ಎಂದರೆ ಬೇರ್ಪಡದ ಸ್ವಭಾವದ ಆತ್ಮನಿಗೆ ಅಭಾವವೆಂಬುದಿಲ್ಲ.

ಹೀಗೆ, ಆತ್ಮ–ಅನಾತ್ಮ, ಸತ್ತು – ಅಸತ್ತು ಈ ಎರಡರ ನಿರ್ಣಯವು ತತ್ತ್ವದರ್ಶಿಗಳಿಂದ ಅರಿಯಲ್ಪಟ್ಟಿರುತ್ತದೆ. ಅಂಥವರ ದೃಷ್ಟಿಯನ್ನು ಆಶ್ರಯಿಸಿಕೊಂಡು ಶೋಕ–ಮೋಹಗಳನ್ನೂ ಬಿಟ್ಟು, ಶೀತೋಷ್ಣಾದಿ ದ್ವಂದ್ವಗಳನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಸಹಿಸಿಕೊಳ್ಳಬೇಕು ಎಂಬುದೇ ಇಲ್ಲಿ ಅಭಿಪ್ರಾಯವು.

ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥ 2.17

ಈ ಶ್ಲೋಕದ ಭಾಷ್ಯದಲ್ಲಿ ಸರ್ವವ್ಯಾಪಕವಾದ ಬ್ರಹ್ಮವು ನಾಶವಾಗುವ ಸ್ವಭಾವವಿಲ್ಲದ್ದು, ಅದರ ವಿನಾಶವನ್ನು ಯಾರಿಂದಲೂ ಮಾಡಲಾಗದು, ತನ್ನ ಆತ್ಮನನ್ನು ಯಾವನೂ ನಾಶಮಾಡಲಾರನು. ಏಕೆಂದರೆ, ಬ್ರಹ್ಮವು ಆತ್ಮನೇ ಆಗಿರುತ್ತದೆ ಎಂದು ಹೇಳಿ ಸರ್ವ ಉಪನಿಷದರ್ಥವಾದ ಆತ್ಮಬ್ರಹ್ಮೈಕ್ಯವನ್ನೇ ಭಾಷ್ಯಕಾರರು ತಿಳಿಸಿದ್ದಾರೆ.

ಭಾಷ್ಯ– ... ಅತಃ ಅವ್ಯಯಸ್ಯ ಅಸ್ಯ ಬ್ರಹ್ಮಣಃ ವಿನಾಶಂ ನ ಕಶ್ಚಿತ್ ಕರ್ತುಮ್ ಅರ್ಹತಿ । ನ ಕಶ್ಚಿತ್ ಆತ್ಮಾನಂ ವಿನಾಶಯಿತುಂ ಶಕ್ನೋತಿ ಈಶ್ವರೋಽಪಿ । ಆತ್ಮಾ ಹಿ ಬ್ರಹ್ಮ । 2.17

ಮುಂದಿನ ಹಲವು ಶ್ಲೋಕಗಳಲ್ಲಿ ಆತ್ಮನು ಅಪ್ರಮೇಯನು (ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ ಗೊತ್ತುಪಡಿಸುವುದಕ್ಕೆ ಬರದವನು. ಕೇವಲ ಶಾಸ್ತ್ರದಿಂದಲೇ, ಅದರದಲ್ಲದ ಧರ್ಮಗಳನ್ನು ಅಲ್ಲಗಳೆಯುವುದರಿಂದ ಮಾತ್ರ ತಿಳಿಯಬರುವವನು), ಹುಟ್ಟು ಸಾವುಗಳಿಲ್ಲದ ಅಜನು, ನಿತ್ಯನು, ಅವ್ಯಕ್ತನು, ಅಚಿಂತ್ಯನು, ಎಂದು ಆತ್ಮನ ಸ್ವರೂಪವನ್ನು ತಿಳಿಸಿರುತ್ತದೆ.

ಹೀಗೆ ಆತ್ಮ ಅನಾತ್ಮಗಳ ಸ್ವರೂಪವನ್ನು ನಿಶ್ಚಯಿಸಿಕೊಂಡು, "ನಾನು ಪರಬ್ರಹ್ಮವಾಗಿರುತ್ತೇನೆ" ಎಂಬ ಪ್ರಜ್ಞೆಯಲ್ಲಿ ಯಾವನಿಗೆ ನಿಲುಗಡೆ ಉಂಟಾಗಿರುವುದೋ, ಅವನು ಸ್ಥಿತಪ್ರಜ್ಞನೆಂದು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಕರೆದಿರುತ್ತದೆ (2.54).

ಯಾವನು ಮೊದಲಿನಿಂದಲೂ ಕರ್ಮಗಳನ್ನು ಸಂನ್ಯಾಸಮಾಡಿ ಜ್ಞಾನಯೋಗದ ನಿಷ್ಠೆಯಲ್ಲಿ ಪ್ರವರ್ತಿಸಿರುವನೋ ಅಥವಾ ಯಾವನು ಕರ್ಮಯೋಗದಿಂದ ಕರ್ಮಸಂನ್ಯಾಸವನ್ನು ಮಾಡಿ ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸಿರುವನೋ, ಅವರಿಬ್ಬರಿಗೂ ಸ್ಥಿತಪ್ರಜ್ಞನ ಲಕ್ಷಣವನ್ನು ತಿಳಿಸಿ, ಆ ಮೂಲಕ ಮುಮುಕ್ಷುಗಳಿಗೆ ಸಾಧನವನ್ನೂ ಉಪದೇಶಿಸಿರುತ್ತದೆ (2.55 ರಿಂದ ಅಧ್ಯಾಯ ಮುಗಿಯುವವರೆಗೂ). ಕೃತಾರ್ಥನಾದ ಜ್ಞಾನನಿಷ್ಠನಿಗೆ ಯಾವುವು ಲಕ್ಷಣಗಳೋ, ಅವುಗಳೇ ಮುಮುಕ್ಷುಗಳಿಗೆ ಸಾಧನಗಳಾಗಿರುತ್ತವೆ.

ಭಗವದ್ಗೀತೆಯ 13ನೆಯ ಅಧ್ಯಾಯದಲ್ಲಿ ಕ್ಷೇತ್ರ ಮತ್ತು ಕ್ಷೇತ್ರಜ್ಞರ ಸ್ವರೂಪವನ್ನು ವಿಂಗಡಿಸಿ ತಿಳಿದುಕೊಳ್ಳದೇ ಇರುವ ಕಾರಣದಿಂದ ಉಂಟಾಗಿರುವ ಪರಸ್ಪರ ಅಧ್ಯಾಸರೂಪವಾದ ಸಂಯೋಗವು ಮಿಥ್ಯಾಜ್ಞಾನರೂಪವಾಗಿರುತ್ತದೆಯೆಂದು ವಿವರಿಸಿದೆ. ಕ್ಷೇತ್ರದಿಂದ ಕ್ಷೇತ್ರಜ್ಞನನ್ನು ವಿಂಗಡಿಸಿ ಅರಿತುಕೊಂಡು ಅವನು ಯಾವ ಉಪಾಧಿಯೂ ಇಲ್ಲದ ಬ್ರಹ್ಮವೆಂದು ಸ್ವರೂಪದಿಂದ ಯಾವನು ಕಂಡುಕೊಳ್ಳುವನೋ, ಮತ್ತು ಕ್ಷೇತ್ರವನ್ನು ಕನಸಿನಲ್ಲಿ ಕಂಡ ವಸ್ತು, ಗಂಧರ್ವನಗರ ಮುಂತಾದುವುಗಳಂತೆ, ಇದು ಅಸತ್ತಾಗಿಯೇ ಇದ್ದುಕೊಂಡು ಸತ್ತಿನಂತೆ ತೋರುತ್ತಿದೆ ಎಂದು ಯಾವನಿಗೆ ನಿಶ್ಚಿತವಾದ ಅರಿವು ಉಂಟಾಗುವುದೋ, ಅವನಿಗೆ ಮಿಥ್ಯಾಜ್ಞಾನವು ತೊಲಗುತ್ತದೆ ಎಂದು ಜ್ಞಾನಯೋಗವನ್ನು ಉಪದೇಶಿಸಿರುತ್ತದೆ.

ಈ ಮೇಲಿನ ಜ್ಞಾನನಿಷ್ಠಾಮಾರ್ಗಗಳ ನಿರೂಪಣೆಯಿಂದ ಸಾಂಖ್ಯಯೋಗದಿಂದ ಪ್ರಾಪ್ತವಾಗುವ ನಿಃಶ್ರೇಯಸವೇ ಕರ್ಮಯೋಗದಿಂದಲೂ ಪರಂಪರೆಯಿಂದ (ಧ್ಯಾನಯೋಗದ ಮೂಲಕ) ದೊರೆಯುತ್ತದೆಯೆಂದೂ, ಈ ಮಾರ್ಗಗಳಲ್ಲಿ ಒಂದರಿಂದ ಇನ್ನೊಂದು ಹೆಚ್ಚಿನದೆಂಬುದು ಇಲ್ಲವೆಂದೂ ತಿಳಿಯಬಹುದು. ಇದನ್ನೇ ಭಗವಂತನು ಹೇಳಿದ್ದಾನೆ:

ಸಾಂಖ್ಯಯೋಗೌ ಪೃಥಗ್ ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಂ ॥ ಭ.ಗೀ. 5.4

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ಭ.ಗೀ. 5.5

5. ಭಕ್ತಿಯೋಗ– ಜ್ಞಾನನಿಷ್ಠೆಯೇ ಪರಾಭಕ್ತಿ

ಜ್ಞಾನನಿಷ್ಠನು ಪರಾಭಕ್ತಿಯನ್ನು ಪಡೆಯುತ್ತಾನೆ ಎಂದು ಮೇಲೆ ಭಕ್ತಿ ಮತ್ತು ಜ್ಞಾನಪದಾರ್ಥಗಳನ್ನು ವಿವರಿಸುವಾಗ ಹೇಳಿತ್ತು. ಆದರೆ ಭಗವದ್ಗೀತೆಯ ಶ್ಲೋಕದಲ್ಲಿ (3.3) ಸಾಂಖ್ಯರಿಗೆ ಜ್ಞಾನಯೋಗದಲ್ಲಿಯೂ, ಯೋಗರಿಗೆ ಕರ್ಮಯೋಗದಲ್ಲಿಯೂ ನಿಷ್ಠೆ ಎಂದು ಹೇಳಿರುವುದರಿಂದ ನಿಷ್ಠೆ ಎಂಬ ಶಬ್ದಕ್ಕೆ "ಕರ್ಮನಿಷ್ಠ", "ತಪೋನಿಷ್ಠ" ಎಂಬಂತೆ, ಅನುಷ್ಠಾನದಲ್ಲಿ ಎಂದರೆ ಕ್ರಿಯಾರೂಪವಾದ ಸಾಧನದಲ್ಲಿ ನಿಷ್ಠೆ ಎಂದಾಗುತ್ತದೆ. ಗೀತಾಭಾಷ್ಯದಲ್ಲಿ (13.7) ಅಮಾನಿತ್ವಾದಿ ಸಾಧನಗಳಲ್ಲಿ ತಾತ್ಪರ್ಯದಿಂದ ನೆಲೆನಿಂತಿರುವ ಸಂನ್ಯಾಸಿಯು ಜ್ಞಾನನಿಷ್ಠನು ಎನಿಸುವನು ಎಂದು ಬರೆದಿದೆ. ಆದ್ದರಿಂದ ಅಮಾನಿತ್ವಾದಿಸಾಧನಪರತ್ವವಾದ ಜ್ಞಾನನಿಷ್ಠೆಯು ಕ್ರಿಯೆಯೇ ಎಂದು ಸ್ವಾಮೀಜಿ ಯವರು ತಮ್ಮ ಗೀತಾಶಾಸ್ತ್ರೋಪದೇಶಸೋಪಾನಪಂಕ್ತಿಃ ಎಂಬ ಅನ್ಯಾದೃಶವಾದ ಗ್ರಂಥದಲ್ಲಿ ಬರೆದಿದ್ದಾರೆ (ಪುಟ 141).

ಆದರೆ, ಪರಾಭಕ್ತಿಯಾದ ಜ್ಞಾನನಿಷ್ಠೆಯು ಫಲರೂಪವಾದದ್ದು, ಕ್ರಿಯೆಯಲ್ಲ. "ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ಪ್ರಾಪ್ನೋತಿ ..... ನಿಷ್ಠಾ ಜ್ಞಾನಸ್ಯ ಯಾ ಪರಾ" (18.50) ಎಂಬ ಶ್ಲೋಕದಲ್ಲಿ ಜ್ಞಾನನಿಷ್ಠೆ ಎಂದರೆ ಬ್ರಹ್ಮಾತ್ಮೈಕತ್ವಾವಗತಿ ರೂಪವಾದದ್ದೇ. ಅಮಾನಿತ್ವಾದಿ ಸಹಕಾರಿಸಾಧನಗಳಿಂದ ಜ್ಞಾನವು ಪರಿಪಕ್ವವಾಗಿ ಅದರಿಂದ ಉಂಟಾಗುವ ಕ್ಷೇತ್ರಜ್ಞಪರಮಾತ್ಮೈಕತ್ವ ಜ್ಞಾನವು ತನ್ನ ಅನುಭವನಿಶ್ಚಯರೂಪದಿಂದ ಕೊನೆಗಾಣುವುದನ್ನೇ ಹೆಚ್ಚಿನ ಜ್ಞಾನನಿಷ್ಠೆ ಎಂದು ಕರೆದಿದೆ (18.55).

ಭಾಷ್ಯ– ಅಥನಾ ತು ತಜ್ಜ್ಞಾನಸಾಧನಗಣಮಮಾನಿತ್ವಾದಿಲಕ್ಷಣಂ, ಯಸ್ಮಿನ್ ಸತಿ ತಜ್ಜ್ಞೇಯವಿಜ್ಞಾನೇ ಯೋಗ್ಯೋಽಧಿಕೃತೋ ಭವತಿ, ಯತ್ಪರಃ ಸಂನ್ಯಾಸೀ ಜ್ಞಾನನಿಷ್ಠಃ ಉಚ್ಯತೇ, ತಮ್ ಅಮಾನಿತ್ವಾದಿಗಣಂ ಜ್ಞಾನಸಾಧನತ್ವಾತ್ ಜ್ಞಾನಶಬ್ದವಾಚ್ಯಂ ವಿದಧಾತಿ ಭಗವಾನ್। 13.7

ಏವಂ ಚಾಮಾನಿತ್ವಾದಿಜ್ಞಾನಸಾಧನಪರತ್ವಂ ಜ್ಞಾನನಿಷ್ಠಾ ಕ್ರಿಯಾ, ತಾದೃಶಸಹಕಾರಿಸಾಧನೇನ ಯೋಽಯಂ ಜ್ಞಾನಪರಿಪಾಕಃ ತಜ್ಜನಿತವಿಜ್ಞಾನಂ ತು ಜ್ಞಾನನಿಷ್ಠಾ ಫಲಮಿತಿ ವಿಶೇಷೋ ದ್ರಷ್ಟವ್ಯಃ ॥ ಸೋಪಾನಪಂಕ್ತಿಃ, ಪುಟ141.

ಭಾಷ್ಯ– ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿಹೇತುಸಹಕಾರಿಕಾರಣಂ ಬುದ್ಧಿವಿಶುದ್ಧತ್ವಾದಿ ಅಮಾನಿತ್ವಾದಿ ಚ ಅಪೇಕ್ಷ್ಯ ಜನಿತಸ್ಯ ಕ್ಷೇತ್ರಜ್ಞಪರಮಾತ್ಮೈಕತ್ವಜ್ಞಾನಸ್ಯ .... ಸ್ವಾತ್ಮಾನುಭವನಿಶ್ಚಯರೂಪೇಣ ಯತ್ ಅವಸ್ಥಾನಂ ಸಾ ಪರಾ ಜ್ಞಾನನಿಷ್ಠಾ ಇತ್ಯುಚ್ಯತೇ । ಸೇಯಂ ಜ್ಞಾನನಿಷ್ಠಾ ಆರ್ತಾದಿಭಕ್ತಿತ್ರಯಾಪೇಕ್ಷಯಾ ಪರಾ ಚತುರ್ಥೀ ಭಕ್ತಿಃ ಇತ್ಯುಕ್ತಾ । 18.55

ಪರಮಾತ್ಮನಲ್ಲಿ ಪರಮಪ್ರೇಮರೂಪವಾದ ಪರಭಕ್ತಿಯಲ್ಲಿ ಅಥವಾ ಜ್ಞಾನನಿಷ್ಠೆಯಲ್ಲಿ ದ್ವೈತವಿಲ್ಲ. ಭಕ್ತನೂ ಭಗವಂತನೂ ಬೇರೆ ಬೇರೆ ಎಂಬ ಭಕ್ತಿ ಭಾವದಲ್ಲಿ ಎಷ್ಟು ಮುಂದುವರೆದರೂ ಅದು ನಿರತಿಶಯವಾದ ಭಕ್ತಿಯಾಗಲಾರದು. "ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" (ಬೃ.ಉ.4.5.6) ಎಂಬ ವಾಕ್ಯದಲ್ಲಿ ಯಾಜ್ಞ್ಯವಲ್ಕ್ಯರು, ಯಾವ ವಸ್ತುವಿನಲ್ಲಾದರೂ ನಮಗೆ ಕಾಮ (ಪ್ರೀತಿ, ಪ್ರೇಮ) ಇರುವುದು ನಮಗೆ ನಮ್ಮ ಮೇಲಿರುವ ಪ್ರೇಮಕ್ಕಾಗಿಯೇ ಹೊರತು ಅವುಗಳಿಗಾಗಿಯಲ್ಲ, ಎಂದು ಹೇಳಿ ಮನುಷ್ಯನು ಆತ್ಮನನ್ನು ಕಂಡುಕೊಳ್ಳುವವರೆಗೂ ಈ ಪ್ರೇಮವನ್ನು ಬೇರೆಯ ವಸ್ತುಗಳಲ್ಲಿ ಅರಸುವುದು ನಿಲ್ಲುವುದಿಲ್ಲ ಎಂಬುದನ್ನು ಸೂಚಿಸಿದ್ದಾರೆ. ನಮ್ಮ ಆತ್ಮನ ಪರಮಾರ್ಥವು ಪರಮಾತ್ಮನೇ ಆಗಿರುವುದರಿಂದ ನಮಗೆ ನಮ್ಮ ಮೇಲಿರುವ ಪ್ರೇಮವು ಪರಮಾತ್ಮನಲ್ಲಿರುವ ಪ್ರೇಮವೇ.

ಈ ಅರಿವು ನಮ್ಮಲ್ಲಿರದೆ ಇದ್ದಾಗ ನಮ್ಮ ಪ್ರೇಮವು ವಿಷಯ ವಸ್ತುಗಳಲ್ಲಿಯೋ, ನಮ್ಮ ಕಲ್ಪಿತ ಜೀವರೂಪದಲ್ಲಿಯೋ ಇರುತ್ತದೆ. ನಮ್ಮ ಆತ್ಮನು ಸರ್ವವ್ಯಾಪಿಯಾದ ಪರಮಾತ್ಮನೇ ಎಂಬ ಅರಿವಿನ ಅದ್ವೈತದ ನಿಲುಗಡೆಯಲ್ಲಿ ಭಕ್ತಿಯೂ ಜ್ಞಾನವೂ ಬೇರೆಬೇರೆಯಲ್ಲ. ಅಲ್ಲಿ ಭಕ್ತ, ಭಗವಂತ ಮತ್ತು ಭಕ್ತಿ ಎಂಬ ಭೇದಕ್ಕೆ ಎಡೆಯಿಲ್ಲ.

ಅದ್ವೈತ ಸ್ಥಿತಿಯನ್ನು ತಲಪುವ ಮುನ್ನ ಮುಮುಕ್ಷುವಿಗೆ ಭಗವಂತನಲ್ಲಿ ಇರುವ ಭಕ್ತಿಯೂ, ಜ್ಞಾನವೂ ಮುಖ್ಯಾರ್ಥದಲ್ಲಿ ಭಕ್ತಿ ಅಥವಾ ಜ್ಞಾನವಲ್ಲ. ಅವನ್ನು ಗೌಣಭಕ್ತಿ, ಗೌಣಜ್ಞಾನ ಎಂದು ಕರೆಯಬಹುದು. ಸಾಧನೆಯ ಹಂತದಲ್ಲಿ ಗೌಣಭಕ್ತಿಯೂ ಗೌಣಜ್ಞಾನವೂ ಎರಡೂ ಅವನಲ್ಲಿ ಇದ್ದೇ ಇರುತ್ತದೆ.

ಜ್ಞಾನನಿಷ್ಠೆಯ ಪ್ರಾಪ್ತಿಗಾಗಿ ಕರ್ಮಯೋಗದ ಅಥವಾ ಧ್ಯಾನಯೋಗದ ಹಂತದಲ್ಲಿರುವವನಿಗೆ ಭಗವದ್ಭಕ್ತಿಯೇ ಹೆಚ್ಚಿನದಾಗುತ್ತದೆ. ಏಕೆಂದರೆ, ಭಗವಂತನಲ್ಲಿ ಪ್ರೇಮರೂಪದ ಭಕ್ತಿಯಿಲ್ಲದವನು ಭಗವದರ್ಥವಾಗಿ ಕರ್ಮವನ್ನು ಮಾಡಲಾಗುವುದಿಲ್ಲ. ಅಲ್ಲದೆ, ಭಗವಂತನಲ್ಲಿ ಪ್ರೇಮವಿಲ್ಲದವನಿಗೆ, ಅಥವಾ ಅರ್ಚನಾದಿಗಳು ಯಾಂತ್ರಿಕವಾಗಿರುತ್ತಿದ್ದರೆ, ಭಗವಂತನ ಸ್ವರೂಪಜ್ಞಾನವು ಆಗುವುದಾದರೂ ಹೇಗೆ?

ಯಾವಾತನಿಂದ ಭೂತಗಳ ಪ್ರವೃತ್ತಿಯೋ, ಯಾವಾತನಿಂದ ಇದೆಲ್ಲವೂ ವ್ಯಾಪಿಸಲ್ಪಟ್ಟಿದೆಯೋ, ಆತನನ್ನು ಸ್ವವರ್ಣವಿಹಿತವಾದ ಕರ್ಮದಿಂದ ಅಭ್ಯರ್ಚನೆ ಮಾಡಿದರೆ, ಮಾನವನು ಸಿದ್ಧಿಯನ್ನು ಹೊಂದುತ್ತಾನೆ ಎಂದು ಗೀತೆಯಲ್ಲಿ ಹೇಳಿದೆ. ಈ ಭಗವಂತನ ಅಭ್ಯರ್ಚನೆಯೆಂಬ ಭಕ್ತಿಯೋಗಕ್ಕೆ ಜ್ಞಾನನಿಷ್ಠಾಯೋಗ್ಯತೆ ಎಂಬ ಸಿದ್ಧಿಯೇ ಫಲವು.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ಭ.ಗೀ. 18.46

ಭಾಷ್ಯ– ಯೇನ ಈಶ್ವರೇಣ ಸರ್ವಮಿದಂ ತತಂ ವ್ಯಾಪ್ತಂ, ಸ್ವಕರ್ಮಣಾ ಪೂರ್ವೋಕ್ತೇನ ಪ್ರತಿವರ್ಣಂ ತಮ್ ಈಶ್ವರಂ ಅಭ್ಯರ್ಚ್ಯ ಪೂಜಯಿತ್ವಾ ಆರಾಧ್ಯ ಕೇವಲಂ, ಜ್ಞಾನನಿಷ್ಠಾಯೋಗ್ಯತಾಲಕ್ಷಣಾಂ ಸಿದ್ಧಿಂ ವಿಂದತಿ ಮಾನವಃ ಮನುಷ್ಯಃ । 18.46

ಭಾಷ್ಯ– ಸ್ವಕರ್ಮಣಾ ಭಗವತೋऽಭ್ಯರ್ಚನಭಕ್ತಿಯೋಗಸ್ಯ ಸಿದ್ಧಿಪ್ರಾಪ್ತಿಃ ಫಲಂ ಜ್ಞಾನನಿಷ್ಠಾ ಯೋಗ್ಯತಾ । 18.55

ಹಾಗೆಯೇ, ಧ್ಯಾನಯೋಗದ ವಿಷಯದಲ್ಲಿಯೂ, ಧ್ಯಾನಯೋಗಿಯು ಪರಮೇಶ್ವರನಲ್ಲೇ ಚಿತ್ತವನ್ನು ಇಟ್ಟವನಾಗಿ, ಪರಮೇಶ್ವರನೇ ಪರನು ಅಂದರೆ ಹೆಚ್ಚಿನವನು ಎಂದು ತಿಳಿದು, ಸಮಾಧಾನವುಳ್ಳವನಾಗಿ ಇರಬೇಕು ಎಂದೂ (6.14), ಯೋಗಿಗಳಲ್ಲೆಲ್ಲ ನನ್ನಲ್ಲಿರುವ ಅಂತರಾತ್ಮದಿಂದ ಕೂಡಿ ಯಾವನು ಶ್ರದ್ಧಾವಂತನಾಗಿ ಭಜಿಸುವನೋ ಅವನು ಯುಕ್ತತಮನು ಎಂದು ನನ್ನ ಮತವು ಎಂದೂ ಹೇಳಿದೆ (6.47).

ಭಾಷ್ಯ– ಮಚ್ಚಿತ್ತಃ ಮಯಿ ಪರಮೇಶ್ವರೇ ಚಿತ್ತಂ ಯಸ್ಯ ಸೋऽಯಂ ಮಚ್ಚಿತ್ತಃ । ಯುಕ್ತಃ ಸಮಾಹಿತಃ ಸನ್ ಆಸೀತ ಉಪವಿಶೇತ್ । ಮತ್ಪರಃ ಅಹಂ ಪರಃ ಯಸ್ಯ ಸೋऽಯಂ ಮತ್ಪರಃ । 6.14

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಯೋ ಭಜತೇ ಮಾಂ ಸ ಮೇ ಯುಕ್ತತಮೋ ಮತಃ ॥ ಭ.ಗೀ. 6.47

ಆದ್ದರಿಂದ ಕರ್ಮಕ್ಕೆ ಕರ್ಮಯೋಗತ್ವವೂ, ಧ್ಯಾನಕ್ಕೆ ಧ್ಯಾನಯೋಗತ್ವವೂ ಉಂಟಾಗುವುದು ಅವುಗಳಲ್ಲಿರುವ ಭಗವತ್ಸಂಬಂಧದಿಂದಲೇ ಎಂದು ತಿಳಿಯಬೇಕು. ಹೀಗೆ ಆಚರಿಸಿದ ಯೋಗವು ಕ್ರಮೇಣ ಭಕ್ತಿಯೋಗವೇ ಆಗುತ್ತದೆ.

ಜ್ಞಾನಸಾಧನಗಳ ಮಧ್ಯೆಯೂ ಭಕ್ತಿಯನ್ನು ಹೇಳಿದೆ: ಈಶ್ವರನಾದ ನನ್ನಲ್ಲಿ ಅನನ್ಯಯೋಗದಿಂದ "ಭಗವಂತನಾದ ವಾಸುದೇವನಿಗಿಂತ ಹೆಚ್ಚಿನವನಾದ ಮತ್ತೊಬ್ಬನು ಇಲ್ಲ. ಆದ್ದರಿಂದ ಅವನೇ ನಮಗೆ ಗತಿಯು" ಎಂದೀ ಪರಿಯಲ್ಲಿ ನಿಶ್ಚಯಿಸಿರುವ ಅವ್ಯಭಿಚಾರಿಯಾದ ಬುದ್ಧಿಯು ಅನನ್ಯಯೋಗವು, ಅದರಿಂದ ಭಜಿಸುವುದು ಭಕ್ತಿಯು. ಆ ಅವ್ಯಭಿಚಾರಿ ಭಕ್ತಿಯೂ ಜ್ಞಾನವೇ (ಏಕೆಂದರೆ ಅದರಿಂದ ಜ್ಞಾನವುಂಟಾಗುತ್ತದೆ).

ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥ ಭ.ಗೀ. 13.10

ಭಾಷ್ಯ– ಮಯಿ ಚ ಈಶ್ವರೇ ಅನನ್ಯಯೋಗೇನ ಅಪೃಥಕ್ಸಮಾಧಿನಾ 'ನಾನ್ಯಃ ಭಗವತಃ ವಾಸುದೇವಾತ್ ಪರಃ ಅಸ್ತಿ, ಅತಃ ಸ ಏವ ನೋ ಗತಿಃ' ಇತ್ಯೇವಂ ನಿಶ್ಚಿತಾ ಅವ್ಯಭಿಚಾರಿಣೀ ಬುದ್ಧಿಃ ಅನನ್ಯಯೋಗಃ, ತೇನ ಭಜನಂ ಭಕ್ತಿಃ ... । ಸಾ ಚ ಜ್ಞಾನಂ । ... ॥

ಹೀಗೆ ಕರ್ಮಯೋಗ, ಧ್ಯಾನಯೋಗ ಮತ್ತು ಜ್ಞಾನಯೋಗಗಳಲ್ಲಿ ಭಕ್ತಿಯು ಅನುಸ್ಯೂತವಾಗಿ ಇದ್ದೇ ಇದೆ. ಇದಕ್ಕೆ ಅನುಗುಣವಾಗಿಯೇ ಸ್ವಾಮೀಜಿಯವರು ತಮ್ಮ "ಗೀತಾಶಾಸ್ತ್ರೋಪದೇಶಸೋಪಾನಪಂಕ್ತಿಃ" ಗ್ರಂಥದಲ್ಲಿ "ಭಗವಂತನಿಂದ ಉಪದೇಶಿಸಲ್ಪಟ್ಟ ಈ ಗೀತಾಶಾಸ್ತ್ರವು ಆದಿಮಧ್ಯಾಂತಗಳಲ್ಲಿ ಭಕ್ತಿಪ್ರಧಾನವಾದದ್ದು, ಭಕ್ತಿಯೆಂಬುದು ಭಗವಚ್ಚರಣತಾರೂಪವು, ಭಕ್ತಿಶಾಸ್ತ್ರವೆಂಬ ಹೆಸರಿಗೆ ತಕ್ಕದ್ದಾಗಿರುತ್ತದೆ" ಎಂದು ಬರೆದಿದ್ದಾರೆ (ಪುಟ 142). ನಮ್ಮ ಆತ್ಮನೇ ಆದ ಪರಮಾತ್ಮನಾದ ಭಗವಂತನ ಪ್ರಾಪ್ತಿಗಾಗಿ ಮಾಡುವ ಯಾವ ಸಾಧನದಲ್ಲಾದರೂ ಅವನಲ್ಲಿ ಪ್ರೇಮರೂಪವಾದ ಭಕ್ತಿಯು ಇದ್ದೇ ಇರಬೇಕೆಂಬುದು ಸ್ಪಷ್ಟವೇ ಆಗಿದೆ.

ಅವರ ಮೇಲೆಯೇ ಅನುಕಂಪೆಯನ್ನು ತೋರಿಸುವುದಕ್ಕಾಗಿ, ಅವರಿಗೆ ಹೇಗಾದರೂ ಶ್ರೇಯಸ್ಸಾಗಲಿ ಎಂಬ ದಯೆಯಿಂದ ನಾನು, ಅವಿವೇಕದಿಂದ ಹುಟ್ಟಿರುವ ಮಿಥ್ಯಾಪ್ರತ್ಯಯವೆಂಬ ಮೋಹದ ಕತ್ತಲೆಯೆನ್ನುವ ತಮಸ್ಸನ್ನು, ಅವರ ಅನ್ತಃಕರಣಾಶಯದಲ್ಲಿಯೇ ಇದ್ದುಕೊಂಡು ಬೆಳಗುವ ಜ್ಞಾನದೀಪದಿಂದ ನಾಶಗೊಳಿಸುವೆನು.

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ಭ.ಗೀ. 10.11

ಶ್ರೀ ಕೃಷ್ಣಾರ್ಪಣಮಸ್ತು ।

ಶ್ರೀಶಂಕರಸಚ್ಚಿದಾನಂದೇಂದ್ರಸರಸ್ವತಿಸದ್ಗುರುಚರಣಾರ್ಪಣಮಸ್ತು ।

* * * * *

ಜ್ಞಾನ

8. ಪರಮಾತ್ಮನು ಕಾಲದಲಿಲ, ಜಗತ್ತು ಕಾಲದಲ್ಲಿಲ್ಲ. ಕಾಲದೊಡನೆ ಸೇರಿದ ಜಗತ್ತು ಪರಮಾತ್ಮನಲ್ಲಿ ತೋರಿ ಅಡಗುತ್ತದೆ.

9. ಜ್ಞಾನಿಯು ಎಲ್ಲೆಲ್ಲಿಯೂ ಆತ್ಮನನ್ನು ಕಾಣುತ್ತಾನೆ. ಹೇಗೆ ತನ್ನ ಆತ್ಮನ ಮೇಲೆ ಪ್ರೇಮವಿರುತ್ತದೆಯೋ ಹಾಗೆ ಸರ್ವರನ್ನೂ ಪ್ರೇಮಿಸುತ್ತಾನೆ.

– ಶ್ರೀ ಸಚ್ಚಿದಾನಂದವಾಣಿ

ಮಹಾವಾಕ್ಯಗಳ ಮಹತ್ವ

– ಡಾ. ಎಸ್. ಹೇಮಲತಾ

ಶಬ್ದಗಳಲ್ಲಿ ವಿಶಿಷ್ಟವಾದ ಶಕ್ತಿಯು ಅಡಗಿದೆಯೆಂಬುದನ್ನು ನಾವೆಲ್ಲರೂ ಬಲ್ಲೆವು. ಒಬ್ಬರ ಮನಸ್ಸಿನ ಭಾವಗಳನ್ನು ಇನ್ನೊಬ್ಬರಿಗೆ ತಿಳಿಸಲು ಶಬ್ದಗಳೇ ಮಧ್ಯವರ್ತಿಗಳು. ಪಶು ಪಕ್ಷಿಗಳು ತಮ್ಮದೇ ಆದ ಶಾಬ್ದಿಕ ವಿಧಾನದಲ್ಲಿ ವ್ಯವಹರಿಸಿದರೆ, ಮನುಷ್ಯರು ಅದೇ ಶಬ್ದಗಳನ್ನು ಅರ್ಥವತ್ತಾಗಿ ಬಳಸುವ ಭಾಷೆಯನ್ನು ಅಭಿವೃದ್ಧಿಪಡಿಸಿಕೊಂಡರು. ಒಂದೇ ಭಾಷೆಯನ್ನು ಆಡುವ ಜನರ ನಡುವೆ ಈ ಶಬ್ದಗಳ ಪ್ರಯೋಗವಾದಾಗ, ಅವು ಹೇಳಿದವರ ಭಾವನೆಗಳನ್ನು ಕೇಳಿದವರಿಗೆ ಮುಟ್ಟಿಸುತ್ತವೆ. ಮಾತನಾಡುವವನ ಮನದಲ್ಲಿ ಯಾವ ಅಭಿಪ್ರಾಯವಿರುತ್ತದೆಯೋ ಅದಕ್ಕೆ ಅನುಗುಣವಾದ ವೃತ್ತಿಯು ಕೇಳಿದವರ ಮನಸ್ಸಿನಲ್ಲಿ ಉತ್ಪತ್ತಿಯಾಗುತ್ತದೆ. ಒಳ್ಳೆಯ ಮಾತುಗಳನ್ನು ಕೇಳಿದಾಗ ನಮ್ಮ ಚಿತ್ತವೃತ್ತಿಯು ಉತ್ತಮವಾದ ಮಟ್ಟಕ್ಕೆ ಹೋಗುತ್ತದೆ. ಮನಸ್ಸಿಗೆ ಆನಂದವನ್ನುಂಟು ಮಾಡುತ್ತದೆ. ಹಾಗೆಯೇ ಕೆಡುಕಾದ ಮಾತುಗಳನ್ನು ಕೇಳಿದಾಗ ನಮ್ಮ ಚಿತ್ತವೃತ್ತಿಯನ್ನು ಕೆಳಕ್ಕೆ ಇಳಿಸಿ, ದುಃಖವನ್ನುಂಟು ಮಾಡುತ್ತದೆ. ಸಾಧಾರಣ ಮಾತುಗಳೇ ಹೀಗೆ ಪರಿಣಾಮವನ್ನುಂಟು ಮಾಡುವುದಾದರೆ ಋಷಿವಾಕ್ಯಗಳಾದ ವೇದ ಮತ್ತು ವೇದಾಂತಗಳು ಎಂತಹ ಪರಿಣಾಮವನ್ನುಂಟು ಮಾಡಬಹುದು?

ವೇದಾಂತ ವಾಕ್ಯಗಳು ಸಾಧಾರಣ ವಾಕ್ಯಗಳಲ್ಲವೆಂಬುದಕ್ಕೆ ಹಲವು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಅವು ಒಂದು ವ್ಯವಹಾರಕ್ಕೆ ಸಂಬಂಧಪಡದೆ ಸಾರ್ವಜನಿಕವಾದ ಮತ್ತು ತ್ರಿಕಾಲಾತೀತವಾದ ಸತ್ಯವನ್ನು ತಿಳಿಸುತ್ತವೆ. ಎರಡನೆಯದಾಗಿ ಅವು ವ್ಯವಹಾರದಂತೆ ತಾತ್ಕಾಲಿಕ ಲಾಭವನ್ನು ಹೇಳುವುದಿಲ್ಲ. ಅವುಗಳನ್ನು ಕೇಳುವಾಗಲೇ ಮನಸ್ಸಿಗೆ ಒಂದು ವಿಧವಾದ ಹಿತವಾದ ಅನುಭವ ಉಂಟಾಗುತ್ತದೆ. ಅದ್ದರಿಂದಲೇ ವೇದಗಳನ್ನು ಶಬ್ದಪ್ರಧಾನವೆಂದೂ ಕರೆಯುತ್ತಾರೆ. ಅವುಗಳಲ್ಲಿ ಒಂದು ಅಕ್ಷರವನ್ನು ಬದಲಾಯಿಸಲೂ ಬರುವಂತಿಲ್ಲ; ಅಷ್ಟೇ ಅಲ್ಲ, ಅರ್ಥವಾಗದೆ ಕೇವಲ ಪಾರಾಯಣ ಮಾಡಿದರೂ ಒಂದು ವಿಧವಾದ ಆನಂದ ತರಂಗಗಳನ್ನು ಎಬ್ಬಿಸುತ್ತದೆ. ವೇದಪಾರಾಯಣವನ್ನು ಕೇಳವುದೇ ಒಂದು ಆನಂದಾನುಭವವನ್ನುಂಟುಮಾಡುತ್ತದೆ.

ಮೂರನೆಯದಾಗಿ, ಈ ವಾಕ್ಯಗಳು ಕೇಳಿದಾಗ, ಯಾವುದೋ ಗೂಢಾರ್ಥವನ್ನು ವಿಸ್ತರಿಸುವಂತೆ ಭಾಸವಾಗುತ್ತವೆ. ಅವುಗಳ ಅರ್ಥವನ್ನು ತಿಳಿದಾಗ ಆಗಬಹುದಾದ ಆನಂದಕ್ಕೆ ಸರಿಗಟ್ಟುವುದು ಯಾವುದೂ ಇರಲಾರದು. ಸರಿಯಾದ ಗುರುಗಳಿಂದ ಅವುಗಳ ಅಂತರಾರ್ಥವನ್ನು ಗ್ರಹಿಸಿದ ಮೇಲೆ ಇನ್ನಾವುದೂ ಬೇಕಾಗದ ತೃಪ್ತಿಯ ಅನುಭವವನ್ನು ಅವು ಕೊಡುತ್ತವೆ. ಈ ವಿಷಯದಲ್ಲಿ ಸ್ವಾಮೀಜಿಯವರು ಒಂದು ಕಡೆ, ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಸಾಮಾನ್ಯ ಜನರ ಮಾತುಗಳು ಸಂಗೀತ ತಿಳಿಯದವನ ಹಾಡುವ ಹಾಡುಗಳಾದರೆ, ವೇದವಾಕ್ಯಗಳು ರಾಗಾಲಾಪನೆಗಳನ್ನು ತಿಳಿದಿರುವ ಸಂಗೀತಗಾರನ ಕಂಠದಿಂದ ಬರುವ ಗಾನವೆಂದು ಹೇಳಬಹುದು. ಇನ್ನು ವೇದದ ಸಾರವಾದ ವೇದಾಂತವಾಕ್ಯಗಳಾದರೋ ಸಂಗೀತವನ್ನು ಸ್ವಾಧೀನಪಡಿಸಿಕೊಂಡು, ಸ್ವತಂತ್ರವಾಗಿಯೂ, ಸರಾಗವಾಗಿಯೂ, ಮೈಮರೆತು ಹಾಡಬಲ್ಲ ಉತ್ಕೃಷ್ಟ ವಿದ್ವಾಂಸನ

ಹಾಡುಗಾರಿಕೆಯೆನ್ನಬಹುದು. ಈ ಮೂರೂ ಹಾಡುಗಳೇ ಆದರೂ, ಅವು ಉಂಟುಮಾಡುವ ಆನಂದಾನುಭವವು ಆನಂದ–ಅನಂದತರ–ಆನಂದತಮ ಎನ್ನಬಹುದಲ್ಲವೆ?

ಈ ವೇದಾಂತ ವಾಕ್ಯಗಳಲ್ಲಿಯೂ ಇನ್ನು ಸಾರತಮವಾದ ಮಹಾವಾಕ್ಯಗಳ ಪ್ರಭಾವವನ್ನು ವರ್ಣಿಸಲು ಪದಗಳೇ ಇಲ್ಲವೆನ್ನಬಹುದು. 'ನಾವೆಲ್ಲ ಪರಮಾತ್ಮನೇ' ಎಂದು ಘಂಟಾಘೋಷವಾಗಿ ಸಾರುವ ಈ ವಾಕ್ಯಗಳಿಗೆ ಸಮನಾದ ಸಂದೇಶವು ಪ್ರಪಂಚದ ಯಾವುದೇ ಧರ್ಮಗ್ರಂಥಗಳಲ್ಲಿ ಇಲ್ಲವೆನ್ನಬಹುದು. ಇವು ಅಂದಿನಿಂದ ಇಂದಿನವರೆಗೂ ನಿತ್ಯನೂತನವಾಗಿ ಉಳಿದುಕೊಂಡು ಬಂದಿರುವುದೇ ಅವುಗಳ ಹಿರಿಮೆಗೆ ಸಾಕ್ಷಿಯಾಗಿದೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ನಮ್ಮೊಳಗೆ ನಾವು ಇಣುಕಿ ನೋಡಬೇಕಾಗಿದೆ. ಎಲ್ಲ ಧರ್ಮಗಳಲ್ಲಿಯೂ ಸತ್ಪುರುಷನಾಗುವ ಧರ್ಮವನ್ನು ಹೇಳಿರಬಹುದು; ಆದರೆ ಪರಮಾತ್ಮನೇ ಆಗಬಹುದಾದಂತಹ ಅದ್ಭುತ ಅನುಭವವನ್ನು ಒದಗಿಸುವುದು ಉಪನಿಷತ್ತುಗಳು ಮಾತ್ರ.

ಈ ವಾಕ್ಯಗಳನ್ನು ಮಹಾವಾಕ್ಯಗಳೆಂದು ಏಕೆ ಕರೆಯುತ್ತಾರೆಂಬುದನ್ನು ಈ ನೋಡೋಣ. ಅರ್ಥವತ್ತಾದ ಪದಗಳ ಸಮೂಹಕ್ಕೆ ವಾಕ್ಯವೆಂದು ಹೆಸರು. ಅದು ಒಂದು ಗೊತ್ತಾದ ತಾತ್ಪರ್ಯವನ್ನು ನೀಡುತ್ತದೆ. ಯಾವುದರಲ್ಲಿ ತಾತ್ಪರ್ಯವು ಮಹತ್ತಾದುದೋ ಅದನ್ನು ಮಹಾವಾಕ್ಯವೆನ್ನಬಹುದು. ಶ್ರೀಗಳವರು ಹೇಳುವಂತೆ ಈ ಮಹಾವಾಕ್ಯಗಳು ಒಂದೊಂದು ವೇದಕ್ಕೆ ಒಂದೊಂದರಂತೆ ನಾಲ್ಕು ಇವೆಯೆಂದು ಸಂಕೋಚ ಮಾಡಬೇಕಾದುದೇನೂ ಇಲ್ಲ. ಉಪನಿಷತ್ತಿನ ಬಹಳಷ್ಟು ವಾಕ್ಯಗಳು ಮಹತ್ತಾದ ಅರ್ಥವನ್ನು ಕೊಡುತ್ತವೆ.

ಸಂಕ್ಷೇಪವಾಗಿ ಹೇಳಬೇಕೆಂದರೆ ಬ್ರಹ್ಮಾತ್ಮೈಕ್ಯವನ್ನು ಬೋಧಿಸುವ ವಾಕ್ಯಗಳನ್ನು ಮಹಾವಾಕ್ಯಗಳೆಂದು ಕರೆಯಬಹುದು. ಇವು ಉಪಾಸನಾವಾಕ್ಯಗಳಲ್ಲವೆಂದು ಶ್ರೀಗಳವರು ಸ್ಪಷ್ಟವಾಗಿ ಶಾಂಕರಮತವನ್ನು ಪುನರುಚ್ಚರಿಸಿರುತ್ತಾರೆ. ಇವುಗಳನ್ನು ಮಂತ್ರಗಳಂತೆ ಜಪಾದಿಗಳಿಗೆ ಬಳಸುವುದಾಗಲೀ, ಅಂಗನ್ಯಾಸ ಕರನ್ಯಾಸಾದಿಗಳನ್ನು ಸೇರಿಸುವುದಾಗಲೀ ಸರಿಯಲ್ಲ. ಅದರ ಅರ್ಥವನ್ನು ಗುರುಮುಖೇನ ಸರಿಯಾಗಿ ಗ್ರಹಿಸಿಬಿಟ್ಟರೆ, ಅದೇ ಆತ್ಮಾನುಭವವಾಗುತ್ತದೆಯೇ ಹೊರತು, ಮತ್ತೆ ಮಾಡಬೇಕಾದ ಕರ್ಮಗಳೇನೂ ಉಳಿಯುವುದಿಲ್ಲ. ಸರ್ವದುಃಖಾತೀತವಾದ ಎಲ್ಲವನ್ನೂ ಬೆಳಗುತ್ತಿರುವ ಚೈತನ್ಯಾನುಭವವೇ ತಾನೆಂಬುದೇ ಆತ್ಮಾನುಭವವು. ಬ್ರಹ್ಮವು ಅತ್ಯಂತ ಪ್ರಸಿದ್ಧವಾಗಿರುವುದರಿಂದ ಅದರ ಜ್ಞಾನವು ಹೊಸದಾಗಿ ಆಗಬೇಕಾದುದಿಲ್ಲ. ಅವಿದ್ಯೆಯಿಂದಾಗಿರುವ ಅಧ್ಯಾರೋಪವನ್ನು ತೊಲಗಿಸಿಕೊಳ್ಳಬೇಕಾದುದಷ್ಟೇ ಮಾಡಬೇಕಾಗಿರುವುದು. ಈ ದೃಷ್ಟಿಯಿಂದ ಕೆಲವು ವಾಕ್ಯಗಳನ್ನು ಮಹಾವಾಕ್ಯಗಳೆಂದು ಸ್ವೀಕರಿಸಿರುವುದು ಸಾಧುವಾಗಿದೆ.

ನಾಲ್ಕು ವೇದಗಳಿಂದ ಒಂದೊಂದು ವಾಕ್ಯವನ್ನು ತೆಗೆದುಕೊಂಡಿರುವ ಉದ್ದೇಶವು, ಎಲ್ಲ ವೇದಗಳ ಅಂತಿಮ ಗುರಿಯೂ ಒಂದೇ ಆಗಿದೆಯೆಂದು ತೋರಿಸುವುದಾಗಿರಬಹುದೆಂದು ಹೇಳಬಹುದು. ಜೊತೆಗೆ ಅವುಗಳನ್ನು ಒಂದು ಕ್ರಮವನ್ನು ಗುರುತಿಸಲು ಸಾಧ್ಯವೆನಿಸುತ್ತದೆ. ಅವುಗಳನ್ನು ಶಾಂಕರಭಾಷ್ಯದ ಪ್ರಕಾರ ಪರಿಚಯ ಮಾಡಿಕೊಂಡರೆ ಈ ವಿಷಯ ಮನದಟ್ಟಾಗಬಹುದು.

1. ಪ್ರಜ್ಞಾನಂ ಬ್ರಹ್ಮ: ಈ ವಾಕ್ಯವು ಋಗ್ವೇದಾಂತರ್ಗತವಾದ ಐತರೇಯೋಪನಿಷತ್ತಿನಿಂದ ಸ್ವೀಕರಿಸಲ್ಪಟ್ಟಿದೆ.

ಈ ಉಪನಿಷತ್ತಿನ ಅಂತಿಮ ಭಾಗವಾದ ಮೂರನೆ ಅಧ್ಯಾಯದ ಮೂರನೆಯ ಮಂತ್ರದಲ್ಲಿ ಈ ವಾಕ್ಯವಿದೆ. 'ಏಷ ಬ್ರಹ್ಮೈಷ ಇಂದ್ರ ಏಷ ಪ್ರಜಾಪತಿರೇತೇ ಸರ್ವೇ ದೇವಾ....' ಎಂದು ಪ್ರಾರಂಭಿಸಿ ಪಂಚಭೂತಗಳು, ಚರಾಚರಗಳು, ಈ ಎಲ್ಲವೂ ಪ್ರಜ್ಞಾನದಲ್ಲಿಯೇ ಸ್ಥಿತವಾಗಿವೆಯೆಂದು ಹೇಳುತ್ತಾ 'ಪ್ರಜ್ಞಾನವೇ ಬ್ರಹ್ಮ' ಎಂದು ಮುಕ್ತಾಯ ಮಾಡುತ್ತದೆ. ಭಗವತ್ಪಾದರು, 'ನೀರಿನಲ್ಲಿ ಕಾಣುವ ಬೇರೆ ಬೇರೆ ಸೂರ್ಯಪ್ರತಿಬಿಂಬಗಳಂತೆ ಅಂತಃಕರಣವೆಂಬ ಉಪಾಧಿಗಳಲ್ಲಿ ಅನುಪ್ರವೇಶ ಮಾಡಿರುವ ಪ್ರಾಣಸ್ವರೂಪನೇ ಪ್ರಜ್ಞಾತ್ಮಾ' ಎಂದು ವಿವರಿಸಿರುತ್ತಾರೆ. ಇದೇ ಪ್ರತ್ಯಸ್ತಮಿತ ಸರ್ವೋಪಾಧಿ ವಿಶೇಷನಾದ, ನಿರ್ಮಲನೂ, ನಿಷ್ಕ್ರಿಯನೂ, ಶಾಂತ, ಏಕ, ಅದ್ವಯ ಮುಂತಾಗಿ ಹೇಳಲ್ಪಡುವ ಅಂತರ್ಯಾಮಿಯು. ಸಂಜ್ಞಾನಾ ಆಜ್ಞಾನ, ವಿಜ್ಞಾನ, ಪ್ರಜ್ಞಾನ, ಮೇಧಾ, ಧೃಷ್ಟಿ, ಧೃತಿ, ಮತಿ, ಮನೀಷಾ, ಜೂತಿಃ (ದುಃಖಿತ್ವಭಾವ), ಸ್ಮೃತಿ, ಸಂಕಲ್ಪ, ಶ್ರುತಿ, (ಅಧ್ಯವಸಾಯ) ಅಸು, ಕಾಮ, ವಶ ಇವೆಲ್ಲವೂ ಪ್ರಜ್ಞಾನದ ನಾಮಧೇಯಗಳೆಂದು ಹಿಂದಿನ ಮಂತ್ರದಲ್ಲಿ ಹೇಳಿದೆ. ಈ ಮಂತ್ರವನ್ನು ಮನನ ಮಾಡುವುದರಿಂದ ಅರ್ಥವಾಗುವ ವಿಷಯವೆಂದರೆ, ಬಾಹ್ಯಸೃಷ್ಟಿ ಮತ್ತು ಆಂತರಿಕ ಪ್ರಪಂಚದಲ್ಲಿ ಇರುವುದೆಲ್ಲವೂ ಬ್ರಹ್ಮವೇ. ಎಲ್ಲವನ್ನೂ ಬ್ರಹ್ಮದೃಷ್ಟಿಯಿಂದ ಕಾಣುವುದೇ ಬ್ರಹ್ಮಸಂಸ್ಥನ ಲಕ್ಷಣ. ಬ್ರಹ್ಮದ ಚಿತ್‌ಸ್ವರೂಪವೂ, ಸತ್‌ಸ್ವರೂಪವೂ ಇದರಲ್ಲಿ ಏಕೀಕೃತವಾಗಿ ಮಾಡಲ್ಪಟ್ಟಿದೆ. ಆದರೆ ಈ ವಾಕ್ಯದಲ್ಲಿ 'ನಾನು' ಮತ್ತು ನೀನು ಅಥವಾ ತೃತೀಯರೂಪವಾದ 'ತತ್' ಎಂಬುದಾಗಲೀ ಇಲ್ಲವಾದುದರಿಂದ ಶಿಷ್ಯನ ಅಹಂ ಮಮಾಭಿಮಾನವನ್ನು ದೂರಮಾಡಿ, ನೇರವಾದ ಉಪದೇಶವನ್ನು ಇದು ಕೊಡುವುದಿಲ್ಲ. ಆದ್ದರಿಂದ ಶಿಷ್ಯನು ಈ ವಿಷಯವನ್ನು ತನ್ನದಾಗಿಸಿಕೊಳ್ಳಬೇಕಾದರೆ ಇನ್ನು ಹೆಚ್ಚಿನ ವಿವರಣೆಯ ಅವಶ್ಯಕತೆ ಇದೆಯೆನ್ನಿಸುತ್ತದೆ. ಒಂದೇ ಸಲ ಎಲ್ಲವೂ ಜ್ಞಾನಸ್ವರೂಪವೆಂದು ಹೇಳಿದಾಗ 'ತಾನೇ ಅದು' ಎಂಬ ಭಾವನೆಗೆ ಪೂರ್ಣತೆ ಪ್ರಾಪ್ತವಾಗುವಂತೆ ಕಾಣುವುದಿಲ್ಲ.

2. **ಅಯಮಾತ್ಮಾ ಬ್ರಹ್ಮ:** ಅಥರ್ವವೇದಕ್ಕೆ ಸೇರಿರುವ ಮಾಂಡೂಕ್ಯೋಪನಿಷತ್ತಿನಿಂದ ಈ ವಾಕ್ಯವನ್ನು ಸ್ವೀಕರಿಸಲಾಗಿದೆ. ಹಿಂದಿನ ಮಹಾವಾಕ್ಯವು ಐತರೇಯದ ಕೊನೆಯಲ್ಲಿ ಇದ್ದರೆ, ಈ ಮಹಾವಾಕ್ಯವು ಮಾಂಡೂಕ್ಯದ ಪ್ರಾರಂಭದಲ್ಲಿಯೇ ಕಂಡುಬರುತ್ತದೆ. ಪ್ರಥಮ ಮಂತ್ರದಲ್ಲಿ ಓಂಕಾರದ ಮಹಿಮೆಯನ್ನು ವಿಸ್ತರಿಸಿ, ತ್ರಿಕಾಲವೂ, ಕಾಲಾತೀತವೂ ಬ್ರಹ್ಮವೇ ಎಂದು ವರ್ಣಿಸಿದೆ. ನಂತರ ಎರಡನೆಯ ಮಂತ್ರದಲ್ಲಿ 'ಸರ್ವಗ್ಂ ಹ್ಯೇತದ್ ಬ್ರಹ್ಮ ಅಯಮಾತ್ಮಾ ಬ್ರಹ್ಮ ಸೋಯಮಾತ್ಮಾ ಚತುಷ್ಪಾತ್' ಎಂದು ಮಹಾವಾಕ್ಯವು ಸೇರಿಸಲ್ಪಟ್ಟಿದೆ. ಪರೋಕ್ಷವಾಗಿ ಓಂಕಾರರೂಪವಾಗಿ ಹೇಳಿರುವ ಬ್ರಹ್ಮವನ್ನು 'ಈ ಆತ್ಮವು ಬ್ರಹ್ಮವು' ಎಂದು ಪ್ರತ್ಯಕ್ಷವಾಗಿ ಇಲ್ಲಿ ತಿಳಿಸಿಕೊಡಲಾಗಿದೆ. ಹಿಂದಿನ ಮಹಾವಾಕ್ಯದಲ್ಲಿ ಎಲ್ಲವೂ ಜ್ಞಾನಸ್ವರೂಪವೆಂದೂ, ಅದೇ. ಬ್ರಹ್ಮಸ್ವರೂಪವೆಂದೂ ಹೇಳಲಾಗಿತ್ತಷ್ಟೆ ! ಈಗ ಅಂತಹ ಚಿದ್ರೂಪನಾದ ಆತ್ಮನೇ ಅವಸ್ಥಾತ್ರಯಾತೀತನಾದ, ಎಲ್ಲ ಅವಸ್ಥೆಗಳಲ್ಲಿಯೂ ಹಾಸುಹೊಕ್ಕಾಗಿರುವ ಆತ್ಮಸ್ವರೂಪವೆಂದು ಹೇಳುವುದರ ಮೂಲಕ ಬ್ರಹ್ಮ ಮತ್ತು ಆತ್ಮಗಳ ಸಂಬಂಧವನ್ನು ಇದು ಸ್ಪಷ್ಟಪಡಿಸುತ್ತದೆ. ಎಚ್ಚರ, ಸ್ವಪ್ನ ಮತ್ತು ಸುಷುಪ್ತಿಗಳೆಂಬ ಮೂರು ಅವಸ್ಥೆಗಳು ಸರ್ವರಿಗೂ ಸಾಧಾರಣವಾದುದರಿಂದ ಅವು ಎಲ್ಲರ ಅನುಭವಗೋಚರವಾದವುಗಳು. ಶ್ರೀಗಳವರು

ಅಭಿಪ್ರಾಯಪಡುವಂತೆ ಪ್ರಪಂಚವು ನಮ್ಮ ಹೊರಗೆ ಇರುವುದೆಂದೂ, ನಾವು ಅದರಲ್ಲಿ ಎಚ್ಚರವೇ ಮುಂತಾದ ಅವಸ್ಥಾತ್ರಯವನ್ನು ಅನುಭವಿಸುತ್ತಿರುವೆವೆಂದೂ ಇಟ್ಟುಕೊಂಡು ಅವಸ್ಥಾತ್ರಯವನ್ನು ಪರೀಕ್ಷಿಸಿದರೆ, ದೇಹಾದ್ಯತಿರಿಕ್ತವಾದ ಆತ್ಮನ ಸಿದ್ಧಿಯಾದರೂ ಅತ್ಮೈಕತ್ವವು ಸಿದ್ಧಿಸುವುದಿಲ್ಲ.

ಒಬ್ಬನೇ ಆತ್ಮನು ವಿಶ್ವ, ತೇಜಸ ಮತ್ತು ಪ್ರಾಜ್ಞರಾಗಿ ಕಾಣುತ್ತಿರುವರೆಂದು ಅರಿತುಕೊಂಡರೆ ಆ ದೃಷ್ಟಿಯಿಂದ 'ಅಯಮಾತ್ಮಾ ಬ್ರಹ್ಮ' ಎಂಬುದು ಆತ್ಮೈಕತ್ವದ ಹಾದಿಯನ್ನು ತೋರಿಸಿಕೊಡಲು ನೆರವಾಗುತ್ತದೆ. ಹೊರಗೆ ತೋರುವ ವಸ್ತುಗಳೆಲ್ಲವೂ ತುರೀಯದಲ್ಲಿ ಕಲ್ಪಿತವಾಗುವುದರಿಂದ ಪರಮಾರ್ಥವಾಗಿ ಅದೊಂದೇ ಎಲ್ಲವೂ ಆಗಿರುತ್ತದೆ.

3. **ತತ್ತ್ವಮಸಿ:** ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಈ ಮಹಾವಾಕ್ಯವು ಈ ಉಪನಿಷತ್ತಿನ ಆರನೆಯ ಖಂಡವನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿರುವುದರಿಂದ ಉಳಿದ ಮಹಾವಾಕ್ಯಗಳಿಗಿಂತ ಇದು ಹೆಚ್ಚು ಮಹತ್ತ್ವವಾದುದೆಂಬುದು ಸ್ಪಷ್ಟವಾಗುತ್ತದೆ. ಹಿಂದಿನ ಎರಡು ಮಹಾವಾಕ್ಯಗಳೂ ಬ್ರಹ್ಮಾತ್ಮೈಕ್ಯವನ್ನು ಬೋಧಿಸಿದರೂ ಅವು ಕೇವಲ ತತ್ತ್ವವನ್ನು ಹೇಳುವುದರಲ್ಲಿ ಪರ್ಯವಸಾನವಾಗಿವೆಯೇ ಹೊರತು, ತತ್ತ್ವಬೋಧಕಗಳಾಗಿಲ್ಲ. ಈ ವಾಕ್ಯಗಳು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ, ಗುರು ಮುಖೇನ ಉಪದಿಷ್ಟವಾದ ಹೊರತು, ಸಾಧನೆಯು ಸಿದ್ಧಿಯಲ್ಲಿ ಪರ್ಯವಸಾನವಾಗುವುದಿಲ್ಲ. ಅಚಾರ್ಯರೇ ತಮ್ಮ ಭಾಷ್ಯದಲ್ಲಿ ಸರ್ವವೇದಾಂತವಿದನಾಗಿದ್ದರೂ ಗುರುವಿಲ್ಲದವನು 'ಮೂರ್ಖವದುಪೇಕ್ಷಣೀಯಃ' ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸಿದ್ಧಾಂತವು ದೃಢಪಡಬೇಕಾದರೆ ಅನುಭವಿಗಳಾದ ಗುರುಗಳಿಂದ ಶ್ರವಣವಾಗಬೇಕು. ನಂತರ ಶಿಷ್ಯನು ಅದನ್ನು ಮನನ ಮಾಡಬೇಕು. ಕೊನೆಯಲ್ಲಿ ನಿದಿಧ್ಯಾಸನದ ಮೂಲಕ ಅನುಭವದಲ್ಲಿ ನೆಲೆಗೊಳ್ಳಬೇಕು.

'ತತ್ತ್ವಮಸಿ' ಎಂಬ ಈ ಮಹಾವಾಕ್ಯವು ಈ ಎಲ್ಲ ಭಾಗಗಳನ್ನು ಒಳಗೊಂಡಿದೆ. ಶ್ವೇತಕೇತುವು ಗುರುಕುಲದಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ತಂದೆಯ ಬಳಿಗೆ ಬಂದ ನಂತರ ತಂದೆಯು ಅವನಿಗೆ ಈ ವಾಕ್ಯದ ಮೂಲಕ ಎಲ್ಲ ವಿದ್ಯೆಗಳ ಪರಮಪ್ರಯೋಜನವಾದ ಬ್ರಹ್ಮಾತ್ಮೈಕ್ಯವನ್ನು ಬೋಧಿಸಿರುತ್ತಾನೆ. ಇಲ್ಲಿ ಶಿಷ್ಯನು ಬ್ರಹ್ಮ ವಿದ್ಯೆಯನ್ನು ಪಡೆಯಲು ಯೋಗ್ಯನಾದವನು. ಗುರುವು ಅನುಭವಿಯಾದ ಮಹರ್ಷಿಯು ಇಂತಹ ಗುರುಶಿಷ್ಯಸಮಾಗಮದಲ್ಲಿ ಈ ಮಹಾವಾಕ್ಯವನ್ನು ಬೋಧಿಸಲಾಗಿದೆ. ಇದಲ್ಲದೆ ಶಿಷ್ಯನಿಗೆ ಮನದಟ್ಟಾಗುವಂತೆ ವಿವಿಧ ದೃಷ್ಟಾನ್ತಗಳ ಮೂಲಕ ಒಂಬತ್ತು ಸಲ ಉಪದೇಶವನ್ನು ಪುನರಾವರ್ತಿಸಿ ಮನನಕ್ಕೆ ಬೇಕಾದ ವಾತಾವರಣವನ್ನು ಕಲ್ಪಿಸಲಾಗಿದೆ.

'ತತ್ತ್ವಮಸಿ' ಮಹಾವಾಕ್ಯದಲ್ಲಿರುವ 'ತತ್ತ', 'ತ್ವಮ್' ಮತ್ತು 'ಅಸಿ' ಎಂಬ ಪದಗಳು ಪರಮಾತ್ಮ–ಜೀವಾತ್ಮಗಳ ಐಕ್ಯತೆಯನ್ನೂ, ಮತ್ತು ಎರಡನ್ನೂ ವಾಚಿಕವಾಗಿ ನಿರ್ದೇಶಿಸುವುದರ ಮೂಲಕ ಬೋಧಿಸಿರುವುದು ಇದರ ಮತ್ತೊಂದು ವಿಶೇಷವು

ಈ ವಾಕ್ಯದಲ್ಲಿರುವ ಪದಗಳು ನೇರವಾದ ಅರ್ಥದಲ್ಲಿ ಹೊಂದುವುದಿಲ್ಲ. 'ನೀನು' ಎಂದು

ಜೀವಾತ್ಮನನ್ನು ಹೇಳಿದರೆ ಸಂಸಾರಿತ್ವಾದಿಗುಣಗಳು ಪ್ರದಾನವಾಗುತ್ತವೆ. ಇವು ಪರಮಾತ್ಮನಲ್ಲಿ ಹೊಂದುವುದಿಲ್ಲ. ಹಾಗೆಯೇ ಪರಮಾತ್ಮನ ನಿತ್ಯ ನಿರಂಜನತ್ವಾದಿಗುಣಗಳು ಈ ಜೀವಾತ್ಮನಲ್ಲಿ ಇಲ್ಲ. ಆದ್ದರಿಂದ ಇದರಲ್ಲಿ ತಾರ್ಕಿಕರ 'ಲಕ್ಷಣಾ' ಎಂಬ ವೃತ್ತಿಯನ್ನು ಬಳಸಿ ವಿರೋಧಪರಿಹಾರ ಮಾಡುವ ವಿಧಾನವು ವಿದ್ವಾಂಸರಿಗೆ ಅತಿ ಪ್ರಿಯವಾದುದಾಗಿದೆ. ಈ ವಾಕ್ಯವಿವರಣೆಯನ್ನು ಮುಂದಿನ ಅದ್ವೈತಗ್ರಂಥಗಳು ವಿಸ್ತಾರವಾಗಿ ಸ್ವೀಕರಿಸಿ, ವಾಕ್ಯದ ಮಹತ್ತ್ವವನ್ನು ಎತ್ತಿ ಹಿಡಿದಿವೆ. ಹೀಗೆ ಈ ಮಹಾವಾಕ್ಯವು ಶಿಷ್ಯನ ಮನಸ್ಸಿಗೆ ಮುಟ್ಟುವಂತೆ, ಅವನಿಗೆ ವಿಚಾರಮಾಡಲು ಅವಕಾಶವನ್ನು ಕಲ್ಪಿಸಿ, ಅದ್ವೈತಾನುಭವಕ್ಕೆ ಮುಂದಿನ ಹೆಜ್ಜೆಯನ್ನು ಇಡುತ್ತದೆ. 'ನೀನು ಪರಮಾತ್ಮನೇ ಆಗಿದ್ದೀಯೆ' ಎಂಬುದು ಬ್ರಹ್ಮಾತ್ಮೈಕ್ಯವು ತ್ರೈಕಾಲಿಕ ಸತ್ಯವೆಂಬುದನ್ನು ತೋರಿಸುವುದು ಈ ವಾಕ್ಯದ ವಿಶೇಷ.

4. **ಅಹಂ ಬ್ರಹ್ಮಾಸ್ಮಿ:** ಶುಕ್ಲಯಜುರ್ವೇದಾಂತರ್ಗತವಾದ ಬೃಹದಾರಣ್ಯಕೋಪನಿಷತ್ತಿನಲ್ಲಿ (1–4–10) ಈ ಮಹಾವಾಕ್ಯವನ್ನು ಕಾಣುತ್ತೇವೆ. ಋಷಿ ವಾಮದೇವನು ತಾನು ಬ್ರಹ್ಮಾತ್ಮೈಕ್ಯಾನುಭವವನ್ನು ಪಡೆದು ಅದನ್ನು ಈ ರೀತಿ ಉದ್ಗಾರದ ಮೂಲಕ ಪ್ರಕಟಪಡಿಸಿರುತ್ತಾನೆ. ಋಷಿ ವಾಮದೇವನಂತಹ ವರಿಗೆ ಮಾತ್ರ ಇಂತಹ ಅನುಭವ ಸಾಧ್ಯವೆಂದೇನೂ ಭಾವಿಸಬೇಕಾಗಿಲ್ಲವೆಂದೂ. ಅವರವರ ಆತ್ಮವನ್ನು ಕಂಡುಕೊಳ್ಳಲು ಪ್ರತಿಯೊಬ್ಬರಿಗೂ ಹಕ್ಕಿರುವುದಾಗಿಯೇ ಹೇಳಿರುವ ಆಚಾರ್ಯರ ಮಾತನ್ನು ಸ್ವಾಮೀಜಿಯವರು ಪುಷ್ಟೀಕರಿಸಿರುತ್ತಾರೆ. ಅದಕ್ಕೆ ತಕ್ಕಂತಹ ಶ್ರದ್ಧೆ, ಮತ್ತು ಧೃಢತೆಯು ಅವಶ್ಯಕವಷ್ಟೆ!

ಹಿಂದಿನ ಮಹಾವಾಕ್ಯಗಳನ್ನು ಗಮನಿಸಿದರೆ ಕ್ರಮವಾಗಿ ನಮ್ಮಿಂದ ಹೊರಗೆ ಎಲ್ಲಿಯೋ ಇರಬಹುದೆಂದು ಭಾವಿಸಲಾಗಿರುವ ಪರಮಾತ್ಮ ಸ್ವರೂಪವನ್ನು ನಿಧಾನವಾಗಿ ಹತ್ತಿರಕ್ಕೆ ತಂದು, ನೀನೇ, ಅದಾಗಿದ್ದೀಯೆಂದು ಗುರುಮುಖೇನ ಶ್ರವಣಮನನಗಳನ್ನು ಮಾಡಿಸಿ, ಕೊನೆಗೆ ತಾನೇ ಬ್ರಹ್ಮನೆಂಬ ಅದ್ವೈತಾನುಭವವನ್ನು ಕಂಡುಕೊಳ್ಳುವ ಈ ವಾಕ್ಯದೊಂದಿಗೆ ಅನ್ವೇಷಣೆ ಅನುಭವದಲ್ಲಿ ಪರ್ಯವಸಾನವಾಗುವುದನ್ನು ಕಾಣುತ್ತೇವೆ. ಸರಿಯಾದ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದರೆ ಈಗಲೇ, ಇಲ್ಲಿಯೇ ಈ ಬ್ರಹ್ಮಾತ್ಮಭಾವವನ್ನು ಹೊಂದಬಹುದೆಂದು ಶ್ರುತಿ ಸಾರುತ್ತದೆ. ಗುರುಗಳ ಕೃಪೆಯಿಂದ ಇಂತಹ ಸಾಮರ್ಥ್ಯ ನಮ್ಮದಾಗಲೆಂದು ಪ್ರಾರ್ಥಿಸೋಣ.

* * * * *

ಕರ್ಮಯೋಗದ ಮರ್ಮಗಳು

1. ನಿಸ್ಸಂಗ, ದ್ವಂದ್ವ ಪ್ರಹಾಣ, ಸಮತ್ವ, ಈಶ್ವರಾರಾಧನೆ ಮೊದಲಾದುವೆಲ್ಲವೂ ಇದ್ದರೆ ಕರ್ಮವು ಕರ್ಮಯೋಗವಾಗುತ್ತದೆ. ಇಲ್ಲದಿದ್ದರೆ ಕರ್ಮಯೋಗವಾಗುವುದಿಲ್ಲ.
2. ಕರ್ಮಗಳನ್ನು ಬಿಡುವದಕ್ಕೆ ಎರಡು ಉಪಾಯವಿದೆ. ಒಂದು, ನಾನು ಏನೂ ಮಾಡುವುದೇ ಇಲ್ಲ, ಅಥವಾ ಪರಮಾತ್ಮನೇ ಎಲ್ಲಾ ಮಾಡಿಸುತ್ತಾನೆ ಎಂದರಿಯುವದು.

– ಶ್ರೀ ಸಚ್ಚಿದಾನಂದವಾಣಿ

ಶಾಂಕರ ಪ್ರಸ್ಥಾನಕ್ಕೆ ಶ್ರೀಶ್ರೀಗಳವರ ವಿಶೇಷ ಕೊಡುಗೆ

– ವೇ॥ ಬ್ರ॥ ಶ್ರೀ ಮ.ರಾ. ಕೇಶವಅವಧಾನಿ
ಮತ್ತೂರು, ಶಿವಮೊಗ್ಗ

ಪರಮಪೂಜ್ಯರಾದ ಸದ್ಗುರು ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ತಮ್ಮ ಜೀವಿತಾವಧಿಯನ್ನೆಲ್ಲ ಶ್ರೀ ಶಂಕರಾಚಾರ್ಯರ ಭಾಷ್ಯಗ್ರಂಥಗಳ ಅಧ್ಯಯನ – ಅಧ್ಯಾಪನ – ಪ್ರಚಾರ ಗಳಿಗಾಗಿಯೇ ಮುಡುಪಾಗಿಸಿದರು. ಅವರು ಪ್ರತಿಯೊಂದು ಬಾರಿಯೂ ಪ್ರತಿ ಲೇಖನದಲ್ಲಿಯೂ 'ಯಾರಿಗೆ ಶ್ರೀ ಶಂಕರ ಭಗವತ್ಪಾದರಲ್ಲಿ ಪೂಜ್ಯಬುದ್ಧಿಯಿರುವದೊ, ಅವರ ಪ್ರಸಾದದಿಂದ ವೇದಾಂತದ ರಹಸ್ಯವು ಮನದಟ್ಟಾಗಿ ಪರಮಪರುಷಾರ್ಥಕ್ಕೆ ಮಾರ್ಗವು. ಅವಶ್ಯವಾಗಿ ದೊರೆಯುವದು ಎಂಬ ಅಚಲ ಶ್ರದ್ಧೆಯಿರುವದೊ, ಅಂಥ ಜಿಜ್ಞಾಸುಗಳಿಗಾಗಿ ನಾನು ಗ್ರಂಥಗಳನ್ನು ಬರೆದಿರುತ್ತೇನೆ ಎಂದಿರುತ್ತಾರೆ. ಅವರ ಪ್ರತಿಯೊಂದು ಗ್ರಂಥದಲ್ಲಿಯೂ ಶ್ರೀ ಶಂಕರಭಗವತ್ಪಾದರ ಚರಣಸ್ಮರಣೆಯಿಂದಲೇ ವೇದಾಂತಗಳ ಪರಿಚಯವು ನನಗೆ ಆಗಿರುತ್ತದೆ – ಎಂದು ವಿನಮ್ರವಾಗಿ ತಿಳಿಸಿರುತ್ತಾರೆ.

ಗುರುಗಳು ಭಾಷ್ಯಾಧ್ಯಯನ ಆಳವಾಗಿ ಮಾಡಿದಾಗ ಅವರಿಗೆ ಮುಖ್ಯವಾಗಿ ತಿಳಿದುಬಂದ ವಿಚಾರವೇನೆಂದರೆ ಭಾಷ್ಯವ್ಯಾಖ್ಯಾನಕಾರರಿಗೂ ಭಾಷ್ಯಕಾರರಿಗೂ ಅನೇಕ ವಿಷಯಗಳಲ್ಲಿ ಅಭಿಪ್ರಾಯ ಭೇದಗಳಿವೆ. ವ್ಯಾಖ್ಯಾನಕಾರರು ಭಾಷ್ಯಾಭಿಪ್ರಾಯಕ್ಕಿಂತ ಬೇರೆಯಾಗಿ ತಮ್ಮದೇ ಬೇರೊಂದು ಪ್ರಕ್ರಿಯೆಯನ್ನು ರಚಿಸಿದ್ದಾರೆ. ಅಲ್ಲದೆ ಅನೇಕ ಮುಖ್ಯವಿಚಾರಗಳಲ್ಲಿ ಭಾಷ್ಯ ಮತ್ತು ವ್ಯಾಖ್ಯಾನಗಳ ಪ್ರಕ್ರಿಯೆಯೇ ಬೇರೆಬೇರೆಯಾಗಿದೆ. ಇವುಗಳಲ್ಲಿ ಮೂಲಾವಿದ್ಯಾವಿಚಾರವೂ ಪ್ರಧಾನವಾಗಿರುತ್ತದೆ ಎಂಬುದಾಗಿದೆ.

ಪೂಜ್ಯ ಭಾಷ್ಯಕಾರರು ಅವಿದ್ಯೆಯ ಬಗ್ಗೆ ಪೂರ್ಣವಾಗಿ ವಿವರವಾಗಿ ಬ್ರಹ್ಮಸೂತ್ರಗಳ ಉಪೋದ್ಘಾತ ಭಾಷ್ಯದಲ್ಲಿ ಬಹಳ ಚೆನ್ನಾಗಿ ತಿಳಿಸಿರುತ್ತಾರೆ. ನಾವು ಸಂಗ್ರಹವಾಗಿ ಈ ಬಗ್ಗೆ ನೋಡುವದಾದರೆ ಆತ್ಮನು ವಿಷಯಿಯು, ಚೇತನನು, ಸತ್ಯವಾಗಿರುವನು. ಅನಾತ್ಮವು ವಿಷಯವಾಗಿರುವದು, ಜಡವು, ಅನೃತವಾಗಿರುವದು. ಜನರು ಈ ಆತ್ಮ, ಅನಾತ್ಮ, ಇವೆರಡನ್ನೂ ಒಂದನ್ನೊಂದೆಂದು ತಿಳಿಯುತ್ತಿದ್ದಾರೆ. ನಿಜವಾಗಿರುವ ಆತ್ಮನನ್ನೂ ಹುಸಿಯಾಗಿರುವ ಅನಾತ್ಮವನ್ನೂ ಒಂದನ್ನೊಂದೆಂದು ತಿಳಿದಿರುವದಲ್ಲದೆ ಅವುಗಳಲ್ಲಿ ಒಂದರ ಧರ್ಮವನ್ನು ಇನ್ನೊಂದರ ಧರ್ಮವೆಂದು ತಿಳಿಯುತ್ತಿರುತ್ತಾರೆ. ಈ ತಪ್ಪುತಿಳಿವಳಿಕೆಯೇ ಅಧ್ಯಾಸವು. ಇದೇ ಅವಿದ್ಯೆಯು.

ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿಃ ಇತ್ಯವೋ ಚಾಮ – ಬ್ರಹ್ಮಸೂತ್ರ ಭಾಷ್ಯ.

ಎಂಬ ವಾಕ್ಯದಲ್ಲಿ ಅದಲ್ಲದ್ದನ್ನು ಅದೆಂದು ತಿಳಿಯುವದೇ ಅಧ್ಯಾಸವು ಎಂದೇ ಹೇಳಿರುತ್ತೇವೆ ಎಂದು ಭಾಷ್ಯಕಾರರು ತಿಳಿಸಿರುತ್ತಾರೆ. ಆದ್ದರಿಂದಲೇ ಮುಖ್ಯಾರ್ಥದಲ್ಲಿ ತಪ್ಪುತಿಳಿವಳಿಕೆಯನ್ನೇ ಅಧ್ಯಾಸ ಅವಿದ್ಯಾ ಎಂಬ ಶಬ್ದದಿಂದ ಕರೆದಿರುತ್ತಾರೆ. ಅಧ್ಯಾರೋಪ, ಭ್ರಾಂತಿ, ಮೋಹ, ವಿಪರ್ಯಾಸ, ವಿಪರ್ಯಯ, ವಿಪರೀತ ಪ್ರತ್ಯಯ, ವಿಪರೀತ ಜ್ಞಾನ ಅನ್ಯಾಥಾ ಜ್ಞಾನ, ಇತ್ಯಾದಿ ಶಬ್ದಗಳಿಂದಲೂ ಈ ಅಧ್ಯಾಸವನ್ನೇ ಕರೆದಿರುತ್ತಾರೆ

ಆದರೆ ವ್ಯಾಖ್ಯಾನ ಗ್ರಂಥಗಳಲ್ಲಿ ಈ ಅವಿದ್ಯಾವಿಚಾರವು ಬೇರೊಂದು ರೀತಿಯಲ್ಲಿ ಪ್ರತಿಪಾದಿತ ವಾಗಿರುತ್ತದೆ. "ಆತ್ಮ ಚೈತನ್ಯದಲ್ಲಿ ಅನಾದಿಯಾದ ಅನಿರ್ವಾಚ್ಯವಾದ ಅವಿದ್ಯೆಯೊಂದಿರುವದು. ಅದು

ಅನಾದಿಯಾದ ಚೈತನ್ಯವನ್ನು ಆಶ್ರಯಿಸಿರುವದರಿಂದ ಇದು ಅನಾದಿಯು. ಇದು ಸತ್ತೂ ಅಲ್ಲದೆ, ಅಸತ್ತೂ, ಅಲ್ಲದ್ದರಿಂದ ಅನಿರ್ವಚನೀಯವು. ಇದು ಮುಸುಕಿರವದರಿಂದಲೇ ಆತ್ಮನ ಸ್ವರೂಪವು ಬೆಳಗದೆ ಇರುತ್ತದೆ. ಪ್ರಪಂಚವು ತೋರುವದಕ್ಕೂ ಇದೇ ಕಾರಣವು. ಏಕೆಂದರೆ ಪ್ರಪಂಚವು ಈ ಮೂಲಾವಿದ್ಯೆಯ ಪರಿಣಾಮವು.

ಭಗವದ್ಗೀತಾ ಭಾಷ್ಯದಲ್ಲಿ ಅವಿದ್ಯೆಯ ಸ್ವಭಾವವನ್ನು ತಿಳಿಸುವಾಗ ಆಚಾರ್ಯರು ಈ ರೀತಿ ತಿಳಿಸಿದ್ದಾರೆ. **"**ತಾಮಸೋ ಹಿ ಪ್ರತ್ಯಯಃ ಆವರಣಾತ್ಮಕತ್ವಾತ್ ಅವಿದ್ಯಾ ವಿಪರೀತಗ್ರಾಹಕಃ ಸಂಶಯೋಪಸ್ಥಾಪಕಃ ಅಗ್ರಹಣಾತ್ಮಕೋ ವಾ । ವಿವೇಕಪ್ರಕಾಶಾಭಾವೇ ತದಭಾವಾತ್ । ತಾಮಸೇ ಚ ಆವರಣಾತ್ಮಕೇ ತಿಮಿರಾದಿದೋಷೇ ಸತಿ ಅಗ್ರಹಣಾದೇಃ ಅವಿದ್ಯಾತ್ರಯಸ್ಯ ಉಪಲಬ್ಧೇಃ**"** (ಗೀ.ಭಾ. 13–2).

ಅವಿದ್ಯೆಯು ಮುಸುಕಿನಂತಿರುವದರಿಂದ ತಾಮಸರೂಪವಾದ ಪ್ರತ್ಯಯವು. ಈ ಅವಿದ್ಯೆಯು ತಪ್ಪಾಗಿ ತಿಳಿಸುವದು, ಸಂಶವನ್ನುಂಟುಮಾಡುವದು, ತಿಳಿಯದಿರುವಂತೆ ಮಾಡುವದು – ಹೀಗೆ ಮೂರು ಬಗೆಯಾಗಿರುತ್ತದೆ. ಅದು ಹೇಗೆಂದರೆ ವಿವೇಕದ ಬೆಳಕು ಬಂದರೆ ಈ ಅವಿದ್ಯೆಯು ಇರುವದಿಲ್ಲ. ಮುಸುಕಿನಂತಿರುವ ಕಣ್ಣುಪರೆಯೇ ಮುಂತಾದ ತಾಮಸದೋಷಗಳಿದ್ದಾಗಲೇ ಅಗ್ರಹಣ ಅಂದರೆ ಅರಿಯದಿರುವದು ಮುಂತಾದ ರೂಪದ ಅವಿದ್ಯಾತ್ರಯವು ಕಂಡುಬರುತ್ತದೆ.

ಇಲ್ಲಿ ಭಾಷ್ಯಕಾರರು ತಪ್ಪುತಿಳಿವಳಿಕೆ, ಸಂಶಯಜ್ಞಾನ, ಅಜ್ಞಾನ – ಈ ಮೂರನ್ನೂ ಅಜ್ಞಾನ, ಅವಿದ್ಯೆಯೆಂದು ಕರೆದಿರುತ್ತಾರೆ. ಇದಕ್ಕಿಂತ ಬೇರೆಯಾದ ಅವಿದ್ಯೆಯನ್ನು ತಮ್ಮ ಭಾಷ್ಯದಲ್ಲೆಲ್ಲೂ ಹೇಳಿರುವದಿಲ್ಲ. ಅಷ್ಟೇ ಅಲ್ಲದೆ ಭಾಷ್ಯಕಾರರು ಪ್ರಧಾನವಾಗಿ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸ ತಪ್ಪುತಿಳಿವಳಿಕೆಯನ್ನೇ ಪ್ರಧಾನವಾಗಿ ಅವಿದ್ಯೆಯೆಂದು ಹೇಳಿರುತ್ತಾರೆ. ಲೋಕದಲ್ಲಿ ಅಜ್ಞಾನ–ಗೊತ್ತಿಲ್ಲ – ಇದು ಸ್ವತಂತ್ರವಾಗಿರಬಹುದು. ಎಲ್ಲೆಲ್ಲಿ ಅಜ್ಞಾನವಿರುವದೊ ಅಲ್ಲೆಲ್ಲ ತಪ್ಪುತಿಳಿವಳಿಕೆಯಿರಬೇಕೆಂಬ ನಿಯಮವೇನೂ ಇಲ್ಲ. ಹಾಗೂ ಲೋಕದಲ್ಲಿ ಒಂದು ಅಜ್ಞಾನದಲ್ಲಿ ಅನೇಕ ತಪ್ಪುತಿಳಿವಳಿಕೆಗಳಿರುವಾಗ ಒಂದು ತಪ್ಪುತಿಳಿವಳಿಕೆ ಹೋದ ಮಾತ್ರಕ್ಕೆ ವಸ್ತುಜ್ಞಾನವಾಗಬೇಕೆಂಬ ನಿಯಮವಿಲ್ಲ. ಉದಾಹರಣೆಗೆ ನೀರಿನ ಕೋಡಿಯನ್ನು ಹಾವೆಂದು ಬಗೆಯಬಹುದು, ನೆಲದ ಬಿರುಕೆಂದು ಬಗೆಯಬಹುದು. ಒಂದು ದೊಡ್ಡ ಹೂವಿನ ಮಾಲೆಯೆಂದು ಬಗೆಯಬಹುದು. ಹೀಗಿರುವಾಗ ಇದು ನೆಲದ ಬಿರುಕಲ್ಲ ಎಂದು ತಿಳಿದ ಮಾತ್ರಕ್ಕೆ ಅದರ ನಿಜವಾದ ಜ್ಞಾನವಾಗುವುದಿಲ್ಲ. ಇದು ದೊಡ್ಡಹೂಮಾಲೆಯಲ್ಲ ಎಂದು ತಿಳಿದ ಮಾತ್ರಕ್ಕೆ ನಿಜವಾದ ಜ್ಞಾನವಾಗುವುದಿಲ್ಲ. ಅದರ ಬಗ್ಗೆ ಇರುವ ಅಜ್ಞಾನವು ಪೂರ್ಣವಾಗಿ ಹೋದಾಗ ವಸ್ತುಜ್ಞಾನವಾಗುತ್ತದೆ. ಆದರೆ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವು ಈ ಬಗೆಯದ್ದಲ್ಲ. ಏಕೆಂದರೆ ಆತ್ಮನೆಂದರೆ ತಾನೇ, ತನ್ನ ಬಗ್ಗೆ ತನಗೆ ಅಜ್ಞಾನವಿದೆ ಎಂಬುದು ಎಂದಿಗೂ ಹೊಂದುವದಿಲ್ಲ. ಪ್ರತಿಯೊಬ್ಬನೂ ತನ್ನನ್ನು ಯಾವುದೊ ಒಂದು ರೀತಿಯಲ್ಲಿ ಅನಾತ್ಮದೊಡನೆ ಜೋಡಿಸಿಕೊಂಡು ತಪ್ಪಾಗಿಯೇ ತಿಳಿದಿರುತ್ತಾನೆ. ಹಾಗಾಗಿ ಭಾಷ್ಯಕಾರರು 'ತಮೇತಮ್ ಏವಂಲಕ್ಷಣಮ್ ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ (ಬ್ರ.ಸೂ. ಭಾಷ್ಯ, ಉಪೋದ್ಘಾತ) – ಈ 'ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸಸರೂಪವಾದ ತಪ್ಪುತಿಳಿವಳಿಕೆಯನ್ನೇ ಪಂಡಿತರ. ಅವಿದ್ಯಾ ಶಬ್ದದಿಂದ ಕರೆಯುತ್ತಾರೆ' ಎಂದು ಹೇಳಿರುತ್ತಾರೆ. ಇನ್ನೊಂದು ಕಡೆ 'ದೇಹಾದಿಷು ಅನಾತ್ಮಸು ಆತ್ಮಬುದ್ಧಿಃ ಅವಿದ್ಯಾ' ಬ್ರ.ಸೂ. ಭಾಷ್ಯ ತಾನಲ್ಲದ ದೇಹೇಂದ್ರಿಯಾದಿಗಳಲ್ಲಿ, ತಾನೆಂಬ ತಿಳಿವೇ ಅವಿದ್ಯಾ ಎಂದು ಹೇಳಿರುತ್ತಾರೆ.

ಇನ್ನೊಂದು ಕಡೆ 'ದೇಹಾದಿಷು ಅನಾತ್ಮಸು ಆತ್ಮಬುದ್ಧಿಃ ಅವಿದ್ಯಾ' ಬ್ರ.ಸೂ. ಭಾಷ್ಯ ತಾನಲ್ಲದ ದೇಹೇಂದ್ರಿಯಾದಿಗಳಲ್ಲಿ ತಾನೆಂಬ ತಿಳಿವೇ ಅವಿದ್ಯಾ ಎಂದು ಹೇಳಿರುತ್ತಾರೆ.

ಆದರೆ ವ್ಯಾಖ್ಯಾನಕಾರರು ಅವಿದ್ಯೆಯೆಂದರೆ ತಿಳಿಯದೆ ಇರುವದೆಂಬ ಅಗ್ರಹಣರೂಪದ ಅಭಾವವಲ್ಲ. ತಪ್ಪಾಗಿ ತಿಳಿಯುವ ಮಿಥ್ಯಾಜ್ಞಾನ ರೂಪವೂ ಅಲ್ಲ. ಅದರ ಸಂಸ್ಕಾರವೂ ಅಲ್ಲ. ಅದು ಜ್ಞಾನವಿರೋಧಿಯಾದ ಭಾವರೂಪವಾದ ಅಜ್ಞಾನವು. ಸಕಲ ಸಂಸಾರಕ್ಕೂ ಇದೇ ಕಾರಣವಾಗಿರುತ್ತದೆ. ಇದು ಅವಸ್ಥಾತ್ರಯದಲ್ಲಿಯೂ ವಿಚ್ಛೇದವಿಲ್ಲದೆ ಮೋಕ್ಷವಾಗುವವರೆಗೂ ಇದ್ದುಕೊಂಡಿರುತ್ತದೆ. ಸುಷುಪ್ತಿಯಲ್ಲಿ ಇದು ವಿಕ್ಷೇಪ ಸಂಸ್ಕಾರದೊಡನೆ ಆತ್ಮನನ್ನು ಕವಿದುಕೊಂಡಿರುತ್ತದೆ. ಎಚ್ಚರದಲ್ಲಿ ಅಹಂಕಾರ ರೂಪವಾಗಿ ಪರಿಣಮಿಸುತ್ತದೆ. ಆತ್ಮಾನಾತ್ಮರುಗಳನ್ನು ಒಂದರಲ್ಲೊಂದನ್ನು ಕಲಬೆರಕ ಮಾಡಿ ತಿಳಿಯುವದೆಂಬ ಅಧ್ಯಾಸಕ್ಕೂ ಇದೇ ಉಪಾದಾನ ಕಾರಣವಾಗಿದೆ.

ಸದ್ಗುರುಗಳು ಈ ವಿಷಯದಲ್ಲಿ ಒಂದು ಆಕ್ಷೇಪವನ್ನೂ ಪರಿಹಾರವನ್ನೂ ಒಂದು ಲೇಖನದಲ್ಲಿ ಸಂಗ್ರಹವಾಗಿ ತಿಳಿಸಿರುತ್ತಾರೆ. "ಅಧ್ಯಾಸಕ್ಕೆ ದೇಹೇಂದ್ರಿಯಗಳುಬೇಕು. ಆದ್ದರಿಂದ ದೇಹೇಂದ್ರಿಯಗಳಿಗೆ ಕಾರಣವಾಗಿರುವ ಅವ್ಯಾಕೃತವು ಅಥವಾ ಮೂಲಾವಿದ್ಯೆಯು ಮೊದಲೇ ಇರಬೇಕಲ್ಲವೆ? ಆತ್ಮಾನಾತ್ಮ ವಿವೇಕದಿಂದಲೇ ಅಧ್ಯಾಸವು ಹೋಗಿಬಿಡುತ್ತದೆ; ಆದರೆ ಅನಾತ್ಮ ಮಿಥ್ಯಾತ್ಮವು ನಿಶ್ಚಿತವಾಗದೆ ಅದ್ವೈತವು ಸಿದ್ಧಿಯಾದೀತೆ?– ಎಂದು ಕೆಲವರು ಆಕ್ಷೇಪಿಸುತ್ತಾರೆ. ಆದರೆ ಆಚಾರ್ಯರು ತಿಳಿಸಿರುವಂತೆ ಅಧ್ಯಾಸಸ್ವರೂಪವನ್ನು ಮನದಂದರೆ – ಆತ್ಮ–ಅನಾತ್ಮ – ಎಂಬ ವಿವೇಕವೂ ಅಧ್ಯಾಸದ ಕಾರ್ಯವೇ ಆಗಿರುತ್ತದೆ. ಆತ್ಮನಲ್ಲಿ ಪ್ರಮಾತೃತ್ವವನ್ನೂ, ಪ್ರಮೇಯತ್ವವನ್ನೂ ಕಲ್ಪಿಸುವದೇ ಅಧ್ಯಾಸವು. ಹೀಗಿರುವಲ್ಲಿ ಆತ್ಮಾನಾತ್ಮವಿವೇಕವು ಅಧ್ಯಾಸಬಾಧಕವೆಂತಾದೀತು? ಸಮಸ್ತ ಲೌಕಿಕ ವೈದಿಕ ವ್ಯವಹಾರವೂ ಅಧ್ಯಾಸವೆಂಬ ಐಂದ್ರಜಾಲಿಕನ ಮಾಟವೇ ಆಗಿರುತ್ತದೆ. ಕಾರ್ಯಕಾರಣವೆಂಬ ವ್ಯವಹಾರವೂ ವ್ಯವಹಾರವೇ. ಆದ್ದರಿಂದ ಅದೂ ಅಧ್ಯಸ್ತವೇ ಆಗಿರುತ್ತದೆ. ಅಧ್ಯಾಸವು ಕಾಲದಲ್ಲಾಗುವ ಘಟನೆಯಲ್ಲ. ಕಾಲವೇ ಅಧ್ಯಾಸದ ಮರಿಯಾಗಿದೆಯೆಂಬುದನ್ನು ಇಲ್ಲಿ ಲಕ್ಷ್ಯದಲ್ಲಿಡಬೇಕು. ಆಗ ಆತ್ಮವೊಂದೇ ಸತ್ಯವು. ಅನಾತ್ಮವೆಲ್ಲವೂ ಅನೃತವು – ಇವುಗಳನ್ನು ಕಲೆಬೆರಸಿಕೊಂಡು ತಿಳಿಯುವದೇ ಅಧ್ಯಾಸವು ಎಂಬ ಘನತತ್ತ್ವವು ಮನಸ್ಸಿನಲ್ಲಿ ಮೂಡುವುದು." (ಶ್ರೀಶ್ರೀಗಳ ಲೇಖನಸಾರ)

ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ – ಎಂಬ ಭಾಷ್ಯವಾಕ್ಯವನ್ನು ವಿವರಿಸುವಾಗ ವ್ಯಾಖ್ಯಾನಕಾರರು 'ಅವಿದ್ಯಾಕಾರ್ಯತ್ವಾತ್' – ಮೂಲಾವಿದ್ಯೆಯು ಅಧ್ಯಾಸಕ್ಕೆ ಉಪಾದಾನ ಕಾರಣವಾದ್ದರಿಂದ ಕಾರ್ಯವಾದ ಅಧ್ಯಾಸವನ್ನು ಕಾರಣ ರೂಪದಿಂದ ಕರೆದಿರುತ್ತಾರೆ ಎಂದು ವಿವರಿಸಿದ್ದಾರೆ.

ಆದರೆ ಸದ್ಗುರುಗಳು ಈ ಅಭಿಪ್ರಾಯವನ್ನು ನಿರಾಕರಿಸುತ್ತಾ ಹೀಗೆ ಹೇಳುವರು: "ಶ್ರುತಿಯಲ್ಲಿ ಸೃಷ್ಟಿವಿಚಾರವು ಬಂದಿದೆಯಷ್ಟೆ! ಆದರೆ ಶ್ರುತಿಗೆ ಸೃಷ್ಟಿಯಲ್ಲಿ ತಾತ್ಪರ್ಯವಿಲ್ಲ, ಏಕೆಂದರೆ ಶ್ರುತಿಯು ಸೃಷ್ಟಿಯನ್ನು ಪರಮಾರ್ಥವಾಗಿ ಹೇಳುವುದಿಲ್ಲ ಎಂದು ಆಚಾರ್ಯರೂ ಪ್ರತಿಪಾದಿಸಿರುವ ಸಿದ್ಧಾಂತ. ಹೀಗಿರುವಲ್ಲಿ ಆಚಾರ್ಯರು ಕಾರ್ಯಕಾರಣ ಭಾವವನ್ನು ಒಪ್ಪಿಕೊಂಡು ಅಧ್ಯಾಸಕ್ಕೂ ಉಪಾದಾನ ಕಾರಣವನ್ನು ಹೇಳುವದಕ್ಕೆ ಹೊರಟಿರುತ್ತಾರೆಂದು ಕಲ್ಪಿಸುವದು ಹಾಸ್ಯಾಸ್ಪದವಾಗಿರುತ್ತದೆ."

ಭಾಷ್ಯಕಾರರು ಅಜ್ಞಾನವನ್ನು ಅಂತಃಕರಣ ಧರ್ಮವನ್ನಾಗಿಯೇ ಪ್ರತಿಪಾದಿಸಿರುತ್ತಾರೆ. ಅಲ್ಲದೆ ಅಧ್ಯಾಸವೆಂದರೆ ಕೇವಲ ತಪ್ಪುತಿಳಿವಳಿಕೆ ಮಾತ್ರ. ವಸ್ತುವಿನಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ತತ್ರೈವಂ ಸತಿ ಯತ್ರ ಯದಧ್ಯಾಸಃ ತತ್ಕೃತೇನ ದೋಷೇಣವಾ ಗುಣೇನ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ – ಬ್ರಹ್ಮಸೂತ್ರ ಭಾಷ್ಯ ಎಂಬಲ್ಲಿ ಅಜ್ಞಾನದಿಂದ ತಪ್ಪಾಗಿ ತಿಳಿದ ಮಾತ್ರಕ್ಕೆ ವಸ್ತುವಿನಲ್ಲಿ ಏನೂ ವ್ಯತ್ಯಾಸವಾಗುವದಿಲ್ಲ ಎಂದೇ ಸ್ಪಷ್ಟವಾಗಿಯೇ ಪ್ರತಿಪಾದಿಸಿರುತ್ತಾರೆ. ಸತ್ಯವಾದ ಆತ್ಮನನ್ನೂ ಅನೃತವಾದ ಅನಾತ್ಮವನ್ನೂ ಒಂದನ್ನೊಂದು ಹೇಗೆ ತಿಳಿಯಲು ಸಾಧ್ಯ ಎಂಬ ಆಕ್ಷೇಪಕ್ಕೆ ಇತರೇತರಾವಿವೇಕೇನ – ಸತ್ಯನಾದ ಆತ್ಮನಿಂದ ಅನೃತವಾದ ಅನಾತ್ಮಗಳನ್ನು ವಿಂಗಡಿಸಿ ತಿಳಿದುಕೊಳ್ಳದೆ, ಅನೃತವಾದ ಕಾರಣ. ಇಲ್ಲಿ ಭಾಷ್ಯಕಾರರು ಅಜ್ಞಾನವನ್ನು ಬಣ್ಣಿಸುವಾಗ ಅಹಮಿದಂ ಮಮೇದಂ ಇತಿ ನೈಸರ್ಗಿಕೋಽಯಂ ವ್ಯವಹಾರಃ" ತನ್ನನ್ನು ತಾನಲ್ಲದ ದೇಹಾದಿಗಳೆಂದೂ, ಅವುಗಳಿಗೆ ಸಂಬಂಧಪಟ್ಟುವಗಳನ್ನು ತನ್ನದೆಂದೂ ಪ್ರತಿಯೊಬ್ಬನೂ ಸ್ವಭಾವದಿಂದಲೇ ವ್ಯವಹರಿಸಿತ್ತಿರುತ್ತಾನೆ. ಸ್ವಾಭಾವಿಕ ಎಂದರೆ ಅವಿಚಾರಿತಸಿದ್ಧ, ಎಲ್ಲಿಯವರೆಗೆ ಬ್ರಹ್ಮಾತ್ಮಜ್ಞಾನವಾಗುವುದಿಲ್ಲವೋ, ಅಲ್ಲಿಯವರೆಗೆ ಇದು (ದೇಹಾದಿಗಳೇ 'ತಾನು' ಈ 'ತಾನು'ವಿಗೆ ಸಂಬಂಧಪಟ್ಟವುಗಳು 'ತನ್ನದು' ಎಂಬಿದು ಸರಿಯಾದ ತಿಳಿವಳಿಕೆಯೇ ಆಗಿರುತ್ತದೆ. ಯಾರಿಗೂ ಇದರಲ್ಲಿ ಯಾವ ದೋಷವೂ ಕಾಣುವುದಿಲ್ಲ.

ಅದನ್ನೇ ಪುನಃ ಮುಂದೆ ವಿವರಿಸುವಾಗ ನಾನು ದಪ್ಪನಾಗಿದ್ದೇನೆ, ತೆಳ್ಳಗಿದ್ದೇನೆ – ಇತ್ಯಾದಿ ದೇಹಧರ್ಮಾಧ್ಯಾಸ; ನಾನು ಕುರುಡ, ಕಿವುಡ – ಇತ್ಯಾದಿ ಇಂದ್ರಿಯಧರ್ಮಾಧ್ಯಾಸ; ನಾನು ಯೋಚಿಸುವೆನು, ನನಗೆ ಆಸೆಯಾಯಿತು – ಇತ್ಯಾದಿ ಮನೋಧರ್ಮಾಧ್ಯಾಸ; ನಾನು ಸುಖಿ, ದುಃಖಿ; ಇತ್ಯಾದಿ ಅಹಂಕಾರಧ್ಯಾಸ – ಹೀಗೆ ಅಧ್ಯಾಸವನ್ನು ಅನುಭವದಲ್ಲಿಯೇ ತೋರಿಸಿರುತ್ತಾರೆ.

ಮೂಲಾವಿದ್ಯಾವಾದಿಗಳ ಮತದಲ್ಲಿ – ಈ ಮಿಥ್ಯಾಜ್ಞಾನ, ಸಂಶಯಜ್ಞಾನ, ಅಜ್ಞಾನ – ಇವುಗಳಿಗೆ ಕಾರಣವಾದದ್ದು, ಮೂಲಾವಿದ್ಯೆ. ಅದನ್ನು ಕೇವಲ ಶ್ರದ್ಧೆಯಿಂದಲೇ ಒಪ್ಪಬೇಕು. ಈ ದೋಷ ಪರಿಹಾರಕ್ಕಾಗಿ ಅವರು ಈ ಮೂಲಾವಿದ್ಯೆಯನ್ನು ಪ್ರಮಾಣಗಳಿಂದ ಸಾಧಿಸಿರುವರು. ನಾನು ಅಜ್ಞಾನಿ (ಅಹಮಜ್ಞಃ) ಎಂಬ ಪ್ರತ್ಯಕ್ಷಾನುಭವ, ಪ್ರಮಾಣಜ್ಞಾನವು ಅಭಾವವ್ಯತಿರಿಕ್ತವಾದ ಒಂದು ಭಾವರೂಪವಾದ ಮುಸುಕನ್ನು ಹೋಗಲಾಡಿಸಬೇಕೆಂದು ದೀಪ ದೃಷ್ಟಾಂತದಿಂದ ನಿಶ್ಚಯಿಸುವ ಅನುಮಾನ ಪ್ರಮಾಣ, ಶುದ್ಧವಾದ ಬ್ರಹ್ಮದಲ್ಲಿ ಮಿಥ್ಯಾರೂಪವಾದ ಅಹಂಕಾರ ತೋರುವದಕ್ಕೆ, ಮಿಥ್ಯಾರೂಪವಾದ ಉಪಾದಾನಕಾರಣವಿಲ್ಲದೆ ಸಾಧ್ಯವಿಲ್ಲ ಎಂಬ ಅರ್ಥಾಪತ್ತಿ ಪ್ರಮಾಣ, ಅನೃತೇನ ಹಿ ಪ್ರತ್ಯೂಢಾಃ – ಸುಷುಪ್ತಿಯಲ್ಲಿ ಅನೃತವಾದದ್ದೊಂದು ಮುಸುಕಿಕೊಂಡಿರುವದರಿಂದ ಬ್ರಹ್ಮಸ್ವರೂಪನು ಹೊಳೆಯದೆ ಇರುವುದೆಂಬ ಶ್ರುತಿಪ್ರಮಾಣ – ಹೀಗೆ ಅನೇಕ ಪ್ರಮಾಣಗಳಿಂದ ಮೂಲಾವಿದ್ಯೆಯನ್ನು ಸಾಧಿಸಿರುತ್ತಾರೆ. ಪಂಚಪಾದಿಕಾಕಾರರೂ 'ಅವಶ್ಯಮೇಷ ಅಭ್ಯುಪಗಂತವ್ಯಾ' ಎಂಬಿಷ್ಟಾಗಿ ಮೂಲಾವಿದ್ಯೆಯನ್ನು ಎಲ್ಲರೂ ಒಪ್ಪಬೇಕು – ಎಂದು ಪ್ರತಿಪಾದಿಸಿರುತ್ತಾರೆ. ಇಷ್ಟು ಪ್ರಮಾಣಗಳಿಂದ ಸಿದ್ಧವಾಗುವದಾದರೆ ಅದು ಸತ್ಯವೆಂದೇ ಆಯಿತಲ್ಲ – ಎಂದರೆ ಪ್ರಮಾಣಗಳಿಂದ ಅದು ಅಭಾವವಲ್ಲ ಎಂದು ಮಾತ್ರ ಗೊತ್ತಾಗುತ್ತದೆ. ಅದು ಭಾವರೂಪವಾದ ಅಜ್ಞಾನ.

ಇಲ್ಲಿ ನಮಗೆ ಏನು ಪ್ರಪಂಚವು ತೋರುತ್ತಿದೆ – ಇದಕ್ಕೆ ಮೂಲ ಕಾರಣ ಮೂಲಾವಿದ್ಯೆ ಎಂಬುದು

ಇವರ ಮತ. ಆಚಾರ್ಯರು ಕಾರ್ಯಕಾರಣಗಳ ಅನನ್ಯತ್ವವನ್ನು ಆರಂಭಣಸೂತ್ರದಲ್ಲಿ ಪ್ರತಿಪಾದಿಸಿರುತ್ತಾರೆ. ಪ್ರಪಂಚವು ಮೂಲಾವಿದ್ಯೆಯ ಪರಿಣಾಮವಾದರೆ ಇದೆಲ್ಲವೂ ಮೂಲಾವಿದ್ಯೆಯೇ ಎಂದಾಗಬೇಕಾದೀತೇ ಹೊರತು, ಇದೆಲ್ಲವೂ ಅದ್ವಿತೀಯವಾದ ಪರಬ್ರಹ್ಮವೇ ಎಂದಾಗುವದಿಲ್ಲ.

ಆಚಾರ್ಯರು ಈ ಅಧ್ಯಾಸವೆಂಬ ಅವಿದ್ಯೆಯನ್ನಿಟ್ಟುಕೊಂಡೇ ಎಲ್ಲ ಪ್ರಮಾತೃಪ್ರಮಾಣಪ್ರಮೇಯ ವ್ಯವಹಾರವು ಬಂದಿರುತ್ತದೆ – ಎಂದು ಅನುಭವಾನುಸಾರಿಯಾಗಿ ತೋರಿಸಿರುತ್ತಾರೆ. ಹೀಗಿರುವಲ್ಲಿ ಯಾವ ಅಜ್ಞಾನದಿಂದ ಪ್ರಮಾತಾ ಎಂದು ತನ್ನನ್ನು ತಿಳಿಯುತ್ತಾನೊ, ಆ ಅವಿದ್ಯೆಯನ್ನು ಪ್ರಮಾಣಗಳಿಂದ ಸಿದ್ಧಪಡಿಸುವದು ಹೇಗೆ ಸರಿ? ಅಲ್ಲದೆ ನಮ್ಮ ಅಜ್ಞಾನ ಮಿಥ್ಯಾಜ್ಞಾನ, ಸಂಶಯಜ್ಞಾನ – ಇವು ಜ್ಞಾನವಿರೋಧಿಯಾದ್ದರಿಂದ ಬ್ರಹ್ಮಜ್ಞಾನದಿಂದ ತೊಲಗಬಹುದು. ಆದರೆ ಮೂಲಾವಿದ್ಯೆಯು ಹೇಗೆ ನಿವೃತ್ತಿಯಾಗುವುದು? ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ – ಕೊನೆಯಲ್ಲಿ ಈ ಮಾಯಾರೂಪ ಮೂಲಾವಿದ್ಯೆಯೂ ನಿವೃತ್ತಿಯಾಗುವುದು – ಎನ್ನುವದು ಕೇವಲ ಶ್ರದ್ಧೆಯಿಂದ ನಂಬಬೇಕಾದದ್ದೇ ಹೊರತು ಅನುಭವವೇದ್ಯವಾಗುವದಿಲ್ಲ.

ಹಾಗಾಗಿಯೇ ಶ್ರೀಶ್ರೀಗಳವರು ಮೂಲಾವಿದ್ಯಾವಾದವನ್ನು ನಿರಾಕರಿಸುವಾಗ ಆಚಾರ್ಯರು 'ಅನುಭವಾವಸಾನತ್ವಾತ್ ಬ್ರಹ್ಮಜ್ಞಾನಸ್ಯ' ಎಂದು ಪದೇ ಪದೇ ಈ ಬ್ರಹ್ಮಜ್ಞಾನವು ನಮಗೆ ಅನುಭವ ವೇದ್ಯವಾಗಿದೆ. ಹೇಗೆ ಪ್ರಮಾಣಗಳಿಂದ ಉಂಟಾಗುವ ಜ್ಞಾನವು ಲೋಕದಲ್ಲಿ ನಮಗೆ ಆ ವಸ್ತುವಿನ ಬಗ್ಗೆ ಇರುವ ಅಜ್ಞಾನವನ್ನು ಕಳೆದು ಪ್ರಮಾ–ಅನುಭವವನ್ನುಂಟುಮಾಡುವದೋ ಹಾಗೆಯೇ ವೇದಾಂತಜ್ಞಾನವೂ ಇಲ್ಲಿಯೇ ಅನುಭವಕ್ಕೆ ಬರುವದೇ ಆಗಿದೆ. ಆದರೆ ಈ ಮೂಲಾವಿದ್ಯಾವಾದದಿಂದಾಗಿ ವೇದಾಂತವೂ ಶ್ರದ್ಧೇಯ ಶಾಸ್ತ್ರಗಳ ಸಾಲಿಗೇ ಸೇರಬೇಕಾಗುವುದು. ಆದ್ದರಿಂದ ಭಾಷ್ಯಾಧ್ಯಯನವನ್ನು ನೇರಾಗಿ ಮಾಡಬೇಕು. ಭಾಷ್ಯಗಳಲ್ಲಿ ಸಂಶಯವುಂಟಾದಾಗ ಬೇರೊಂದು ಭಾಷ್ಯವನ್ನು ಅದಕ್ಕೆ ಸಂವಾದಿಯಾಗಿ ಇಟ್ಟುಕೊಂಡು ಬಗೆಹರಿಸಬೇಕು. ಅಧ್ಯಾಸ ಭಾಷ್ಯವನ್ನು ಚನ್ನಾಗಿ ಅಧ್ಯಯನಮಾಡಿ ಭಾಷ್ಯಕಾರರ ಹೃದಯವನ್ನು ಮುಟ್ಟಬೇಕು – ಎಂದು ತಿಳಿಸಿರುತ್ತಾರೆ. ಹೀಗೆ ಶ್ರೀ ಶ್ರೀಗಳವರು ಶ್ರೀ ಶಂಕರಾಚಾರ್ಯರ ಗ್ರಂಥಗಳನ್ನು ತಲಸ್ಪರ್ಶಿಯಾಗಿ ಅಧ್ಯಯನಮಾಡಿ ಅವರ ಗ್ರಂಥಗಳನ್ನೇ ಪರಸ್ಪರ ಹೋಲಿಸಿ ಅದರ ಸಾರವನ್ನು ತಮ್ಮ ಗ್ರಂಥಗಳಲ್ಲಿ ಪೀಠಿಕೆ, ಶಿರೋನಾಮೆ, ಟಿಪ್ಪಣಿ, ಸಾರ, ಸ್ವತಂತ್ರ ಗ್ರಂಥಗಳು ಮುಂತಾದ ರೀತಿಯಲ್ಲಿ ಕೋಢೀಕರಿಸಿ ಕನ್ನಡ ವೇದಾಂತ ಜಿಜ್ಞಾಸುಗಳಿಗೆ ಉಪಕರಿಸಿ ಅನುಗ್ರಹಿಸಿದ್ದಾರೆ. ಇಂತಹ ಪರಮಪೂಜ್ಯರ ಅಡಿದಾವರೆಗೆ ನಮಸ್ಕರಿಸಿ ವಿರಮಿಸುವೆನು.

* * * * *

ಕರ್ಮಯೋಗದ ಮರ್ಮಗಳು

ನಿನ್ನ ಸೂತ್ರದೊಳಾಡುವುವು ಚೈತನ್ಯ ಸಚರಾಚರಗಳೆಲ್ಲವು. ನಿನ್ನ ಸೂತ್ರವು ತಪ್ಪಿದೊಡೆ ಮೊಗ್ಗಾಗುವವು ಊಹೆಗಳು. ಇನ್ನು ನಮಗೆ ಸ್ವತಂತ್ರವೆಲ್ಲಿಹುದು ಅನ್ಯಕರ್ಮವೆ–ಸ್ವಕರ್ಮವೆಲ್ಲವು ನಿನ್ನದೆಂದೊಪ್ಪಿಸಿಹೆವು ರಕ್ಷಿಸು ನಮ್ಮನನವರತ. ಈ ಪದ್ಯಗಳನ್ನು ಶ್ರೀಗಳು ಆಗಿಂದಾಗ್ಗೆ ಹೇಳುತ್ತಿದ್ದರು. – **ಶ್ರೀ ಸಚ್ಚಿದಾನಂದವಾಣಿ**

ಶ್ರೀ ಗಣೇಶಾಯ ನಮಃ

ಪ್ರಮಾಣಾತೀತ ಬ್ರಹ್ಮನನ್ನು ಶಾಸ್ತ್ರಪ್ರಮಾಣದಿಂದ ತಿಳಿಯುವುದು ಹೇಗೆ?

– ಡಾ॥ ಎಂ.ಎಲ್. ನರಸಿಂಹಮೂರ್ತಿ
ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ತಿರುಪತಿ
ಮೊಬೈಲ್ : 9440205863

ಸಾಹಿತ್ಯಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಸಾಹಿತ್ಯವೆಂದರೆ ವೇದವೇ. ವೇದವೆಂದರೆ 'ವಿದಜ್ಞಾನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ ಜ್ಞಾನವೆಂಬ ಅರ್ಥವನ್ನು ಕೊಡುತ್ತದೆ. ಇಂತಹ ವೇದಕ್ಕೆ ಶ್ರುತಿ ಎಂಬ ಇನ್ನೊಂದು ಹೆಸರಿದೆ. ಅಂದರೆ ಗುರುವಿನಿಂದ ಶಿಷ್ಯನು ಶ್ರವಣ ಮಾಡಿ ಪಡೆಯುವಂತಹುದು. ವೇದ ಸಾಹಿತ್ಯವು ಅತ್ಯಂತ ದುರೂಹವೂ ಗಂಭೀರವೂ ಆಗಿದೆ. ಅದು ಸಾಮಾನ್ಯ ಮತಿಗಳಿಗೆ ಎಟುಕದಷ್ಟು ಉನ್ನತವಾದ ಸಾಹಿತ್ಯರಾಶಿ. ಇಂತಹ ವೇದದ ಅರ್ಥವನ್ನು ತಿಳಿಯಬೇಕಾದಷ್ಟು ಉನ್ನತವಾದ ಸಾಹಿತ್ಯರಾಶಿ. ಇಂತಹ ವೇದದ ಅರ್ಥವನ್ನು ತಿಳಿಯಬೇಕಾದರೆ ವೇದಾಂಗಗಳ ಸಹಾಯಬೇಕು. ವೇದಾಂಗಗಳೆಂದರೆ ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ನಿರುಕ್ತ ಮತ್ತು ಜ್ಯೋತಿಷ. ಸಾಂಗವೇದಾಧ್ಯಾಯಿಗಳೇ ವೇದಾರ್ಥವನ್ನು ತಿಳಿಯಲು ಸಮರ್ಥರು. ಆದುದರಿಂದಲೇ **"ಸ್ವಾಧ್ಯಾಯೋಽಧ್ಯೇತವಃ"** ಎಂಬ ಅಧ್ಯಯನ ವಿಧಿಯನ್ನು ವಿವರಿಸುವಾಗ ಅರ್ಥಜ್ಞಾನಪರ್ಯಂತ ಅಧ್ಯಯನವೇ ಸ್ವಾಧ್ಯಾಯ ಶಬ್ದಾರ್ಥವೆಂದು ವಿವರಿಸಲಾಗಿದೆ. ಅರ್ಥಜ್ಞಾನವಿಲ್ಲದ ವೇದಾಧ್ಯಯನವನ್ನು **"ಸ್ಥಾಣುರಯಂ ಭಾರಹಾರಃ, ಅಧೀತ್ಯವೇದಾನ್ ನ ವಿಜಾನಾತಿ ಯೋಽರ್ಥಮ್"** ಎಂಬುದಾಗಿ ನಿಂದಿಸಲಾಗಿದೆ. ಇಂತಹ ವೇದಾರ್ಥವನ್ನು ತಿಳಿಯುವಲ್ಲಿ ವೇದಾಂಗಗಳು ಸಹಾಯಕ. ಹಾಗಾದರೆ ವೇದಗಳು ಏನನ್ನು ಹೇಳುತ್ತವೆ. ವೇದಗಳ ಉದ್ದೇಶವೇನು? ಏತಕ್ಕಾಗಿ ವೇದಗಳಿಗೆ ಅಷ್ಟು ಪ್ರಾಶಸ್ತ್ಯ? ಎಂಬುದರ ಕಡೆ ಸ್ವಲ್ಪ ಗಮನಹರಿಸೋಣ.

ಬ್ರಹ್ಮನ ಮುಖಾರವಿಂದದಿಂದ ಹೊರಟ ವೇದರಾಶಿಯನ್ನು ಅವುಗಳ ಪ್ರತಿಪಾದ್ಯದ ಆಧಾರದ ಮೇಲೆ ಭಗವಾನ್ ವೇದವ್ಯಾಸರು ಋಗ್, ಯಜುಃ, ಸಾಮ ಮತ್ತು ಅಥರ್ವಗಳೆಂಬುದಾಗಿ ನಾಲ್ಕು ವಿಭಾಗ ಮಾಡಿ ಲೋಕಾನುಗ್ರಹ ಮಾಡಿದ್ದಾರೆ. ಇಂತಹ ವೇದಗಳಿಗೆ ಭಾಷ್ಯವನ್ನು ಬರೆದಂತಹ ಮಹಾತ್ಮರು ಅನೇಕರಿದ್ದಾರೆ. ಅವರಲ್ಲಿ ಭಟ್ಟಭಾಸ್ಕರ, ವೆಂಕಟಮಾಧವ, ಸಾಯಣಾಚಾರ್ಯರು ಪ್ರಮುಖರು. ಅದರಲ್ಲೂ ನಾಲ್ಕೂ ವೇದಗಳಿಗೆ ವಿದ್ಯಾರಣ್ಯರ ದಿಗ್ದರ್ಶನದಲ್ಲಿ ಭಾಷ್ಯಬರೆದವರು ಸಾಯಣಾಚಾರ್ಯರು. ವೇದಾರ್ಥಜಿಜ್ಞಾಸುಗಳು ಸಾಯಣಭಾಷ್ಯವನ್ನು ಶರಣು ಹೊಂದದೆ ಅನ್ಯ ಮಾರ್ಗವಿಲ್ಲ. ವೇದಾಂಗಗಳ ಸಹಾಯದಿಂದಲೇ ವೇದಗಳಿಗೆ ಭಾಷ್ಯ ಬರೆದ ಸಾಯಣರಿಗೆ ವಿದ್ವತ್ಸಮಾಜಶದಲ್ಲಿ ಮಹತ್ತರವಾದ ಸ್ಥಾನವಿದೆ. ಇಂತಹಾ ಸಾಯಣಾದಿಭಾಷ್ಯಗಳ ಸಹಾಯದಿಂದ ತಿಳಿಯಲ್ಪಡುವ ವೇದಪ್ರತಿಪಾದ್ಯವಾದುದಾದರೂ ಏನು? ಎಂಬ ಕುತೂಹಲ ಸಹಜ.

ವೇದವು ಪ್ರಧಾನವಾಗಿ ಧರ್ಮ ಪ್ರತಿಪಾದನೆಗೆ ಹೊರಟಿದೆ. ಅದಕ್ಕಾಗಿಯೇ **"ವೇದೋಽಖಿಲೋ ಧರ್ಮಮೂಲಮ್"** ಎಂದಿರುವುದು. ಆ ಧರ್ಮವು ಪ್ರವೃತ್ತಿಧರ್ಮ ಮತ್ತು ನಿವೃತ್ತಿಧರ್ಮವೆಂಬುದಾಗಿ

ಎರಡು ವಿಧ. ಪ್ರವೃತ್ತಿ ಧರ್ಮವೆಂಬುದು ಯಾಗಾದಿಗಳಿಗೆ ಸಂಬಂಧಿಸಿದ್ದು. ಇದನ್ನೇ ಜೈಮಿನಿ ಮಹರ್ಷಿಗಳು "ಚೋದನಾಲಕ್ಷಣೋಽರ್ಥೋ ಧರ್ಮಃ" ಎಂಬುದಾಗಿ ಸೂತ್ರಿಸಿದ್ದಾರೆ. ಯಾಗಾದಿಗಳೇ ಧರ್ಮವೆಂಬುದಾಗಿ ಪೂರ್ವಮೀಮಾಂಸಕರ ಅಭಿಪ್ರಾಯ. ಇಂತಹ ಯಾಗಾದಿರೂಪಧರ್ಮದ ಅನುಷ್ಠಾನ ಮಾಡುವವನಿಗೆ ಕರ್ತೃತ್ವ, ಭೋಕ್ತೃತ್ವಾದಿ ಬುದ್ಧಿ ಇರುತ್ತದೆ. ಹಾಗಾದಾಗ ಅವನು ಯಾಗಾದಿಗಳ ಕೃತ್ಯವೂ ತತ್ಫಲದ ಭೋಕ್ತೃವೂ ಆಗುತ್ತಾನೆ. ಇದನ್ನೇ ಭಗವತ್ಪಾದರು "ಬುದ್ಧಿ ಪೂರ್ವಕಾರೀ ನಾವಿದಿತ್ವಾऽऽತ್ಮನ ಪರಲೋಕಸಂಬಂಧ–ಮಧಿಕ್ರಿಯತೆ" ಎಂದಿದ್ದಾರೆ. ಹೀಗೆ ಕರ್ತೃತ್ವ ಭೋಕ್ತೃತ್ವಬುದ್ಧಿಪೂರ್ವಕವಾಗಿ ಮಾಡುವ ಧರ್ಮವೆಲ್ಲ ಪ್ರವೃತ್ತಿಧರ್ಮವೆನ್ನಿಸಿಕೊಳ್ಳುತ್ತದೆ. ಇಂತಹ ಧರ್ಮಾನುಷ್ಠಾನದಿಂದ ಸಿಗುವ ಫಲವೆಲ್ಲ ಅನಿತ್ಯವೇ ಆಗಿರುತ್ತದೆ. ಅನಿತ್ಯ ಫಲವನ್ನನುಭವಿಸಿ ಅದರಲ್ಲಿ ವೈರಾಗ್ಯ ಹೊಂದಿದವರು ನಿತ್ಯಫಲವನ್ನರಸುವುದು ಸಹಜ. ಅಂತಹವರಿಗಾಗಿ ವೇದವು ನಿತ್ಯಫಲವನ್ನು ಬೋಧಿಸುತ್ತದೆ. ಮುಖ್ಯವಾಗಿ ಜನರಿಗಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ವೇದವು ಬೋಧಿಸುತ್ತದೆ. ಇವುಗಳಲ್ಲಿ ಧರ್ಮ, ಅರ್ಥ ಮತ್ತು ಕಾಮಗಳು ಅನಿತ್ಯ ಪುರುಷಾರ್ಥ; ಮೋಕ್ಷವು ನಿತ್ಯ ಪುರುಷಾರ್ಥ. ಆದುದರಿಂದಲೇ ಅದು ಪರಮಪುರುಷಾರ್ಥ.

ಇಂತಹ ನಿತ್ಯ ಪುರುಷಾರ್ಥವಾದ ಮೋಕ್ಷವನ್ನು ಬಯಸಿದ ಸಾಧಕರಿಗಾಗಿ ನಿವೃತ್ತಿರೂಪ ಧರ್ಮವನ್ನು ಸಾಧನವನ್ನಾಗಿ ಶ್ರುತಿಯು ಉಪದೇಶಿಸುತ್ತದೆ. ಶಾಸ್ತ್ರ ನಿಗಮ, ಆಗಮ ಮುಂತಾದ ಶಬ್ದಗಳಿಂದ ಹೇಳಲ್ಪಡುವುದು ವೇದವೇ. ಆದುದರಿಂದಲೇ "ಪ್ರವೃತ್ತಿನಿವೃತ್ಯನ್ಯತರ ಬೋಧಕತ್ವಮೇವ ಶಾಸ್ತ್ರತ್ವಂ" ಎಂದಿದ್ದಾರೆ. ಏವಂ ಚ ವೇದವು ಪ್ರವೃತ್ತಿಧರ್ಮವನ್ನಾಗಲೀ ನಿವೃತ್ತಿಧರ್ಮವನ್ನಾಗಲೀ ಬೋಧಿಸುವುದರಿಂದ ಶಾಸ್ತ್ರವೆನಿಸಿಕೊಳ್ಳುತ್ತದೆ. ಹೀಗೆ ಧರ್ಮವನ್ನೇ ಬೋಧಿಸುವ ವೇದವು ಸಂಹಿತಾ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂಬುದಾಗಿ ನಾಲ್ಕು ವಿಭಾಗವಾಗಿರುತ್ತದೆ. ಇದರಲ್ಲಿ ಮೊದಲಿನ ಮೂರು ಭಾಗಗಳಲ್ಲಿ ಪ್ರವೃತ್ತಿಧರ್ಮವನ್ನೂ ಕೊನೆಯ ಭಾಗವಾದ ಉಪನಿಷತ್ತಿನಲ್ಲಿ ನಿವೃತ್ತಿಧರ್ಮವನ್ನೂ ಬೋಧಿಸಲಾಗಿದೆ. ವೇದಾಂತ ಶಬ್ದದಿಂದ ಉಪನಿಷತ್ತುಗಳೇ ಹೇಳಲ್ಪಟ್ಟಿವೆ. ವೇದದ ನಿರ್ಣಯಪ್ರಧಾನಭಾಗವಾದುದರಿಂದ ಉಪನಿಷತ್ತುಗಳು ವೇದಾಂತವೆನ್ನಿಸಿಕೊಳ್ಳುತ್ತವೆ.

ಇಂತಹ ಉಪನಿಷತ್ತುಗಳಲ್ಲಿ ನಿತ್ಯಪುರುಷಾರ್ಥವಾದ ಮೋಕ್ಷ ಹಾಗೂ ತತ್ಸಾಧನಾದಿಗಳನ್ನು ವಿವರಿಸಲಾಗಿದೆ. ಮೋಕ್ಷವೆಂದರೆ ಮೋಕ್ಷಣ ಅಂದರೆ ಬಿಡುಗಡೆ ಎಂದರ್ಥ. ಬಿಡುಗಡೆ ಯಾವುದರಿಂದ? ಬಂಧನದಿಂದ ಬಿಡುಗಡೆ. ಬಂಧನ ಯಾವುದು? ಜನ್ಮಮರಣರೂಪವಾದ ಈ ಸಂಸಾರವೇ ಬಂಧನ. ಅದರಿಂದ ಬಿಡುಗಡೆ ಹೇಗೆ? ಸಂಸಾರಕ್ಕೆ ಕಾರಣವೇನು? ಎಂದರೆ ಆತ್ಮನ ಸ್ವರೂಪಜ್ಞಾನವಾಗದಿರುವುದರಿಂದ ಬಂಧನ. ಆತ್ಮನ ಸ್ವರೂಪಜ್ಞಾನದಿಂದ ಮೋಕ್ಷ. ಅಂದರೆ ಆತ್ಮವೇ ಬ್ರಹ್ಮ, ಬ್ರಹ್ಮಜ್ಞಾನದಿಂದ ಮೋಕ್ಷ. ಮೋಕ್ಷಕ್ಕೆ ಬ್ರಹ್ಮಜ್ಞಾನವೇ ಸಾಧನವೆಂದಾಯಿತು. ಬ್ರಹ್ಮಜ್ಞಾನವೆಂಬಲ್ಲಿ ಬ್ರಹ್ಮ ವಿಶೇಷಣ. ವಿಶೇಷಣದ ಜ್ಞಾನ ಮೊದಲು ಬೇಕು. ಅಂದರೆ ಬ್ರಹ್ಮವೆಂದರೇನು ಎಂಬುದು ಮೊದಲು ತಿಳಿಯಬೇಕು. ಬ್ರಹ್ಮವೆಂಬ ಒಂದು ವಸ್ತು ಅಥವಾ ತತ್ತ್ವ ಇದೆ ಎಂಬುದು ಮೊದಲು ತಿಳಿಯಬೇಕು. ತಿಳಿಯುವ ಬಗೆ ಹೇಗೆ ಎಂದರೆ "ಲಕ್ಷಣ ಪ್ರಮಾಣಾಭ್ಯಾಂ ಹಿ ವಸ್ತುಸಿದ್ಧಿಃ" ಎಂಬ ಮಾತಿನಂತೆ ಲಕ್ಷಣವನ್ನೂ ಪ್ರಮಾಣವನ್ನೂ ತೋರಿಸಿದಾಗ ಆ

ವಸ್ತು ಸಿದ್ಧಿಸುತ್ತದೆ. ಈಗ ಬ್ರಹ್ಮನ ವಿಷಯದಲ್ಲಿ ಇದನ್ನು ವಿಮರ್ಶಿಸೋಣ.

ಒಂದೊಮ್ಮೆ 'ಬ್ರಹ್ಮ' ಎಂಬ ಒಂದು ವಸ್ತು ಇದ್ದರೆ ಅದಕ್ಕೊಂದು ಲಕ್ಷಣವಿರಬೇಕಲ್ಲವೇ? ಯಾವುದು ಆ ಲಕ್ಷಣ? ಎಂದರೆ ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳು ಯಾವುದರಿಂದಾಗುತ್ತವೆಯೋ ಅದು ಬ್ರಹ್ಮ ಎನ್ನುತ್ತದೆ ಉಪನಿಷತ್ತು, "ಯತೋ ವಾ ಇಮಾನಿ ಭೂತಾನಿ ಜಾಯಂತೆ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ" ಎಂದು. ಹಾಗೇ "ಜನ್ಮಾದ್ಯಸ್ಯ ಯತಃ" ಎಂಬ ಬ್ರಹ್ಮಸೂತ್ರವೂ ಇದನ್ನೇ ಹೇಳುತ್ತದೆ. ಅಂದರೆ ಜಗಜ್ಜನ್ಮಸ್ಥಿತಿಲಯಕರ್ತೃತ್ವ ಬ್ರಹ್ಮ ಲಕ್ಷಣವೆಂದಾಯಿತು. ಶಾಸ್ತ್ರದಲ್ಲಿ ಇದನ್ನು ತಟಸ್ಥ ಲಕ್ಷಣವೆಂದೂ "ಸತ್ಯಂಜ್ಞಾನಮನಂತಂ ಬ್ರಹ್ಮ" ಎಂಬುದು ಸ್ವರೂಪ ಲಕ್ಷಣವೆಂದೂ ಹೇಳಲಾಗಿದೆ. ಹೇಗೂ ಇರಲಿ ಬ್ರಹ್ಮನಿಗೊಂದು ಲಕ್ಷಣವನ್ನು ಹೇಳಿದ್ದಾಯ್ತು. ನಂತರ ಈ ವಿಚಾರಕ್ಕೆ ಬರೋಣ. ಬ್ರಹ್ಮನ ವಿಷಯಕ್ಕೆ ಪ್ರಮಾಣ ಯಾವುದು ಎಂದು ಕೇಳಿದರೆ "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" ಎಂಬ ಶ್ರುತಿ ವಾಕ್ಯದಂತೆ ಉಪನಿಷದ್ವಾಕ್ಯ ಅಂದರೆ ವೇದವಾಕ್ಯ. ವೇದವೇ ಶಾಸ್ತ್ರಶಬ್ದದಿಂದ ಹೇಳಲ್ಪಟ್ಟಿದೆ. ಆದುದರಿಂದ ಶಾಸ್ತ್ರವೇ ಬ್ರಹ್ಮವಿಷಯದಲ್ಲಿ ಪ್ರಮಾಣ ಎಂದಾಯ್ತು, "ಶಾಸ್ತ್ರಯೋನಿತ್ವಾತ್" ಎಂಬ ಸೂತ್ರವು ಇದನ್ನೇ ಹೇಳುತ್ತಿದೆ. ಇಲ್ಲಿ ಈಗ ವಿಮರ್ಶೆ ಮಾಡಬೇಕಾಗಿದೆ.

ಪ್ರಮಾಣವಿಚಾರ: ವೇದಾಂತದಲ್ಲಿ ಒಟ್ಟು ಆರು ಪ್ರಮಾಣಗಳನ್ನು ಒಪ್ಪಲಾಗಿದೆ. ಅವು ಯಾವುವೆಂದರೆ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಮತ್ತು ಅನುಪಲಬ್ಧಿ ಎಂದು. ಇಲ್ಲಿ ಪ್ರತ್ಯಕ್ಷ ಪ್ರಮಾಣವೆಂದರೆ ಇಂದ್ರಿಯಗಳು. ಅಂದರೆ ಶಬ್ದಸ್ಪರ್ಶರೂಪರಸಗಂಧವೆಂಬ ವಿಷಯಗಳ ಜ್ಞಾನವು ಯಾವುದರಿಂದಾಗುವುದೋ ಅದು ಪ್ರತ್ಯಕ್ಷ ಪ್ರಮಾಣ. ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ ಮತ್ತು ಘ್ರಾಣಗಳೆಂಬ ಐದು ಬಹಿರಿಂದ್ರಿಯಗಳೇ ಪ್ರತ್ಯಕ್ಷಪ್ರಮಾಣ. ಬ್ರಹ್ಮನನ್ನು "ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾऽರಸಂ ನಿತ್ಯಮಗಂಧವಚ್ಚ ಯತ್" ಎಂದು ಉಪನಿಷತಿನಲ್ಲಿ ಶಬ್ದಸ್ಪರ್ಶರೂಪಾದಿರಹಿತವಾದುದ್ದೆಂದು ವರ್ಣಿಸಿರುವದರಿಂದ ಪ್ರತ್ಯಕ್ಷ ಪ್ರಮಾಣದಿಂದ ತಿಳಿಯಲಾಗದುದರಿಂದ ಇಂದ್ರಿಯಾವೇದ್ಯವೆಂಬುದಾಗಿ ಹೇಳಲಾಗಿದೆ. ಹಾಗಾದರೆ ನೈಯ್ಯಾಯಿಕರು ಹೇಳುವಂತೆ ಅನುಮಾನಪ್ರಮಾಣದಿಂದ ತಿಳಿಯಬಹುದಲ್ಲಾ ಎಂದರೆ ಅದೂ ಸಾಧ್ಯವಿಲ್ಲ. ಏಕೆಂದರೆ ಅನುಮಾನಪ್ರಮಾಣದಿಂದ ತಿಳಿಯಬೇಕಾದರೆ ಹೇತುಸಾಧ್ಯಗಳ ವ್ಯಾಪ್ತಿಜ್ಞಾನವಿರಬೇಕು. ಈ ವ್ಯಾಪ್ತಿಜ್ಞಾನ ಪ್ರತ್ಯಕ್ಷಪ್ರಮಾಣದಿಂದಲೇ ಬರಬೇಕು. ಬ್ರಹ್ಮನ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣವಿಲ್ಲದಿರುವುದರಿಂದ ಅದನ್ನವಲಂಬಿಸಿದ ಅನುಮಾನ ಪ್ರಮಾಣವೂ ಇಲ್ಲಿ ಆಗಲಾರದು. ಇನ್ನು ಬ್ರಹ್ಮಸಾದೃಶ್ಯವಾದದ್ದು ಇನ್ನಾವುದೂ ಇಲ್ಲದಿರುವುದರಿಂದ ಇಲ್ಲಿ ಉಪಮಾನ ಪ್ರಮಾಣವೂ ಇಲ್ಲ. ಮೀಮಾಂಸಕರು, ವೇದಾಂತಿಗಳು ಒಪ್ಪುವ ಅರ್ಥಾಪತ್ತಿಯೂ ಕೂಡಾ ಪ್ರತ್ಯಕ್ಷಪ್ರಮಾಣವನ್ನವಲಂಬಿಸಿಯೇ ಇರುವುದರಿಂದ ಇಲ್ಲಿ ಅದೂ ಕೂಡಾ ಪ್ರಮಾಣವಾಗಲಾರದು. ಅನುಪಲಬ್ಧಿಯಂತೂ ಅಭಾವಗ್ರಾಹಕ ಪ್ರಮಾಣವಾಗಿರುವುದರಿಂದ ಭಾವರೂಪವಾದ ಬ್ರಹ್ಮನ ವಿಷಯಕ್ಕೆ ಅದೂ ಪ್ರಮಾಣವಾಗಲಾರದು. ಇವನ್ನೆಲ್ಲ ಬಿಡಿ. ಶಬ್ದ ಪ್ರಮಾಣವನ್ನು ಹೇಳಬಹುದಲ್ಲ ಎಂಬುದಕ್ಕೆ ಏನು ಹೇಳುತ್ತೀರಿ ಎಂದರೆ ಇಲ್ಲೂ ಸ್ವಲ್ಪ ವಿಚಾರ ಮಾಡಬೇಕಾದುದು ಇದೆ.

ಶಬ್ದ ಪ್ರಮಾಣ ಮತ್ತು ಬ್ರಹ್ಮ: ಶಬ್ದದ ವಿಚಾರಕ್ಕೆ ಬಂದಾಗ ವೈಯ್ಯಾಕರಣರ ಮಾತೇ ನಮಗೆ ಶಿರೋಧಾರ್ಯ. ವೈಯ್ಯಾಕರಣರು **"ಚತುಷ್ಟಯೀ ಶಬ್ದಾನಾಂ ಪ್ರವೃತ್ತಿಃ"** ಎಂದಿದ್ದಾರೆ. ಅಂದರೆ ಶಬ್ದದ ಪ್ರವೃತ್ತಿಗೆ ನಿಮಿತ್ತಗಳು ನಾಲ್ಕು. ಅವು ಜಾತಿ, ಗುಣ, ಕ್ರಿಯಾ ಮತ್ತು ಸಂಜ್ಞಾ ಎಂದು. ಜಾತಿವಾಚಕ ಶಬ್ದಗಳಾದ ಮನುಷ್ಯ, ಸಿಂಹ, ಹುಲಿ, ಆನೆ, ಹಸು, ಮೊದಲಾದ ಶಬ್ದಗಳು ಮನುಷ್ಯತ್ವಾದಿ ಜಾತಿವಿಶಿಷ್ಟ ಅರ್ಥವನ್ನು ಬೋಧಿಸುತ್ತವೆ. ಬ್ರಹ್ಮ ಒಂದೇ ಆದುದರಿಂದಲೂ ಅದು ನಿರ್ಧರ್ಮಕವಾದುದರಿಂದಲೂ ಜಾತಿವಾಚಕ ಶಬ್ದಗಳಿಂದ ಬ್ರಹ್ಮನನ್ನು ತಿಳಿಸಲಾಗುವುದಿಲ್ಲ. ಇನ್ನು ಬ್ರಹ್ಮನಲ್ಲಿ ಯಾವುದೇ ಗುಣ ಮತ್ತು ಕ್ರಿಯೆಗಳಿಲ್ಲದಿರುವುದರಿಂದ **"ನಿಷ್ಕಲಂ ನಿಷ್ಕ್ರಿಯಂ ಶಾಂತಂ"** ಎಂಬ ಶ್ರುತಿವಾಕ್ಯವಿರುವುದರಿಂದ ಗುಣವಾಚಕಗಳಾದ ರಕ್ತಪೀತಾದಿ ಶಬ್ದಗಳಂತಿರುವ ಶಬ್ದದಿಂದಲೂ ತಿಳಿಸಲಾಗುವುದಿಲ್ಲ. ಹಾಗೇ ಪಾಚಕ, ನಾಯಕ ಎಂಬಂತೆ ಕ್ರಿಯಾವಾಚಕ ಶಬ್ದಗಳಿಂದಲೂ ತಿಳಿಸಲಾಗುವುದಿಲ್ಲ. ಹಾಗಾದರೆ 'ಡಿತ್ಥ' 'ಡವಿತ್ಥ' ಎಂಬಂತೆ 'ಬ್ರಹ್ಮ' ಎಂಬುದು ಸಂಜ್ಞಾವಾಚಕವಾಗಿರಬಹುದೇ ಎಂದರೆ ಅದೂ ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮ ಎಂಬುದು ಸಂಜ್ಞೆಯಾಗಿ ಬಳಸಲ್ಪಡುತ್ತಿಲ್ಲ. **"ಬೃಹ ಬೃಹಿ ವೃದ್ಧೌ"** ಎಂಬ ಧಾತುವಿನಿಂದ ಬೃಹತ್ತಾದುದು ಎಂಬರ್ಥ ಬರುವುದರಿಂದ ಅದರ ಅರ್ಥದಲ್ಲಿ ಸಂಕೋಚವನ್ನು ಮಾಡಲು ಯಾವುದೇ ಕಾರಣವಿಲ್ಲದಿರುವುದರಿಂದ ಅತ್ಯಂತ ಬೃಹತ್ತು ಅಥವಾ ನಿರತಿಶಯಬೃಹತ್ ಅಂದರೆ ಯಾವುದಕ್ಕಿಂತ ಬೃಹತ್ತಾದುದು ಇನ್ನೊಂದಿಲ್ಲವೋ ಅದು ಎಂದು ಮಾತ್ರ ಗೊತ್ತಾಗುತ್ತದೆಯೇ ಹೊರತು ಗವಾದಿಶಬ್ದಗಳಿಂದ 'ಗಂಗೆದೊಗಲು' ಮೊದಲಾದವುಗಳಿಂದ ಕೂಡಿದ ಅರ್ಥ ತಿಳಿಯುವಂತೆ ಇಲ್ಲಿ ತಿಳಿಯಲಾರದು. ಹಾಗಾಗಿ ಬ್ರಹ್ಮನನ್ನು ತಿಳಿಸಲು ಶಬ್ದಪ್ರಮಾಣಕ್ಕೂ ಸಾಧ್ಯವಾಗಲಾರದು. ಹಾಗಾಗಿ ಯಾವ ಪ್ರಮಾಣದಿಂದಲೂ ತಿಳಿಯಲಾಗದಾದುದರಿಂದ ಬ್ರಹ್ಮನನ್ನು ಅಪ್ರಮೇಯ ಅಥವಾ ಪ್ರಮಾಣಾತೀತ ಎನ್ನುವುದು. ಹಾಗಾದರೆ ಈಗೊಂದು ಪ್ರಶ್ನೆ ಸಹಜವಾಗಿಯೇ ಉದ್ಭವವಾಗುತ್ತದೆ. ಬ್ರಹ್ಮನನ್ನು ತಿಳಿಸಲು ಯಾವುದೇ ಪ್ರಮಾಣವಿಲ್ಲವೆಂದಾದರೆ ಬ್ರಹ್ಮನ ವಿಷಯದಲ್ಲಿ ವೇದಾಂತ ಅಂದರೆ ಉಪನಿಷತ್ತು, ವೇದರೂಪ ಶಾಸ್ತ್ರವು ಪ್ರಮಾಣವಲ್ಲವೆಂದಾಯಿತು. ಹಾಗಾದಾಗ **"ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ"** ಎಂಬ ಶ್ರುತಿವಾಕ್ಯದಂತೆ ಬ್ರಹ್ಮನು ಉಪನಿಷತ್ತಾತ್ಪರ್ಯಪ್ರತಿಪಾದ್ಯನೆನ್ನುವುದಾಗಲೀ **"ಶಾಸ್ತ್ರಯೋನಿತ್ವಾತ್"** ಎಂಬ ಸೂತ್ರದಲ್ಲಿ ಹೇಳಿದ ಶಾಸ್ತ್ರಪ್ರಮಾಣವಾಗಲೀ ಹೇಗೆ ತಾನೆ ಸರಿಯಾಗುತ್ತದೆ, ವೇದಾಂತದಿಂದ ಬ್ರಹ್ಮ ಪ್ರತಿಪಾದನೆಗಾಗಿ ಮಾಡುವ ಪ್ರಯತ್ನವೆಲ್ಲವೂ ವ್ಯರ್ಥವಲ್ಲವೇ? ಅಂದರೆ ಪ್ರಮಾಣಗಮ್ಯನನ್ನು ಪ್ರಮಾಣದಿಂದ (ವೇದಾಂತದಿಂದ) ತಿಳಿಸುವ ಪ್ರಯತ್ನ ಸಂಪೂರ್ಣ ವ್ಯರ್ಥವೇ ಸರಿ. ಇದಕ್ಕೇನು ಸಮಾಧಾನ? ಇದಕ್ಕೆ ಉಂಟು ವೇದಾಂತದಲ್ಲಿ ಸಮಾಧಾನ, ಅದೇನೆಂದರೆ :–

ಅಧ್ಯಾರೋಪಾಪವಾದ ಪ್ರಕ್ರಿಯಾ: ಅಂದರೆ ಪ್ರಮಾಣಾತೀತ ವಸ್ತುವಿನಲ್ಲಿ ಯಾವುದಾದರೂ ಧರ್ಮವನ್ನು ಅಧ್ಯಾರೋಪಮಾಡುವುದು. ಆರೀತಿ ಆರೋಪಮಾಡಿದಾಗ ಆ ವಸ್ತುವು ಆ ಧರ್ಮದಿಂದ ಕೂಡಿದ್ದು ಎಂದು ಹೇಳಬಹುದು. ಆಗ ಆ ಧರ್ಮವಿಶಿಷ್ಟವಾಗಿ ಆ ವಸ್ತುವಿನ ಪರಿಚಯವಾಗುತ್ತದೆ. ನಂತರ ಆರೋಪಿತಧರ್ಮವನ್ನು ನಿಷೇಧಿಸಿ ಹೇಳಿದರೆ ವಸ್ತುವಿನ ಸ್ವರೂಪಮಾತ್ರಜ್ಞಾನ ಉಳಿಯುತ್ತದೆ. ಹಾಗಲ್ಲ, ಆರೋಪ ಮಾಡುವುದೇಕೇ? ನಂತರ ನಿಷೇಧಿಸುವುದೇಕೆ? **"ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ"** ಎಂಬಂತೆ ಎಂದರೆ ಅದಕ್ಕೆ ಸಮಾಧಾನವಿಷ್ಟೆ. ಸರ್ವಪ್ರಮಾಣಾಗಮ್ಯವೂ

ಕೇವಲ ಅನುಭವೈಕವೇದ್ಯವೂ ಆದ ಬ್ರಹ್ಮನನ್ನು ತಿಳಿಸಲು ಇದಕ್ಕಿಂತ ಬೇರೆದಾರಿ ಇಲ್ಲ. ಉದಾಹರಣೆಗೆ ಮಗುವು ತಾಯಿಯನ್ನು "ಚಂದ್ರನೆಂದರೆ ಯಾರು?" ಎಂದು ಕೇಳುತ್ತದೆ. ಆಕಾಶದಲ್ಲಿ ಕಾಣುವ ತೇಜೋಮಯ ಪದಾರ್ಥಗಳಲ್ಲಿ ಚಂದ್ರನೂ ಇದ್ದಾನೆ, ನಕ್ಷತ್ರಗಳೂ ಇವೆ. ಆಗ ತಾಯಿ ಮಗುವಿದೆ ಚಂದ್ರನನ್ನು ಮಾತ್ರ ತಿಳಿಸುವುದಕ್ಕಾಗಿ 'ನೋಡು ಮಗು, ಆ ಮರದಕೊಂಬೆಯ ತುದಿಯಲ್ಲಿ ಕಾಣುತ್ತಿರುವುದೇ ಚಂದ್ರ (ಶಾಖಾಗ್ರೇ ಚಂದ್ರಃ) ಎನ್ನುತ್ತಾಳೆ. ಇಲ್ಲಿ ಮರದಕೊಂಬೆಯೊಡನೆ ಮಗು ಚಂದ್ರನನ್ನು ನೋಡಿ ನಕ್ಷತ್ರಗಳನ್ನೆಲ್ಲ ಬಿಟ್ಟು ತಿಳಿಯುತ್ತದೆ. ಅಂದರೆ ಚಂದ್ರ ಸ್ವರೂಪವನ್ನು ತಿಳಿಯಲು ಮರದಕೊಂಬೆ ಸಹಾಯವಷ್ಟೆ. ನಂತರ ಅದೇ ಮಗು ಚಂದ್ರ ಯಾರೆಂದು ಕೇಳಿದಾಗ ಮರದಕೊಂಬೆಯನ್ನು ಬಿಟ್ಟೇ ಚಂದ್ರಸ್ವರೂಪ ಮಾತ್ರವನ್ನು ತಿಳಿಸುತ್ತದೆ.

ಇದೇ ರೀತಿಯಾಗಿ ಯಾವುದೇ ಪ್ರಮಾಣಕ್ಕೂ ವಿಷಯವಾಗದ ಬ್ರಹ್ಮವನ್ನು ತಿಳಿಸಲು ಅದಕ್ಕೆ ಜಗಜ್ಜನ್ಮಸ್ಥಿತಿಲಯಕರ್ತೃತ್ವವೆಂಬ ಧರ್ಮವನ್ನು ಆರೋಪಮಾಡಿ ತದ್ಧರ್ಮ ವಿಶಿಷ್ಟವಾಗಿ ಬೋಧಿಸಲು ಶಬ್ದಪ್ರಮಾಣ ಅಥವಾ ಶಾಸ್ತ್ರಪ್ರಮಾಣವನ್ನು ಬಳಸಲಾಗುತ್ತದೆ. ಆ ಧರ್ಮಾರೋಪಣೆಯಿಂದ ಅಪ್ರಮೇಯನಲ್ಲಿ ಪ್ರಮೇಯತ್ವಾರೋಪಣ ಮಾಡಿ ಪ್ರಮಾಣದಿಂದ ತಿಳಿಯುವಂತೆ ಮಾಡಿ ನಂತರ ಅದನ್ನೂ ನಿರಾಕರಣೆ ಮಾಡಿದಾಗ ಸ್ವರೂಪಚೈತನ್ಯಮಾತ್ರವನ್ನು ಶಾಸ್ತ್ರದಿಂದ ಬೋಧಿಸಿದಂತಾಗುತ್ತದೆ. ಆದರೆ ಇಷ್ಟು ಮಾತ್ರದಿಂದ ಬ್ರಹ್ಮನನ್ನು ತಿಳಿದಂತಾಗುವುದಿಲ್ಲ. ಏಕೆಂದರೆ ಅದು ಅನುಭವೈಕವೇದ್ಯ. ಹೀಗೆ ಶಾಸ್ತ್ರವೆಂಬ ಪ್ರಮಾಣವನ್ನೂ ಜಗಜ್ಜನ್ಮಸ್ಥಿತಿಲಯಕರ್ತೃತ್ವರೂಪ ತಟಸ್ಥಲಕ್ಷಣವನ್ನೂ ಶಾಸ್ತ್ರದಲ್ಲಿ ಹೇಳಲಾಗಿದೆ. ವಸ್ತುತಃ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬುದೇ ಬ್ರಹ್ಮನ ಸ್ವರೂಪಲಕ್ಷಣ. ಇದೂ ಕೂಡಾ ಅತದ್‌ವ್ಯಾವೃತ್ತಿಮುಖೇನ ಬ್ರಹ್ಮನನ್ನು ತಿಳಿಸುತ್ತದೆಯೇ ಹೊರತು ವಾಚ್ಯವಿಧಯಾ ಬ್ರಹ್ಮನನ್ನು ತಿಳಿಸಲಾರದು. ಸತ್ಯಂ ಅಂದರೆ ಅಸತ್ಯಕ್ಕಿಂತ ಭಿನ್ನವಾದುದು, ಜ್ಞಾನಂ ಎಂದರೆ ಜಡಕ್ಕಿಂತ ಬೇರೆಯಾದುದು, ಅನಂತಂ ಅಂದರೆ ಪರಿಚ್ಛಿನ್ನ (ವ್ಯಾಪ್ಯ)ಕ್ಕಿಂತ ಬೇರೆಯಾದುದು ಎಂದು ಮಾತ್ರ ತಿಳಿಯುತ್ತದೆ. ಆ ರೀತಿ ಇರುವ ಸ್ವರೂಪವನ್ನು ತಿಳಿಯುವುದು ಹೇಗೆಂದರೆ ಅದು ಅನುಭವೈಕವೇದ್ಯ. ಕೇವಲ ಅನುಭವ ಮಾತ್ರದಿಂದ ತಿಳಿಯುವಂತಹುದನ್ನು ಯಾವ ಪ್ರಮಾಣದಿಂದಲೂ ತಿಳಿಯಲಾಗದು. ಅಂತಹ ಅನುಭವ ಬರಬೇಕೆಂದರೆ ಅದಕ್ಕಾಗಿ ಶ್ರವಣ, ಮನನ, ನಿದಿಧ್ಯಾಸನರೂಪ ಅಂತರಂಗ ಸಾಧನಾನುಷ್ಠಾನ ಮಾಡಿದರೆ ಎಲ್ಲೋ ಯಾರೋ ಒಬ್ಬರಿಗೆ ಯಾವಾಗಲೋ ಸಾಕ್ಷಾತ್ಕಾರವಾಗಬಹುದು. ಇದು ಬಹಳ ಕಷ್ಟಸಾಧ್ಯ. ಅದಕ್ಕಾಗಿಯೇ "ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ" ಎಂಬುದಾಗಿ ಶ್ರೀಕೃಷ್ಣಪರಮಾತ್ಮನು ಆತ್ಮನ ದುರ್ಜ್ಞೇಯತ್ವವನ್ನು ತಿಳಿಸಿದ್ದಾನೆ.

ಬ್ರಹ್ಮ, ಆತ್ಮ, ಪರಮಾತ್ಮ ಎಂಬಿತ್ಯಾದಿ ಶಬ್ದಗಳಿಂದ ಹೇಳಲ್ಪಡುವ ತತ್ತ್ವವು ಅನುಭವದಿಂದ ಮಾತ್ರ ತಿಳಿಯಲ್ಪಡುವಂತಹುದೇ ಹೊರತು ಅದರ ನಿಜವಾದ ಅನುಭವವನ್ನು ಯಾವ ಪ್ರಮಾಣವೂ ಮಾಡಿಸಲಾರದು. ಪ್ರಮಾಣಗಳು ಪ್ರಮೇಯವನ್ನು ತಿಳಿಸುತ್ತವೆಯೇ ಹೊರತು ಅಪ್ರಮೇಯವನ್ನು ತಿಳಿಸಲಾರವು. ಅದಕ್ಕಾಗಿಯೇ ಪರಮಾತ್ಮಸ್ವರೂಪಕ್ಕೊಂದು ಅಧ್ಯಾರೋಪಮಾಡಿ ತದ್ವಿಶಿಷ್ಟವಾದಾಗ ಅದು ಪ್ರಮೇಯ ಕೋಟಿಯಲ್ಲಿ ಸೇರಿದಂತಾಗಿ ಅಂತಹ ಸ್ವರೂಪವನ್ನು ಪ್ರಮಾಣ ತಿಳಿಸುತ್ತದೆ. ಹೀಗಾಗಿ ಲಕ್ಷಣವನ್ನಾರೋಪಿಸಿ ಅದನ್ನು ಶಾಸ್ತ್ರಪ್ರಮಾಣದಿಂದ ತಿಳಿಸುವುದರಿಂದ ಅವನು ಔಪನಿಷದನೆಂದೂ, ಅವನ ವಿಷಯದಲ್ಲಿ ಶಾಸ್ತ್ರವು ಪ್ರಮಾಣವೆಂದೂ ಹೇಳುವುದರಿಂದ ವೃತ್ತಿವ್ಯಾಪ್ಯವಿಶಿಷ್ಟವಾದ ಸ್ವರೂಪವು ಗೋಚರವಾಗಿ

ಅಖಂಡಾಕಾರವೃತ್ತಿಯು ವೃತ್ತಿವ್ಯಾಪ್ಯಚೈತನ್ಯವನ್ನು ತೋರಿಸಿ ವೃತ್ತಿಯು ನಷ್ಟವಾದಾಗ ಶುದ್ಧಚೈತನ್ಯ ಮಾತ್ರವು ಅನುಭವಕ್ಕೆ ಬರುವುದೇ ಅದ್ವೈತಾನುಭವ. ಇದಕ್ಕಾಗಿ ಸಾಧನಗಳೇ ಶ್ರವಣ ಮಾನನ ನಿದಿಧ್ಯಾಸನಗಳು. ಇಂತಹ ಆತ್ಮ ಸಾಕ್ಷಾತ್ಕಾರವೇ ಜೀವನದ ಪರಮಲಕ್ಷ್ಯ. ಅದೇ ಮಾನವಜನ್ಮದ ಗುರಿ. ಅಂತಹ ಜ್ಞಾನವನ್ನು ಪಡೆಯಲು ಬೇಕಾದ ಸಾಧನಗಳಾಗಿ ಕರ್ಮ, ಭಕ್ತಿ ಅಥವಾ ಉಪಾಸನೆಗಳು ಶಾಸ್ತ್ರದಲ್ಲಿ ವಿವರಿಸಲ್ಪಟ್ಟಿವೆ. ಇಂತಹ ಸಾಧನಮಾರ್ಗದಲ್ಲಿ ನಮ್ಮನ್ನು ತೊಡಗಿಸಿಕೊಂಡು ನಮ್ಮ ಜನ್ಮವನ್ನು ಕೃತಾರ್ಥವನ್ನಾಗಿ ಮಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮೆಲ್ಲರ ಪ್ರಯತ್ನವಿರಲೆಂದು ಆಶಿಸೋಣ.

* * * * *

ಸಾಧನೆಗಳು

1. ಬಟ್ಟೆಯನ್ನು ಬದಲಾಯಿಸುವುದಲ್ಲ, ಮನಸ್ಸನ್ನು ಬದಲಾಯಿಸಬೇಕು. ಇದು ಸಂನ್ಯಾಸ.
2. ದೈವೀ ಮತ್ತು ಆಸುರೀಗುಣಗಳು ಸ್ವಭಾವತಃ ನಮ್ಮನ್ನು ಆಯಾ ಕಡೆಗೆ ಎಳೆಯುತ್ತಿರುತ್ತವೆ. ಆಗ ನಾವು ಇದು ಸರಿಯೇ ತಪ್ಪೇ ಎಂಬುದಾಗಿ ವಿಚಾರಮಾಡಿ ನೋಡಿಕೊಳ್ಳಬೇಕು. ಒಂದುಸಲ ಅದಕ್ಕೆ ನಾವು ಅವಕಾಶ ಕೊಟ್ಟನಂತರ ನಮ್ಮನ್ನು ಬಿಡುವುದಿಲ್ಲ.
3. ಕನ್ನಡಿಯನ್ನು ನೋಡಿದರೆ ನಮ್ಮ ಮುಖದ ಕೊಳೆಯೂ ಕಾಣುವಂತೆ ಜ್ಞಾನಿಯನ್ನು ನೋಡಿದರೆ ನಮಗೆ ನಮ್ಮ ದೋಷವು ಕಾಣುತ್ತದೆ.

– ಶ್ರೀ ಸಚ್ಚಿದಾನಂದವಾಣಿ

॥ ಶ್ರೀ ಗಣೇಶಾಯ ನಮಃ ॥
॥ ಶ್ರೀ ಗುರುಭ್ಯೋ ನಮಃ ॥

ಶ್ರೀಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಅನುವಾದಿಸಿರುವ ಸ್ತೋತ್ರಗಳು

– ಶ್ರೀ ಗುರು ಚರಣದಾಸ ಟಿ.ಬಿ. ಲಕ್ಷ್ಮಣರಾವ್
ಮೊಬೈಲ್ : 9945861617

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।
ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥

ಹಿಂದೂ ಸನಾತನ ಧರ್ಮದ ಜೀವನಾಡಿಯಾದ ವೇದ–ವೇದಾಂತದಲ್ಲಿ ಅನುಸ್ಯೂತವಾಗಿ ಇರುವ ಅದ್ವೈತ ಸಿದ್ಧಾಂತವನ್ನು ಶ್ರೀ ಆದಿಶಂಕರಾಚಾರ್ಯರು ಸಂಸ್ಕೃತ ಭಾಷೆಯಲ್ಲಿ ಪ್ರಸ್ಥಾನತ್ರಯ ಭಾಷ್ಯ, ಪ್ರಕರಣಗಳು ಮತ್ತು ಸ್ತೋತ್ರಗಳನ್ನು ರಚಿಸಿ ಪ್ರಚುರಗೊಳಿಸಿದರು. ಪ್ರಸ್ಥಾನತ್ರಯ ಮತ್ತು ಪ್ರಕರಣಗಳನ್ನು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಸಂಸ್ಥಾಪಕರೂ ಆಧುನಿಕ ಶಂಕರಾಚಾರ್ಯರೂ, ವೇದಾಂತ–ವಿಜ್ಞಾನಿಗಳೂ ಆಗಿದ್ದ ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳವರು ಸಮಗ್ರವಾಗಿ ಕನ್ನಡಕ್ಕೆ ಅನುವಾದಿಸಿ ತಮ್ಮದೇ ವಿಶಿಷ್ಟ ಟಿಪ್ಪಣಿಗಳೊಡನೆ ಪ್ರಕಟಿಸಿದರು. ಶ್ರೀಶ್ರೀಗಳವರ ಅಮೂಲ್ಯವಾದ ಈ ಕೃತಿಗಳಿಂದ ಅದ್ವೈತ ಸಿದ್ಧಾಂತಕ್ಕೆ ಪುನರ್ಜೀವ ಕೊಟ್ಟಂತಾಗಿದೆ. ಅದ್ವೈತ ಶಾಸ್ತ್ರದ ಉತ್ತುಂಗ ಶಿಖರದಲ್ಲಿ ತಮ್ಮ ಸಾಧನೆಯ ಪತಾಕೆಯನ್ನು ಹಾರಿಸಿದ ಶಂಕರಾಂಶಸಂಭೂತರಾದ ಆ ಮಹಾಯತಿಗಳ ಪಾದಗಳಿಗೆ ವಂದಿಸುತ್ತಾ ಅವರು ಆರಿಸಿಕೊಂಡು ಕನ್ನಡದಲ್ಲಿ ಅನುವಾದಿಸಿರುವ ಸ್ತೋತ್ರಗಳನ್ನು ಕುರಿತು ಈ ಚಿಕ್ಕದಾದ ಲೇಖನವನ್ನು ಸಮರ್ಪಿಸುತ್ತಿದ್ದೇನೆ. ಅದ್ವೈತವೇ ಸಾಕಾರವಾಗಿದ್ದ ಶ್ರೀಶ್ರೀಗಳವರು ಸ್ತೋತ್ರಗಳನ್ನು ಅನುವಾದಿಸಿರುವುದು ವಿಸ್ಮಯಕಾರಿಯಾಗಿದ್ದರೂ ಅವುಗಳು ಸಾಧಕರಿಗೆ ಸಹಾಯವಾಗುವವೆಂಬ ದೃಷ್ಟಿಯಿಂದ ಮಾಡಿರುವರು.

ಸ್ತೋತ್ರವೆಂದರೆ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನಲ್ಲಿ ನಿಜವಾಗಿ ಇರುವ ಗುಣಗಳ ನಿರೂಪಣೆ. ಸ್ತುತಿಯಿಂದ ಉಬ್ಬದಿರುವವರು ವಿರಳ. ಸ್ತುತಿಮಾಡುವ ಸಂಪ್ರದಾಯ ವೇದ–ಪುರಾಣಗಳಾದಿಯಾಗಿ ಕವಿಗಳು ಸಂತರು ಎಲ್ಲರಲ್ಲೂ ವಿಪುಲವಾಗಿ ಕಂಡುಬರುತ್ತದೆ. ಉದಾಹರಣೆಗೆ – ಶ್ರೀರುದ್ರಾಧ್ಯಾಯದಲ್ಲಿ **"ಸ್ತುಹಿ ಶ್ರುತಂ...."** ; ವಿಷ್ಣುಸಹಸ್ರನಾಮದಲ್ಲಿ **"ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ...."** (679–683ನೆಯ ನಾಮಗಳು); ಶ್ರೀಲಲಿತಾ ಸಹಸ್ರನಾಮದಲ್ಲಿ **"ಸ್ತೋತ್ರಪ್ರಿಯಾ (927) ಸ್ತುತಿಮತೀ (928) ಶ್ರುತಿಸಂಸ್ತುತ ವೈಭವಾ (929)"** – ಇವು ಸ್ತೋತ್ರಗಳಿಗೆ ಕೊಟ್ಟಿರುವ ವಿಶಿಷ್ಟಸ್ಥಾನವನ್ನು ಸೂಚಿಸುತ್ತವೆ. ಭಕ್ತಿರಸವೇ ಸ್ತೋತ್ರಗಳ ಬೆನ್ನೆಲಬು ಎನ್ನಬಹುದು.

ಶ್ರೀಮದ್ಭಾಗವತದಲ್ಲಿ (7–5–23) ಹೇಳಿರುವ ಒಂಭತ್ತು ವಿಧವಾದ ಭಕ್ತಿಗಳಲ್ಲಿ ಕೀರ್ತನೆ (ಸ್ತುತಿ)ಯೂ ಒಂದು. ಸ್ತೋತ್ರಗಳನ್ನು ನಮಸ್ಕಾರ, ಆಶೀರ್ವಾದ, ಸಿದ್ಧಾಂತೋಕ್ತಿ, ಪರಾಕ್ರಮ, ವಿಭೂತಿ ಮತ್ತು ಪ್ರಾರ್ಥನೆ

ಎಂದು ಆರು ವಿಧವಾಗಿ ಪರಿಗಣಿಸುತ್ತಾರೆ. ಸ್ತೋತೃವು ಸ್ತೋತ್ರದ ಮೂಲಕ ಸ್ತುತ್ಯನಿಂದ ವ್ಯಾವಹಾರಿಕ ವರಗಳನ್ನು ಮಾತ್ರವಲ್ಲದೆ ಪಾರಮಾರ್ಥಿಕ ಮೋಕ್ಷವನ್ನೂ ಪ್ರಾರ್ಥಿಸಿ ಕೃತಾರ್ಥನಾಗಬಹುದು.

ಪ್ರಸ್ತುತ ಶ್ರೀಶ್ರೀಗಳವರು ಅನುವಾದಿಸಿರುವ ಸ್ತೋತ್ರಗಳನ್ನು ಪರಿಶೀಲಿಸಿದರೆ ಪ್ರಧಾನವಾಗಿ ಅವುಗಳು ಅದ್ವೈತಶಾಸ್ತ್ರದ ಸಾರಭೂತವಾದವುವೆಂದು ತೀರ್ಮಾನಿಸಬಹುದು. ಪ್ರತ್ಯೇಕವಾಗಿ ವಿಚಾರಮಾಡೋಣ.

(1) **ಗಣೇಶಾಷ್ಟಕ: "ಯತೋ ವಾ ಇಮಾನಿ ಭೂತಾನಿ ಜಾಯಂತೇ" ; "ಜನ್ಮಾದ್ಯಸ್ಯಯತಃ" ; "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ"** – ಎಂಬ ವಾಕ್ಯಗಳ ಆಧಾರದಿಂದ ರಚಿತವಾದ ಈ ಸ್ತೋತ್ರವು ಗಣೇಶಪುರಾಣದಲ್ಲಿ ಬರುತ್ತದೆ. ಬ್ರಹ್ಮಾಂಡ ಗಣಗಳ ಒಡೆಯನಾದ ಪರಬ್ರಹ್ಮವನ್ನು **"ಗಣೇಶ"** ಎಂದು ಕಲ್ಪಿಸಿರುವುದು ಸೂಕ್ತವಾಗಿದೆ. ಬಿಂಬ–ಪ್ರತಿಬಿಂಬ ನ್ಯಾಯದಿಂದ **"ಗಜ"** ಎಂಬುದರ ಪ್ರತಿಬಿಂಬ **"ಜಗ"** ಎಂದಾಗುತ್ತದೆ. (Phenomenon of Lateral Inversion) – ಹಾಗೆಯೇ ಓಂಕಾರ= ಬ್ರಹ್ಮ=ಗಕಾರ ಎಂದು ಶಾಸ್ತ್ರಪ್ರಮಾಣಗಳಿವೆ. **"ಸಮಾಧಿನಾ ಯೋಗಿನೋ ಯತ್ರ ಗಚ್ಛಂತೀತಿ ಗಃ"**

(2) **ಶಿವನಾಮಾಷ್ಟೋತ್ತರ ಶತಕ:** ಸ್ಕಾಂದಪುರಾಣದಲ್ಲಿ ಬರುವ ಪರಬ್ರಹ್ಮ–ಶಿವನ 108 ದಿವ್ಯ ನಾಮಗಳು. ಶಿವಾಯ ನಮಃ (ಶೇತೇ ಅಸ್ಮಿನ್ ಇತಿ ಶಿವಃ) (1); ಶಿಪಿವಿಷ್ಟಃ (14); ತ್ರಿಲೋಕೇಶಃ (20); ಅನೀಶ್ವರಃ (45); ಸರ್ವಜ್ಞಃ (46); ಪರಮಾತ್ಮಾ (47); ಸದಾಶಿವಃ (53); ಜಗದ್ವ್ಯಾಪೀ (73); ಸಹಸ್ರಾಕ್ಷಃ (103); ಅನಂತಃ (106); ಪರಮೇಶ್ವರಃ (108). ಈ ನಾಮಗಳ ಅರ್ಥವನ್ನು ನೋಡಿದರೆ ಶಿವನು ಪರಬ್ರಹ್ಮನೆಂಬುದು ಸ್ಪಷ್ಟವಾಗುತ್ತದೆ.

(3) **ಶಿವಕವಚ** (ಇಂದ್ರಾಕ್ಷೀಸ್ತೋತ್ರ ಸಹಿತ): **"ಶರೀರಮಾದ್ಯಂ ಖಲು ಧರ್ಮಸಾಧನಮ್"** ಎಂಬಂತೆ ದೃಢವಾದ ಕಾಯ ಮತ್ತು ನಿರ್ಮಲವಾದ ಚಿತ್ತ ಇವೆರಡೂ ಪರಮಾರ್ಥಪ್ರಾಪ್ತಿಗೆ ಅತ್ಯವಶ್ಯವಾದವು. ಪರಬ್ರಹ್ಮನಿಂದ ಜನಿಸಿರುವ ಜನರು ಅವನನ್ನೇ ಮೊರೆಹೋಗುವುದು ಉತ್ಕೃಷ್ಟಮಾರ್ಗ. ಶಿವಕವಚ ಮತ್ತು ಇಂದ್ರಾಕ್ಷೀ ಸ್ತೋತ್ರಗಳ ಅನುಸಂಧಾನದಿಂದ ಶರೀರಸೌಖ್ಯ ಮತ್ತು ಶಾಂತಿ ದೊರಕುತ್ತವೆ.

(4) **ಶಿವಮಹಿಮ್ನಸ್ತೋತ್ರ:** ಪುಷ್ಪದಂತನೆಂಬ ಗಂಧರ್ವರಾಜನು ಶಿವನಿರ್ಮಾಲ್ಯವನ್ನು ತುಳಿದ ದೋಷದಿಂದ ತನ್ನ ದಿವ್ಯಶಕ್ತಿಯನ್ನು ಕಳೆದುಕೊಂಡು ಅದರ ಪರಿಹಾರಾರ್ಥವಾಗಿ ಶಿವನನ್ನು ಸ್ತುತಿಸಿದ ಕೃತಿ ಇದು. ಮನೋವಾಗತೀತನಾದ ಪರಬ್ರಹ್ಮನೇ ಆದ ಪರಮೇಶ್ವರನ ವೇದಾಂತ ವರ್ಣಿತ ವೈಶಿಷ್ಟ್ಯವನ್ನು ವಿಮರ್ಶಾತ್ಮಕವಾಗಿ ಸ್ತುತಿಸಲು ಪ್ರಾರಂಭಿಸಿ, ಆ ಶಿವನ ಕಾಮದಹನ, ಬ್ರಹ್ಮ–ವಿಷ್ಣುಗಳ ಪರಾಭವ, ರಾವಣನ ಗರ್ವಭಂಗ ಮೊದಲಾದ ಪುರಾಣ ಇತಿಹಾಸಗಳ ದೃಷ್ಟಾಂತಗಳಿಂದ ಆತನ ಮಹಿಮೆಯನ್ನು ಕೊಂಡಾಡುತ್ತಾ ನಾಮ–ರೂಪಾತೀತವಾದ ಪರಬ್ರಹ್ಮವೇ ಪರಮಶಿವನೆಂದು ನಿರೂಪಿಸಿ, ಕೊನೆಗೆ ನಮನದಿಂದ ಶಾರದಾ ದೇವಿಗೂ ವರ್ಣಿಸಲಸಾಧ್ಯವಾದ ಮಹಿಮಾನ್ವಿತ ಶಿವನ ಚರಣಾರವಿಂದಗಳಲ್ಲಿ ಸಮರ್ಪಿಸಿರುವ ಸುಂದರ ಗಂಭೀರವಾದ ಸ್ತೋತ್ರವಿದು. ಕೊಂಚ ಕ್ಲಿಷ್ಟವಾದ ರಚನೆಯಾದುದರಿಂದ ಶ್ರೀಶ್ರೀಗಳವರು ಪದಶಃ ಅರ್ಥ ಬರೆದು ವಿವರಿಸಿದ್ದಾರೆ.

(5) **ಶಿವಾನಂದಲಹರೀ:** ಶ್ರೀ ಶಂಕರಭಗವತ್ಪಾದರು ಶ್ರೀಶೈಲದ ಗುಹೆಯಲ್ಲಿ ರಚಿಸಿದ ಕೃತಿಯೆಂದು ಪ್ರಖ್ಯಾತವಾಗಿರುವ, ಭಕ್ತಿ–ಜ್ಞಾನಗಳ ಸಮ್ಮಿಶ್ರಣವಾಗಿರುವ ಭವ್ಯ ಸ್ತೋತ್ರವಿದು. ಭಕ್ತನು ಪರಮಾತ್ಮನ ಸೇವೆ, ದರ್ಶನ, ಮಿಲನ ಇವುಗಳಿಗೆ ಹಂಬಲಿಸುವ, ಬೇಡುವ ಮಧುಧಾರಾ ಸಮಾನವಾದ ನೂರು ಶ್ಲೋಕಗಳಿಂದ ಬೆಳಗುತ್ತಿದೆ. ಶ್ಲೋಕಗಳ ಅಭಿಪ್ರಾಯವನ್ನು ವಿವರಣೆಯೊಡನೆ ಚಪ್ಪರಿಸುವಂತೆ ಶ್ರೀಶ್ರೀಗಳವರು ಅನುವಾದಿಸಿದ್ದಾರೆ. ಅನುಸಂಧಾನದಿಂದ ಆನಂದಿಸುವವರೇ ಧನ್ಯರು. ಭಕ್ತಿಭಾವನೆಯನ್ನು ಬೆಳೆಸಿಕೊಳ್ಳಲು ಉಪಕಾರಿಯಾಗಿರುವ ಅಸದೃಶ ಕಾವ್ಯವಿದು.

(6) **ದಕ್ಷಿಣಾಮೂರ್ತಿಸ್ತೋತ್ರಮ್:** ವ್ಯಾಖ್ಯಾನಮುದ್ರಾಶೋಭಿತನಾದ, ಬೋಧಸ್ವರೂಪನಾದ ಪರಮಶಿವನನ್ನು ನಮಸ್ಕರಿಸಿರುವ ಸ್ತೋತ್ರವಿದು. ಕೇವಲ ಹತ್ತು ಶ್ಲೋಕಗಳುಳ್ಳ ಈ ಸ್ತೋತ್ರದ ಸಾರವನ್ನು ಬಹುಶಃ ಸಾವಿರ ಮುಖಿಉಳ್ಳ ಆದಿಶೇಷನೂ ವರ್ಣಿಸಲಾರ. ಈ ಕೃತಿಯ ತಾತ್ಪರ್ಯವನ್ನು ಅರಿತವನು ಬ್ರಹ್ಮಸ್ವರೂಪನೇ ಆಗುತ್ತಾನೆ. ಶ್ರೀ ಸುರೇಶ್ವರಾಚಾರ್ಯರು ಈ ಸ್ತೋತ್ರಕ್ಕೆ **"ಮಾನಸೋಲ್ಲಾಸ"** ಎಂಬ ಪ್ರಸಿದ್ಧ ವಾರ್ತಿಕವನ್ನು ಬರೆದಿದ್ದಾರೆ. [ಇದನ್ನು ಶ್ರೀಶ್ರೀಗಳವರು ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ]. ಸರ್ವಾತ್ಮಭಾವವೆಂಬ ಫಲವನ್ನು ಕೊಡುವ ಈ ಸ್ತೋತ್ರವು **"ಬ್ರಹಸತ್ಯಂ ಜಗನ್ಮಿಥ್ಯಾ"** ಎಂಬುದನ್ನು ದೃಢಪಡಿಸುತ್ತದೆ. [ಒಂದು ಸಲಹೆ – ಅರಿತ ವಿದ್ವಾಂಸರಿಂದ ಕಲಿತರೆ ಒಳಿತು].

(7) **ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್:** ಶ್ರೀ ಮಹಾಭಾರತದ ಅನುಶಾಸನ ಪರ್ವದಲ್ಲಿ ಭೀಷ್ಮ–ಯುಧಿಷ್ಠಿರರ ಸಂವಾದರೂಪದಲ್ಲಿರುವ ಇದು ಸರ್ವರಿಗೂ ಆದರಣೀಯವಾಗಿದೆ. ಮಾಲಾಮಂತ್ರದಂತಿರುವ ಇದು ಚತುರ್ವಿಧ ಪುರುಷಾರ್ಥಗಳನ್ನು ನೀಡುವಂತಹುದು ಎಂಬುದು ಅವತರಣಿಕೆ ಮತ್ತು ಫಲಶ್ರುತಿಯಲ್ಲಿ ಹೇಳಿದೆ. ಶ್ರೀಶ್ರೀಗಳವರು ಇದಕ್ಕೆ ಶ್ರೀಶಂಕರಾಚಾರ್ಯರು ಬರೆದಿರುವ ಭಾಷ್ಯವನ್ನು ಸಮಗ್ರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ವೇದಾಂತ, ಸ್ಮೃತಿ, ಪುರಾಣ ವಾಕ್ಯಗಳಿಂದ ಪ್ರತಿಪಾದಿತವಾದ ಭಾಷ್ಯವು ಮನೋಹರವಾಗಿದೆ. ಪರಮಾತ್ಮನ ವಿಶ್ವವ್ಯಾಪಕತ್ವವನ್ನು ತಿಳಿಸುವ **"ವಿಶ್ವಂ ವಿಷ್ಣುಃ ...."** ಎಂಬ ನಾಮಗಳಿಂದ ಪ್ರಾರಂಭಿಸಿ ಸಗುಣ ಮತ್ತು ನಿರ್ಗುಣೋಪಾಸನೆಗೆ ಅವಕಾಶ ಕಲ್ಪಿಸಿ ಸರ್ವಾಂತರ್ಯಾಮಿಯಾದ ಶ್ರೀಮನ್ನಾರಾಯಣನ ಪರತತ್ತ್ವೋಪಾಸನೆಗೆ ಮಾರ್ಗದರ್ಶಿಯಾಗಿದೆ.

(8) **ಭೀಷ್ಮಸ್ತವರಾಜ:** (ಶ್ರೀಮನ್ಮಹಾಭಾರತ – ಶಾಂತಿಪರ್ವ) ಭೀಷ್ಮಾಚಾರ್ಯರು ಮರಣಸಮಯದಲ್ಲಿ ಶ್ರೀಕೃಷ್ಣಪರಮಾತ್ಮನ ಸಂಮುಖದಲ್ಲಿ ಮಾಡಿದ ಸ್ತೋತ್ರವಿದು. ಪರಮಾತ್ಮನ ವಿಶ್ವರೂಪ, ದಶಾವತಾರಗಳು ಇವನ್ನು ಕುರಿತು ರಚಿಸಲ್ಪಟ್ಟಿದೆ. ಆತನ ವಿಭೂತಿಗಳನ್ನು ವೇದಸೂಕ್ತಿಗಳ ಆಧಾರದ ಮೇಲೆ ವರ್ಣಿಸಿದ್ದಾರೆ. ಈ ಸ್ತೋತ್ರದ ಅನುಸಂಧಾನದಿಂದ ಮರಣಕಾಲದಲ್ಲಿ ಗೋವಿಂದನ ಸ್ಮರಣೆ ಒದಗುವುದೆಂದು ಫಲಶ್ರುತಿ.

(9) **ಅನುಸ್ಮೃತಿ:** (ಶ್ರೀಮನ್ಮಹಾಭಾರತ – ಶಾಂತಿಪರ್ವ) ಶ್ರೀಮನ್ನಾರಾಯಣನ ಮಹಿಮೆ ಮತ್ತು ಸರ್ವವ್ಯಾಪಕತ್ವವನ್ನು ವಿವರಿಸುವ ಇದನ್ನು ಅಂತ್ಯಕಾಲದಲ್ಲಿ ಅವನ ಸ್ಮರಣೆ ಉಂಟಾಗಲಿ ಎಂದು ಸಂಕಲ್ಪಿಸಿ ಸದಾ ಪಠಿಸಬೇಕೆಂದು ಉಪದೇಶ.

(10) **ಗಜೇಂದ್ರಮೋಕ್ಷ:** (ಶ್ರೀಮದ್ಭಾಗವತ – 8ನೆಯ ಸ್ಕಂಧ – 2–3–4 ಅಧ್ಯಾಯ) ಅಗಸ್ತ್ಯಮಹರ್ಷಿಗಳ ಶಾಪದಿಂದ ಆನೆಯ ಜನ್ಮಪಡೆದ ಇಂದ್ರದ್ಯುಮ್ನನೆಂಬ ಪಾಂಡ್ಯರಾಜನ ವೃತ್ತಾಂತವಿದು. ಮೊಸಳೆಯ

ಹಿಡಿತದಿಂದ ಬಿಡಿಸಿಕೊಳ್ಳಲು ಶ್ರೀಹರಿಯನ್ನು ಸ್ತುತಿಸಿ ಮುಕ್ತಿಯನ್ನು ಪಡೆಯುತ್ತಾನೆ. ಅಧ್ಯಾತ್ಮಪರವಾದ ಸ್ತೋತ್ರವಿದು. ಪರಮಾತ್ಮನನ್ನು ಸಂಪೂರ್ಣವಾಗಿ ಮೊರೆಹೋಗುವುದೊಂದೇ ಸಂಸಾರದ ಬಿಡುಗಡೆ ಹೊಂದುವ ಉಪಾಯವೆಂದು ನಿರೂಪಿಸುತ್ತದೆ.

(11) **ಆದಿತ್ಯಹೃದಯ ಸ್ತೋತ್ರಮ್:** (ಶ್ರೀಮದ್ವಾಲ್ಮೀಕಿರಾಮಾಯಣ – ಯುದ್ಧಕಾಂಡ – 107 ಸರ್ಗ) ಅಗಸ್ತ್ಯಮಹರ್ಷಿಗಳು ಶ್ರೀರಾಮನಿಗೆ ಬ್ರಹ್ಮತೇಜಸ್ಸನ್ನು ಪಡೆದು ರಾವಣನನ್ನು ಸಂಹರಿಸುವ ಸಾಮರ್ಥ್ಯಹೊಂದಲು ಉಪದೇಶಿಸಿದ ಸೂರ್ಯಸ್ತೋತ್ರವಿದು. **"ಆರೋಗ್ಯಂ ಭಾಸ್ಕರಾದಿಚ್ಛೇತ್"** ಎಂಬಂತೆ ಆರೋಗ್ಯ, ಸುಖ, ಶಾಂತಿ, ಸಂಪತ್ತು ಎಲ್ಲವನ್ನು ಇಚ್ಛಿಸುವವರು ಈ ಸ್ತೋತ್ರವನ್ನು ನಿತ್ಯವೂ ಸಂಧ್ಯಾಕಾಲದಲ್ಲಿ ಪಠಿಸಬೇಕು.

(12) **ಶೀರಾಮಗೀತೆ:** (ಅಧ್ಯಾತ್ಮರಾಮಾಯಣ – ಉತ್ತರಕಾಂಡ – 5ನೆಯ ಸರ್ಗ) **"ತತ್ತ್ವಮಸಿ"** ಎಂಬ ಮಹಾವಾಕ್ಯ, ಸಮಾಧಿಯ ಲಕ್ಷಣ, ಭಕ್ತಿ ಇವೆಲ್ಲವನ್ನೂ **"ಉಪದೇಶಸಾಹಸ್ರೀ"** ಮತ್ತು **"ಪಂಚೀಕರಣ ವಾರ್ತಿಕ"** ಇವುಗಳಂತೆಯೇ ನಿರೂಪಿಸಲಾಗಿರುವ ಆತ್ಮ ಜಿಜ್ಞಾಸುಗಳಿಗೆ ಉಪಯುಕ್ತವಾಗುವ ಸ್ತೋತ್ರ. (ಶ್ರೀಶ್ರೀಗಳು ರಚಿಸಿರುವ ಭಜನೆಗೆ ಅನುಕೂಲವಾಗುವ **"ವಾಗ್ದೇವೀಸ್ತೋತ್ರ"** ಈ ಪುಸ್ತಕದಲ್ಲಿ ಮುದ್ರಿತವಾಗಿದೆ.)

(13) **ಶ್ರೀರಾಮಹೃದಯ:** (ಅಧ್ಯಾತ್ಮರಾಮಾಯಣ – ಸರ್ಗ 1) ಶ್ರೀರಾಮತತ್ತ್ವವು ಪರಬ್ರಹ್ಮತತ್ತ್ವವೇ ಆಗಿದೆಯೆಂದು ಅದ್ವೈತ ಮಾರ್ಗವನ್ನೇ ಸ್ಪಷ್ಟಪಡಿಸಿರುವ ಸ್ತೋತ್ರ.

(14) **ಲಕ್ಷ್ಮೀನರಸಿಂಹ ಪಂಚರತ್ನ:** ಐದೇ ಶ್ಲೋಕಗಳುಳ್ಳ ಇದರಲ್ಲಿ ಇಂದ್ರಿಯಗಳೇ ತಾನೆಂದು ತಿಳಿದು ಕ್ಷಣಿಕವಾದ ಸುಖಗಳನ್ನು ಅನುಭವಿಸುತ್ತಾ ಪರತಂತ್ರನಾಗಿರುವ ವಸ್ತುವೇ ಜೀವನೆಂದು ಸಂಬೋಧಿಸಿ ಅದರ ಭ್ರಾಂತಿಯನ್ನು ಹೋಗಲಾಡಿಸಲು ರಚಿಸಿರುವ ಸ್ತೋತ್ರ. ಕಪ್ಪೆಚಿಪ್ಪನ್ನು ಬೆಳ್ಳಿ ಎಂತಲೂ, ಸ್ವಪ್ನವನ್ನು ನಿಜವೆಂತಲೂ ತಿಳಿಯುತ್ತಾ ನಿಸ್ಸಾರವಾದ ಸಂಸಾರದಲ್ಲಿ ಮುಳುಗುವುದೇ ಭ್ರಮೆ. ಪ್ರಹ್ಲಾದನು ಶ್ರೀಲಕ್ಷ್ಮೀನರಸಿಂಹನನ್ನು ಸದಾ ಧ್ಯಾನಿಸಿ ಯಾವ ಭ್ರಮೆಗೂ ಒಳಗಾಗದೆ ಸುಖ, ಶಾಂತಿ, ಪಡೆದನೋ ಹಾಗೆಯೇ ಈ ಸ್ತೋತ್ರಪಠಣದಿಂದ ಸಮ್ಯಕ್‌ಜ್ಞಾನವನ್ನು ಪಡೆಯಬಹುದು.

(15) **ಷಟ್ಪದೀಸ್ತೋತ್ರಮ್:** ಶಬ್ದಪ್ರಾಸದಿಂದ ಅತಿಸುಂದರವಾದ ಅರ್ಥಗರ್ಭಿತವಾದ ಆರು ಶ್ಲೋಕಗಳಿಂದ ಶ್ರೀವಿಷ್ಣುವನ್ನು ಸ್ತುತಿಸಲಾಗಿದೆ. ಷಟ್ಪದ ಎಂದರೆ ದುಂಬಿ ಎಂದೂ, ಆರು ಪದ್ಯಗಳೆಂದೂ, ಆರು ಪದಗಳೆಂದೂ ಶ್ಲೇಷಾರ್ಥಗಳನ್ನು ಬಳಸಿ **"ನಾರಾಯಣ ಕರುಣಾಮಯ ಶರಣಂ ಕರವಾಣಿ ತಾವಕೌ ಚರಣೌ"** ಎಂಬ ಆರು ಪದಗಳು/ದುಂಬಿಗಳು/ಪದ್ಯಗಳು ಸದಾ ನನ್ನ ಮುಖಕಮಲದಲ್ಲಿ ವಾಸಮಾಡಲಿ ಎಂದು ಪ್ರಾರ್ಥಿಸಲಾಗಿದೆ. ಹಾಗೆಯೇ ಮೂರನೆಯ **"ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀ ನ ತ್ವಮ್ । ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ ॥"** ಎಂಬ ಶ್ಲೋಕದಲ್ಲಿ ಪರಮಾತ್ಮನಿಗೂ ಜೀವಾತ್ಮನಿಗೂ ನಿಜವಾಗಿ ಯಾವ ಭೇದವಿಲ್ಲವಾದರೂ ಜೀವಿಯಾದ ನಾನು ಪರಮಾತ್ಮನ ಸೃಷ್ಟಿಯೇ ವಿನಹ ಪರಮಾತ್ಮನು ನನ್ನಿಂದ ಸೃಷ್ಟಿಸಲ್ಪಟ್ಟಿಲ್ಲ. ಉದಾಹರಣೆಯಾಗಿ

– ಸಮುದ್ರದಿಂದ ಅಲೆಯೇ ಹೊರತು ಅಲೆಯಿಂದ ಸಮುದ್ರವಲ್ಲ. ತಾತ್ಪರ್ಯದಲ್ಲಿ ಅಲೆಯ ರೂಪದಲ್ಲಿ ತೋರುತ್ತಿರುವ ಈ ಪ್ರಪಂಚವು ಪರಬ್ರಹ್ಮವೆಂಬ ಸಮುದ್ರಕ್ಕಿಂತ ಬೇರೆಯಲ್ಲ ಎಂಬ ಪರಮ ಅದ್ವೈತ ಸತ್ಯವನ್ನು ಸುಲಭವಾಗಿ ಸುಂದರವಾಗಿ ನಿರೂಪಿಸಿದ್ದಾರೆ. ಶ್ರೀಶಂಕರರಲ್ಲದೆ ಬೇರೆ ಯಾರಿಂದ ಇಂತಹ ನಿರೂಪಣೆ ಸಾಧ್ಯ? ಇದನ್ನು ಕಂಠಪಾಠಮಾಡಿಕೊಂಡು ಹಾಡಿ ಆನಂದಿಸಿರಿ.

(16) **ಮೋಹಮುದ್ಗರ (ಭಜಗೋವಿಂದಂ):** ಶ್ರೀಶಂಕರಾಚಾರ್ಯರು ರಚಿಸಿರುವ ಸ್ತೋತ್ರಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ ಇದರಲ್ಲಿ ಜೀವನದರ್ಶನವು ಸರಳ ಪದ್ಯಗಳಲ್ಲಿ ವಿಶ್ಲೇಷಣಗೊಂಡಿದೆ. ಸಂಸಾರದ ನೀರಸತೆ, ಅಶಾಶ್ವತತೆ ಮುಂತಾದವನ್ನು ಬೋಧಿಸುತ್ತಾ **"ಯೋಗರತೋ ವಾ..."** ಎಂಬ ಪದ್ಯದಲ್ಲಿ ಜೀವನ್ಮುಕ್ತನ ಲಕ್ಷಣವನ್ನು ಒತ್ತಿ ಹೇಳಿದ್ದಾರೆ. ಆತ್ಮಜ್ಞಾನ, ಸತ್ಸಂಗ ಇವುಗಳ ಹಿರಿಮೆಯನ್ನು ಕೊಂಡಾಡಿದ್ದಾರೆ. ಈ ಪದ್ಯಗಳು ಹಲವಾರು ಭಾಷೆಗಳಲ್ಲಿ ಪದ್ಯಾಂತರವಾಗಿರುವುದು ಈ ಸ್ತೋತ್ರದ ವ್ಯಶಿಷ್ಟ್ಯವನ್ನು ಸಾರುತ್ತಿದೆ.

(17) **ಮನೀಷಾಪಂಚಕಮ್:** ಶ್ರೀಶಂಕರವಿಜಯದಲ್ಲಿ ಬರುವ ವೇದಾಂತತಾತ್ಪರ್ಯಗರ್ಭಿತ ಸನ್ನಿವೇಶ. ಚಂಡಾಲ ವೇಷದ ಶಿವನಿಂದ ಶ್ರೀಶಂಕರನಿಗೆ ಜ್ಞಾನಬೋಧೆಯ ನೆಪದಿಂದ ಆತ್ಮವಸ್ತುವು ಪ್ರಾಪಂಚಿಕ ಉಪಾಧಿಗಳಾದ ಜಾತಿ, ಲಿಂಗ, ಭಾಷೆ ಮುಂತಾದವನ್ನು ಮೀರಿ ಬೆಳಗುವಂತಹುದು ಎಂದು ಪ್ರಪಂಚಕ್ಕೆ ಮಹಾವಾಕ್ಯಗಳ ನಿರೂಪಣೆಯಂತಿರುವ ಈ ಐದು ಶ್ಲೋಕಗಳು ಹೇಳಲಾಗಿವೆ. ಸರ್ವಾತ್ಮಪ್ರಜ್ಞೆಯೇ ಫಲಶ್ರುತಿ.

ಶ್ಲೋಕ (1) ಜಾಗ್ರತ್ ಸ್ವಪ್ನಸುಷುಪ್ತಿಷು..... **"ಪ್ರಜ್ಞಾನಂ ಬ್ರಹ್ಮ"** (ಋಗ್ವೇದ, ಐತರೇಯ 3–3)
ಶ್ಲೋಕ (2) ಬ್ರಹ್ಮೈವಾಹಮಿದಂ....."ಅಹಂ ಬ್ರಹ್ಮಾಸ್ಮಿ" (ಯಜುರ್ವೇದ, ಬೃಹದಾರಣ್ಯಕ 1–4–10)
ಶ್ಲೋಕ (3) ಶಶ್ವನ್ನಶ್ವರ ಮೇವ..... **"ತತ್ತ್ವಮಸಿ"** (ಸಾಮವೇದ, ಛಾಂದೋಗ್ಯ 6–14–3)
ಶ್ಲೋಕ (4) ಯಾ ತಿರ್ಯಙ್..... **"ಅಯಮಾತ್ಮಾ ಬ್ರಹ್ಮ"** (ಅಥರ್ವವೇದ. ಮಾಂಡೂಕ್ಯ 1–2)
ಶ್ಲೋಕ (5) ಯತ್ಸೈಖ್ಯಾಂ ಬುಧಿ..... **"ಬ್ರಹ್ಮವೇದ ಬ್ರಹ್ಮೈವ ಭವತಿ"** (ಅಥರ್ವ ವೇದ ಮುಂಡಕ 3–2–9)

(18) **ಮುಕುಂದ ಮಾಲಾ:** ವೈಷ್ಣವ ಸಂಪ್ರದಾಯದ ಶ್ರೀಕುಲಶೇಖರ ಎಂಬ ರಾಜನು ರಚಿಸಿರುವ ಈ ಸ್ತೋತ್ರವು ಮುಕ್ತಿದಾಯಕನಾದ ಮುಕುಂದನನ್ನು ಕುರಿತಾಗಿದೆ. ನಾಮ ಸ್ಮರಣೆ, ಕೀರ್ತನೆ, ಪ್ರೇಮಭಕ್ತಿ, ವೈರಾಗ್ಯ, ಶರಣಾಗತಿ ಮುಂತಾದ ಅಂಶಗಳಿಂದ ಕೂಡಿಕೊಂಡು ಗಾನಯೋಗ್ಯವಾದ ಪುರಾತನ ಕೃತಿ ಇದು. **"ಏಕಂ ಸದ್ವಿಪ್ರಾ ಬಹುಧಾ ವದಂತಿ"** ಎಂಬ ವೇದಘೋಷದಂತೆ ಎಲ್ಲಾ ಪಂಥದವರೂ ಆದರದಿಂದ ಪಠಿಸಿ ಪುನೀತರಾಗಬಹುದು.

(19) **ಹರಿಶರಣಾಷ್ಟಕಮ್:** (ಶ್ರೀಬ್ರಹ್ಮಾನಂದಪರಮಹಂಸಸ್ವಾಮಿಗಳ ಕೃತಿ) **"ಏಕಮೇವಾದ್ವಿತೀಯಂ ಬ್ರಹ್ಮ"** ಎಂಬಂತೆ ನಾನಾ ಪಂಥೀಯರು ಗಣೇಶ, ಸೂರ್ಯ, ಅಂಬಿಕೆ, ಶಿವ, ವಿಷ್ಣು, ಸ್ಕಂದ ಎಂದೆಲ್ಲಾ ಉಪಾಸನೆಮಾಡುವ ಪರಬ್ರಹ್ಮವು ಒಂದೇ ಆಗಿ ಜ್ಞಾನಸ್ವರೂಪದಿಂದ ಬೆಳಗುತ್ತಿದೆ ಎಂದು ಸಾರಲು ಜ್ಞಾನ (ಶಬ್ದ) ಪ್ರತಿನಿಧಿಯಾದ ಶಂಖವನ್ನು ಧರಿಸಿರುವ ವಿಷ್ಣುವನ್ನು ಶರಣುಹೋಗಿರುವ ಸ್ತೋತ್ರ.

ಶರಣಾಗತರನ್ನು ಪರಮಾತ್ಮನು ಎಂದೆಂದೂ ಸಲಹುತ್ತಾನೆಂದು ಬೋಧಿಸಿದೆ. ಆರ್ತರ ಸ್ಥಿತಿಯನ್ನು ನಿರೂಪಿಸಲಾಗಿದೆ. ಶ್ರೀಶ್ರೀಗಳವರ ವಿಸ್ತಾರ ವ್ಯಾಖ್ಯಾನವನ್ನು ಓದಿ ಆನಂದಿಸಿರಿ.

(20) ಆತ್ಮವಿದ್ಯಾವಿಲಾಸ: (ಶ್ರೀಶ್ರೀಸದಾಶಿವಬ್ರಹ್ಮೇಂದ್ರರ ಕೃತಿ) ಅವಧೂತ ಜೀವನ್ಮುಕ್ತನ ಚರ್ಯೆಯನ್ನು ವಿವರಿಸಿರುವ ಕೃತಿ. ಸರ್ವಂಬ್ರಹ್ಮಮಯಂ ಎಂದು ಪಾಡಿ ನಲಿದ ಮಹಾತ್ಮರ ಅನುಭವ ದರ್ಶನ ಇದರಲ್ಲಿದೆ.

(21) ಶ್ರೀಸದಾಶಿವೇಂದ್ರಸ್ತುತಿ ಮತ್ತು ಪಂಚರತ್ನ: ದಕ್ಷಿಣಾಮ್ನಾಯ ಶೃಂಗೇರೀ ಶಾರದಪೀಠದ 33ನೆಯ ಅಧಿಪತಿಗಳಾಗಿದ್ದ ಶ್ರೀಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮಹಾಸ್ವಾಮಿಗಳವರು ಜೀವನ್ಮುಕ್ತ ಅವಧೂತ ಶ್ರೀಶ್ರೀ ಸದಾಶಿವಬ್ರಹ್ಮೇಂದರ ಚರಿತ್ರೆಯನ್ನು ಸಂಶೋಧಿಸಿ ರಚಿಸಿದಂತಹ ಸ್ತೋತ್ರಗಳು. ಅಧ್ಯಾತ್ಮ ಜಿಜ್ಞಾಸುಗಳಿಗೆ ಬೆಳಕನ್ನು ತೋರಿಸುವ ಕೃತಿ.

(22) ಪ್ರಕರಣಗಳ ರೂಪದಲ್ಲಿರುವ ಕೆಲವು ಚಿಕ್ಕ ಕೃತಿಗಳು: ನಿರ್ವಾಣಷಟ್ಕ, ಉಪದೇಶಪಂಚಕ, ಯತಿಪಂಚಕ, ಧನ್ಯಾಷ್ಟಕ, ಪ್ರಾತಃಸ್ಮರಣ ಸ್ತೋತ್ರ, ಕಾಶೀಪಂಚಕ, ಅದ್ವೈತಪಂಚರತ್ನ, ದಶಶ್ಲೋಕೀ, ಏಕಶ್ಲೋಕೀ, ನಿರ್ವಾಣಮಂಜರೀ, ಮಯಾಪಂಚಕ.

ಇವುಗಳಲೆಲ್ಲಾ ಅದ್ವೈತವನ್ನೇ ಪ್ರತಿಪಾದಿಸಿ ಜೀವನ್ಮುಕ್ತನ 'ಶಿವೋಽಹಂ' ಎಂಬ ಘೋಷಣೆ ಇದೆ. ಪ್ರಾರಂಭಿಕರಿಗೆ ಅನುಕೂಲವಾಗುವ ಪ್ರಕರಣಗಳಿವು. [ಇವೆಲ್ಲವನ್ನೂ ಶ್ರೀಶ್ರೀಗಳವರು ಆಂಗ್ಲ ಭಾಷಾನುವಾದದೊಂದಿಗೂ ಪ್ರಕಟಿಸಿದ್ದಾರೆ.]

(23) ಮೇಲ್ಕಂಡ ಸ್ತೋತ್ರಗಳಲ್ಲದೆ ಅಧ್ಯಾತ್ಮಕಾರ್ಯಾಲಯದ ಪಂಡಿತರಾದ ವಿದ್ವಾನ್ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು ಅನುವಾದಿಸಿರುವ ಇತರ ಸ್ತೋತ್ರಗಳನ್ನು **"ಸ್ತೋತ್ರಮಾಲಾ–2"** ಎಂದು ಪ್ರಕಟಿಸಿದ್ದಾರೆ.

(24) ಉಪಸಂಹಾರ: ದುರ್ಲಭವಾದ ಮನುಷ್ಯ ಜನ್ಮಪಡೆದವರು ಮತ್ತೆ ಮತ್ತೆ ಜನನ–ಮರಣವೆಂಬ ಸಂಕೋಲೆಯಿಂದ ತಪ್ಪಿಸಿಕೊಳ್ಳಲು ಪರಮಾತ್ಮನನ್ನು ನಂಬಿ ಶರಣಾಗುವುದೊಂದೇ ಸುಲಭವಾದ ಉಪಾಯ ವೆಂದು ಶ್ರೀಮದ್ಭಗವದ್ಗೀತೆಯ (18–65) (18–66)ನೆಯ ಶ್ಲೋಕಗಳಲ್ಲಿ ಪರಮಾತ್ಮನೇ ತಿಳಿಸಿದ್ದಾನೆ.

ಪರಮಾತ್ಮನೊಡನೆ ಇರುವ ನಿಕಟವಾದ ಸಂಬಂಧವನ್ನು ಸ್ಮರಿಸಲು ಸ್ತೋತ್ರಗಳು ಸಾಧನವಾಗಿವೆ. ಉಪಾಸನೆಯ ವಿಷಯದಲ್ಲಿ ಈ ಶ್ಲೋಕವನ್ನು ನೋಡಿರಿ.:

"ಪ್ರಥಮಾ ಪ್ರತಿಮಾಪೂಜಾ ಜಪಸ್ತೋತ್ರಾಣಿ ಮಧ್ಯಮಾ ।
ಉತ್ತಮಾ ಮಾನಸೀಪೂಜಾ ಸೋಽಹಂ ಪೂಜೋತ್ತಮೋತ್ತಮಾ ॥

ಹೀಗೆ ಬಾಹ್ಯಪೂಜೆ, ಸ್ತೋತ್ರಾನು ಸಂಧಾನ, ಮಾನಸಿಕ ಪೂಜೆ ಎಂಬ ಹಂತಗಳನ್ನು ಕ್ರಮವಾಗಿ ದಾಟಿ "ಅಹಂ ಬ್ರಹ್ಮಾಸ್ಮಿ" ಎಂಬ ಸತ್ಯವಾದ ಶಾಶ್ವತವಾದ ಪ್ರಜ್ಞೆಯಲ್ಲಿ ನೆಲೆನಿಲ್ಲುವುದೇ ಜನ್ಮದ ಗುರಿಯಾಗಬೇಕು.

ಶ್ರೀಶ್ರೀಗಳವರ ಅಪಾರ ಲೇಖನಗಳನ್ನು ಅವರ ಅನುಗ್ರಹವೆಂದುಭಾವಿಸಿ ಅವರ ದಿವ್ಯ ಚರಣಾರವಿಂದಗಳಲ್ಲಿ ಈ ಪಕ್ಷಿನೋಟದಂತಹ ಲೇಖನವನ್ನು ಸಮರ್ಪಿಸುತ್ತಿದ್ದೇನೆ.

* * * * *

ಸುಮೇರುಸದೃಶ ಸದ್ಗುರುಗಳು

– ಪ್ರೊ॥ ಜಿ. ಶಿವರಾಮ ಅಗ್ನಿಹೋತ್ರಿ
ಮೊಬೈಲ್: 9480507529

ಪರಮಪೂಜ್ಯ ಪ್ರಾತಃಸ್ಮರಣೀಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಅಧ್ಯಾತ್ಮ ಪ್ರಕಾಶಕಾರ್ಯಾಲಯವನ್ನು ಸ್ಥಾಪಿಸುವದಕ್ಕಿಂತ ಮೊದಲಿನ ವೇದಾಂತಪ್ರಚಾರದ ಸ್ಥಿತಿಯನ್ನು ಹುಡುಕಹೊರಟರೆ ಕಂಡುಬರುವದಿಷ್ಟು: ಕರ್ನಾಟಕವಷ್ಟೇ ಅಲ್ಲ ಭಾರತಾದ್ಯಂತ ಶಾಂಕರವೇದಾಂತ ಚಿಂತನೆಯಲ್ಲಿ ತೊಡಗಿದ ಚಿಂತಕರು ಎಷ್ಟಿದ್ದಿರಬಹುದು ಎಂದು ಊಹಿಸಿದರೆ ಬಹುಷಃ ನೂರರ ಗಡಿಯನ್ನೂ ದಾಟಲಾರದೇನೊ ಅವರೂ ಸಹ ಭಾಗವತ, ರಾಮಾಯಣಾದಿ ಪುರಾಣದ ಕಥೆಗಳ ಪ್ರವಚನ, ವಿವರಣೆಗಳಲ್ಲಿಯೇ ಮುಗಿಸುತ್ತಿದ್ದುದನ್ನು ನಾನೂ ಗಮನಿಸಿದ್ದೇನೆ. ಇನ್ನು ಬೆರಳೆಣಿಕೆಯ ನಾಲ್ಕಾರು ಪಂಡಿತ ಪ್ರಕಾಂಡರು ವಾಕ್ಯಾರ್ಥಪ್ರಕ್ರಿಯೆಯಲ್ಲಿ ಭಾಗವಹಿಸಿ ತಮಗೆಮಾತ್ರ ಅರ್ಥವಾಗಿದ್ದಕ್ಕಾಗಿ ಹಿಗ್ಗಿದ್ದನ್ನೂ ನೋಡಿದ್ದೇನೆ. ಕುತೂಹಲವಿರುವ ಸಾಮಾನ್ಯಜನರಿಗೆ 'ವೇದಾಂತವೆಂದರೆ ತನಗೂ ತಿಳಿಯದ ಬೇರೆಯವರಿಗೂ ತಿಳಿಸಲಾಗದ ಒಂದು ಪ್ರಕಾರ' ಎಂದೇ ಭಾವನೆ ಬೇರುಬಿಟ್ಟ ಕಾಲವಾಗಿತ್ತು. ಆಗ ಸಾಮಾನ್ಯಜನರ ಅರಿವನ್ನು ವಿಕಾಸಗೊಳಿಸುವ ದಿವ್ಯಜ್ಯೋತಿಯಾದ ಶ್ರೀಸದ್ಗುರುಗಳು ತಮ್ಮ ಬರವಣಿಗೆ ಮತ್ತು ಉಪನ್ಯಾಸಗಳ ಮೂಲಕ ಬೆಳಕನ್ನು ಚೆಲ್ಲಿದರು. ಜನರಲ್ಲಿ ವೇದಾಂತದ ಬಗ್ಗೆ ತಿಳಿಯುವ ಕುತೂಹಲವನ್ನು ಮೂಡಿಸಿದ ಮೊದಲಿಗ ಮಹಾತ್ಮರಾದರು.

ಶ್ರೀಸದ್ಗುರುಗಳು ಸ್ವತಃ ತಾವೇ ಬೇರೆಬೇರೆ ಸ್ಥಳಗಲ್ಲಿ ಪ್ರತಿನಿತ್ಯ ವೇದಾಂತೋಪನ್ಯಾಸಗಳನ್ನು ಮಾಡಿ ಸಾಮಾನ್ಯರಿಗೂ ಶ್ರೀಶಂಕರಭಗವತ್ಪಾದರ ಬಗ್ಗೆ ಒಲವನ್ನು ಹೆಚ್ಚಿಸಿದ್ದನ್ನು ನಾವಿಂದು ಗಮನಿಸಬಹುದು. ತಿಳಿಗನ್ನಡದಲ್ಲಿ–ಆಂಗ್ಲಭಾಷೆಯಲ್ಲಿ ಭಗತ್ಪಾದರ ಎಲ್ಲಾ ಕೃತಿಗಳನ್ನೂ ಸುಲಭ ಶೈಲಿಯಲ್ಲಿ ಅನುವಾದಿಸಿ ಪ್ರಕಾಶನಗೊಳಿಸಿದರು. ಅವರು ಅನುವಾದಿಸಿದ, ತಾವೇ ಬರೆದ ಪುಸ್ತಕಗಳು 200ಕ್ಕಿಂತ ಹೆಚ್ಚಿವೆ. ಅವುಗಳ ಮಾರಾಟ ಲಕ್ಷವನ್ನೂ ದಾಟಿರುವದನ್ನು ನಾವು ಗಮನಿಸಿದರೆ ಲಕ್ಷಾಂತರ ಜನರನ್ನು ಆಧ್ಯಾತ್ಮಿಕ ಚಿಂತನೆಗೆ ಕರೆತಂದ ಮಹಾಪುರುಷರಲ್ಲಿ ಶ್ರೀಶಂಕರರ ನಂತರ ನಮ್ಮ ಸದ್ಗುರುಗಳೇ ಮೊದಲನೆಯವರು. ಹೆಚ್ಚೇಕೆ? ಬಹುಷಃ ಈ ಶತಮಾನದಲ್ಲಿ ಕೊನೆಯವರೂ ಮೊದಲಿಗರೇ ಆಗಬಹುದೇನೊ? ಹೊಳೆನರಸೀಪುರ ಮತ್ತು ಬೆಂಗಳೂರಿನ ಕಾರ್ಯಾಲಯಗಳಲ್ಲಿ ಪ್ರತಿನಿತ್ಯ ವೇದಾಂತ ಪ್ರವಚನಗಳನ್ನು ನಡೆಸಲು ಬೇಕಾದ ವ್ಯವಸ್ಥೆಯನ್ನು ಮಾಡಿ ತಮ್ಮ ಅಸ್ಥಿತ್ವವನ್ನು ಸಫಲಗೊಳಿಸಿಕೊಂಡಿದ್ದಾರೆ. ನಾನೂ ಸಹ ಶ್ರೀಸದ್ಗುರುಗಳ ಇಚ್ಛೆಗೆ ಪೂರಕವಾಗಿ ಸಾವಿರಾರು ವೇದಾಂತೋಪನ್ಯಾಸಗಳನ್ನು ಈ ಸ್ಥಳಗಳಲ್ಲಿ ಮಾಡಿ ನನ್ನ ಅಳಿಲು ಸೇವೆಯನ್ನು ನಿರಪೇಕ್ಷ–ನಿಷ್ಕಲ್ಮಷ ಭಾವದಲ್ಲಿ ಶ್ರೀಸದ್ಗುರುಗಳಿಗೆ ಸಮರ್ಪಿಸಿ ತೃಪ್ತನಾಗಿದ್ದೇನೆ, ಈಗಲೂ ಸಹ ತೃಪ್ತನಾಗುತ್ತಲೂ ಇದ್ದೇನೆ.

ಕೊನೆಯದಾಗಿ ಹೇಳಲೇಬೇಕಾದ ಒಂದು ವಿಷಯವನ್ನು ನಾನು ಹೆಚ್ಚಾಗಿ ಗಮನಿಸಿದ್ದು ಹೀಗಿದೆ– ಕಾರ್ಯಾಲಯದ ಗ್ರಂಥಾಲಯದಲ್ಲಿರುವ ಶ್ರೀಸದ್ಗುರುಗಳು ಅಧ್ಯಯನಮಾಡಿದ ಪುಸ್ತಕಗಳು ಸಾವಿರಾರು ಇವೆ. ವೇದಾಂತ–ಮೀಮಾಂಸಾ–ಸಾಂಖ್ಯ–ಯೋಗವೇ ಮೊದಲಾದುದಕ್ಕೆ ಸೇರಿದ ಸಾವಿರಾರು ಗ್ರಂಥಗಳು

ಶ್ರೀಸದ್ಗುರುಗಳ ಸ್ಪರ್ಶಸುಖವನ್ನು ಅನುಭವಿಸಿವೆ. ಇಲ್ಲಿ ಪುಸ್ತಕಗಳ ಸ್ಪರ್ಶದಿಂದ ಗುರುಗಳು ಧನ್ಯರೋ ಅಥವಾ ಗುರುಗಳ ಸ್ಪರ್ಶದಿಂದ ಪುಸ್ತಕಗಳು ಧನ್ಯವಾದವೋ ನಾನರಿಯೆ. ಆದರೆ ನಾನು ಮಾತ್ರ ಆ ಪುಸ್ತಕಗಳನ್ನು ತೆರೆದು ತೆರೆದು ಶ್ರೀಸದ್ಗುರುಗಳ ಪಾದಸ್ಪರ್ಶದ ಸಂತೋಷವನ್ನು ಅನುಭವಿಸಿದ್ದೇನೆ. ಅದ್ವೈತಸಿದ್ಧಿ, ಖಂಡನಖಂಡಖಾದ್ಯದಿಂದ ಹಿಡಿದು ಶಾಬರಭಾಷ್ಯದವರೆಗೂ ಪ್ರತಿಯೊಂದು ಪುಟದಲ್ಲಿಯೂ ಹತ್ತಾರು ಕಡೆ ಮುಖ್ಯವಾದ ಗುರುತು(ಮಾರ್ಕ)ಗಳಿವೆ. ಆ ವಿಷಯಗಳನ್ನು ತಾವು ಅನುವಾದಿಸಿದ ಪುಸ್ತಕದ ಪ್ರತಿಯೊಂದು ಪುಟದಲ್ಲಿಯೂ ಸಮಯೋಚಿತವಾಗಿ ಪ್ರಮಾಣಗಳನ್ನಾಗಿ ಒದಗಿಸಿದ್ದಾರೆ. ಇದು ಅನುವಾದಕನ ಅರಿವಿನ ಆಳ ಮತ್ತು ನಿಷ್ಠುರವಾದ ಕರ್ತವ್ಯಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಜೊತೆಜೊತೆಗೆ ಶ್ರೀಸದ್ಗುರುಗಳ ತಲಸ್ಪರ್ಶಿಯಾದ ಅಧ್ಯನವನ್ನು ನಮಗೆ ತಿಳಿಸುತ್ತಿವೆ.

ನನ್ನ ಅಂತಿಮಹಾರೈಕೆ ಇಷ್ಟೆ – ಶ್ರೀಸದ್ಗುರುಗಳು 'ನನ್ನಲ್ಲಿ ಆಧ್ಯಾತ್ಮಿಕ ಚಿಂತನೆ ಸದಾ ಜಾಗೃತವಾಗಿರುವಂತೆ ಮತ್ತು ಅದಕ್ಕೆ ತಕ್ಕಂತೆ ಬದುಕು ಮುಂದುವರಿಯುವಂತೆ' ಕರುಣಿಸಲಿ.

* * * * *

ಸಾಧನೆಗಳು

1. ವೇದಾಂತಕ್ಕೆ ಮನಸ್ಸಿನ ಬಲ ಮುಖ್ಯವೇ ಹೊರತು ಜಾಣತನವಲ್ಲ.
2. ಪ್ರಿಯವಾಗಿದ್ದರೂ ಹಿತವಾಗಿಲ್ಲದಿದ್ದರೆ ಅದನ್ನು ಬಿಟ್ಟುಬಿಡಲೇಬೇಕು.

ಭಕ್ತಿ

ಕರ್ಮಯೋಗ ಕರ್ಮಕ್ಕಲ್ಲ. ಧ್ಯಾನಯೋಗ ಧ್ಯಾನಕ್ಕಲ್ಲ. ಪರಮಾತ್ಮನಿಗಾಗಿಯೇ. ಕರ್ಮಯೋಗಕ್ಕೂ ಭಗವಂತನೇ, ಧ್ಯಾನಯೋಗಕ್ಕೂ ಗುರಿ ಭಗವಂತನೇ. ಈಶ್ವರನಿಗೂ ನಮಗೂ ಸಂಬಂಧ ಬಂದರೆ ಗೆದ್ದೆವು.

– ಶ್ರೀ ಸಚ್ಚಿದಾನಂದವಾಣಿ

ಜಯ ಶ್ರೀರಾಮ

ಕಾರ್ಯಾಲಯದಿಂದ ಸಾಮಾಜಿಕ ಪ್ರಯೋಜನ

– ವಿದ್ವಾನ್ ಶ್ರೀ ಜಿ.ಎಸ್. ವೆಂಕಟೇಶ ಶರ್ಮಾ (ಹರಿ)

ವಾಚಕ ಮಹಾಶಯರಿಗೆ ನಮಸ್ಕಾರ,

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸದ್ಗುರುಗಳಿಂದ ಸ್ಥಾಪಿತವಾದ ನಮ್ಮ "ಅಧ್ಯಾತ್ಮಪ್ರಕಾಶ ಕಾರ್ಯಾಲಯವು" 100ನೇ ವರ್ಷಕ್ಕೆ ಕಾಲಿಟ್ಟಿರುವುದು ಬಹಳ ಸಂತಸದ ವಿಷಯ. ಮತ್ತು ಇದು ಶ್ರೀ ಶ್ರೀಗಳ ಸಂಕಲ್ಪಶಕ್ತಿಯ ದ್ಯೋತಕವೂ ಆಗಿದೆ. ಇದುವೇ ಕಾರ್ಯಾಲಯದಿಂದ ಸಮಾಜಕ್ಕೆ ಆಗುತ್ತಿರುವ ಪ್ರಯೋಜನವನ್ನೂ ತೋರಿಸುತ್ತಿದೆ. ಕಾರ್ಯಾಲಯದಿಂದ ಆಗುತ್ತಿರುವ ಕೆಲವು ಪ್ರಯೋಜನಗಳನ್ನು ಕೊನೆಯಲ್ಲಿ ಪಟ್ಟಿ ಮಾಡಿರುತ್ತೇನೆ. ಇಲ್ಲದಿದ್ದರೆ ಕೇವಲ ಜನರಿಂದಲೇ ನಡೆಯುತ್ತಿರುವ ಸಂಸ್ಥೆಯೊಂದು ಯಾವುದೇ ಸಾಮಾಜಿಕ ಪ್ರಯೋಜನವಿಲ್ಲದಿದ್ದರೆ ನೂರು ವರ್ಷಗಳು ಸತತವಾಗಿ ನಡೆಯುವುದೇ? ಒಂದು ಸಂಸ್ಥೆಯು ತನ್ನ ಧ್ಯೇಯೋದ್ದೇಶಗಳನ್ನು ಸರಿಯಾಗಿ ನಡೆಸುತ್ತಾ ನೂರು ವರ್ಷಗಳನ್ನು ಪೂರೈಸಿರುವದು ಆ ಸಂಸ್ಥೆಯ ಮೇಲೆ ಇರುವ ಭಗವದನುಗ್ರಹವನ್ನೂ ಸೂಚಿಸುತ್ತದೆ.

ಈ ಸಂಸ್ಥೆಯಿಂದ ಸಮಾಜಕ್ಕೆ ಆಗುತ್ತಿರುವ ಪ್ರಯೋಜನವೇನು? ಎಂದು ಚಿಂತಿಸುವ ಮೊದಲು ನಾವು 'ಸಮಾಜ' ಎಂದರೇನು ಎಂದು ಚಿಂತಿಸಬೇಕು. ಸಂಸ್ಕೃತಭಾಷೆಯಲ್ಲಿ 'ಸಮಜ' ಮತ್ತು 'ಸಮಾಜ' ಎಂದು ಎರಡು ಶಬ್ದಗಳಿವೆ. 'ಸಮಾಜ' ಎಂದರೆ ಜನರ ಪಶುಗಳ ಗುಂಪು ಎಂದಷ್ಟೇ ಅರ್ಥವೆಂದು ಶ್ರೀ ಪಾಣಿನಿ ಮಹರ್ಷಿಗಳು ತಮ್ಮ ವ್ಯಾಕರಣಸೂತ್ರ – "ಸಮುದೋರಜಃ ಪಶುಷು" ಎಂಬಲ್ಲಿ ತಿಳಿಸಿದ್ದಾರೆ. ಆದರೆ 'ಸಮಾಜ' ಎಂದರೆ ಜನರು ಒಂದಾನೊಂದು ವ್ಯವಸ್ಥೆಯಲ್ಲಿದ್ದುಕೊಂಡಿರುವದು ಎಂದರ್ಥ. ಇದನ್ನು 'ಪಶೂನಾಂ ಸಮಜಃ ಅನ್ಯೇಷಾಂ ಸಮಾಜಃ' ಎಂದು ಅಮರಕೋಶದಲ್ಲಿಯೂ ತಿಳಿಸಿದೆ. ಆದ್ದರಿಂದ ಸಮಾಜ ಎಂದರೆ ಜನರು ಒಂದಾನೊಂದು ವ್ಯವಸ್ಥೆಯಲ್ಲಿದ್ದು "ಧರ್ಮ ಅರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆದು ಸುಖಿಸುವ ಜಾಗ, ಸ್ಥಳ, ವಾತಾವರಣ ಎಂಬರ್ಥವನ್ನು ಹೇಳಬಹುದು.

ಈ ದೃಷ್ಟಿಯಿಂದ ಯೋಚಿಸಿದಾಗ ಅರ್ಥ, ಕಾಮಗಳನ್ನು ಪಡೆಯಲು ಲೌಕಿಕ ವೈದಿಕ ಎಂಬ ಎರಡು ಹಾದಿಗಳಿವೆ. ಲೌಕಿಕದಲ್ಲಿ ನ್ಯಾಯ ಮತ್ತು ಅನ್ಯಾಯ ಎಂಬ ಎರಡು ಮಾರ್ಗಗಳು ಅದರಲ್ಲಿ ಅನ್ಯಾಯಮಾರ್ಗ ತ್ಯಾಜ್ಯವಾದುದು. ಇನ್ನು ನ್ಯಾಯಮಾರ್ಗವನ್ನು ಶಾಸ್ತ್ರೀಯ ಕರ್ಮವನ್ನಾಗಿ ಮಾಡಿಕೊಳ್ಳಬಹುದೆಂದು ಭಗವಂತನು ಯತ್ಕರೋಷಿ ಯದಶ್ನಾಸಿ... ಎಂದು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಇನ್ನು ಧರ್ಮವೆಂದರೇನು? ಎಂಬುದನ್ನು ನಾವು ಶಾಸ್ತ್ರದಿಂದಲೇ ತಿಳಿಯಬೇಕು. ಲೋಕದಲ್ಲಿ ಸಹಜವಾಗಿ ತೋರುವ ಧರ್ಮವೂ (ಹಿಂಸೆಮಾಡದಿರುವದು, ಮೋಸಮಾಡದಿರುವದು ಇತ್ಯಾದಿ) ಶಾಸ್ತ್ರದಿಂದಲೇ ತಿಳಿದುಬಂದು ಅನೇಕ ವರ್ಷಗಳಿಂದ ಶಿಷ್ಯರು ನಡೆಸಿಕೊಂಡು ಬಂದಿರುವುದರಿಂದ ಲೋಕದಿಂದಲೇ

ಇದು ತಿಳಿದುಬಂದಿದೆ ಎನಿಸುತ್ತದೆ. ಧರ್ಮವೆಂದರೇನು? ಎಂಬುದನ್ನು ನಾನು ಇಲ್ಲಿ ವಿವರಿಸಲು ಹೋಗುವುದಿಲ್ಲ. ಆದರೆ ಆರ್ಥಕಾಮಗಳು ಧರ್ಮದ ಆಧಾರವನ್ನು ಹೊಂದಿರಬೇಕೆಂದೂ, ಅವುಗಳು ಮೋಕ್ಷವೆಂಬ ಗುರಿಯನ್ನು ಇಟ್ಟುಕೊಂಡಿರಬೇಕೆಂದೂ ತಿಳಿಸುವದಕ್ಕೆ ಧರ್ಮ ಮತ್ತು ಮೋಕ್ಷಗಳ ಮಧ್ಯದಲ್ಲಿ ಅವುಗಳನ್ನು ಸೇರಿಸಿದ್ದಾರೆ. ಆದ್ದರಿಂದ ಧರ್ಮ, ಅರ್ಥ, ಕಾಮಗಳಂತೆಯೇ ಮೋಕ್ಷವೆಂಬ ಪುರುಷಾರ್ಥದ ಬಗೆಗೂ ನಾವು ಚಿಂತಿಸಬೇಕಲ್ಲವೇ. ಅದಕ್ಕಾಗಿಯೇ ನಮ್ಮ "ಅಧ್ಯಾತ್ಮಪ್ರಕಾಶಕಾರ್ಯಾಲಯವನ್ನು ಶ್ರೀ ಶ್ರೀಗಳು ಸ್ಥಾಪಿಸಿ ತಮ್ಮ ಬರಹಗಳಲ್ಲಿ ಧರ್ಮ, ಅರ್ಥ, ಕಾಮಗಳನ್ನು ಮೋಕ್ಷಕ್ಕೆ ಹೇಗೆ ಸಾಧನಗಳನ್ನಾಗಿ ಮಾಡಿಕೊಳ್ಳಬೇಕೆಂದೂ ತೋರಿಸಿಕೊಟ್ಟಿದ್ದಾರೆ.

ಮೋಕ್ಷವೆಂಬ ಪದವು ಈಗ ಬೇರೆಯ ರೀತಿಯಲ್ಲಿ ಬಳಕೆಗೆ ಬಂದು ಮರಣಾನಂತರದ "ಒಂದಾನೊಂದು ಸ್ಥಿತಿ" ಎಂದು ಜನರು ತಪ್ಪು ತಿಳಿದಿದ್ದಾರೆ. ಹೇಗೆ ಧರ್ಮ, ಅರ್ಥ ಕಾಮಗಳು ಎಂಬ ಮೂರನ್ನೂ ಇಲ್ಲಿಯೇ ಸಂಪಾದಿಸಿಕೊಂಡು ಸುಖಕ್ಕೆ ಸಾಧನಗಳನ್ನಾಗಿ ಮಾಡಿಕೊಳ್ಳುತ್ತೇವೆಯೋ ಹಾಗೆಯೇ ಮೋಕ್ಷವೆಂಬುದೂ ಇಲ್ಲಿಯೇ ಅನುಭವಕ್ಕೆ ಬರುವಂಥದ್ದು ಎಂದೇ ಧರ್ಮಾರ್ಥಕಾಮಗಳ ಜೊತೆಗೇ ಅದನ್ನು ನಮ್ಮ ಶಾಸ್ತ್ರಗಳಲ್ಲಿ ಸೇರಿಸಿದೆ. ಇಂತಹ ಸಂಸ್ಕೃತಭಾಷೆಯಲ್ಲಿದ್ದ ವಿಚಾರಗಳನ್ನು ತಿಳಿಗನ್ನಡದಲ್ಲಿಯೂ, ಆಂಗ್ಲಭಾಷೆಯಲ್ಲೂ ಅನುವಾದ ಮಾಡಿ ಮೋಕ್ಷವೆಂಬುದು 'ಅಂಗೈನೆಲ್ಲಿಕಾಯಿಯಂತೆ' ಎಂಬುದನ್ನು ಸಾಮಾನ್ಯಜನರಿಗೂ 100 ವರ್ಷಗಳಿಂದ ತಿಳಿಯುತ್ತಿರುವಂತೆ ಮಾಡಿರುವ ಹೆಗ್ಗಳಿಕೆಯು ನಮ್ಮ ಸಂಸ್ಥೆಗೇ ಸಲ್ಲುತ್ತದೆ. ಇದು ಶ್ರೀ ಶ್ರೀಗಳು ಕಾರ್ಯಾಲಯದ ಮೂಲಕ ಮಾಡಿರುವ 'ಜನತಾಜನಾರ್ದನನ ಸೇವೆ' ಎಂದು ಹೇಳಬಹುದಲ್ಲವೇ?

ಹಾಗಾದರೆ ಮೋಕ್ಷವೆಂದರೇನು? ಎಂದು ಈಗ ಚಿಂತಿಸೋಣ. ಮುಚ್ಲ್–ಮೋಕಣೇ ಎಂಬ ಧಾತುವಿನ ರೂಪವಾದ 'ಮೋಕ್ಷ' ಪದಕ್ಕೆ ಬಿಡುಗಡೆ ಎಂಬ ಅರ್ಥವಿದೆ. ಶ್ರೀ ಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ "ದೇಹೇಂದ್ರಿಯಾದಿಗಳಲ್ಲಿ ನಾನೆಂಬ ಅಭಿಮಾನವೇ ಅವಿದ್ಯ, ಅದೇ ಬಂಧನ" ಎಂದು ಮತ್ತೆ ಮತ್ತೆ ಹೇಳಿದ್ದಾರೆ. ಆದ್ದರಿಂದ ಮೋಕ್ಷವೆಂದರೆ ಈ ಅವಿದ್ಯಾಬಂಧನದಿಂದ ಬಿಡುಗಡೆ ಎಂಬರ್ಥವಾಗುತ್ತದೆ. ಇಂತಹ ಅವಿದ್ಯೆಯನ್ನು ಕಳೆಯಲು ಆತ್ಮೈಕತ್ವವಿದ್ಯೆಯೊಂದೇ ಬೇಕಾಗಿರುವದೆಂದು ಆಚಾರ್ಯರು ಪದೇಪದೇ ಒತ್ತಿ ಹೇಳಿದ್ದಾರೆ. ಅಂತಹ ಆತ್ಮವಿದ್ಯೆಯನ್ನು ಎಲ್ಲ ಜನರೂ ಪಡೆಯುವಂತಾಗಬೇಕು. ಪ್ರತಿಯೊಬ್ಬರೂ ಈ ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದಬೇಕು. ಇದು ಎಲ್ಲ ವರ್ಣಾಶ್ರಮದವರಿಗೂ ಅನ್ವಯಿಸುತ್ತ 'ನಾನು' ಎಂದು ಯಾರುಯಾರಿಗೆ ದೇಹೇಂದ್ರಿಯಾದಿಗಳಲ್ಲಿ ಅಭಿಮಾನವಿದೆಯೋ ಅವರೆಲ್ಲರೂ ಅದನ್ನು ಕಳೆದುಕೊಳ್ಳಲೇಬೇಕು. ಅದು ಹಕ್ಕು ಮತ್ತು ಕರ್ತವವೂ ಆಗಿದೆ. ಇಂತಹ ಆತ್ಮೈಕತ್ವವಿದ್ಯೆಯನ್ನು ಪಡೆದುಕೊಂಡು ಎಲ್ಲರೂ ನಿತ್ಯ ಶಾಶ್ವತಗುರಿಯನ್ನು ಪಡೆಯಬೇಕೆಂದೇ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು "ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ಸ್ಥಾಪಿಸಿ –

1. ಶ್ರೀ ಶಂಕರಾಚಾರ್ಯರು ಸಂಸ್ಕೃತದಲ್ಲಿ ಬರೆದ ಗ್ರಂಥಗಳನ್ನೂ ಶ್ರೀರಾಮಾನುಜಾಚಾರ್ಯರ ಸಂಸ್ಕೃತ ಗ್ರಂಥಗಳನ್ನೂ ತಿಳಿಗನ್ನಡಕ್ಕೆ ಅನುವಾದ ಮಾಡಿದರು. ಕೆಲವೊಂದು ಗ್ರಂಥಗಳನ್ನು ಆಂಗ್ಲಭಾಷೆಗೂ ಅನುವಾದಿಸಿದರು.

2. ಶ್ರೀ ವಿವೇಕಾನಂದಸ್ವಾಮಿಗಳ ಆಂಗ್ಲ ಗ್ರಂಥಗಳನ್ನು ಮೊಟ್ಟಮೊದಲು ಕನ್ನಡಕ್ಕೆ ಇಳಿಸಿದರು (ಇದನ್ನು ಶ್ರೀರಾಮಕೃಷ್ಣ ಮಠದವರೂ ಒಪ್ಪುತ್ತಾರೆ).

3. ಅಧ್ಯಾತ್ಮ ವಿದ್ಯಾನಿಲಯವನ್ನು ಸ್ಥಾಪಿಸಿ ಸಮಾಜಕ್ಕೆ ಉತ್ತಮ ಮತ್ತು ಆದರ್ಶ ಅಧ್ಯಾತ್ಮ ಶಿಕ್ಷಕರನ್ನು ದಯಪಾಲಿಸಿದರು.

4. ಮಾಸಪತ್ರಿಕೆಗಳನ್ನು ನಡೆಸುತ್ತಾ ತಿಳಿಗನ್ನಡದ ಲೇಖನಗಳನ್ನೂ, ಆಂಗ್ಲ ಲೇಖನಗಳನ್ನೂ ಬರೆದು ಮತ್ತು ವಿದ್ವಾಂಸರಿಂದಲೂ ಬರೆಯಿಸಿ ಜನರಿಗೆ ಅಧ್ಯಾತ್ಮ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸಿದರು.

5. ಸಂಗ್ರಹವೊಂದೇ ಸುಖಕ್ಕೆ ಕಾರಣ ಎಂದು ತಿಳಿದಿರುವ ಜನರಿಗೆ ಎಚ್ಚರಿಕೆ ಕೊಡುತ್ತಾ ತ್ಯಾಗದಿಂದಲೇ ಸುಖ, ತ್ಯಾಗಿಗಳಾದ ಜನರಿರುವಾಗಲೇ ಸಮಾಜವು ಸ್ವಸ್ಥವಾಗಿರುವದೆಂದು ಹೇಳುತ್ತಾ ಅದರಂತೆ ತಾವೇ ತ್ಯಾಗಮಯ ಜೀವನವನ್ನು ಬದುಕಿ ತೋರಿಸಿ ಆದರ್ಶಗುರುಗಳಾದರು.

6. ಅಧ್ಯಾತ್ಮ ಗ್ರಂಥಗಳು, ಪುರುಷಾರ್ಥ ಗ್ರಂಥಗಳು, ಸಂಸ್ಕೃತ ಭಾಷಾಭ್ಯಾಸದ ಗ್ರಂಥಗಳು, ತತ್ತ್ವಪದಗಳು, ಕಥೆಗಳು ಇತ್ಯಾದಿ ಅನೇಕ ಬಗೆಯ ಗ್ರಂಥಗಳನ್ನು ತಾವೂ ರಚಿಸಿ ಬೇರೆಯ ವಿದ್ವಾಂಸರಿಂದಲೂ ಬರೆಯಿಸಿ ಸಮಾಜದ ಎಲ್ಲ ವರ್ಗದವರಿಗೆ ಈ ವಿಷಯವನ್ನು ತಲುಪಿಸುವದೇ ತಮ್ಮ ಉದ್ದೇಶವೆಂಬುದನ್ನು ಪ್ರಮಾಣೀಕರಿಸಿ ತೋರಿಸಿದರು.

7. ಸಪ್ತಾಹ, ಶಿಬಿರ ಇತ್ಯಾದಿಗಳನ್ನು ಕಾರ್ಯಾಲಯದಲ್ಲೂ ಬೇರೆಬೇರೆಯ ಸ್ಥಳದಲ್ಲಿ ನಡೆಸುತ್ತಾ ಸಮಾಜದ ಎಲ್ಲ ವರ್ಗದ ಜನರನ್ನೂ ಅಧ್ಯಾತ್ಮ ಸಾಧನೆಗೆ ಹಚ್ಚಿದರು. ಇದರಿಂದ ನವನಾಗರೀಕತೆಯ ಕಾಲದಲ್ಲೂ ಸಮಾಜದ ಸ್ವಾಸ್ಥ್ಯವು ಕದಡದೇ ಇರಲು ಸಹಾಯಕವಾಯಿತು.

ಇದೆಲ್ಲವೂ ಶ್ರೀ ಶ್ರೀಗಳಿಂದ ಸ್ಥಾಪಿತವಾದ ಅಧ್ಯಾತ್ಮಪ್ರಕಾಶ ಕಾರ್ಯಾಲಯದಿಂದ ಸಮಾಜಕ್ಕೆ ಆಗುತ್ತಿರುವ ಉಪಕಾರಗಳಲ್ಲವೇ? ಇಂದು ಬಹಳ ಜನ ಮನಶ್ಶಾಸ್ತ್ರಜ್ಞರಲ್ಲಿಗೆ ಹೋಗಿ ತಮ್ಮ ಮನದ ನೋವನ್ನು ಕಳೆದುಕೊಳ್ಳುತ್ತಾರೆ. ಅಲ್ಲಿ ಹಣದ ಅವಶ್ಯಕತೆ ಬಹಳ ಇದೆ. ಆದರೆ ಶ್ರೀಶ್ರೀಗಳ ಗ್ರಂಥಗಳು ಇಂತಹವರಿಗೆ ಇನ್ನೂ ಹೆಚ್ಚಿನ ಸಹಾಯಮಾಡುತ್ತಿವೆ. ಈಗಲೂ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಶ್ರೀಶ್ರೀಗಳ ಆಣತಿಯಂತೆಯೇ ತನ್ನ ಎಲ್ಲ ಕೆಲಸವನ್ನೂ ಚಾಚೂತಪ್ಪದೆ ನಡೆಸುತ್ತಾ ಸಮಾಜಕ್ಕೆ ಉಪಕಾರಿಯಾಗಿದೆ. ಇದರ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ ಎಂದು ನಿಮಗೂ ತಿಳಿದಿದೆ.

* * * * *

ಶತಮಾನದ ಅದ್ಭುತ! ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

– ದಿಲೀಪ್ ಗುರೂಜೀ
ಸಂಸ್ಥಾಪಕರು – ಸಚ್ಚಿದಾನಂದ ಆಲೋಕಾಶ್ರಮ, ಬೆಂಗಳೂರು

ಪರಮಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೆ ಇದೀಗ 100 ವರ್ಷಗಳು ತುಂಬಿದ ಸಂಭ್ರಮ, ಅದೇ ಶತಮಾನೋತ್ಸವ.

ಈ ಸಂದರ್ಭದಲ್ಲಿ ಸ್ವಾಮಿಗಳ ಸಾಧನೆಯನ್ನು ಕುರಿತು – ಕೊಡುಗೆ ಎಂಬುದು ಇನ್ನೂ ಸೂಕ್ತಪದವೇನೋ! ಕೊಡುಗೆಯನ್ನು ಕುರಿತು – ನಮ್ಮ ಗುರ್ವನುಗೃಹೀತ ಮತಿಗೆ ತಿಳಿದಷ್ಟರಲ್ಲಿ ಕೆಲವನ್ನು ಹೇಳುವ ಸದವಕಾಶ ಮಾಡಿಕೊಟ್ಟಿದ್ದಕ್ಕಾಗಿ ಈ ಸ್ಮರಣಸಂಚಿಕೆಯ ಸಂಪಾದಕರಿಗೂ, ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ಹೇಳುವುದು ಅತ್ಯಂತ ಅಗತ್ಯವಾಗಿದೆ ಏಕೆಂದರೆ – ಕ್ವ ಸೂರ್ಯಪ್ರಭವೋ ವಂಶಃ ಕ್ವ ಚಾಲ್ಪವಿಷಯಾಮತಿಃ – ಎಂಬ ಸುಪ್ರಸಿದ್ಧ ರಘುವಂಶ ಮಹಾಕಾವ್ಯದ ಕಾಲಿದಾಸೋಕ್ತಿಗೆ ಅಲ್ಲಿನ ಸಂದರ್ಭಕ್ಕಿಂತಲೂ ಈ ಸಂದರ್ಭವೇ ಹೆಚ್ಚು ಸರಿಹೊಂದುತ್ತದೆಯಾದ್ದರಿಂದ.

ಬ್ರಹ್ಮನಿಷ್ಠರಾಗಿದ್ದೂ ಶಾಸ್ತ್ರ, ಸಂಪ್ರದಾಯ, ಮಡಿ, ಮೈಲಿಗೆ, ಆಚಾರವಿಚಾರಗಳನ್ನು ಆಯಾ ಆಶ್ರಮಗಳಿಗೆ ಹೊಂದುವಂತೆ ಚಾಚೂ ತಪ್ಪದೆ ಪಾಲಿಸುತ್ತ ಆದರ್ಶಪ್ರಾಯರಾಗಿದ್ದ ಸ್ವಾಮಿಗಳ ಸಮಗ್ರ ಜೀವನ, ಕೃತಿಗಳ ಪರಿಚಯವು ಎಂಥವರಿಗೂ ಅಸಾಧ್ಯವೇ ಸರಿ. ಆದ್ದರಿಂದ ಈ ಲೇಖನದಲ್ಲಿ ಸ್ವಾಮಿಗಳ ವ್ಯಕ್ತಿತ್ವವನ್ನಾಗಲೀ, ಅವರ ಕೊಡುಗೆಯನ್ನಾಗಲೀ ಕುರಿತು ಪಕ್ಷಿನೋಟವನ್ನು ನೀಡುವಷ್ಟರಲ್ಲಿ ನಮ್ಮ ಸಾಹಸವು ಪರಿಸಮಾಪ್ತವಾಗಲಿದೆಯೆಂಬುದನ್ನು ವಾಚಕರು ಮೊದಲಿಗೇ ತಿಳಿದುಕೊಳ್ಳುವುದು ಸಾಧುವಾಗಿರುತ್ತದೆ.

ಇನ್ನು, ಇದೇನು? ಸಂಸ್ಥೆಯೊಂದಕ್ಕೆ 100 ವರ್ಷಗಳು ತುಂಬಿದರೇ ಆಶ್ಚರ್ಯವೇ? ಸಂಭ್ರಮವೇ? ಮನುಷ್ಯನಿಗಲ್ಲವೇ 100 ವರ್ಷಗಳ ಆಯುಃಪ್ರಮಾಣ? ಅನೇಕ ಸಂಸ್ಥೆಗಳು ಇಂದಿಗೂ ನೂರಾರು ವರ್ಷಗಳು ಜೀವಂತವಾಗಿದೆಯಲ್ಲ! ಎಂಬ ವ್ಯಂಗ್ಯಭರಿತ ಪ್ರಶ್ನೆಯೇನಾದರೂ ಯಾವುದಾದರೂ ಅಲ್ಪಮತಿಯಲ್ಲಿ ಇದ್ದರೆ ಅದಕ್ಕೆ ಉತ್ತರವೇನೆಂದರೆ –

1. ದೇವರ ವಿಗ್ರಹ ಸ್ಥಾಪನೆ ಮಾಡಿದ್ದರೂ, ದೇವಸ್ಥಾನವೆಂದು ಪ್ರಚಾರಮಾಡಿ, ಪೂಜಾಪುನಸ್ಕಾರಾದಿಗಳ ಮೂಲಕ ಭಕ್ತರನ್ನೂ, ಅವರ ಕಾಣಿಕೆಗಳನ್ನೂ ಸೆಳೆಯದೆ

2. ಸಂನ್ಯಾಸಿಯಾಗಿದ್ದರೂ, ತಮ್ಮ ಇರವಿನ ಪರಿಸರವನ್ನು ಮಠಮಾನ್ಯಗಳೆಂದು ಪ್ರಚಾರಮಾಡದೆ, ಪಾದಪೂಜೆಗಳು, ಸಂನ್ಯಾಸಿಸತ್ಕಾರಗಳೆಂದು ತಮ್ಮ ಪೂರ್ವಾಶ್ರಮದ ಸಂಸಾರಕ್ಕಿಂತಲೂ ದೊಡ್ಡ ಶಿಷ್ಯಸಂಸಾರವನ್ನೇ ಕಟ್ಟಿಕೊಂಡು, ಅವರ ಸಹಾಯವೆಂಬ ಶುದ್ಧಲೌಕಿಕ ವ್ಯವಹಾರಗಳಿಂದ ಲೋಕೋಪಕಾರೀ ಆಶ್ರಮ, ಮಠ ಮುಂತಾದ ಸಂಸ್ಥಾನಗಳನ್ನು, ಅವುಗಳ ಶಾಖೋಪಶಾಖೆಗಳನ್ನೂ ಸ್ಥಾಪಿಸಲು ಅಹೋರಾತ್ರ ಶ್ರಮಿಸುವ ಮತ್ತೊಂದು ಬೃಹತ್ ವ್ಯವಹಾರವನ್ನೇ ವೇದಾಂತವೆಂದು ಭಾವಿಸದೆ,

3. ತಮ್ಮ ಸಂಸ್ಥೆಯು ವೇದಾಂತಪ್ರಚಾರಕಾರ್ಯಗಳಿಗೆ ಆಶ್ರಯಸ್ಥಾನವಾಗಿರಲೆಂಬ ವಿಶಿಷ್ಟ ಆಲೋಚನೆಯೊಂದಿಗೆ ಸಾಂಪ್ರದಾಯಿಕ ಸಂನ್ಯಾಸಿಯಾಗಿದ್ದರೂ ಮಠವೆಂದೋ, ಮಂದಿರವೆಂದೋ ನಿರ್ಮಿಸದೆ, ಜಾತಿ, ಮತ, ಕುಲ, ವರ್ಣ, ದೇಶ, ಕಾಲಗಳ ಯಾವುದೇ ತೊಡಕಿಲ್ಲದೆ ದೇಶಕಾಲರಹಿತವಾದ, ಎಲ್ಲರ ಅನುಭವದಲ್ಲಿಯೇ ನಿತ್ಯವಾಗಿರುವ ಶುದ್ಧ ಸಚ್ಚಿದಾನಂದಸ್ವರೂಪವಾದ ಆತ್ಮತತ್ತ್ವದ, ಅಧ್ಯಾತ್ಮದ ಪ್ರಕಾಶವನ್ನು, ಬೆಳಕನ್ನು ತನ್ನ ಕಾರ್ಯಕಲಾಪಗಳ ಮೂಲಕ ಸಮಸ್ತ ಮಾನವ ಜಗತ್ತಿಗೆ ನೀಡುವಂತಹ ಕಾರ್ಯಾಲಯವನ್ನು, ಶ್ರೇಷ್ಠವಾದ ಸಂಸ್ಥೆಯೊಂದನ್ನು 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ'ವೆಂದು ಸ್ಥಾಪಿಸಿ, ಅದರಂತೆಯೇ ಶಂಕರಾಚಾರ್ಯರ ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತಾಭಾಷ್ಯಾದಿ ಸಮಗ್ರ ಗ್ರಂಥಗಳನ್ನೂ ಸೇರಿಸಿದಂತೆ 200ಕ್ಕೂ ಹೆಚ್ಚು ಗ್ರಂಥಗಳನ್ನು ಕನ್ನಡ, ಇಂಗ್ಲೀಷು, ಸಂಸ್ಕೃತಭಾಷೆಗಳಲ್ಲಿ ರಚಿಸಿ, ವೇದಾಂತ ಪ್ರಚಾರಕ್ಕೆ ಮಾತ್ರವೇ ಕಾರ್ಯಾಲಯದ ಎಲ್ಲ ಚಟುವಟಿಕೆಗಳನ್ನೂ ಸಂಪೂರ್ಣವಾಗಿ ಮೀಸಲಾಗಿಸಿರುವ ಅತ್ಯದ್ಭುತವಾದ ಆಲೋಚನೆಯ ಯಶಸ್ವೀ ಸಾಕಾರಕ್ಕೆ 100 ಸಂವತ್ಸರಗಳು ತುಂಬಿವೆ ಎನ್ನುವುದು – ಜ್ಞಾನಿನಾ ಸಮ್ಯಕ್ ಚರಿತುಂ ಶಕ್ಯಂ ಲೌಕಿಕಂ ಅಪಿ – ಎನ್ನುವುದಕ್ಕೆ ಬಹು ಉತ್ತಮ ನಿದರ್ಶನವೆಂದೇ ಈ ಮೇಲಿನ ಸಂಭ್ರಮದ ತಾತ್ಪರ್ಯ.

ಬಾಲ್ಯ, ವ್ಯಾವಹಾರಿಕ ಜೀವನ

ಇಂದು ಕರ್ನಾಟಕದ ಚಿಕ್ಕಮಗಳೂರಿಗೆ ಸಂಬಂಧಿಸಿದ ಯಲ್ಲಂಬಳಸೆ ಎಂಬ ಗ್ರಾಮದಲ್ಲಿ 5 ಜನವರಿ 1880ರಲ್ಲಿ ಜನಿಸಿದ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಕೇವಲ ಶ್ರೋತ್ರಿಯರು, ಬ್ರಹ್ಮನಿಷ್ಠರೂ ಮಾತ್ರವೇ ಅಲ್ಲ. ಅಮೂರ್ತಬ್ರಹ್ಮವೇ ಮೂರ್ತರೂಪದಲ್ಲಿ ನಮ್ಮಗಳ ಉದ್ಧಾರಕ್ಕಾಗಿ ಕಾಣಿಸಿಕೊಂಡ ಅಪೂರ್ವ, ಪವಾಡಸದೃಶ ಜೀವನಗಾಥೆ ಅವರದು.

ಲೌಕಿಕ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಚಿಕ್ಕಂದಿನಲ್ಲಿಯೇ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್ ರವರ ಪರಿಚಯದಿಂದ ಶಾಂಕರವೇದಾಂತವನ್ನು ಪೂರ್ವಾಗ್ರಹಪೀಡಿತವಲ್ಲದ, ವಸ್ತುನಿಷ್ಠ ದೃಷ್ಟಿಯಿಂದ ಅಧ್ಯಯನವನ್ನು ಮಾಡುವ ಪರಿಪಾಠವನ್ನು ಬೆಳೆಯಿಸಿಕೊಂಡ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು (ಸ್ವಾಮಿಗಳ ಪೂರ್ವಾಶ್ರಮದ ಹೆಸರು), ಗುರುಮುಖೇನ ನಡೆಯುವ ಆತ್ಮಜ್ಞಾನದ ಅಧ್ಯಯನವೇ ಶ್ರೇಷ್ಠವೆಂದು ಕ್ರಮಬದ್ಧವಾಗಿ ಅಂದಿನ ಶೃಂಗೇರೀ ಶಂಕರ ಮಠದ ಪೀಠಾಧೀಶರಾಗಿದ್ದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳಿಂದಲೇ ಭಾಷ್ಯಶಾಂತಿಯನ್ನು ಮಾಡಿಸಿಕೊಂಡು ಸುಪ್ರಸಿದ್ಧ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳಲ್ಲಿ ವೇದಾಂತಾಧ್ಯಯನವನ್ನು ಮುಂದುವರಿಸಿದರು. ತಮ್ಮ ಶಿಕ್ಷಕ ಉದ್ಯೋಗದಲ್ಲಿದ್ದಾಗಲೇ ಹೊಸಕೆರೆ ಚಿದಂಬರಯ್ಯನವರಂತಹ ಅನೇಕ ಉತ್ತಮ ವೇದಾಂತ ಜಿಜ್ಞಾಸುಗಳನ್ನು ಆತ್ಮೀಯಮಿತ್ರರಾಗಿಯೂ, ವಿಠಲಶಾಸ್ತ್ರಿಗಳಂತಹ ವಿದ್ವಾಂಸರನ್ನು ಶಿಷ್ಯರನ್ನಾಗಿಯೂ ಆಕರ್ಷಿಸಿ ಶಾಂಕರವೇದಾಂತಗ್ರಂಥಗಳ ಮಾಲಿಕೆಯನ್ನೇ ರಚಿಸಿದರು.

ಶುದ್ಧಶಾಂಕರವೇದಾಂತ

ಶ್ರೀಶಂಕರಾಚಾರ್ಯರ ಸಮಗ್ರ ದಶೋಪನಿಷತ್, ಬ್ರಹ್ಮಸೂತ್ರ, ಭಗವದ್ಗೀತಾಭಾಷ್ಯಗ್ರಂಥಗಳನ್ನು ಕನ್ನಡಭಾಷೆಯಲ್ಲಿ ಅನುವಾದಿಸುವ ಮಹತ್ಸಂಕಲ್ಪದೊಂದಿಗೆ ಅನುಭವಾಧಾರಿತ ಶಾಂಕರವೇದಾಂತದ ಬಗ್ಗೆ

ತಮಗಿದ್ದ ಸಂಯಕ್ ದೃಷ್ಟಿಯನ್ನು ತತ್ತ್ವಜಿಜ್ಞಾಸುಗಳಿಗೆ ತಮ್ಮ ಕೃತಿಗಳ ಮೂಲಕ ಸಮಗ್ರವಾಗಿ, ಯಶಸ್ವಿಯಾಗಿ ಧಾರೆಯೆರೆದಿದ್ದಾರೆ. ಪ್ರತ್ಯಕ್ಷಾನುಮಾನಾದಿ ಪ್ರಮಾಣಗಳಿಗಿಂತಲೂ, ಯೋಗ, ಸಮಾಧಿ ಮುಂತಾದ ಅತೀಂದ್ರೀಯ ಸ್ಥಿತಿಗಳಿಗಿಂತಲೂ ಸಾರ್ವತ್ರಿಕವಾದ ಅನುಭವಪ್ರಮಾಣಕ್ಕೆ ಸಿಕ್ಕಬಲ್ಲ ಆತ್ಮಸ್ವರೂಪವೇ ಜಗತ್ತಿನ ತಿರುಳು, ಜೀವನ ನಿಜಸ್ವರೂಪ ಎಂಬ ಶುದ್ಧಶಾಂಕರ ವೇದಾಂತವನ್ನು ವಿದ್ವಾಂಸರಿಗೂ, ಆಸಕ್ತರಿಗೂ ಸರಿ ಹೊಂದುವಂತೆ ಕನ್ನಡ, ಇಂಗ್ಲೀಷು, ಸಂಸ್ಕೃತ ಭಾಷೆಗಳಲ್ಲಿ ತಮ್ಮ 200ಕ್ಕೂ ಹೆಚ್ಚು ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ.

ವಿಶಿಷ್ಟ ಅಭಿಪ್ರಾಯಗಳು

ಅವರ ಮೂಲಾವಿದ್ಯೆಯ ಬಗೆಗಿನ ನಿಲುವು (ಶಂಕರ ಸಿದ್ಧಾಂತ ಇತ್ಯಾದಿ ಗ್ರಂಥಗಳಲ್ಲಿ), ಜ್ಞಾನಕರ್ಮಸಮುಚ್ಚಯವಾದದ ಬಗೆಗಿನ ಸಂದೇಹಕ್ಕೆಡೆಯೇ ಇಲ್ಲದ ಅಭಿಪ್ರಾಯ (ಭಗವದ್ಗೀತಾಭಾಷ್ಯಾದಿ ಗಳಲ್ಲಿ), ಅಧ್ಯಾರೋಪಾಪವಾದಪ್ರಕ್ರಿಯೆಯ ವೈಶಾಲ್ಯತೆಯ ಪರಿಚಯ (ಮಾಂಡೂಕ್ಯ ಉಪನಿಷದಾದಿ ಗ್ರಂಥಗಳಲ್ಲಿ), ಸದ್ಯೋಮುಕ್ತಿಯ ಖಚಿತತೆ (ಕಠೋಪನಿಷತ್ತು ಮುಂತಾದವುಗಳಲ್ಲಿ), ಯಾವುದೇ ಶ್ರುತಿಸ್ಮೃತಿಗಳ ಪ್ರಮಾಣವಿಲ್ಲದೆ ಅವಸ್ಥಾತ್ರಯದ ಶುದ್ಧ ಅನುಭವಾನುಸಾರೀ ಸ್ವತಂತ್ರವಿಚಾರ (ಪರಮಾರ್ಥಚಿಂತಾಮಣಿ ಇತ್ಯಾದಿಗಳಲ್ಲಿ), ವೇದಾಂತವಿಚಾರದಲ್ಲಿ ಶಾಂಕರಪೂರ್ವ, ಶಾಂಕರೋತ್ತರ ದಾರ್ಶನಿಕರ ಅಭಿಪ್ರಾಯಭೇದಗಳ ಸಮಗ್ರ ಸಂಗ್ರಹ (ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞಾ, ವೇದಾಂತ ವಿಚಾರದ ಇತಿಹಾಸಾದಿಗಳಲ್ಲಿ) – ಇನ್ನೂ ಹೀಗೆ ಅವರ ಗ್ರಂಥಗಳ, ವಿಚಾರಗಳ ವೈಶಿಷ್ಟ್ಯಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಕೇವಲ ವಿಚಾರದ ಸರಳಶೈಲಿಯ ಪ್ರತಿಪಾದನೆಯೇ ಅಲ್ಲದೆ ಗ್ರಂಥರಚನೆಯ ಸಂದರ್ಭದಲ್ಲಿ ಅವರು ಸಿದ್ಧಮಾಡಿಕೊಳ್ಳುತ್ತಿದ್ದ ಸಾಮಗ್ರಿಗಳು, ಗ್ರಂಥದಲ್ಲಿ ವಿಚಾರಗಳನ್ನು ಜೋಡಿಸುವ ಸುಂದರಶೈಲಿಯಿಂದಲೂ ಅವರ ವಿಚಾರಗಳು ಓದುಗರಿಗೆ ಸುಲಭವೆನಿಸುತ್ತಿರುವುದು ಅವರ ಓದುಗರ ಸೌಕರ್ಯದ ಬಗ್ಗೆ ಇದ್ದ ತುಂಬು ಕಾಳಜಿಯನ್ನು ಸೂಚಿಸುತ್ತದೆ.

ಲೋಕೈಷಣರಹಿತ

ಸ್ವಾಮಿಗಳ ಅಪಾರಸಾಧನೆಗೆ ಕಿರೀಟಪ್ರಾಯವಾಗಿದ್ದದ್ದು ಏಷಣಾತ್ರಯವನ್ನು ಕೂಡ ಬಿಟ್ಟೆದ್ದು ಕೀರ್ತಿಪತಾಕೆಗಳನ್ನೂ, ಲೌಕಿಕ ಆಸೆ, ಆಮಿಷಗಳನ್ನೂ ಸಾರಾಸಗಟಾಗಿ ತಿರಸ್ಕರಿಸಿದ ಅವರ ಅಚಲವಾದ ಪರಿಶ್ರಮ. ಹುಟ್ಟಿದಂದಿನಿಂದ ಜೀವಿತಕಾಲಾಂತ್ಯದವರೆವಿಗೂ ಬ್ರಹ್ಮವೊಂದನ್ನೇ ಚಿಂತಿಸುತ್ತಿರಬೇಕು ಎಂಬ ವಚನಕ್ಕೆ ಪ್ರತ್ಯಕ್ಷಸಾಕ್ಷಿ – 95 ವರ್ಷಗಳ ತಮ್ಮ ತುಂಬು ಜೀವನವನ್ನು ವೇದಾಂತಪ್ರಚಾರಕ್ಕೆಂದೇ ಮೀಸಲಿಟ್ಟಂತಹ ಸಾದೃಶ್ಯವು ಇನ್ನೊಂದಿಲ್ಲ ಎಂಬಷ್ಟು ಅಪರೂಪದ, ಶ್ರೇಷ್ಠವಾದ ಅವರ ಜೀವನ.

ಗುರುಭಕ್ತಿ

ಬಾಲ್ಯದಿಂದಲೂ ಇದ್ದ ವೇದಾಂತಜ್ಞಾನ ಸಂಪಾದನೆಗಿದ್ದ ತುಡಿತಕ್ಕೆ, ಚಿತ್ತಶುದ್ಧಿಸಹಿತವಾದ ಪ್ರಯತ್ನಕ್ಕೆ ಅವರ ಬಾಲ್ಯದ ಅನೇಕ ಮಹನೀಯರುಗಳ ಸಂಪರ್ಕ ಸಹಾಯಕವಾಗಿದ್ದರೂ, ಅವರ ಅಚಲವಾದ ಗುರುಭಕ್ತಿಯೇ, ಆಚಾರ್ಯರ ಶುದ್ಧಾದ್ವೈತವೇದಾಂತದಲ್ಲಿ ಇದ್ದ ಶ್ರದ್ಧಾಭಕ್ತಿಯೇ ಪ್ರೇರಕ, ಪೋಷಕವಾಗಿದ್ದು

ಸಾಧನಾಶಿಖರದ ಉತ್ತುಂಗಕ್ಕೆ ತಲುಪಲು ಅವರಿಗೆ ಆಧಾರವಾಗಿತ್ತೆಂಬುದು ಅವರ ಆತ್ಮಚರಿತ್ರೆಯನ್ನು ನೋಡಿದವರಿಗೆ ಆ ಕ್ಷಣವೇ ಕಂಡುಬರುತ್ತದೆ.

ಅನುಭವಾನುಸಾರೀವಿಚಾರ, ಅಭಯ

ತಮ್ಮ ಅನೇಕ ಬರೆವಣಿಗೆಗಳಲ್ಲಿ ಪಾತಂಜಲಯೋಗದರ್ಶನದ ಪವಾಡಗಳನ್ನಾಗಲೀ, ಪ್ರಕ್ರಿಯೆಗಳನ್ನಾಗಲೀ, ನ್ಯಾಯದರ್ಶನದ ತಾರ್ಕಿಕ ಸರಣಿಯನ್ನಾಗಲೀ – ವೇದಾಂತದರ್ಶನದಲ್ಲಿ ಹೇಳಿರುವ ಆತ್ಮಜ್ಞಾನಕ್ಕೆ ಎಳ್ಳಷ್ಟೂ ಸಂಬಂಧವಿರುವುದಿಲ್ಲವೆಂಬ ಅವರ ಸುಸ್ಪಷ್ಟವಾದ ಅಮೋಘ ನಿಲುವು, ವೇದಾಂತಕ್ಕೆ ಸಾಧನವೂ, ಕುರುಹೂ ಎಂದರೆ ಏಷಣಾತ್ರಯದ ತ್ಯಾಗವೊಂದೇ ಹೊರತು ಅನ್ಯ ಲೋಕಪ್ರಸಿದ್ಧ ವಿಲಕ್ಷಣಚರ್ಯೆಗಳೇನೂ ಅಲ್ಲವೆಂಬ ಅತ್ಯಂತ ಆಶ್ಚರ್ಯಕರವಾದ, ಸತ್ಯವಾದ ಸಂಗತಿಯು ಜಿಜ್ಞಾಸುಗಳಿಗೆ ಅತ್ಯಂತ ದೊಡ್ಡ ಅಭಯವೇ ಆಗಿದೆ.

ಲೋಕಸಂಗ್ರಹ

ಇನ್ನು ವೇದಾಂತದೊಂದಿಗೆ ಸ್ವಾಮಿಗಳು ತಮ್ಮ ಜೀವಿತಕಾಲದಲ್ಲಿಯೇ ನಮ್ಮ ಆಧುನಿಕ ಸಮಾಜದಲ್ಲಿ ಸಂಸ್ಕೃತಭಾಷೆಯ ಪರಿಚಯದ ಅತ್ಯಗತ್ಯವನ್ನೂ, ಶಾಸ್ತ್ರಾನುಸಾರೀ ಆಚಾರವಿಚಾರಗಳ ಅನುಷ್ಠಾನದ ಅನಿವಾರ್ಯತೆಯನ್ನೂ ತಮ್ಮ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಅನೇಕಾನೇಕ ಲೇಖನಗಳಲ್ಲಿಯೂ, ಸಂಸ್ಕೃತಭಾಷಾಭ್ಯಾಸ ಇತ್ಯಾದಿ ಪುಸ್ತಕಗಳಲ್ಲಿಯೂ ಚೊಕ್ಕವಾಗಿ ನಿರೂಪಿಸಿದ್ದಾರೆ.

ದೈವಭಕ್ತಿ

ಇವೆಲ್ಲಕ್ಕೂ ಕಲಶವಿಟ್ಟಂತೆ ಇದ್ದದ್ದು ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಅನನ್ಯವಾದ ದೈವಭಕ್ತಿ, ಶ್ರದ್ಧೆಗಳು. ಮರ್ಯಾದಾಪುರುಷೋತ್ತಮನಾದ ಶ್ರೀರಾಮಚಂದ್ರನ ಪರಮಭಕ್ತರಾಗಿದ್ದ ಸ್ವಾಮಿಗಳು ತಮ್ಮ 31ನೇ ವಯಸ್ಸಿನಲ್ಲಿಯೇ, ತಾವೇ ಸ್ವತಃ ಆತ್ಮಜ್ಞಾನಿಗಳಾಗಿದ್ದರೂ, ಅವರಿಗಿಂತ ವಯೋವೃದ್ಧರೂ, ರಾಮನಾಮಸಾಧಕರೆಂದೂ ಪ್ರಸಿದ್ಧರಾಗಿದ್ದ ಗೋಂದಾವಲೀ ಬ್ರಹ್ಮಚೈತನ್ಯಮಹಾರಾಜರಿಂದ ನೇರವಾಗಿ ರಾಮನಾಮ ತಾರಕಮಂತ್ರದ ಉಪದೇಶವನ್ನು ಪಡೆದು, ದಿಗ್ವಿಜಯರಾಮನೆಂಬ ಅತ್ಯಂತ ಔಚಿತ್ಯಪೂರ್ಣವಾದ ಅಭಿಧಾನವನ್ನಿತ್ತು ಸೀತಾಲಕ್ಷ್ಮಣಸಮೇತ ಜಟಾಧಾರಿಯಾದ ಶ್ರೀರಾಮನ ಸುಂದರ ಮೂರ್ತಿಯನ್ನು ತಮ್ಮ ಕಾರ್ಯಾಲಯದಲ್ಲಿ ಸ್ಥಾಪಿಸಿ 64 ವರ್ಷಗಳ ಕಾಲ ರಾಮಧ್ಯಾನದ ಅಮೋಘ ತಪಸ್ಸನ್ನು ಮಾಡಿದ ಅವರ ಭಕ್ತಿಶ್ರದ್ಧೆಗಳು ಅನುಪಮ, ಅವರ್ಣನೀಯ, ವೇದಾಂತದ ತಿಳಿವಳಿಕೆಗೂ, ಆತ್ಮಜ್ಞಾನಿಗಳ ಜ್ಞಾನಾನಂತರದ ಚರ್ಯೆಗೂ ಮಾರ್ಗದರ್ಶಕ.

ಸದ್ಯಃಫಲ –

ಹೀಗೆ ಶುದ್ಧಶಾಂಕರವೇದಾಂತವನ್ನು ವೇದಾಂತದ ಇತಿಹಾಸದಲ್ಲಿಯೇ ಅನನ್ಯವಾದ, ಸಮಗ್ರವಾದ ರೀತಿಯಲ್ಲಿ ಪರಿಚಯಿಸಿರುವ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಸಂಪ್ರದಾಯಬದ್ಧ, ಪ್ರಕ್ರಿಯಾನುಸಾರೀ, ಕ್ರಮವಾದ ಬರವಣಿಗೆಯು ಪೂರ್ವಗ್ರಹವಿಲ್ಲದೇ ವೇದಾಂತಪ್ರವೇಶ ಮಾಡುವವರಿಗೆ ಸದ್ಯೋಮುಕ್ತಿಯನ್ನು ಖಂಡಿತವಾಗಿಯೂ ನೀಡುವುದರಲ್ಲಿ ಸಂಶಯವೇ ಇರುವದಿಲ್ಲ.

* * * * *

ವೇದಾಂತಸಾಹಿತ್ಯಕ್ಕೆ
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಕೊಡುಗೆಗಳು

– ಮ.ಅ. ಅರುಣಾವಧಾನೀ, ಮತ್ತೂರು

ಸದ್ಗುರು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಪಾದಾರವಿಂದಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಾ, ಅವರ ಪ್ರಶಿಷ್ಯನೆಂದು ಹೇಳಿಕೊಳ್ಳಲು ಮಾತ್ರ ಹೆಮ್ಮೆ ಪಡುವ ನಾನು ಕೆಲವು ತೊದಲು ನುಡಿಗಳನ್ನು ಬಿನ್ನವಿಸಿಕೊಳ್ಳಲು ಪ್ರಯತ್ನಿಸುವೆನು.

ಮೊದಲನೆಯದಾಗಿ ಪರಮಾತ್ಮನ ಉಸಿರಾಗಿರುವ ಪೂಜ್ಯ ವೇದಮಾತೆಯ ಸಾರವಾದ ಉಪದೇಶರೂಪವಾದ ವೇದಾಂತಗಳೆಂದು ಕರೆಯಲ್ಪಡುವ ಈಶಾದಿ ಹತ್ತು ಉಪನಿಷತ್ತುಗಳಿಗೆ ಪರಮಾತ್ಮನ ಉಪದೇಶ ವಾಣಿಯಾದ ಶ್ರೀಮದ್ಭಗವದ್ಗೀತೆಗೆ ಮತ್ತು ಪರಮಜ್ಞಾನಿಗಳಾದ ಬಾದರಾಯಣಾಚಾರ್ಯರ ಉಪದೇಶ ರೂಪವಾದ ಬ್ರಹ್ಮಸೂತ್ರಗಳೆಂದು ಕರೆಯಲ್ಪಡುವ ಸೂತ್ರಗಳಿಗೆ ಶುದ್ಧವಾದ, ಅನುಭವಗಮ್ಯವಾದ, ನೈಜಾರ್ಥವಾದ, ತಾತ್ಪರ್ಯಾರ್ಥವಾದ ಬ್ರಹ್ಮಜ್ಞಾನವನ್ನು ತಮ್ಮ ಅಮೃತವಾಣಿ ರೂಪವಾದ ಉಪದೇಶಗಳಿಂದ ಕರುಣಿಸಿದ ಶ್ರೀಮದ್ಭಗವತ್ಪಾದ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಿಗೆ ನಮ್ಮ ಕರುನಾಡು ಭಾಷೆಯಾದ ಕನ್ನಡ ಭಾಷೆಯಲ್ಲಿ ಅನುವಾದ ಮಾಡಿ ನಮ್ಮಂತಹ ಅತ್ಯಂತ ಲೌಕಿಕರಾದವರಿಗೂ ಇಂತಹ ಅಮೂಲ್ಯವಾದ ಉಪದೇಶಗಳನ್ನು ಓದಲು ಅರ್ಥಮಾಡಿಕೊಂಡು ವಿವೇಕಿಗಳಾಗಿ ಸಾಧನೆ ಮಾಡಲು ಮತ್ತು ತಮ್ಮ ನಿಜವಾದ ಪರಮಾರ್ಥ ಸ್ವರೂಪವನ್ನು ಕಂಡುಕೊಂಡು ಸರ್ವಾತ್ಮರಾಗಿ ಮುಕ್ತರಾಗಲೂ ಕೂಡ ಅವಕಾಶ ಕಲ್ಪಿಸಿಕೊಟ್ಟ ಸದ್ಗುರು ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಗೆ ಎಷ್ಟು ಕೃತಜ್ಞರಾಗಿ ಸೇವೆ ಸಲ್ಲಿಸಿದರೂ ಅದು ಅಲ್ಪವೇ ಸರಿ. ಇದು ಕನ್ನಡ ಭಾಷೆಯನ್ನು ತಿಳಿದ ನಮಗೆ ಕರುಣಿಸಿದ ಅಮೂಲ್ಯವಾದ ಕೊಡುಗೆ.

ಇದಲ್ಲದೆ ಕನ್ನಡಭಾಷೆಯಲ್ಲಿ ವೇದಾಂತವಿಚಾರ ಸರಣಿಗಳ ರೂಪವಾದ 200ಕ್ಕೂ ಹೆಚ್ಚು ಪ್ರಕರಣಗ್ರಂಥಗಳನ್ನೂ ರಚಿಸಿ ಕರುಣಿಸಿರುವರು. ಇವುಗಳಲ್ಲಿ ಪರಮಾರ್ಥ ಚಿಂತಾಮಣಿ, ಭಕ್ತಿಚಂದ್ರಿಕೆ – ಇತ್ಯಾದಿ ಗ್ರಂಥಗಳು ಅನರ್ಘ್ಯರತ್ನಗಳಂತೆ ಇವೆ. ಇದಲ್ಲದೆ ವೇದಾಂತಸಾಹಿತ್ಯರೂಪವಾದ ಸ್ತೋತ್ರಸಾಹಿತ್ಯಗಳಿಗೂ ಸರಳ ಕನ್ನಡಭಾಷೆಯಲ್ಲಿ ಶುದ್ಧವಾದ ಅರ್ಥವನ್ನು ಬರೆದು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೃದಯಸ್ಪರ್ಶಿಯಾಗುವಂತೆ ಕರುಣಿಸಿರುವರು. ಇವುಗಳಲ್ಲಿ ದಕ್ಷಿಣಾಮೂರ್ತಿಸ್ತೋತ್ರಕ್ಕೆ ಬರೆದ ಅರ್ಥಾನುವಾದರೂಪವಾದ ಗ್ರಂಥವೂ ಒಂದು ಅಮೂಲ್ಯ ಗ್ರಂಥವು. ಇದಲ್ಲದೆ ಆಂಗ್ಲಭಾಷೆಯಲ್ಲಿ ಕೂಡ ವೇದಾಂತವಿಚಾರ ಸರಣಿಗಳ ರೂಪವಾದ ಅನೇಕ ಪ್ರಕರಣ ಗ್ರಂಥಗಳನ್ನು ರಚಿಸಿರುವರು. ಇವುಗಳಲ್ಲಿ The Vision of Atman ಎಂಬ ಗ್ರಂಥವೂ ಒಂದು ಅಮೂಲ್ಯ ಗ್ರಂಥವು. ಇನ್ನು ಸಂಸ್ಕೃತ ಭಾಷೆಯಲ್ಲಿಯಾದರೋ ಅತ್ಯಂತ ಅನುಭವಗಮ್ಯವಾದ ಪೂಜ್ಯವೇದಗಳ ಉಪದೇಶರೂಪವಾದ ಉಪನಿಷತ್ತುಗಳ, ಶುದ್ಧವಾದ ಸಂಪ್ರದಾಯರೂಪವಾಗಿರುವ ಅರ್ಥವನ್ನು ತಿಳಿಸುವ ಭಗವತ್ಪಾದ ಶಂಕರಾಚಾರ್ಯರಿಂದ ವಿರಚಿತವಾದ ಪ್ರಸ್ಥಾನತ್ರಯಭಾಷ್ಯಗಳ ಅರ್ಥವನ್ನು ಶುದ್ಧವಾಗಿಯೇ ಸಂಪ್ರದಾಯ ರೂಪವಾಗಿಯೇ ಯಥಾವತ್ತಾಗಿ

ಅನುಭವಗಮ್ಯವಾಗಿ ತಿಳಿಸುವ ಅತ್ಯುತ್ತಮಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಶುದ್ಧಶಾಂಕರಪ್ರಕ್ರಿಯಾಭಾಸ್ಕರಃ, ಮಾಂಡೂಕ್ಯರಹಸ್ಯವಿವೃತಿಃ, ತೈತ್ತಿರೀಯಭಾಷ್ಯಾರ್ಥವಿಮರ್ಶಿನೀ, ಮೂಲಾವಿದ್ಯಾನಿರಾಸಃ ಅಥವಾ ಶಂಕರಹೃದಯ, ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ, ಸುಗಮಾ, ಸೂತ್ರಭಾಷ್ಯಾರ್ಥತತ್ವವಿವೇಚನೀ ಇತ್ಯಾದಿಗಳು ಅತ್ಯಮೂಲ್ಯವಾದವುಗಳು.

ಸಂಪ್ರದಾಯವೆಂದರೆ ವೇದಾಂತೋಕ್ತವಾದ "ಅಧ್ಯಾರೋಪಾಪವಾದನ್ಯಾಯ"ವೆಂದರ್ಥ, ಎಂಬುದನ್ನೂ, ಮತ್ತು ಕೇವಲ ಬ್ರಹ್ಮಜ್ಞಾನವಾದ ಕೂಡಲೇ ಜೀವನ್ಮುಕ್ತನಾಗುವನು, ಯಾವುದೇ ರೀತಿಯ ಅವಿದ್ಯಾಲೇಶವೂ ಉಳಿಯುವುದಿಲ್ಲ, ಎಂಬುದನ್ನು ಅನುಭವಗಮ್ಯವಾದ ಉಪದೇಶವನ್ನು ಮಾಡುವ ವೇದವಾಕ್ಯಗಳ ಪ್ರಮಾಣದಿಂದ ಜಿಜ್ಞಾಸುಗಳಿಗೆ ಅನುಭವಕ್ಕೆ ಬರುವಂತೆಯೇ ಉಪದೇಶಿಸಿ ಕರುಣಿಸಿರುವುದು ವೇದಾಂತ ಸಾಹಿತ್ಯಕ್ಕೆ ನೀಡಿದ ತಿಲಕಪ್ರಾಯವಾದ ಕೊಡುಗೆಯು. ಇಂತಹ ಪೂಜ್ಯಸದ್ಗುರು ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ದಿವ್ಯಾನುಗ್ರಹದಿಂದ ಸ್ಥಾಪಿತವಾದ "ಅಧ್ಯಾತ್ಮಪ್ರಕಾಶ ಕಾರ್ಯಾಲಯವು" ಇಂದಿಗೂ ಅವರ ಗ್ರಂಥಗಳೆಲ್ಲವನ್ನೂ ಮುದ್ರಿಸಿ ಪ್ರಕಟಿಸುತ್ತಾ ವೇದಾಂತಜಿಜ್ಞಾಸುಗಳಿಗೆ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಉಪದೇಶಗಳನ್ನು ತಲುಪಿಸುತ್ತಿರುವುದು ಅವಿಸ್ಮರಣೀಯವಾದುದು. ಗುರುಗಳ ಅನುಗ್ರಹದಿಂದ ಕಾರ್ಯಾಲಯವು ಇಂದು 100 ವರ್ಷಗಳನ್ನು ಪೂರೈಸುತ್ತಾ ಶತಮಾನೋತ್ಸವವನ್ನು ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಅತ್ಯಂತ ಸಂತೋಷದ ವಿಷಯವು. ಕಾರ್ಯಾಲಯವು ಅಧ್ಯಾತ್ಮವಿದ್ಯೆ ಎಂಬ ದೀಪವನ್ನು ಜಗದಲ್ಲೆಲ್ಲಾ ಬೆಳಗಿಸುತ್ತಾ ಇತೋಪ್ಯತಿಶಯವಾಗಿ ಅಧ್ಯಾತ್ಮಜ್ಞಾನದ ಶಿಕ್ಷಣದಿಂದ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಅನುಗ್ರಹಕ್ಕೆ ಪಾತ್ರವಾಗಲಿ ಎಂದು ಸದ್ಗುರುಗಳಲ್ಲಿ ಪ್ರಾರ್ಥಿಸುತ್ತಾ ನನ್ನ ಕೆಲವು ತೊದಲು ನುಡಿಗಳನ್ನು ಸಮಾಪ್ತಿಗೊಳಿಸುವೆನು.

* * * * *

ಭಕ್ತಿ

1. ಹೇಳುವವನು ಮೊದಲು ಭಗವಂತನ ಸ್ಮರಣೆ ಮಾಡಿ ಹೇಳುತ್ತಾನೆ. ಹೇಳುವವನು ಪರಮಾತ್ಮನ ಸೇವೆ ಮಾಡುತ್ತೇನೆಂದು ಹೇಳಬೇಕು. ಪರಮಾತ್ಮನಲ್ಲಿ ನಿಂತುಕೊಂಡು ಹೇಳಬೇಕು. ಪರಮಾತ್ಮನಲ್ಲಿ ನಿಂತುಕೊಂಡು ಕೇಳಬೇಕು.
2. ಆತ್ಮಸ್ಮೃತಿಯು ಈಶ್ವರನ ಪ್ರಸಾದದಿಂದ ಬರಬೇಕು.
3. ಪರಮಾತ್ಮನಲ್ಲಿ ಭಕ್ತಿ ಇದ್ದವರಿಗೆ ಪರಮಾತ್ಮನ ಜ್ಞಾನವಾಗುತ್ತದೆ. ವಿಷಯಗಳ ಪ್ರೇಮವಿದ್ದವರಿಗೆ ವಿಷಯಗಳ ಜ್ಞಾನವಾಗುತ್ತದೆ. ವೇದಾಂತವೆಂದರೆ ಪರಮಾತ್ಮನ ಜ್ಞಾನ.

– ಶ್ರೀ ಸಚ್ಚಿದಾನಂದವಾಣಿ

ವೇದಾಂತದ ಅಮೃತಪಾನ

– ವಿದ್ವಾನ್ ಬಿ. ಗಣೇಶಭಟ್, ಬಾಗೇಪಲ್ಲಿ

ವಂದೇ ತಂ ಸಚ್ಚಿದಾನಂದಂ ಯತಿವರ್ಯಂ ಮಹಾಮತಿಮ್ ।
ವೇದವೇದಾನ್ತ ಸಾರಜ್ಞಂ ಸದ್ಗುರುಂ ಪ್ರಣತೋಽಸ್ಮ್ಯಹಮ್ ॥

ಅನಾದಿಕಾಲದಿಂದ ಮಾನವನು ಈ ಜಗತ್ತಿನ ಹಾಗೂ ತನ್ನ ಸಂಬಂಧದ ಬಗ್ಗೆ ಚಿಂತಿಸುತ್ತಾ ಬಂದಿರುತ್ತಾನೆ. ಈ ಚಿಂತನೆಗಳ ರಾಶಿಯೇ ದರ್ಶನ ಗ್ರಂಥಗಳೆನಿಸಿಕೊಂಡಿವೆ. ಹೀಗೆ ಚಿಂತನಾಪರರಾದ ಮಹರ್ಷಿಗಳ ಪರಂಪರೆಯಲ್ಲಿ ಔಡುಲೋಮಿ, ಆಶ್ಮರಥ್ಯ, ಕಾಸಕೃತ್ಸ್ನ ಈ ಮೂರೂ ಜನರ ಹೆಸರಿನ ಉಲ್ಲೇಖವು ಬ್ರಹ್ಮಸೂತ್ರಗಳಲ್ಲಿ ದೊರೆಯುತ್ತದೆ. ಮುಂದೆ ಗೌಡಪಾದಾಚಾರ್ಯರು ಶ್ರೀ ಕಾಶಕೃತ್ಸ್ನಾಚಾರ್ಯರ ಅಭಿಪ್ರಾಯವನ್ನು ಅನುಮೋದಿಸಿಕೊಂಡೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದು ಮಾಂಡೂಕ್ಯಕಾರಿಕೆಗಳಲ್ಲಿ ತಿಳಿದುಬರುತ್ತದೆ. ಈ ಪರಂಪರೆಯಲ್ಲಿಯೇ ಶ್ರೀ ಶಂಕರಭಗವತ್ಪಾದರು ವಿಸ್ತರವಾಗಿ ಚಿಂತಿಸಿ ಸಮಗ್ರವಾದಂತಹ ಪ್ರಸ್ಥಾನತ್ರಯಗಳಿಗೆ ಭಾಷ್ಯಗ್ರಂಥಗಳನ್ನು ರಚಿಸಿದರು. ಸಮಸ್ತ ಬ್ರಹ್ಮಾಂಡದ ಗುಟ್ಟೇನು? ಹಾಗೂ ತನ್ನಲ್ಲಿ ಆಗಾಗ ತೋರಿಹಾರುತ್ತಿರುವ ಪ್ರಜ್ಞೆ ಅಥವಾ ಅರಿವಿನ ಗುಟ್ಟೇನು? ಇದೇ ನಮ್ಮ ತಿಳಿವಳಿಕೆಗೆ ಅಂತಿಮ ಸ್ಥಾಯಿಯೇ? ನಮ್ಮ ಅಸ್ತಿತ್ವದ ಪರಮಾರ್ಥವೇನು? ಎಂಬ ವಿಚಾರಗಳು ಉಪನಿಷತ್ತಿನಲ್ಲಿ ಸೂಚಿತವಾಗಿರುವುದನ್ನು ಸೋಽನ್ವೇಷ್ಟವ್ಯಃ । ಸಃ ವಿಜಿಜ್ಞಾಸಿತವ್ಯಃ । ಎಂಬ ವಾಕ್ಯಗಳಿಂದ ಗಮನಿಸಿ ಜಿಜ್ಞಾಸು ಪ್ರಪಂಚಕ್ಕೆ ಈ ಬ್ರಹ್ಮತತ್ತ್ವದ ತಿಳಿವಳಿಕೆಯನ್ನು ಆನಂದವನ್ನು ಅನುಭವದಲ್ಲಿ ತಿಳಿಸಿಕೊಡಲೆಂದೇ ವಿಚಾರವನ್ನು ಪ್ರಾರಂಭಿಸಿದರು. ಮೊಟ್ಟ ಮೊದಲನೆಯದಾಗಿ ಸಮಸ್ಯೆ ಎಲ್ಲಿದೆ? ಎಂದು ತಿಳಿಯದೆ ಚಿಕಿತ್ಸೆ ಪ್ರಾರಂಭಿಸುವುದು ಸಾಧ್ಯವಿಲ್ಲವೆಂದು ಮನಗಂಡಂತಹ ಆಚಾರ್ಯರು ಬ್ರಹ್ಮಸೂತ್ರಗಳಿಗೆ ಉಪೋದ್ಘಾತವಾಗಿ ಅಧ್ಯಾಸವನ್ನು (ಸಮಸ್ಯೆ ಏನೆಂಬುದನ್ನು) ವಿವರಿಸಿ, ಇದೇ ಅನರ್ಥ ಹೇತುವೆಂದು ಸ್ಪಷ್ಟ ಪಡಿಸಿದರು. "ಅಸ್ಯ ಅನರ್ಥಹೇತೋಃ" ಎಂಬುದು ಆಚಾರ್ಯರ ಒಕ್ಕಣೆ. ಇದು ಯಾವ ರೀತಿಯಿಂದ ಅನರ್ಥಹೇತು ಎಂಬುದನ್ನು ಕರ್ತೃತ್ವ ಭೋಕ್ತೃತ್ವ ಪ್ರವರ್ತಕಃ ಎಂದು ತಿಳಿಸಿದರು. ಇದಕ್ಕೆ ಪ್ರಮಾಣವೇನು? ಎಂಬುದಕ್ಕೆ "ಸರ್ವಲೋಕ ಪ್ರತ್ಯಕ್ಷಃ" ಎಂದು ಸಾರ್ವತ್ರಿಕಾನುಭವವನ್ನೇ ಪ್ರಮಾಣವಾಗಿ ತಿಳಿಸಿದರು. ಇದು ಹೇಗಾಗುತ್ತಿದೆ? ಎಂಬುದಕ್ಕಾಗಿ "ನೈಸರ್ಗಿಕೋಽಯಂ ಲೋಕವ್ಯವಹಾರಃ ಎಂದು ಈ ರೀತಿಯಾಗಿ ವ್ಯವಹರಿಸುವುದು ಲೋಕದ ಸ್ವಾಭಾವಿಕತೆ ಎಂದು – ವಾಸ್ತವಿಕತೆಯನ್ನು ಅನುಭವದಲ್ಲಿ ಮನಗಾಣಿಸಿದರು. ಈ ವಿಪರೀತ ವ್ಯವಹಾರಕ್ಕೆ ಮೂಲವನ್ನು 'ಏವಂ ಅಧ್ಯಾಸಂ ಪಂಡಿತಾಃ ಅವಿದ್ಯೇತಿ ಮನ್ಯನ್ತೇ' ಈ ತಪ್ಪು ತಿಳಿವಳಿಕೆಗೆ ಮೂಲವನ್ನು 'ಅವಿದ್ಯೆ' ಎಂದು ತಿಳಿಸಿರುತ್ತಾರೆ. ಯಾವುದರ ಬಗ್ಗೆ ಅವಿದ್ಯೆ? ಎಂದರೆ ವಸ್ತುವಿವೇಕದ ಬಗ್ಗೆ – ಎಂದು ಉಪದೇಶಿಸಿರುತ್ತಾರೆ. ಇದು ಹೇಗಾಗುತ್ತದೆ? ಎಂಬ ವಿಷಯಕ್ಕೆ ಎರಡು ವಿಧವಾಗಿ ನಿರ್ದೇಶಿಸಿರುತ್ತಾರೆ. ಒಂದು ಲೋಕಾನುಭವವನ್ನು ಅನುಸರಿಸಿದ್ದು ಇದನ್ನೇ ವ್ಯವಹಾರದೃಷ್ಟಿ ಎಂದರು. ಮತ್ತೊಂದು ಆತ್ಮಾನಾತ್ಮ ವಿಚಾರಕ್ಕೆ ಸಂಬಂಧಿಸಿದ್ದು ಇದನ್ನೇ ಪರಮಾರ್ಥದೃಷ್ಟಿ, ವಿಚಾರದೃಷ್ಟಿ

– ಅನುಭವದೃಷ್ಟಿ, ಸಾಕ್ಷಿದೃಷ್ಟಿ ಎಂದು ವಿವರಿಸಿದರು. 'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' ಇದು ಲೋಕಾನುಭವದಲ್ಲಿ ಇರುವಂಥಾದ್ದು, ಹಿಂದೆ ಕಂಡ ವಿಷಯದ ಬಗ್ಗೆ ಮನಸ್ಸಿನಲ್ಲಿ ರೂಪಗೊಂಡಂತಹ ಭಾವನಾ ವಿಶೇಷವು ಮತ್ತೊಮ್ಮೆ ಕಾಣಿಸಿಕೊಳ್ಳುವುದು. ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿ, ಹಗ್ಗದಲ್ಲಿ ಹಾವು, ಇಂಥಾ ದೃಷ್ಟಾಂತಗಳಿಂದ ತಿಳಿದುಕೊಳ್ಳಬಹುದು. ಪರಮಾರ್ಥದ ವಿಷಯಕ್ಕಾದರೂ ಇರುವುದು ಒಂದೇ ಆದಾಗ ಪೂರ್ವದೃಷ್ಟಾವಭಾಸವು ಹೊಂದುವುದಿಲ್ಲವಾಗಿಯೇ "ಏಕಶ್ಚಂದ್ರಃ ಸದ್ವಿತೀಯವತ್' ಚಂದ್ರನು ಒಬ್ಬನೇ ಆದರೂ ಕಣ್ಣಿನ ದೋಷದಿಂದ ಇಬ್ಬರಿರುವಂತೆ ಕಾಣಬಹುದಾಗಿದೆ ಎಂದು ತಿಳಿಸುತ್ತಾರೆ. ಇಷ್ಟಾದರೂ ಅರ್ಥವಾಗದ ಜಿಜ್ಞಾಸುವು ಕಂಡಂತಹ ಎರಡು ವಸ್ತುಗಳಲ್ಲಿ ಹೇಗೆ ತಪ್ಪುತಿಳಿವಳಿಕೆ ಆಗಬಹುದು ಆದರೆ ಆತ್ಮ ತತ್ತ್ವವು ಅವಿಷಯವಲ್ಲವೇ? ದೇಹಾದಿಗಳು ವಿಷಯಗಳು ಇವುಗಳಲ್ಲಿ ಅಧ್ಯಾಸವಾಗುವುದು ಅಸಂಭವವಲ್ಲವೇ? ಎಂದು ಅನುಮಾನಿಸಿದಾಗ, ವಿಷಯವಲ್ಲದ ಆಕಾಶದಲ್ಲಿ ನೀಲಿ ಬಣ್ಣವನ್ನು ಧೂಳಿನಿಂದ ಆಕಾಶವು ಕೊಳೆಯಾಗಿದೆ – ಎಂದು ಮುಂತಾಗಿ ಜನರು ಅವಿಷಯದಲ್ಲಿಯೂ ಅಧ್ಯಾಸವನ್ನು ಮಾಡುತ್ತಾರೆಂಬುದನ್ನು ಲೋಕಾನುಭವದಿಂದ ತಿಳಿಸಿ, ಒಟ್ಟಾರೆ ಅಧ್ಯಾಸವನ್ನು"ಅತಸ್ಮಿನ್ ತದ್ ಬುದ್ಧಿಃ" ಅದಲ್ಲದ್ದರಲ್ಲಿ ಅದೆಂಬ ಅದೆಂಬಬುದ್ಧಿ ಎಂದು ಅಥೈಸಿದ್ದಾರೆ. ಇದೂ ಅಲ್ಲದೆ ಜನರು ತಮಗೆ ತಿಳಿದೋ ತಿಳಿಯದೆಯೋ "ನಾನು" "ನಾನು" ಎಂದು ವ್ಯವಹರಿಸುತ್ತಿದ್ದಾರೆ. ನಿಜವಾಗಿ ನಾನೆಂಬುದು ತಿಳಿಯದೇ ಇದ್ದರೂ ಅಂತೂ ನಾನು ಎಂಬುದು ಎಲ್ಲರಿಗೂ ತಿಳಿದಿದೆ ಎಂದಾಯಿತು. ಇದನ್ನೇ ಜಾಗ್ರತ್ ಸ್ವಪ್ನಗಳಲ್ಲಿ ಕಂಡು ಬರುವ ನಾನೆಂಬರೂಪ, ಪ್ರಮಾತೃರೂಪ, ಅಸ್ಮತ್ ಪ್ರತ್ಯಯರೂಪ ಎಂದಿದ್ದಾರೆ. ಹೀಗೆ ಅವಿಚಾರ ದಶೆಯಲ್ಲಿ ಕಂಡುಬರುವ ಮನೋ ವೃತ್ತಿರೂಪವಾದ್ದರಿಂದ "ಮಿಥ್ಯಾ ಪ್ರತ್ಯಯರೂಪಃ" ಎಂದಿದ್ದಾರೆ. ಅಂತೂ ನಾನಾರೆಂಬುದೇ ಸರಿಯಾಗಿ ತಿಳಿಯದಿರುವಾಗ ಆ ಮಿಥ್ಯಾರೂಪವು ಕೈಗೊಂಡ ಕರ್ತೃತ್ವಾದಿಗಳು ಎಷ್ಟು ಮಾತ್ರ ಸತ್ಯವಾಗಿರುತ್ತದೆ? ಹೀಗೆ ನಾನು ಎಂಬ ರೂಪದಿಂದ ವ್ಯವಹರಿಸುತ್ತಿರುವವನ ಪರಮಾರ್ಥಸ್ವರೂಪವು ನಿತ್ಯ ಸತ್ಯವಾದ ಸಚ್ಚಿದಾನಂದಸ್ವರೂಪವಾಗಿರುತ್ತೆ. ಇಂಥಹ ಅನರ್ಥಹೇತುವನ್ನು ತೊಲಗಿಸಿ ಮತ್ತೆ ಸ್ವಸ್ವರೂಪದಲ್ಲಿ ನೆಲೆನಿಲ್ಲುವುದೆಂಬ "ಜ್ಞಾನನಿಷ್ಠೆಯನ್ನು ಬೋಧಿಸಲೆಂದೇ ಸಕಲವೇದಾನ್ತಗಳ ಉದ್ದೇಶ್ಯವಾಗಿದೆ. "ಅಸ್ಯ ಅನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾ ಪ್ರತಿಪತ್ತಯೇ ಸರ್ವೇವೇದಾನ್ತಾ ಆರಭ್ಯಂತೇ" ಎಂದು ಆಚಾರ್ಯರು ಉಪದೇಶಿಸಿದ್ದಾರೆ. ಈ ಸ್ಥಿತಿಯನ್ನು ತಲಪುವ ಸಲುವಾಗಿಯೇ ಜಿಜ್ಞಾಸುವಿಗೆ ಶ್ರುತಿಯು "ಶ್ರೋತವ್ಯೋ ಮನ್ತವ್ಯೋ ನಿಧಿಧ್ಯಾಸಿತವ್ಯಃ" – ಕೇಳುವುದು, ವಿಚಾರಮಾಡುವುದು, ಅದನ್ನೇ ಲಕ್ಷ್ಯಮಾಡಿ ಮಸಸ್ಸನ್ನು ಏಕಾಗ್ರಪಡಿಸುವುದೆಂಬ, ಸಾಧನಾಸೋಪಾನಗಳನ್ನು ಸಾದರಪಡಿಸಿದೆ. "ಶ್ರುತಿಯೆಂದರೆ ವೇದ ವಾಙ್ಮಯವಾದ ಉಪನಿಷತ್ತುಗಳನ್ನು ಆಲಿಸಬೇಕು. ಇದನ್ನೇ ಸಾಧನಾ ಪರಿಭಾಷೆಯಲ್ಲಿ ಶ್ರವಣವೆಂಬ ಶಬ್ದದಿಂದ ಸೂಚಿಸಿದ್ದಾರೆ. ಇನ್ನು ಶ್ರುತಿ ಅವಿರೋಧವಾದ ತರ್ಕದಿಂದ ಶ್ರುತ್ಯುಪದೇಶವನ್ನು ಶ್ರೌತ ತರ್ಕದಿಂದ ವಿಚಾರಿಸುವುದಕ್ಕಾಗಿಯೇ ಬ್ರಹ್ಮಸೂತ್ರಗಳು ರಚಿತವಾಗಿವೆ. ಆದ್ದರಿಂದ ಇದು ಮನನ ಪ್ರಸ್ಥಾನವೆಂದು ಪರಿಭಾಷಿತವಾಗಿದೆ. ಶ್ರುತಿಯಲ್ಲಿ ಕೇಳಿದ್ದನ್ನು ಸೂತ್ರಗಳಲ್ಲಿ ವಿಚಾರವಾದದ್ದನ್ನು ತನ್ನ ಅನುಭವದಲ್ಲಿ ಮನಗಾಣುವ ಕ್ರಮವನ್ನೇ ಭಗವಂತನು 18 ಅಧ್ಯಾಯಗಳಲ್ಲಿ ಸಾಧನಾ ಸೋಪಾನವಾಗಿ ಉಪದೇಶಿಸಿರುವ ಭಗವದ್ಗೀತೆಯು ನಿಧಿಧ್ಯಾಸನ ಪ್ರಸ್ಥಾನವಾಗಿದೆ. ಶ್ರವಣ ಮನನ ನಿಧಿಧ್ಯಾಸನಗಳು ಬ್ರಹ್ಮತತ್ತ್ವದಲ್ಲಿ ನೆಲೆನಿಲ್ಲಲು ಸಾಕ್ಷಾತ್

ವಿವೇಕ. ಇಹಾಮುತ್ರಾರ್ಥಫಲಭೋಗವಿರಾಗ, ಶಮಾದಿಷಟ್ಕ ಸಂಪತ್ತು, ಮುಮುಕ್ಷುತ್ವವೆಂಬುವು ಪರಂಪರಾ ಸಾಧನಗಳೆಂದು ಪ್ರಸಿದ್ಧವಾಗಿವೆ. ಗೀತಾಚಾರ್ಯನ ಉಪದೇಶವಾದ ಅಮಾನಿತ್ವಾದಿಗಳು ಸಹಕಾರಿ ಸಾಧನಗಳು. ಈ ವಿಧವಾಗಿ ಸಿದ್ಧಾಂತ ಭಾಗ – ಸಾಧನಭಾಗವೆಂಬುದನ್ನು ಸಮನ್ವಯ ಪಡಿಸಿ ಜಗದ್ಗುರುಗಳೆಂದು ಶ್ರೀ ಶ್ರೀ ಶ್ರೀ ಶಂಕರಭಗವತ್ಪಾದರು ಪ್ರಖ್ಯಾತರಾಗಿದ್ದಾರೆ. ಇವರು ನಿರೂಪಿಸಿದ ಅದ್ವೈತ ಸಿದ್ಧಾನ್ತವೆಲ್ಲವೂ ಅಧ್ಯಾರೋಪಾಪವಾದವೆಂಬ ಪ್ರಕ್ರಿಯೆ ಇಂದಲೆ ತಿಳಿಯಬರುವಂಥದ್ದಾಗಿದೆ. "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ" ಈ ಪ್ರಧಾನವಾದ ಸಿದ್ಧಾನ್ತಸಂಪ್ರದಾಯವನ್ನು ಪುನರುಜ್ಜೀವನ ಗೊಳಿಸುವ ಸಲುವಾಗಿಯೇ ಪರಮಾತ್ಮನೇ ಲೋಕೋದ್ಧಾರಮಾಡಲೆಂದೇ ಶ್ರೀಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ ರೂಪದಿಂದ ಅವತರಿಸಿ ಸನಾತನ ಸಂಪ್ರದಾಯವನ್ನು ಪುನಃ ಪ್ರತಿಷ್ಠಾಪಿಸಿ, ಕರ್ನಾಟಕದ ಅಭಿನವ ಶಂಕರಾಚಾರ್ಯರೆನಿಸಿಕೊಂಡರು. ಶ್ರೀಶ್ರೀಗಳವರು ರಚಿಸಿರುವ ಸಂಸ್ಕೃತ, ಕನ್ನಡ, ಆಂಗ್ಲ ಗ್ರಂಥಗಳು ಪೂಜ್ಯರನ್ನು ವೇದಾನ್ತ ಪ್ರಪಂಚದಲ್ಲಿ ಅಜರಾಮರಣರನ್ನಾಗಿಸಿವೆ. ಅವರ ಗ್ರಂಥಗಳಲ್ಲಿರುವ ಬರಹವೆಲ್ಲವೂ ಜಿಜ್ಞಾಸುವನ್ನು ಅನಾತ್ಮ ಪ್ರಜ್ಞೆಯೆಂಬ ಅವಿದ್ಯೆಯಿಂದ ಬಿಡಿಸಿ ಆತ್ಮವಿದ್ಯೆಯೆಂಬ ಅನುಭವಾಮೃತಪಾನ ಮಾಡಿಸುತ್ತದೆ. ಈ ಮಹನೀಯರು ಲೋಕಸಂಗ್ರಹಕ್ಕಾಗಿ ಲೋಕಾನುಗ್ರಹಕ್ಕಾಗಿ 1920ರಲ್ಲಿ ಸ್ಥಾಪಿಸಿದ ಸಂಸ್ಥೆಯು ಶತಾಬ್ದಿಯನ್ನು ಆಚರಿಸುತ್ತಿರುವುದು ನಮ್ಮ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ವಿದ್ವಾಂಸಕರಿಗೆ, ವಿಮರ್ಶಕರಿಗೆ, ವಿಚಾರವಾದಿಗಳಿಗೆ, ಉಪಾಸಕರಿಗೆ, ಭಕ್ತರಿಗೆ ಎಲ್ಲಾ ಸ್ಥಾಯಿಯ ಜಿಜ್ಞಾಸುಗಳಿಗೂ ವಿದ್ಯೆಯ ಔತಣವನ್ನು ಉಣಬಡಿಸಿದ್ದಾರೆ. ಭಗವಂತನ 'ನಮೇ ಭಕ್ತಃ ಪ್ರಣಶ್ಯತಿ' ಎಂಬ ಉಕ್ತಿಯು ಶ್ರೀಶ್ರೀಗಳವರಲ್ಲಿ ಸಾರ್ಥಕವಾಗಿದೆ.

* * * * *

ಭಕ್ತಿ

1. ಪರಮಾತ್ಮನೇ ವಿವಿಧ ರೂಪದಲ್ಲಿ ತೋರುತ್ತಿದ್ದಾನೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ದೇವತೆಗಳಾಗಿ ತೋರುತ್ತಿರುವವನು ಒಬ್ಬ ಪರಮಾತ್ಮನೇ ಎಂಬುದಾಗಿ ಭಾವಿಸಿದರೆ ಪರಮಾತ್ಮನನ್ನೇ ಆರಾಧಿಸಿದ ಫಲ ಬರುತ್ತದೆ. ಇಲ್ಲದಿದ್ದರೆ ಆಯಾ ದೇವತೆಯನ್ನು ಪೂಜಿಸಿದ ಫಲ ಬರುತ್ತದೆ.
2. ಜ್ಞಾನವು ಇದ್ದದ್ದನ್ನು ಕಳೆಯುವುದಿಲ್ಲ ಅದರ ಸ್ವರೂಪವನ್ನು ತೋರಿಸುತ್ತದೆ. ಅರಿಯದವನು ಪ್ರತಿಬಿಂಬವನ್ನು ನಿಜವೆಂದು ತಿಳಿಯುವವನು, ತಿಳಿದವನು. ಅದು ತೋರಿದರೂ ಸುಳ್ಳೆಂದು ತಿಳಿಯುವನು.
3. ಜ್ಞಾನಿಗೆ ಜಗತ್ತು ಕಂಡರೂ ಆತ್ಮನೇ.

– ಶ್ರೀ ಸಚ್ಚಿದಾನಂದವಾಣಿ

SWAMIJI'S CONTRIBUTION TO VEDANTA

Sri Sri Prakashanandendra Saraswathi Swamiji,
Holenarasipura

Vedanta is a method of teaching that unfolds the Truth of oneself. Shri Shankaracharya had made the *prakriya* clean and perfect by purging many unwanted accretions that made their way due to passage of time. But unfortunately the same thing happened again over a period of time after him. The post Shankarite Vedantins except Sureshvaracharya brought in some arguments and explanations from other traditions that were rejected by Acharya Shankara and put them in Sankara's tradition of Advaita. This point is not known to most of the post-Shankarite Vedantins who thought that all the post-Shankarite Vedanta is Shankara Vedanta only, although there are many deviations within it. Shri Appayya Dikshita, a well known Vedantic scholar had compiled most of these internal variations in his famous work, **Siddhanata Lesha Sangraha.** It is a book worth reading in order to know the variations in the Vedantic prakriya that have developed after Shri Shankara. Although it is not exhaustive one finds most of them in it.

Pujya Swami Satchidanandendra Saraswati had a great devotion to Sri Shankara and a *jijnasa* for his teachings. Moreover he had clearest thinking by his very nature. Hence he started his Vedantic study to learn and understand the truth directly from the Bhashyas

alone, unlike the tradition which teaches first some post-Shankarite prakarans. Thus Swamiji was lucky to have a direct exposure to Bhashyas alone. Hence, it was he who paid serious attention to these differences between Shankarite and post-Shankarite Vedanta prakriya.

These differences are not simply technical and sholastic but relate to sadhana as well as an intuition of the truth. These different explanations given by Pujya Swamiji are based on Shankara's own words occuring in the Prasthana traya

Bhashyas and true to the universal experience as well as logically more convincing. Hence they make understanding of Vedanta and its truth easy and convincing to the seekers of truth. In fact, a detailed discussion of all these differences will make a full book and such a book is really needed for the *jijnasus*. However, I am only touching on some points in this small essay.

